ವಿಶ್ವವಾಣಿ
ವಿಶ್ವಾಸವೇ ವಿಶ್ವ

ವಿಶ್ವವಾಣಿ ಗ್ಲೋಬಲ್ ಫೋರಂ ಅರ್ಪಿಸುವ

VISHWAVANI GLOBAL ACHIEVER'S AWARD

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ "**ಗ್ಲೋಬಲ್ ಅಚೀವರ್ಸ್ ಅವಾರ್ಡ್**" ಸಂಭ್ರಮ ನಮಗೆಲ್ಲ ಹೆಮ್ಮೆ.

ಪ್ರತಿಬಾರಿ ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಕಾರ್ಯಕ್ರಮದ ವೇಳೆ ವಿವಿಧ ಕ್ಷೇತ್ರದ ಗಣ್ಯರಿಗೆ ಸನ್ಮಾನಿಸುವುದರೊಂದಿಗೆ ಭಾರತ ಹಾಗೂ ಆಯಾ ದೇಶದ ಕಲೆ, ಸಂಸ್ಕೃತಿಯನ್ನು ಮೇಳೈಸುವ ಪ್ರಯತ್ನದಲ್ಲಿ ಯಶ ಕಂಡಿದೆ. ಕಳೆದೊಂದು ವರ್ಷದಲ್ಲಿ ಏಳು ದೇಶಗಳಲ್ಲಿ ಯಶಸ್ವಿ ಕಾರ್ಯಕ್ರಮಗಳ ಬಳಿಕ ಇದೀಗ ರಷ್ಯಾ ದೇಶಕ್ಕೆ ನಾವು ಕಾಲಿಟ್ಟಿದ್ದೇವೆ.

ಪ್ರಪಂಚದಲ್ಲೇ ಅತಿ ದೊಡ್ಡ ಮಿಲಿಟರಿ ಶಕ್ತಿ, ಭಾರತದ ಬಹುಕಾಲದ ಆಪ್ತ ಸ್ನೇಹಿತ ಹಾಗೂ ನಮ್ಮ ದೇಶ ಮತ್ತು ಸಂಸ್ಕೃತಿಯನ್ನು ಪ್ರೀತಿಸುವ ರಷ್ಯಾ ವೈವಿಧ್ಯಮಯ ಪ್ರವಾಸಿ ಆಕರ್ಷಣೆಯೂ ಹೌದು.

ಭಾರತೀಯರನ್ನು ಆಲಂಗಿಸಿಕೊಳ್ಳುವ ಈ ದೇಶದ ರಾಜಧಾನಿ ಮಾಸ್ಕೋದಲ್ಲಿ ವಿವಿಧ ಕ್ಷೇತ್ರದ 20ಕ್ಕೂ ಹೆಚ್ಚು ಗಣ್ಯರಿಗೆ ಪ್ರಶಸ್ತಿ ನೀಡಿ ಗೌರವಿಸಲು ಸಜ್ಜಾಗಿದೆ.

ವಿಶ್ವವಾಣಿ

ಪ್ರಸ್ತುತ ಪಡಿಸುತ್ತಿದೆ

ಗಣನೀಯ ಸಾಧನೆ ಮಾಡಿದ

ಕನ್ನಡಿಗರ ಜಾಗತಿಕ ಸಮಾವೇಶ

ಈ ಬಾರಿ

ಮಾಸ್ಕೋದಲ್ಲಿ

ಗುರುವಾರ, 24 ಏಪ್ರಿಲ್ 2025

ಸಮಾಚಾರ ಸಣ್ಣದಲ್ಲ

ಚಿತ್ರದುರ್ಗ ಕೌನ್ಸಿಲ್ ಸಾಮಾನ್ಯ ಸಭೆ ನಾಳೆ

ಚಿತ್ರದುರ್ಗ: ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆಯನ್ನು ಏ.24ರಂದು ಬೆಳಗ್ಗೆ 11ಕ್ಕೆ ನಗರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಚಿತ್ರದುರ್ಗ ನಗರಸಭೆ ಅಧ್ಯಕ್ಷೆ ಬಿ.ಎನ್.ಸುಮಿತ ಸಭೆಯ ಅಧ್ಯಕ್ಷತೆ ವಹಿಸುವರು ಎಂದು ನಗರಸಭೆ ಪೌರಾಯುಕ್ತೆ ಎಂ.ರೇಣುಕಾ ತಿಳಿಸಿದ್ದಾರೆ.

ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

ಚಿತ್ರದುರ್ಗ: IISc, IIT ಮತ್ತು NIT ಸಂಸ್ಥೆಗಳ ಮೂಲಕ Artificial intelligence and machine learing ವೃತ್ತಿಪರ ತರಬೇತಿ ಕೋರ್ಸ ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯವೇತನ, ತರಬೇತಿ ನೀಡುವ ಸಂಬಂಧ ಮತ್ತೊಮ್ಮೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಏ.25 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ ಸರಕಾರದ ಆದೇಶ ದಂತೆ IISc, IIT ಮತ್ತು NIT ಸಂಸ್ಥೆಗಳ ಮೂಲಕ Artificial intelligence and machine learinglearing ವ್ಯಕ್ತಿಪರ ತರಬೇತಿ ಕೋರ್ಸ ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ರು.15,000 ಗಳ ಶಿಷ್ಯವೇತನ ನೀಡಲಾಗುವುದು. ಅರ್ಜಿ ನಮೂನೆಗಳನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾ ಧಿಕಾರಿಗಳ ಕಚೇರಿ, ಚಿತ್ರದುರ್ಗ ಇಲ್ಲಿ ಪಡೆಯ ಬಹುದು. ಹೆಚ್ಚಿನ ಮಾಹಿತಿಗಾಗಿ ದೂ: 08194-225427ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

ಶ್ರೀ ಭೂತೇಶ್ವರಸ್ವಾಮಿ ಜಾತ್ರೋತ್ಸವ ಸಂಪನ್ನ

ಹೊಳಲ್ಕೆರೆ: ತಾಲೂಕಿನ ಶಿವಪುರದ ಭೂತೇಶ್ವರಸ್ವಾಮಿ ಜಾತ್ರೋತ್ಸವ ಅದ್ದೂರಿಯಾಗಿ ನಡೆಯಿತು. ಜಾತ್ರೋತ್ಸವ ಅಂಗವಾಗಿ ಭೂತೇಶ್ವರ ಸ್ವಾಮಿಗೆ ಪಂಚಾಭಿಷೇಕ,

ರುದ್ರಭಿಷೇಕ, ಕ್ಷೀರಾಭಿಷೇಕ ಪೂಜಾ ಕೈಗೊಳ್ಳಲಾಗಿತ್ತು. ಪಂಚಾ ಭಿಷೇಕದ ಅಂಗವಾಗಿ ಗ್ರಾಮದ ಮಹಿಳೆಯರು ಗಂಗಾ ಪೂಜೆ ಸಲ್ಲಿಸಿ ಗಂಗೆ ತುಂಬಿದ ಕುಂಬ ಗಳನ್ನು ಹೊತ್ತು ದೇವಸ್ಥಾನದ ತನಕ ಮೆರವಣಿಗೆಯಲ್ಲಿ ತರಲಾಗಿತ್ತು. ನಂತರ ನಾನಾ ಜಾನಪದ ಕಲಾ ತಂಡಗಳ ಡೊಳ್ಳು ಕುಣಿತ, ವೀರಗಾಸೆ, ಕಲಾಟ ಜಾನಪದ ವ್ಯಾದ್ಯ ಜತೆ ಗ್ರಾಮದಲ್ಲಿ ಉತ್ಸವ ನಡೆಸಲಾಗಿತ್ತು. ನಾನಾ ಭಾಗದಿಂದ ಜಾತೋತ್ಸವದಲ್ಲಿ ಪಾಲ್ಗೊಂಡಿದ್ದ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕೈಗೊಳ್ಳಲಾಗಿತ್ತು. ಜಾತ್ರೋತ್ಸವ ಎಲ್ಲಾ ಸಿದ್ದತೆಗಳನ್ನು ದೇವಸ್ಥಾನದ ಸಮಿತಿ ಅಧ್ಯಕ್ಷ ಎಸ್.ಜಿ.ಚಂದ್ರಪ್ಪ ಇವರ ಸದಸ್ಯರು ಕೈಗೊಂಡಿದ್ದರು.

ನೌಕರರ ದಿನಾಚರಣೆ : ಸಾಂಕೇತಿಕ ಆಚರಣೆ

ಚಿತ್ರದುರ್ಗ: ಕರ್ನಾಟಕ ರಾಜ್ಯ ಸರಕಾರಿ ನೌಕರರ ದಿನಾಚರಣೆಯನ್ನು ನಗರದ ರಾಜ್ಯ ಸರಕಾರಿ ನೌಕರರ ಭವನದ ಸಭಾಂಗಣದಲ್ಲಿ ಸಾಂಕೇತಿಕವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಾಲತೇಶ ಮುದ್ದಜ್ಜಿ ಅವರು, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ರಾಜ್ಯ ಸರಕಾರಿ ನೌಕರರಿಗೆ ಅದೇ ದಿನದಂದು ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ನೀಡಲಾಗುತ್ತದೆ. ಜಿಲ್ಲೆಯಲ್ಲಿ 2023-24 ಹಾಗೂ 2024-25 ನೇ ಸಾಲಿನದೂ ಸೇರಿದಂತೆ ಎರಡು ವರ್ಷಗಳ ಪ್ರಶಸ್ತಿ ನೀಡುವುದು ಬಾಕಿ ಇದೆ. ಜಿಲ್ಲಾ ಉಸ್ತುವಾರಿ ಸಚಿವರ ದಿನಾಂಕವನ್ನು ಪಡೆದು, ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ಜಿಲ್ಲಾ ಕೇಂದ್ರದಲ್ಲಿ ಈ ಬಾರಿ ರಾಜ್ಯ ಸರಕಾರಿ ನೌಕರರ ದಿನಾಚರಣೆಯನ್ನು ಅದ್ದೂರಿಯಾಗಿ ಶೀಘ್ರವೇ ಆಚರಿಸಲಾಗುವುದು. ಇದೇ ಸಮಾರಂಭದಲ್ಲಿ ಎರಡೂ ವರ್ಷಗಳ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಕೂಡ ಜಿಲ್ಲಾ ಉಸ್ತುವಾರಿ ಸಚಿವರಿಂದಲೇ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು. ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಗೌರವಾಧ್ಯಕ್ಷ ಎಂ. ನಾರಾಯಣಸ್ವಾಮಿ, ಕಾರ್ಯದರ್ಶಿ ಆರ್.ಶ್ರೀನಿವಾಸ, ಖಜಾಂಚಿ ಮಲ್ಲಿಕಾರ್ಜುನ, ರಾಜ್ಯ ಪರಿಷತ್ ಸದಸ್ಯ ರಾಜಪ್ಪ ಎಸ್, ಉಪಾಧ್ಯಕ್ಷ ಪ್ರಕಾಶ್ ಕೆ., ಜಂಟಿಕಾರ್ಯದರ್ಶಿ ಮಾರುತಿ, ತಿಪ್ಪೇಸ್ವಾಮಿ ಸೇರಿದಂತೆ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಮಾಡಬಾರದ ಪಾಪಗಳನ್ನು, ಮನುಷ್ಯ ವಿರೋಧಿ ಕೃತ್ಯಗಳನ್ನು ಮಾಡಿ ದೇವರನ್ನು ಅರಸಿ ಹೋಗುವುದರಿಂದ ಪ್ರಯೋಜನ ಇಲ್ಲ. ನಮ್ಮಲ್ಲಿ ಸಹಿಷ್ಣತೆ ಇರಬೇಕು. ಸಮಾಜದಲ್ಲಿ ಎಲ್ಲಾ ಜಾತಿ, ಎಲ್ಲಾ ಧರ್ಮದವರಿಗೂ ಬೇರೆ ಬೇರೆ ನಂಬಿಕೆಗಳಿರುತ್ತವೆ. ಒಬ್ಬರ ನಂಬಿಕೆ ಬಗ್ಗೆ ಉಳಿದವರೆಲ್ಲರಿಗೂ ಗೌರವ ಇರಬೇಕು.

ಸರಕಾರದ ಕೃಷಿ ಇಲಾಖೆ ವಿವಿಧ ಯೋಜನೆಗಳ ಯಶಸ್ವಿ ಅನುಷ್ಠಾನ | ರಾಜ್ಯ ಮಟ್ಟದಲ್ಲಿ ಚಿತ್ರದುರ್ಗ ಜಿಲ್ಲೆಗೆ ಪ್ರಥಮ ಸ್ಥಾನ

ಚಿತ್ರದುರ್ಗ ಕೃಷಿ ಇಲಾಖೆಗೆ ಪಂಚ ಪ್ರಶಸ್ತಿ

ಚಿತ್ರದುರ್ಗ: ಜಿಲ್ಲೆಯ ಕೃಷಿ ಇಲಾಖೆಯು ಜಲಾನಯನ ಕಾರ್ಯಕ್ರಮಗಳಾದ ಮಣ್ಣು ಮಾದರಿಗಳ ಸಂಗ್ರಹಣೆ ಮತ್ತು ವಿಶ್ಲೇಷಣೆ, ಉದ್ಯೋಗಖಾತ್ರಿ ಯೋಜನೆ, ಕೃಷಿಕರಿಗೆ ತರಬೇತಿ ಮತ್ತು ರಾಷ್ಟ್ರೀಯ ಸುಸ್ಥಿರ ಕೃಷಿ ಯೋಜನೆಗಳನ್ನು 2024-25 ನೇ ಸಾಲಿನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಪ್ರಶಸ್ತಿಗಳಿಸಿದೆ.

ಕೃಷಿ ಇಲಾಖೆ ವತಿಯಿಂದ ಕಳೆದ ಏಪ್ರಿಲ್ 16 ಮತ್ತು 17 ರಂದು ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ಮುಂಗಾರು ಹಂಗಾಮು ಕಾರ್ಯಾಗಾರದಲ್ಲಿ ಕೃಷಿ ಸಚಿವರು, ಕೃಷಿ ಆಯುಕ್ತರು ಮತ್ತು ಕೃಷಿ ನಿರ್ದೇಶಕರು ಚಿತ್ರದುರ್ಗ ಜಿಲ್ಲೆಗೆ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಿದ್ದಾರೆ.

ಜಲಾನಯನ ಕಾರ್ಯಕ್ರಮಗಳಡಿ ಜಿಲ್ಲೆಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಿಗಿಂತಲೂ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ, ಚಿತ್ರದುರ್ಗ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದೆ.

ರಾಷ್ಟ್ರೀಯ ಸುಸ್ಥಿರ ಕೃಷಿ : ಎನ್‌ಎಂಎಸ್‌ಎ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ, ಚಿತ್ರದುರ್ಗ ಜಿಲ್ಲೆಯ



ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಕೃಷಿ ಸಚಿವ ಚೇಲುವನಾರಾಯಣಸ್ವಾಮಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಚಳ್ಳಕೆರೆ ಮೊಳಕಾಲ್ಮೂರು ಮತ್ತು ಚಿತ್ರದುರ್ಗ ತಾಲೂಕುಗಳಲ್ಲಿ ಒಟ್ಟು 60 ಆಯ್ದ ಗ್ರಾಮಗಳಲ್ಲಿ ಪ್ರತಿ ಫಲಾನುಭವಿಗೆ ರು.20,000/- ಗರಿಷ್ಟ ಸಹಾಯಧನ ಯೋಜನೆಯಡಿಯಲ್ಲಿ ಹಸು ವಿತರಣೆ ಮಾಡಿದ್ದು, ರು.404.71 ಲಕ್ಷಗಳಲ್ಲಿ ಅನುದಾನ ಭರಿಸಿ 2 ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಹಸುಗಳ ವಿತರಣೆ ಮಾಡಿ ರಾಜ್ಯದಲ್ಲಿಯೇ ಮಾದರಿಯಾಗಿದ್ದು, ಈ ಕಾರ್ಯಕ್ಕೂ ಮೊದಲ ಸ್ಥಾನವನ್ನು ಚಿತ್ರದುರ್ಗ ಜಿಲ್ಲೆ ಪಡೆದುಕೊಂಡಿದೆ.

ಉದ್ಯೋಗ ಖಾತ್ರಿ: ಅದೇ ರೀತಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೃಷಿ ಇಲಾಖೆ, ಜಲಾನಯನ ಅಭಿವೃದ್ದಿ ವಿಭಾಗದಲ್ಲಿ 7,68,421 ಮಾನವ ದಿನಗಳನ್ನು ಸೃಜಿಸಲಾಗಿದ್ದು, ಮುಖ್ಯವಾಗಿ ರೈತರ ಜಮೀನಿನಲ್ಲಿ ಬದು ಮತ್ತು ಕೃಷಿಹೊಂಡ ನಿರ್ಮಾಣ ಮಾಡಿಕೊಂಡಿದ್ದು, ರಾಜ್ಯದಲ್ಲಿಯೇ ಎರಡನೇ ಸ್ಥಾನ ಲಭಿಸಿದೆ. ಒಟ್ಟಾರೆಯಾಗಿ ಬೆಂಗಳೂರು ವಿಭಾಗದಲ್ಲಿ ಜಲಾನಯನ ಯೋಜನೆಯ ಅನುಷ್ಠಾನದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿದೆ.

ಮಣ್ಣು ಪರೀಕ್ಷೆ: ಮಣ್ಣು ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ ಮಣ್ಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಚಿತ್ರದುರ್ಗ ಜಿಲ್ಲೆಯ ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಲಭಿಸಿದೆ. ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರ ಸಮರ್ಥ ಬಳಕೆ ಕುರಿತು ಸಕಾಲದಲ್ಲಿ 29,665 ಜಿಲ್ಲೆಯ ರೈತರಿಗೆ ಮಣ್ಣು ಆರೋಗ್ಯ ಚೀಟಿ ನೀಡಿರುವ ಪ್ರಯುಕ್ತ 2024-25ರಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನಕ್ಕೆ ಭಾಜನವಾಗಿದೆ.

ಬಬ್ಬೂರು ಕೇಂದ್ರಕ್ಕೆ ಪ್ರಶಸ್ತಿ: ಹಿರಿಯೂರು ತಾಲೂಕಿನ ಬಬ್ಬೂರು ಫಾರಂನ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಯೋಜನೆಗಳ ಅನುಷ್ಠಾನದಲ್ಲಿ ತೋರಿದ ಅತ್ಯುತ್ತಮ ಸಾಧನೆ ಗುರುತಿಸಿ, ಕೃಷಿ ಇಲಾಖೆ ರಾಜ್ಯಮಟ್ಟದ ದ್ವಿತೀಯ ಪ್ರಶಸ್ತಿ ನೀಡಿದೆ.ರೈತರು ಸ್ವ ಆಸಕ್ತಿಯಿಂದ ತರಬೇತಿಯನ್ನು ಪಡೆಯಲು ಅನುಕೂಲಕರವಾಗಿದೆ. ಅಲ್ಲದೆ ಯುವ ರೈತರನ್ನು ಕೃಷಿಯಲ್ಲಿ ತೊಡಗಿಸಿ ಕೊಳ್ಳಲು ಫೇಸ್ಬುಕ್, ಯೂಟ್ಯೂಬ್ ಚಾನಲ್ ಮೂಲಕ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕ ಆರ್. ರಜನೀಕಾಂತ ಅವರು ನೀಡುತ್ತಿರುವ ವಿನೂತನ ಕಾರ್ಯದಕ್ಷತೆ ಗುರುತಿಸಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಅತ್ಯುತ್ತಮ ಸಾಧನೆಗೆ ದ್ವಿತೀಯ ಸ್ಥಾನದ ಪ್ರಶಸ್ತಿ ನೀಡಲಾಗಿದೆ.

ಜಲಾನಯನ ಯೋಜನೆ :
ಫಿಜಲಾನಯನ ಅಭಿವೃದ್ಧಿ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕೆ ಚಿತ್ರದುರ್ಗ ಜಿಲ್ಲೆಗೆ ಪ್ರಥಮ ಸ್ಥಾನ ಲಭಿಸಿರುವ ಪ್ರಯುಕ್ತ ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹಾಗೂ ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನಿ ಖುರೇಷಿ ಅವರು ಹರ್ಷ ವ್ಯಕ್ತ ಪಡಿಸಿ ಕೃಷಿ ಇಲಾಖೆ ಅಧಿಕಾರಿಗಳನ್ನು ಅಭಿನಂದಿಸಿದ್ದಾರೆ. ಇಲಾಖೆ ಇನ್ನಷ್ಟು ರೈತೋಪಯೋಗಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಂತೆ ಮನವಿ ಮಾಡಿದ್ದಾರೆ.

ಪೂರ್ವಭಾವಿ ಸಭೆ | ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಸೂಚನೆ

ಅರ್ಥಪೂರ್ಣ ಜಯಂತಿ ಆಚರಣೆಗೆ ಸಿದ್ಧತೆ

ಚಿತ್ರದುರ್ಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಜಿಲ್ಲಾ ಮಟ್ಟದಲ್ಲಿ ವಿವಿಧ ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಹೇಳಿದರು.

ನಗರದ ಉಪವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ, ಶ್ರೀ ಶಂಕರಾಚಾರ್ಯರು ಹಾಗೂ ಶ್ರೀ ಭಗೀರಥ ಮಹರ್ಷಿ ಜಯಂತಿ ಆಚರಣೆ ಕುರಿತು ಜರುಗಿದ ಪೂರ್ವಭಾವಿ ಸಭೆಗಳ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ಜಯಂತಿ ಆಚರಣೆಗೂ ಸರಕಾರ ಜಿಲ್ಲಾ ಮಟ್ಟದ ಕಾರ್ಯಕ್ರಮಕ್ಕೆ ರು.50,000 ಹಾಗೂ ತಾಲೂಕು ಮಟ್ಟದ ಕಾರ್ಯಕ್ರಮಕ್ಕೆ ರು.25,000 ಬಿಡುಗಡೆ ಮಾಡುತ್ತದೆ ಎಂದರು.

ಬಸವ ಜಯಂತಿ : ಏ.30 ರಂದು ಸಾಂಸ್ಕೃತಿಕ ನಾಯಕ ಬಸವಣ್ಣವರ ಜಯಂತಿಯನ್ನು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆಗೆ ಆಚರಿಸಲಾಗುವುದು.

ವಚನ ಗಾಯನ ಕಾರ್ಯಕ್ರಮ ಹಾಗೂ ಬಸವಣ್ಣವರ ಕುರಿತು ಉಪನ್ಯಾಸವಿದೆ. ಅಂದು ನಗರದ ನೀಲಕಂಠೇಶ್ವರ ದೇವಸ್ಥಾನದ ಬಳಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಸಂಜೆ 6 ಗಂಟೆಗೆ ತರಾಸು ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಏ.29 ರಂದು ವೀರಶೈವ ಲಿಂಗಾಯತ ಸಮುದಾಯದಿಂದ ಬೈಕ್ ರ‍್ಯಾಲಿ ಏರ್ಪಡಿಸಲಾಗುವುದು ಎಂದು ಸಮಾಜದ ಮುಖಂಡರು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ

ನಗರದ ಉಪವಿಭಾಗಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಭಗೀರಥ ಮಹರ್ಷಿ ಜಯಂತಿ ಆಚರಣೆ ಕುರಿತು ಪೂರ್ವಭಾವಿ ಸಭೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆಯಿತು.

ಮಾತನಾಡಿ, ಮೆರವಣಿಗೆಯಲ್ಲಿ ಆನೆಯನ್ನು ಬಳಸಲು ಅರಣ್ಯ ಇಲಾಖೆಯಿಂದ ಕಡ್ಡಾಯವಾಗಿ ಪ್ರಮಾಣ ಪತ್ರ ಪಡೆಯುವಂತೆ ಸೂಚಿಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್.ಜೆ.ಕುಮಾರಸ್ವಾಮಿ ಮಾತನಾಡಿ, ಬೈಕ್‌ರ‍್ಯಾಲಿ ಆಯೋಜಿಸುವ ಕುರಿತು ಪೊಲೀಸ್ ಇಲಾಖೆಗೆ ಮನವಿ ಪತ್ರ ನೀಡಬೇಕು ಎಂದರು.

ಶ್ರೀ ಶಂಕರ ಜಯಂತಿ: ಮೇ 2ರಂದು ಆದ್ಯ ಗುರು ಶ್ರೀಂಕರಾಚಾರ್ಯರ ಜಯಂತಿ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ. ಬ್ರಾಹ್ಮಣ ಸಮುದಾಯದ ಮುಖಂಡರು ಜಯಂತಿ ಯಲ್ಲಿ ಪಾಲ್ಗೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಕೋರಿದರು.

ಭಗೀರಥ ಜಯಂತಿ: ಹೊಸದುರ್ಗದ ಭಗೀರಥ ಗುರುಪೀಠದಿಂದ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದ್ದು, ಕಾರ್ಯಕ್ರಮದ ದಿನಾಂಕ ನಿಗದಿಯಾಗಿಲ್ಲ. ಆದ್ದರಿಂದ ಮೇ 04 ರಂದು ಸಾಂಕೇತಿಕವಾಗಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಚರಿಸುವಂತೆ ಉಪ್ಪಾರ ಸಮಾಜದ ಮುಖಂಡರು ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು. ಸರಳವಾಗಿ ಮಹರ್ಷಿ ಭಗೀರಥ ಜಯಂತಿಯನ್ನು ಆಚರಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಮೆಹಬೂಬ್ ಜಿಲಾನಿ ಖುರೇಷಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಂ.ಗುರುನಾಥ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಮಹಡಿ ಶಿವಮೂರ್ತಿ, ಕಾರ್ಯದರ್ಶಿ ಎಸ್.ಷಡಾಕ್ಷರಯ್ಯ, ನಗರಸಭೆ ಮಾಜಿ ಅಧ್ಯಕ್ಷೆ ಸುನಿತಾ ಮಲ್ಲಿಕಾರ್ಜುನ್, ಹೇಮರೆಡ್ಡಿ ಮಲ್ಲಮ್ಮ ಸಮಾಜದ ಕಾರ್ಯದರ್ಶಿ ಶಿವಾನಂದಪ್ಪ, ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ಪಿ.ಎಸ್.ಮಂಜುನಾಥ್, ಕಾರ್ಯದರ್ಶಿ ಡಿ.ಪ್ರಾಣೇಶರಾವ್, ಉಪ್ಪಾರ ಸಂಘದ ಜಿಲ್ಲಾಧ್ಯಕ್ಷ ಎನ್.ವೀರೇಶ್, ಗೌರವಾಧ್ಯಕ್ಷ ಎಸ್ .ನಾಗರಾಜ ಉಪಸ್ಥಿತರಿದ್ದರು.

ಕಾಳಸಂತೆಕೋರರ ನಿಯಂತ್ರಣ ಅಗತ್ಯ

ಹರಿಹರದಲ್ಲಿ ನಡೆದ ಸಭೆಯಲ್ಲಿ ಗ್ಯಾರಂಟಿ ಅನುಷ್ಠಾತಿ ಸಮಿತಿ ತಾಲೂಕು ಅಧ್ಯಕ್ಷ ಎನ್.ಹೆಚ್. ಶ್ರೀನಿವಾಸ್ ಮಾತನಾಡಿದರು.

ಹರಿಹರ: ತಾಲೂಕಿನಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಪಡಿತರ ಕಾಳಸಂತೆಕೋರರ ನಿಯಂತ್ರಣಕ್ಕೆ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಎನ್.ಎಚ್. ಶ್ರೀನಿವಾಸ್ ಸೂಚನೆ ನೀಡಿದರು.

ನಗರದ ತಾಪಂ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ತಾಲೂಕಿನಾದ್ಯಂತ ಪಡಿತರ ಅಕ್ಕಿಯ ಕಾಳಸಂತೆಕೋರರ ಬಗ್ಗೆ ಅನೇಕ ದೂರು ಬರುತ್ತಿದ್ದು, ಅವುಗಳ ಬಗ್ಗೆ ಗಮನಹರಿಸಿ ಕಠಿಣ ಕ್ರಮ ಕೈಗೊಳ್ಳಲು ಅಧಿಕಾರಿಗಳು ಜಾಗೃತರಾಗಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಅನುಷ್ಠಾನ ಸಮಿತಿ ಸದಸ್ಯ ಸಂತೋಷ್ ಎಂ. ನೋಟದವರ್ ಪಡಿತರ ಕಾಳಸಂತೆ ವಿಚಾರ ಪ್ರಸ್ತಾಪ ಮಾಡಿದಾಗ, ಆಹಾರ ನಿರೀಕ್ಷಕರು ನಿರ್ದಿಷ್ಟವಾದ ದೂರುಗಳಿದ್ದರೆ ತಿಳಿಸಿದಲ್ಲಿ ಕ್ರಮ ಕೈಗೊಳ್ಳುವುದಾಗಿ ಹಾರಿಕೆ ಉತ್ತರ ನೀಡಿದರು. ಇದರಿಂದ ಸಮಾಧಾನಗೊಳ್ಳದ ಸದಸ್ಯ ನಗರದಲ್ಲಿರುವ ಎಲ್ಲ ಪಡಿತರ ಅಂಗಡಿಗಳಲ್ಲಿ ರಾಜಾರೋಷವಾಗಿ ಕಾಳಸಂತೆ ನಡೆಯುತ್ತಿದೆ. ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಿ ಎಂದರು.

ಎನ್.ಎಚ್. ಶ್ರೀನಿವಾಸ್ ಮಾತನಾಡಿ, ಎಲ್ಲ ಪಡಿತರ ಅಂಗಡಿಗಳ ಮಾಲೀಕರ ಕರೆದು ಸಭೆ ನಡೆಸಿ ಅವರಿಗೆ ಎಚ್ಚರಿಕೆ ನೀಡೋಣ. ಆಗಲು ಸುಧಾರಣೆಯಾಗದಿದ್ದರೆ ಕಾನೂನು ಕ್ರಮ ಕೈಗೊಳ್ಳೋಣ ಎಂದರು. ಇದೇ ವೇಳೆ ಪಡಿತರ ಅಕ್ಕಿ ಕಾಳಸಂತೆ ವಿಚಾರವಾಗಿ ಪೊಲೀಸ್ ಇಲಾಖೆಯಿಂದ ಸರಿಯಾದ ಸ್ಪಂದನೆ ದೊರೆಯುತ್ತಿಲ್ಲ. ದೂರು ದಾಖಲಿಸಲು ಹೋದಾಗ ಸಬೂಬು ಹೇಳಿ ದೂರುದಾರರನ್ನು ಸಾಗು ಹಾಕುವ ಕೆಲಸ ಆಗುತ್ತಿದೆ ಎಂದು ಸದಸ್ಯರು ಅಲವತ್ತುಕೊಂಡರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ. ಪೂರ್ಣಿಮಾ, ಬೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಕೆ.ಲಕ್ಷ್ಮಪ್ಪ, ರಾಜ್ಯ ರಸ್ತೆ ಸಾರಿಗೆ ನಿಗಮದ ಹರಿಹರ ಘಟಕದ ವ್ಯವಸ್ಥಾಪಕ ಮಹೇಶ್ವರಪ್ಪ, ಮಾಹಿತಿ ನೀಡಿದರು.

ತಾಪಂ ಕಾರ್ಯನಿರ್ವಹಣಾಧಿಕಾರಿ ಎಸ್.ಪಿ. ಸುಮಲತಾ, ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಸದಸ್ಯ ವಿಶ್ವನಾಥ ಎಚ್., ಶಂಕರ್ ವೈ.ಎಸ್., ಎನ್. ಮಂಜುನಾಥ್, ಕೃಷ್ಣಪ್ಪ, ಇತರರಿದ್ದರು.

ಮೈನವಿರೇಳಿಸಿದ ಜೋಡೆತ್ತಿನ ಬಂಡಿ ಸ್ಪರ್ಧೆ

ಹರಿಹರ ಹೊರವಲಯದ ಹೊಲದಲ್ಲಿ ಏರ್ಪಡಿಸಿದ್ದ ಜೋಡೆತ್ತಿನ ಖಾಲಿ ಗಾಡಾ ಬಂಡಿ ಓಡಿಸುವ ಸ್ಪರ್ಧೆ ನೋಟ.

ಹರಿಹರ: ಜೋಡೆತ್ತಿನ ಖಾಲಿ ಗಾಡಾ ಬಂಡಿ ಓಡಿಸುವ ಸ್ಪರ್ಧೆಯಲ್ಲಿ ಒಂದೆಡೆ ಜಿದ್ದಿಗೆ ಬಿದ್ದಂತೆ ಹೋರಿಗಳು ಓಡುತ್ತಿದ್ದರೆ, ಇನ್ನೊಂದೆಡೆ ರಣಬಿಸಿಲನ್ನೂ ಲೆಕ್ಕಿಸದೇ ಸ್ಪರ್ಧೆಯ ಎತ್ತುಗಳ ಓಟವನ್ನು ರೈತರು, ಯುವಕರು ಕಣ್ತುಂಬಿಕೊಂಡರು. ಹೋರಿಗಳ ಓಟಕ್ಕೆ ನೆರೆದವರು ಕೇಕೇ ಹಾಕಿ ಹುರಿದುಂಬಿಸಿದರು.

ನಗರದ ಶ್ರೀ ಕುಂಬಳೇಶ್ವರ 108 ಲಿಂಗೇಶ್ವರ ಸೇವಾ ಸಮಿತಿಯಿಂದ ಬಸವ ಜಯಂತಿ ಪ್ರಯುಕ್ತ, ನಗರದ ಅಮರಾವತಿ ಬಳಿಯ ಹೊಲದಲ್ಲಿ ಆಯೋಜಿಸಿದ್ದ ಜೋಡೆತ್ತಿನ ಖಾಲಿ ಗಾಡಾ ಓಡಿಸುವ ಸ್ಪರ್ಧೆಯು ನೋಡುಗರನ್ನು ರೋಮಾಂಚನಗೊಳಿಸಿತು.

ಹಾವೇರಿ, ಧಾರವಾಡ, ಗದಗ, ಬಾಗಲಕೋಟೆ, ರಾಯಚೂರು ಸೇರಿದಂತೆ ಹರಿಹರ ತಾಲೂಕಿನ ಮತ್ತು ರಾಜ್ಯದ ನಾನಾ ಭಾಗಗಳಿಂದ 36ಕೂ ಹೆಚ್ಚು ಜೊತೆ ಹೋರಿ ಬಂದಿದ್ದವು.

ಬೆಳಗ್ಗೆ 8ಕ್ಕೆ ಸ್ಪರ್ಧೆಗಳು ಆರಂಭಗೊಂಡಿದ್ದು, ಒಂದು ನಿಮಿಷದಲ್ಲಿ ಹೆಚ್ಚು ದೂರ ಕ್ರಮಿಸಿದ ಜೋಡೆತ್ತುಗಳಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನಿಗದಿಸಿತ್ತು.

ಕರಡಿಕೊಪ್ಪ ಬಿಕೆಹಳ್ಳಿಯ ಶ್ರೀ ಗ್ರಾಮದೇವತೆ ಪ್ರಥಮ ಬಹುಮಾನ ಹಾಗೂ 65 ಸಾವಿರ ರು. ನಗದು ಬಹುಮಾನ, ಹಳೇಹುಬ್ಬಳ್ಳಿ ಈ ಚಲಎಲ್ಲಾಪುರ ಸಿದ್ದಾರೂಡ ದ್ವಿತೀಯ ಬಹುಮಾನ ಹಾಗೂ 45 ಸಾವಿರ ನಗದು, ಹರಿಹರ ತಾಲೂಕಿನ ಗಂಗನರಸಿ ಆಂಜನೇಯ ತೃತೀಯ ಬಹುಮಾನ ಹಾಗೂ 30 ಸಾವಿರ ರು. ನಗದು ಬಹುಮಾನ ತನ್ನದಾಗಿಸಿಕೊಂಡಿತು.

ಮಾಜಿ ಶಾಸಕ ಹೆಚ್.ಎಚ್ ಶಿವಶಂಕರ್, ಕಾಂಗ್ರೆಸ್ ಮುಖಂಡ ಹಾಲೇಶ್‌ಗೌಡ್ರು, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ನಗರಸಭಾ ಸದಸ್ಯ ಕೆ.ವಿ ರಾಜಶೇಖರ್, ಎಂ.ಎಚ್. ಚಂದ್ರಶೇಖರ್, ಅಮರಾವತಿ ಚಪಾತಿ ಬಸಣ್ಣ, ಕುಂಭಾಳೇಶ್ವರ ಸೇವಾ ಸಮಿತಿ ಗೌರವ ಅಧ್ಯಕ್ಷ ಜಿ.ನಂಜಪ್ಪ, ಅಧ್ಯಕ್ಷ ರೇವಣಸಿದ್ದಪ್ಪ, ಕಾರ್ಯದರ್ಶಿ ಮಾಲತೇಶ ಜಿ.ಬಿ.ಖಜಾಂಚಿ ಬೆಣ್ಣೆ ಸಿದ್ದಪ್ಪ, ಸಹ ಕಾರ್ಯದರ್ಶಿಗಳಾದ ವಿರೂಪಾಕ್ಷ, ಶಿವಯೋಗಿ, ಉಪಾಧ್ಯಕ್ಷ ಬಸವರಾಜ ಚಂದ್ರಣ್ಣ ಮಜ್ಗಿ, ಸದಸ್ಯರಾದ ಎಲ್ಲೇಶಪ್ಪ ಬೇಲೂರು, ಗಜೇಂದ್ರ, ಕೆಂಚಿಕೆರೆ ಶಿವಪ್ರಕಾಶ್ ಇತರರಿದ್ದರು.

ಜಾನುವಾರುಗಳಿಗೆ 7ನೇ ಸುತ್ತಿನ ಲಸಿಕಾ ಅಭಿಯಾನ

ದಾವಣಗೆರೆ: ಜಿಲ್ಲೆಯಾದ್ಯಂತ ಏ. 26ರಿಂದ ಜೂನ್ 9ರ ವರೆಗೆ ಜಾನುವಾರುಗಳಿಗೆ ಉಚಿತ ಲಸಿಕಾ ಅಭಿಯಾನ ನಡೆಯಲಿದ್ದು, ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ ಎಂದು ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಒ ಸುರೇಶ್ ಬಿ. ಇಟ್ನಾಳ್ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉಚಿತ ಕಾಲು ಬಾಯಿ ರೋಗ ಲಸಿಕಾ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾಲು ಬಾಯಿ ರೋಗವು ವೈರಾಣುವಿನಿಂದ ಹರಡುವ ಸಾಂಕ್ರಾಮಿಕ ರೋಗವಾಗಿದ್ದು, ಇದರಿಂದ ರೈತರು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕುತ್ತಾರೆ. ಆದ್ದರಿಂದ ಶೇ.100ರಷ್ಟು ಲಸಿಕೆ ನೀಡುವ ಮೂಲಕ ರೋಗ ಸಂಪೂರ್ಣ ನಿಯಂತ್ರಿಸಿ, ನಿರ್ಮೂಲನೆ ಮಾಡಬೇಕು. ಮಾನವನಿಗೆ ಮಾತು ಬರುವುದರಿಂದ ಸಮಸ್ಯೆ ಹೇಳಿಕೊಂಡು ವೈದ್ಯನ ಬಳಿ ತೆರಳುತ್ತಾನೆ. ಆದರೆ, ಮಾತು ಬಾರದ ಮೂಕ ಜೀವಿ ಜಾನುವಾರುಗಳ ಗತಿ ಏನು?. ಆದ್ದರಿಂದ ಸೂಕ್ಷ್ಮವಾಗಿ ಗಮನಿಸಿ ಲೋಪವಾಗದಂತೆ ಪ್ರತಿ ಜಾನುವಾರುಗಳಿಗೆ ಲಸಿಕೆ ನೀಡಬೇಕು ಎಂದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪನಿರ್ದೇಶಕ ಎಚ್.ಎಂ. ಮಹಶ್ ಮಾತನಾಡಿ, ಜಿಲ್ಲೆಯಲ್ಲಿ 2,37,801 ದನ, 91,896 ಎಮ್ಮೆ ಸೇರಿ ಒಟ್ಟು 3,29,697 ಜಾನುವಾರುಗಳಿದ್ದು, 3,13,100 ಲಸಿಕೆ ಲಭ್ಯವಿದೆ. ಜಿಲ್ಲಾದ್ಯದಂತ 3000 ಬ್ಲಾಕ್‌ಗಳನ್ನು ಗುರುತಿಸಿದ್ದು, 321 ಲಸಿಕಾದಾರರು ಪ್ರತಿ ಗ್ರಾಮ ಹಾಗೂ ಮೆನೆಗೆ ತೆರಳಿ ಜಾನುವಾರುಗಳಿಗೆ ಲಸಿಕೆ ನೀಡಲಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ ಉಚಿತ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು. ಸಭೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಎಲ್ಲ ಪಶುವೈದ್ಯಾಧಿಕಾರಿಗಳು, ಕರ್ನಾಟಕ ಕುಕ್ಕುಟ ಮಾಹಮಂಡಳಿ ಪ್ರಾದೇಶಿಕ ನಿರ್ದೇಶಕರು, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದ ಉಚಿತ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಕೋಳಿ ವಿತರಣೆಗೆ ಅರ್ಹರ ಆಯ್ಕೆ

ಮಹಿಳೆಯರನ್ನು ಆರ್ಥಿಕವಾಗಿ ಸಬಲರಾಗಿಸಲು ಇಲಾಖೆ ವತಿಯಿಂದ ಅರ್ಹ ಪ.ಜಾತಿ, ಪ.ಪಂಗಡ ಹಾಗೂ ಸಾಮಾನ್ಯ ಮಹಿಳೆಯರಿಗೆ ಉಚಿತವಾಗಿ ಕೋಳಿ ಮರಿ ನೀಡಲಾಗುವುದು. ಜಿಲ್ಲೆಯಾದ್ಯಂತ 168 ಪ. ಜಾತಿ ಮಹಿಳೆಯರಿಂದ ಅರ್ಜಿ ಸ್ವೀಕೃತವಾಗಿದ್ದು, ಅದರಲ್ಲಿ 45 ಆಯ್ಕೆ ಗುರಿ ನೀಡಲಾಗಿದೆ. ಪ. ಪಂಗಡ ಮಹಿಳೆಯರಿಂದ 659, ಸಾಮಾನ್ಯ ಮಹಿಳೆಯರಿಂದ 645 ಹಾಗೂ 737 ಅರ್ಜಿ ಸ್ವೀಕೃತವಾಗಿದ್ದು, 238 ಆಯ್ಕೆ ಮಾಡಿಕೊಳ್ಳಲು ಗುರಿ ನೀಡಿದೆ. ಜಿಲ್ಲೆಯಲ್ಲಿ ಒಟ್ಟಾರೆ 1065 ಅರ್ಜಿ ಸ್ವೀಕೃತವಾಗಿದ್ದು, ಇಲಾಖೆ ವತಿಯಿಂದ 737 ಆಯ್ಕೆಗೆ ಭೌತಿಕ ಗುರಿ ನೀಡಲಾಗಿದೆ ಎಂದು ತಿಳಿಸಿದರು.

ಯುವರಾಜ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ

ಚಿತ್ರದುರ್ಗ: ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕರ ಆಸ್ಪತ್ರೆ ನಿರ್ದೇಶಕ ಯುವರಾಜ್‌ರನ್ನ ಕೆಲಸದಿಂದ ಅಮಾನತು ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಮಾದಿಗ ಯುವಸೇನೆವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ರಾಜ್ಯ **ಮಾದಿಗ** ಯುವಸೇನೆ ವತಿಯಿಂದ, ಮಂಗಳವಾರ ಓಬವ್ವ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಯವರಿಗೆ ಮನವಿಯನ್ನು ಸಲ್ಲಿಸಲಾಯಿತು.

ಚಿತ್ರದುರ್ಗ ಜಿಲ್ಲಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೋಧಕರ ಆಸ್ಪತ್ರೆ ನಿರ್ದೇಶಕ ಯುವರಾಜ್‌ರವರನ್ನು ಡಾಕ್ಟರ್‌ಗಳ ನೇಮಕಾತಿಯಲ್ಲಿ ಲಕ್ಷಾಂತರ ಅವ್ಯವಹಾರ ಮಾಡಿದ್ದಾರೆ.

ನೇಮಕಾತಿಯನ್ನು ಸರಿಯಾಗಿ ಮಾಡುರುವುದಿಲ್ಲ ಹಾಗೂ ಅಭ್ಯರ್ಥಿಗಳಿಂದ ತಲಾ ಒಬ್ಬರಿಂದ ಲಕ್ಷಾಂತರ ರು.ಗಳನ್ನು ಲಂಚವನ್ನು ಪಡೆದು ಅವ್ಯವಹಾರವಾಗಿರುವ ಶಂಕೆಯಿದೆ ಹಾಗೂ ಯಾವುದೇ ಕೆಲಸಕ್ಕೆ ಹಣ ಕೊಟ್ಟವರಿಗೆ ಕೆಲಸ ಮಾಡುವ ಪ್ರವೃತ್ತಿ ಇವರದ್ದು ಮತ್ತು ಇವರು ಬಿಜೆಪಿಯ ಏಜೆಂಟ್ ಆಗಿರುವುದರಿಂದ ಬಿಜೆಪಿಯವರ ತಳಕ್ಕೆ ತಕ್ಕಂತೆ ವೈದ್ಯಕೀಯ ಮಹಾ ವಿದ್ಯಾಲಯದಲ್ಲಿ ಕೆಲಸ ಮಾಡಿ ಕೊಂಡು ಹೋಗುತ್ತಿದ್ದು, ಸಾರ್ವಜನಿಕವಾಗಿ ಇಂತಹ ಅಧಿಕಾರಿಯಿಂದ ಸರಕಾರಕ್ಕೆ ಕೆಟ್ಟ ಹೆಸರು ಬರುವುದರಿಂದ ಸರಕಾರಿ ಸೇವೆ ಯಲ್ಲಿ ಮುಂದುವರೆಯಲು ಅನುವು ಮಾಡಿಕೊಡದೆ ಕೂಡಲೇ ಇವರನ್ನು ಅಮಾನತು ಮಾಡಿ, ತನಿಖೆ ನಡೆಸಿ ಕಾನೂನು ಕ್ರಮಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ರಾಜಣ್ಣ ವಹಿಸಿದ್ದರು. ಓಬಳಮ್ಮ, ತಿಪ್ಪೇಸ್ವಾಮಿ, ಸಂತೋಷ್, ಸಿದ್ದಪ್ಪ, ರುದ್ರಮುನಿ, ವೆಂಕಟೇಶ್, ಶಿವಕುಮಾರ್, ನಾಗಬೂಷಣ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಮಾದಿಗ ಯುವಸೇನೆ ವತಿಯಿಂದ ಓಬವ್ವ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಿದರು.

ದಾವಣಗೆರೆಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನಗರಸಭೆಯ ಎಸ್‌ಎಫ್‌ಸಿ ಮತ್ತು ಪಾಲಿಕೆ ಸಾಮಾನ್ಯ ನಿಧಿಯಿಂದ ಜಿಲ್ಲೆಯ ಅರ್ಹ 16 ವಿಶೇಷಚೇತನ ವ್ಯಕ್ತಿಗಳಿಗೆ ತ್ರಿಚಕ್ರ ವಾಹನಗಳನ್ನು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಹಸ್ತಾಂತರಿಸಿದರು. ಜಿಪಂ ಸಿಇಒ ಸುರೇಶ್ ಬಿ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಎಎಸ್‌ಪಿ ಮಂಜುನಾಥ್, ಪಾಲಿಕೆ ಆಯುಕ್ತೆ ರೇಣುಕಾ ಇತರರಿದ್ದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಂಜುನಾಥ್ ಪತ್ನಿ, ಮಗು ಸುರಕ್ಷಿತ

ಶಿವಮೊಗ್ಗ ವಿಜಯನಗರದ ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಪತ್ನಿ ಪಲ್ಲವಿ ಹಾಗೂ 8 ವರ್ಷದ ಪುತ್ರ ನೊಂದಿಗೆ ಏ.19ರಂದು ಕಾಶ್ಮೀರಕ್ಕೆ ತೆರಳಿದ್ದರು. ಆ ವೇಳೆ, ಮಂಜುನಾಥ್ ಅವರನ್ನು ಉಗ್ರರು ಹತ್ಯೆಗೈದಿದ್ದಾರೆ. ಪತ್ನಿ ಹಾಗೂ ಪುತ್ರ ಸುರಕ್ಷಿತ ರಾಗಿದ್ದಾರೆ.



ಹೇಯ ಕೃತ್ಯವನ್ನು ನಡೆಸಿರುವವರನ್ನು ಮತ್ತು ಇದಕ್ಕೆ ಕಾರಣರಾದವರನ್ನು ಸುಮ್ಮನೆ ಬಿಡಲ್ಲ. ತಕ್ಕ ಪಾಠ ಕಲಿಸುತ್ತೇವೆ. ಇವರ ಕೆಟ್ಟ ಉದ್ದೇಶ ಎಂದಿಗೂ ಯಶಸ್ವಿಯಾಗುವುದಿಲ್ಲ. ಭಯೋತ್ಪಾದನೆಯ ವಿರುದ್ಧ ಹೋರಾಡುವ ನಮ್ಮ ಸಂಕಲ್ಪ ಎಂದೆಂದಿಗೂ ಅಚಲವಾಗಿದೆ.

ನರೇಂದ್ರ ಮೋದಿ, ಪ್ರಧಾನಿ

ಸೊಂಪಾದ ಪುಟಗಳು



ಹುಳುಗಳನ್ನು ಔಷಧವನ್ನಾಗಿ ಬಳಸಬಹುದೇ?

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ

ರಾಜಕೀಯದಲ್ಲಿ ಕೂಗುಮಾರಿಗಳಿಗೆ ಹೆಚ್ಚು ಬೆಲೆ

ಲೋಕಮತ
ಲೋಕೇಶ್ ಕಾಯರ್ಗ

ದಾರಿದೀಪೋಕ್ತಿ

ಯಾವುದೇ ಘಟನೆ ಅಥವಾ ಸಮಸ್ಯೆಗೆ ನೀವು ಯಾವ ರೀತಿ ಪ್ರತಿಕ್ರಿಯಿಸುತ್ತೀರಿ ಎಂಬುದು ಬಹಳ ಮುಖ್ಯ. ಎಷ್ಟೋ ಸಂದರ್ಭದಲ್ಲಿ ನಿಮ್ಮ ಪ್ರತಿಕ್ರಿಯೆ ಸಮಸ್ಯೆಯನ್ನು ಪರಿಹರಿಸ ಬಹುದು ಇಲ್ಲವೇ ಉಲ್ಬಣಗೊಳಿಸಬಹುದು. ನಿಮ್ಮ ಪ್ರತಿಕ್ರಿಯೆ ಯಾವತ್ತೂ ಸಮಸ್ಯೆಯನ್ನು ಬಗೆಹರಿಸಲು ಸಹಾಯಕವಾಗಬೇಕು.

ವಕ್ರತುಂಡೋಕ್ತಿ

ಅಡುಗೆ ಮಾಡುವುದು ಒಂದು ಮಹಾನ್ ಕಲೆ. ಒಂದು ವೇಳೆ ನೀವು ಯಶಸ್ವಿಯಾಗ ದಿದ್ದರೆ ಪಿಜ್ಜಾ ಆರ್ಡರ್ ಮಾಡಬಹುದು.

ರನ್ಯಾ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ದುಬೈನಿಂದ ಚಿನ್ನ ಕಳ್ಳ ಸಾಗಣೆ ಆರೋಪದಲ್ಲಿ ನ್ಯಾಯಾಂಗ ಬಂಧನದಲ್ಲಿ ರುವ ನಟಿ ರನ್ಯಾ ರಾವ್ ಮತ್ತು ಮತ್ತೊಬ್ಬ ಆರೋಪಿ ತರಣ್ ಕೊಂಡೂರು ರಾಜು ಅವರು ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆ ಪೂರ್ಣ ಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ವಿಮಾನ ಪತನ ಪೈಲಟ್ ಸಾವು

ಅಮ್ರೇಲಿ: ಗುಜರಾತ್‌ನ ಅಮ್ರೇಲಿ ಜಿಲ್ಲೆಯ ಶಾಸ್ತ್ರಿ ನಗರ ಪ್ರದೇಶದಲ್ಲಿ ಮಂಗಳವಾರ ಖಾಸಗಿ ತರಬೇತಿ ವಿಮಾನ ಅಪಘಾತಕ್ಕೀಡಾಗಿದ್ದು, ಪೈಲಟ್ ಸಾವಿಗೀಡಾಗಿದ್ದಾರೆ. ಅನಿಕೇತ್ ಮಹಾಜನ್ ಮೃತ ಪೈಲಟ್ ಅಮ್ರೇಲಿ ವಿಮಾನ ನಿಲ್ದಾಣದಿಂದ ವಿಮಾನ ಟೇಕ್ ಆಫ್ ಆಗಿತ್ತು. ಅನಿಕೇತ್ ಮಹಾಜನ್ ಒಬ್ಬರೇ ಏಕಾಂಗಿಯಾಗಿ ಹಾರಾಟ ನಡೆಸುತ್ತಿದ್ದರು. ವಿಮಾನ ತೆರೆದ ಪ್ರದೇಶಕ್ಕೆ ಅಪ್ಪಳಿಸುವ ಮೊದಲು ಮರದ ಮೇಲೆ ಬಿದ್ದಿದ್ದು, ಬೆಂಕಿ ಹೊತ್ತಿಕೊಂಡಿದೆ. ಅಪಘಾತದಲ್ಲಿ ಬೇರೆ ಯಾರಿಗೂ ಗಾಯಗಳಾಗಿಲ್ಲ.

ಫನ್‌ತರಂಗ
- ರಘುಪತಿ ಶೃಂಗೇರಿ -



ಜಮ್ಮು ಕಾಶ್ಮೀರದಲ್ಲಿ ಮತ್ತೆ ಅಟ್ಟಹಾಸ ಮೆರೆದ ಉಗ್ರರು
ಪಹಲ್‌ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಗುಂಡಿನ ದಾಳಿ
ಕನ್ನಡಿಗ ಮಂಜುನಾಥ್, ಭರತ್ ಸೇರಿ 30ಕ್ಕೂ ಹೆಚ್ಚು ಮಂದಿ ಸಾವು
25 ವರ್ಷಗಳ ಬಳಿಕ ನಾಗರಿಕರ ಮೇಲೆ ನಡೆದ ಅತಿದೊಡ್ಡ ದಾಳಿ

ರಕ್ತದೋಕುಳಿ

ಶ್ರೀನಗರ: ಉಗ್ರರ ರಣಹೇಡಿ ಕೃತ್ಯಕ್ಕೆ ಕಣಿವೆ ಪ್ರದೇಶ ಜಮ್ಮು ಕಾಶ್ಮೀರ ಮತ್ತೊಮ್ಮೆ ಸಾಕ್ಷಿಯಾಗಿದೆ. ಇಷ್ಟು ದಿನ ಸೇನಾ ಪಡೆಗಳನ್ನು ಟಾರ್ಗೆಟ್ ಮಾಡುತ್ತಿದ್ದ ಉಗ್ರರು ಈಗ ಪ್ರವಾಸಿಗರನ್ನು ಟಾರ್ಗೆಟ್ ಮಾಡಿ ದಾಳಿ ನಡೆಸಿ ದ್ದಾರೆ. ಲಷ್ಕರ್-ಎ-ತೊಯ್ಬಾದ ಸ್ಥಳೀಯ ಅಂಗಸಂಸ್ಥೆ ಯಾದ ದಿ ರೆಸಿಸ್ಟೆನ್ಸ್ ಫ್ರಂಟ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

ಪಹಲ್‌ಗಾಮ್‌ನ ಬೈಸರನ್ ವ್ಯಾಲಿಯ ಹುಲ್ಲು ಗಾವಲಿನಲ್ಲಿ ಪ್ರವಾಸಿಗರ ಮೇಲೆ ಭಯೋತ್ಪಾದಕರ ಗುಂಪು ಗುಂಡಿನ ದಾಳಿ ನಡೆಸಿದೆ. ದಾಳಿಯ ಹೊಣೆ ಯನ್ನು ಪಾಕಿಸ್ತಾನದ ಉಗ್ರ ಸಂಘಟನೆ ಹೊತ್ತಿದೆ. ಈ ದಾಳಿಯಲ್ಲಿ ಶಿವಮೊಗ್ಗದ ಮಂಜುನಾಥ್, ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ಭರತ್ ಭೂಷನ್ ಸೇರಿ 30 ಪ್ರವಾಸಿಗರು ಸಾವನ್ನಪ್ಪಿದ್ದು, ಹಲವಾರು ಜನರು ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆ ಯಾಗುವ ಸಾಧ್ಯತೆ ಇದೆ. ದಾಳಿಯ ಬೆನ್ನಲ್ಲೇ ಸೇನೆ ಹೈ ಅಲರ್ಟ್ ಆಗಿದ್ದು, ಉಗ್ರರ ಹೆಡೆಮುರಿ ಕಟ್ಟಲು ಶುರು ಮಾಡಿದೆ.

ಪಹಲ್‌ಗಾಮ್ ಪಟ್ಟಣದ ಬೈಸರನ್ ಹುಲ್ಲುಗಾವಲಿನ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆ ಸುಮಾರಿಗೆ ಈ ಘಟನೆ ಸಂಭವಿಸಿದೆ. ಗಾಯಾಳುಗಳನ್ನು ಹೆಲಿಕಾಪ್ಟರ್ ಮೂಲಕ ಸ್ಥಳಾಂತರಿಸಲಾಗಿದೆ. 12 ಮಂದಿ ಪ್ರವಾಸಿಗರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆ ಕುರಿತು ಮಾಹಿತಿ ತಿಳಿದ ತಕ್ಷಣವೇ ಭದ್ರತಾ ಪಡೆ, ಸಿಆರ್‌ಪಿಎಫ್ ಮತ್ತು ಸ್ಥಳೀಯ ಪೊಲೀಸರು ಸ್ಥಳಕ್ಕೆ ಧಾವಿಸಿದ್ದು, ದಾಳಿಕೋರರ ಪತ್ತೆಗಾಗಿ ಹುಡುಕಾಟ ನಡೆ ಸಿದ್ದಾರೆ. ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. ಸ್ಥಳದಲ್ಲಿ ಭದ್ರತಾ ಪಡೆ ಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ. ಭಯೋತ್ಪಾ ದಕರ ಈ ಪೈಶಾಚಿಕ ಕೃತ್ಯದ ನಂತರದ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡು ತ್ತಿವೆ. ಮೃತ ದೇಹಗಳು ಅಲ್ಲಲ್ಲಿ ಬಿದ್ದಿರುವುದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿರುವುದು ವಿಡಿಯೊದಲ್ಲಿದೆ.

ಕ್ರಮ ಕೈಗೊಳ್ಳುವಂತೆ ಪ್ರಧಾನಿ ಸೂಚನೆ: ಸೌದಿ ಅರೇಬಿಯಾ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಂಭಾಷಣೆ ನಡೆಸಿದ್ದು, ತುರ್ತಾಗಿ ಪರಿಸ್ಥಿತಿ ನಿಭಾಯಿ ಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ. ಅಲ್ಲದೆ ತುರ್ತಾಗಿ ಕೇಂದ್ರಾಡಳಿತ ಪ್ರದೇಶಕ್ಕೆ ಭೇಟಿ ನೀಡುವಂತೆ ಶಾ ಅವರಿಗೆ ತಿಳಿಸಿದ್ದಾರೆ. ಭಯೋತ್ಪಾದಕರ ಕೃತ್ಯವನ್ನು ಖಂಡಿಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಅಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ನಂತರ ಶ್ರೀನಗರಕ್ಕೆ ತೆರಳಿದ್ದಾರೆ.

ಘಟನೆ ನಡೆದ ಪಹಲ್‌ಗಾಮ್ ಪಟ್ಟಣದ ಬೈಸರನ್ ಹುಲ್ಲುಗಾವಲಿನ ಪ್ರದೇಶದಲ್ಲಿ ಬೀಡುಬಿಟ್ಟಿರುವ ಭದ್ರತಾ ಪಡೆ.

ಸಿಎಂ ತುರ್ತುಸಭೆ

ಬೆಂಗಳೂರು: ಕಾಶ್ಮೀರದಲ್ಲಿ ಭಯೋತ್ಪಾದಕರ ದಾಳಿಯಲ್ಲಿ ಕನ್ನಡಿಗ ವ್ಯಕ್ತಿ ಬಲಿಯಾಗಿ ರುವ ಸಂಬಂಧ ಸಿಎಂ ಸಿದ್ದ ರಾಮಯ್ಯ ಅವರು ಉನ್ನತ ಅಧಿಕಾರಿಗಳ ಜತೆಗೆ ಮಾತುಕತೆ ನಡೆಸಿದ್ದಾರೆ. ಕಾಶ್ಮೀರದಲ್ಲಿ ಸಿಲುಕಿ ರುವ ಕನ್ನಡಿಗರಿಗೆ ನೆರವಾಗಲು ತಕ್ಷಣವೇ ಕ್ರಮ ತೆಗೆದುಕೊಳ್ಳಿ. ಮೃತ ವ್ಯಕ್ತಿಯ ಶವವನ್ನು ತ್ವರಿತ ವಾಗಿ ತರಲು ಅಗತ್ಯ ವ್ಯವಸ್ಥೆ ಮಾಡಿ ಎಂದು ಎಂದು ಸೂಚನೆ ನೀಡಿದ್ದಾರೆ. ಈ ಸಂಬಂಧ ಐಪಿಎಸ್ ಅಧಿಕಾರಿ ಚೇತನ್ ನೇತೃತ್ವದ ಅಧಿಕಾರಿಗಳ ತಂಡ ಕಾಶ್ಮೀರಕ್ಕೆ ಹೊರಟಿದೆ.

ಆಲ್‌ಔಟ್ ಆಪರೇಷನ್?

ಭಯೋತ್ಪಾದಕರ ದಾಳಿಯ ಬೆನ್ನಲ್ಲೇ ಅಮಿತ್ ಶಾ ಉನ್ನತ ಮಟ್ಟದ ಸಭೆ ಕರೆದಿದ್ದು, ಸಭೆಯಲ್ಲಿ ಗೃಹ ಇಲಾಖೆ ಕಾರ್ಯದರ್ಶಿ, ಗುಪ್ತಚರ ಬ್ಯೂರೋ ಮತ್ತು ಗೃಹ ಸಚಿವಾಲಯದ ಹಿರಿಯ ಅಧಿಕಾರಿ ಗಳು ಭಾಗವಹಿಸಿದ್ದಾರೆ. ಪೊಲೀಸ್ ಮಹಾ ನಿರ್ದೇಶಕರು (ಡಿಜಿಪಿ) ಸೇರಿ ಜಮ್ಮು ಮತ್ತು ಕಾಶ್ಮೀರ ಅಧಿಕಾರಿಗಳು ವರ್ಚುವಲ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದಾರೆ. ಈ ವೇಳೆ ಉಗ್ರರ ವಿರುದ್ಧ ಆಲ್ ಔಟ್ ಆಪರೇಷನ್ ಶುರು ಮಾಡಲು ಸೂಚನೆ ಕೊಡುವ ಸಾಧ್ಯತೆ ಇದೆ ಎನ್ನಲಾಗಿದೆ.



ಭಯೋತ್ಪಾದಕರ ದಾಳಿಯಲ್ಲಿ ಮೃತ ಪಟ್ಟವರ ಕುಟುಂಬ ದೊಂದಿಗೆ ಈ ಕಷ್ಟಕಾಲದಲ್ಲಿ ನಾವಿದ್ದೇವೆ. ಈ ಕೃತ್ಯ ಎಸಗಿ ದವರನ್ನು ಸುಮ್ಮನೆ ಬಿಡುವು ದಿಲ್ಲ. ಭಯೋತ್ಪಾದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

-ಅಮಿತ್ ಶಾ, ಕೇಂದ್ರ ಗೃಹ ಸಚಿವ

ಹೋಗಿ ಮೋದಿಗೆ ಹೇಳು

ಪಹಲ್‌ಗಾಮ್ ಬಳಿ ರಸ್ತೆಯಲ್ಲಿ ಬೇಲ್‌ಪುರಿ ತಿನ್ನುತ್ತಿವಾಗ ಸೇನಾ ಸಮವಸ್ತ್ರದಲ್ಲಿ ಬಂದಿದ್ದ ಉಗ್ರರು ಮೊದಲಿಗೆ ಹೆಸರು ಹಾಗೂ ಯಾವ ಧರ್ಮ ಎಂದು ಕೇಳಿದರು. ಮುಸ್ಲಿಮರು ಅಲ್ಲ ಎಂದು ಗೊತ್ತಾದ ಬಳಿಕ ತಲೆಗೆ ಗುಂಡು ಹೊಡೆದಿದ್ದಾರೆ. ಈ ವೇಳೆ ನನ್ನ ಹಾಗೂ ನನ್ನ ಮಗನನ್ನೂ ಕೊಲ್ಲಿ ಎಂದು ಉಗ್ರರ ಎದುರು ನಾನು ಕಣ್ಣೀರಿಟ್ಟೆ. ಆದರೆ, ನೀನು ಹೆಂಗಸು ನಿನ್ನನ್ನು ಕೊಲ್ಲುವುದಿಲ್ಲ. ಇದನ್ನ ನೀನು ಮೋದಿಗೆ ಹೋಗಿ ತಿಳಿಸು ಎಂದು ಆತ ಹೇಳಿದ್ದ ಎಂದು ಮೃತ ಮಂಜುನಾಥ್ ರಾವ್ ಅವರ ಪತ್ನಿ ಪಲ್ಲವಿ ತಿಳಿಸಿದ್ದಾರೆ.

ಸಹಾಯವಾಣಿ

ಭಯೋತ್ಪಾದಕ ದಾಳಿಯ ನಂತರ ರಾಜ್ಯದಲ್ಲಿರುವ ಪ್ರವಾಸಿಗರ ನೆರವಿಗಾಗಿ ಜಮ್ಮು - ಕಾಶ್ಮೀರ ಸರಕಾರ ಸಹಾಯವಾಣಿ ಆರಂಭಿಸಿದೆ. ಪ್ರವಾಸಿ ಗರಿಗೆ ಅಗತ್ಯ ನೆರವು ಮತ್ತು ಮಾಹಿತಿಗಾಗಿ ದಿನದ 24 ಗಂಟೆಗಳ ಕಾಲ ಈ ಕೇಂದ್ರ ಕರ್ತವ್ಯ ನಿರ್ವಹಿಸಲಿದ್ದು, ಮೊಬೈಲ್ ಸಂಖ್ಯೆ 01932222337, 7780885759, 9697982527 ಅಥವಾ 6006365245 ಸಂಪರ್ಕಿಸ ಬಹುದು ಎಂದು ಸರಕಾರದ ವಕ್ತಾರರು ತಿಳಿಸಿದ್ದಾರೆ. ಶ್ರೀನಗರದಲ್ಲಿ ತುರ್ತು ನಿಯಂತ್ರಣ ಕೊಠಡಿ ತೆರೆಯಲಾಗಿದೆ. ಯಾವುದೇ ನೆರವಿಗಾಗಿ ಪ್ರವಾಸಿಗರು 01942457543, 01942483651 ಅಥವಾ 7006058623 ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಹೇಳಿದ್ದಾರೆ.

1,009 ಅಭ್ಯರ್ಥಿಗಳು ಆಯ್ಕೆ | ಶಕ್ತಿ ದುಬೆಗೆ ಪ್ರಥಮ ರ್‍ಯಾಂಕ್

ಯುಪಿಎಸ್‌ಸಿ ಫಲಿತಾಂಶ ಪ್ರಕಟ

ದೆಹಲಿ: ಕೇಂದ್ರ ಲೋಕಸೇವಾ ಆಯೋಗವು 2024ರಲ್ಲಿ ನಡೆಸಿದ ಕೇಂದ್ರ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶ ಮಂಗಳವಾರ ಪ್ರಕಟಗೊಂಡಿದ್ದು, ಸಾಮಾನ್ಯ ವರ್ಗದಿಂದ 335, ಆರ್ಥಿಕವಾಗಿ ದುರ್ಬಲ ವರ್ಗದಿಂದ 109, ಹಿಂದುಳಿದ ವರ್ಗಗಳಿಂದ 318, ಪರಿಶಿಷ್ಟ ಜಾತಿಯಿಂದ 160 ಹಾಗೂ ಪರಿಶಿಷ್ಟ ಪಂಗಡದಿಂದ 87 ಅಭ್ಯರ್ಥಿಗಳು ಸೇರಿ ಒಟ್ಟು 1,009 ಅಭ್ಯರ್ಥಿ ಗಳು ಆಯ್ಕೆಯಾಗಿದ್ದಾರೆ. ಉಳಿದಂತೆ 241 ಅಭ್ಯರ್ಥಿಗಳ ಹೆಸರುಗಳನ್ನು ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸೇರಿಸಲಾಗಿದೆ. ಒಬ್ಬ ಅಭ್ಯರ್ಥಿಯ ಫಲಿತಾಂಶ ತಡೆಹಿಡಿಯಲಾಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಇನ್ನೂ 230 ಅಭ್ಯರ್ಥಿಗಳನ್ನು ಕಾಯ್ದಿರಿಸಿದ ಪಟ್ಟಿಯಲ್ಲಿ ಇರಿಸಲಾಗಿದೆ ಎಂದು ಆಯೋಗ ಹೇಳಿದೆ. → 4



ಶಕ್ತಿ ದುಬೆ | ಹರ್ಷಿತಾ ಗೋಯಲ್ | ಡೊಂಗ್ರೆ ಅರ್ಚಿತ್

ಶಕ್ತಿ ದುಬೆ — 1ನೇ ರ್‍ಯಾಂಕ್

ಅಲಹಾಬಾದ್ ವಿಶ್ವವಿದ್ಯಾಲಯದಿಂದ ಜೀವರಸಾಯನ ವಿಜ್ಞಾನದಲ್ಲಿ ಪದವಿ ಪಡೆದಿರುವ ಶಕ್ತಿ ದುಬೆ ದೇಶಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ. ಬರೋಡಾದ ಎಂಎಸ್ ವಿಶ್ವವಿದ್ಯಾಲಯದಿಂದ ಬಿ.ಕಾಂ. ಪದವಿ ಪಡೆದಿರುವ ಹರ್ಷಿತಾ ಗೋಯಲ್ 2ನೇ ರ್‍ಯಾಂಕ್, ವೆಲ್ಲೋರ್‌ನ ವಿಐಟಿ ಕಾಲೇಜಿನಿಂದ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ಬಿ.ಟೆಕ್ ಎಂಜಿನಿಯರಿಂಗ್ ಪದವಿ ಪಡೆದಿರುವ ಡೊಂಗ್ರೆ ಅರ್ಚಿತ್ ಪರಾಗ್ 3ನೇ ರ್‍ಯಾಂಕ್ ರ್‍ಯಾಂಕ್ ಪಡೆದಿದ್ದಾರೆ.

ಅಧಿಕಾರಿಗಳಾದವರು

ಪುರುಷರು	ಮಹಿಳೆಯರು	ಅಂಗವಿಕಲರು
725	284	45

241 ಅಭ್ಯರ್ಥಿಗಳ ಹೆಸರು ತಾತ್ಕಾಲಿಕ ಆಯ್ಕೆ ಪಟ್ಟಿಗೆ

ಒಬ್ಬನ ಫಲಿತಾಂಶ ತಡೆ ಹಿಡಿಯಲಾಗಿದೆ

ನಿವೃತ್ತ ಡಿಜಿಪಿ ಓಂ ಪ್ರಕಾಶ್ ಕೊಲೆ ಪ್ರಕರಣ

ಕಡತ ಸಿಸಿಬಿಗೆ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಓಂ ಪ್ರಕಾಶ್ ಕೊಲೆ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಿದ್ದ ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು, ಸಿಸಿಬಿ ಪೊಲೀಸರಿಗೆ ಮಂಗಳವಾರ ಮಧ್ಯಾಹ್ನ ಕಡತ ಹಸ್ತಾಂತರಿಸಿದರು. ಎಚ್‌ಎಸ್‌ಆರ್ ಲೇಔಟ್ ಠಾಣೆ ಪೊಲೀಸರ ನೇತೃತ್ವದಲ್ಲಿ ಆರೋಪಿಗಳ ವಿಚಾರಣೆ ನಡೆಸಲಾಗಿತ್ತು. ಸೋಮವಾರ ಸಂಜೆ ಪ್ರಕರಣದ ತನಿಖೆಯನ್ನು ಸಿಸಿಬಿ ವರ್ಗಾವಣೆ ಮಾಡಿದ್ದರಿಂದ ಆರೋಪಿಗಳ ಹೇಳಿಕೆಯ ವಿಡಿಯೊ ರೆಕಾರ್ಡ್‌ಗಳು, ಸ್ಥಳ ಮಹಜರು ಮಾಹಿತಿ, ಓಂ ಪ್ರಕಾಶ್ ಅವರ ಸಂಬಂಧಿಕರ ಹೇಳಿಕೆಯ ಮಾಹಿತಿಯ ಕಡತವನ್ನು ಸಿಸಿಬಿಗೆ ಹಸ್ತಾಂತರ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕಸ್ಟಡಿಗೆ ಪಡೆಯಲು ಸಿದ್ಧತೆ

ಕೊಲೆ ಪ್ರಕರಣದ ಸಂಬಂಧ ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ನ್ಯಾಯಾಂಗ ಬಂಧನದಲ್ಲಿದ್ದು, ಅವರನ್ನು ಬಾಡಿ ವಾರಂಟ್ ಮೇಲೆ ಕಸ್ಟಡಿಗೆ ಪಡೆದುಕೊಳ್ಳಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಎರಡು ದಿನಗಳಲ್ಲಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು ಎಂದು ಮೂಲಗಳು ಹೇಳಿವೆ. ಎರಡನೇ ಆರೋಪಿ ಕೃತಿ ಅವರಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಮುಂದುವರಿದಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ಬಂದ ಬಳಿಕ ಕೊಲೆ ಪ್ರಕರಣದಲ್ಲಿ ಕೃತಿ ಅವರ ಪಾತ್ರದ ಕುರಿತು ಗೊತ್ತಾಗಲಿದೆ ಎಂದು ಮೂಲಗಳು ತಿಳಿಸಿವೆ.

26ರಂದು ಪೋಪ್ ಫ್ರಾನ್ಸಿಸ್ ಅಂತ್ಯಕ್ರಿಯೆ

ವ್ಯಾಟಿಕನ್ ಸಿಟಿ: ಪೋಪ್ ಫ್ರಾನ್ಸಿಸ್ ಅವರ ಅಂತ್ಯಕ್ರಿಯೆ ಶನಿವಾರ ನಡೆ ಯಲಿದೆ. ಅಂತ್ಯಕ್ರಿಯೆಯ ವಿಧಿ ವಿಧಾನಗಳನ್ನು ಶನಿವಾರ ಬೆಳಗ್ಗೆ 10 ಗಂಟೆಗೆ ರೋಮ್‌ನ ಬೆಸಿಲಿಕಾ ಆಫ್ ಸೇಂಟ್ ಮೇರಿ ಮೇಜರ್‌ನಲ್ಲಿ ನಡೆ ಸಲು ಕಾರ್ಡಿನಲ್‌ಗಳ ಸಭೆ ಯಲ್ಲಿ ನಿರ್ಧರಿಸಲಾಗಿದೆ. ಈ ವೇಳೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಸೇರಿದಂತೆ ಜಾಗತಿಕ ನಾಯ ಕರು ಭಾಗಿಯಾಗುವ ನಿರೀಕ್ಷೆ ಇದೆ. ಅಂತ್ಯಕ್ರಿಯೆಗೂ ಮುನ್ನ ಬುಧವಾರ ಬೆಳಗ್ಗೆ ಸೇಂಟ್ ಪೀಟರ್ಸ್ ಬೆಸಿಲಿಕಾದಲ್ಲಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕಾಗಿ ಇಡಲು ನಿರ್ಧರಿಸಲಾಗಿದೆ.

ರಿಕ್ಕಿ ಗನ್‌ಮ್ಯಾನ್ ವಿಠ್ಠಲ್ ವಶಕ್ಕೆ



ಬೆಂಗಳೂರು: ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲಿನ ಕೊಲೆ ಯತ್ನ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಇಷ್ಟು ದಿನ ಮಲತಾಯಿಯ ಮೇಲಿದ್ದ ಅನುಮಾನ ಇದೀಗ ರಿಕ್ಕಿ ರೈ ಗನ್‌ಮ್ಯಾನ್ ವಿಠ್ಠಲ್ ಮೇಲೆ ಹೆಚ್ಚಿರುವುದರಿಂದ ಅವರನ್ನು ವಶಕ್ಕೆ ಪಡೆಯಲಾ ಗಿದೆ. ಘಟನೆಯಲ್ಲಿ ಸಿಕ್ಕಿರುವ ಗುಂಡಿಗೂ, ವಿಠ್ಠಲ್ ಬಳಸು ತ್ತಿದ್ದ ಬುಲೆಟ್‌ಗೆ ಸಾಮ್ಯತೆ ಇರುವುದ ರಿಂದ, ವಿಠ್ಠಲ್ ಅವರೇ ದಾಳಿ ನಡೆಸಿ ದ್ದಾರೆಯೇ ಎನ್ನುವ ಅನುಮಾನಗಳಿವೆ. ಇದಕ್ಕೆ ಪೂರಕವಾಗಿ ಘಟನೆಯ ಕೆಲ ನಿಮಿಷಗಳ ಮೊದಲು ರಿಕ್ಕಿ ಹಾಗೂ ವಿಠ್ಠಲ್ ಪ್ರತ್ಯೇಕವಾಗಿ ಚರ್ಚಿಸಿರುವುದು ಅನುಮಾನಕ್ಕೆ ಪುಷ್ಟಿ ನೀಡುತ್ತಿದೆ.

ಭಾರತಕ್ಕೆ ಮೂರನೇ ಸ್ಥಾನ

ಓಮಾ (ಪೆರು): ಭಾರತದ ಶೂಟಿಂಗ್ ಸ್ಪರ್ಧಿಗಳು ಐಎಸ್‌ಎಸ್‌ಎಫ್ ವಿಶ್ವ ಕಪ್‌ನ ಅಂತಿಮ ದಿನ ಟ್ರ್ಯಾಪ್ ಮಿಶ್ರ ವಿಭಾಗದಲ್ಲಿ ಪದಕದ ಸುತ್ತಿಗೇರಲು ವಿಫಲರಾದರು, ಆದರೆ ಒಟ್ಟಾರೆ ಪದಕಪಟ್ಟಿ ಯಲ್ಲಿ 3ನೇ ಸ್ಥಾನ ಪಡೆಯಿತು. ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಮಹಿಳೆಯರ 25 ಕಿ.ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದು ಭಾರತಕ್ಕೆ ಕೊನೆಯ ಪದಕ ಗಳಿಸಿಕೊಟ್ಟಿದ್ದರು. ಭಾರತ ಒಟ್ಟಾರೆ ಈ ವಿಶ್ವಕಪ್‌ನಲ್ಲಿ 7 ಪದಕಗಳನ್ನು ಗೆದ್ದುಕೊಂಡಿದೆ. ಇದರಲ್ಲಿ 2 ಚಿನ್ನ, 4 ಬೆಳ್ಳಿ ಮತ್ತು 1 ಕಂಚು ಇದೆ.

ಸಿಎಂ ವಿರುದ್ಧದ ಅರ್ಜಿ ವಜಾ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಅವರು ವರುಣಾ ಕ್ಷೇತ್ರದಿಂದ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು ಎಂದು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ. ಗ್ಯಾರಂಟಿ ಯೋಜನೆಗಳನ್ನು ಅಗತ್ಯವಿರುವವರಿಗೆ ನೀಡಬಹುದಿತ್ತು. ಅದನ್ನು ಎಲ್ಲರಿಗೂ ವಿಸ್ತರಿಸಲಾಗಿದೆ. ಇಲ್ಲಿ ಕರ್ನಾಟಕದ ಮತದಾರರನ್ನು ಲಘುವಾಗಿ ಪರಿಗಣಿಸಲಾಗಿದೆ. ಆದ್ದರಿಂದ ಸಿದ್ದ ರಾಮಯ್ಯ ಆಯ್ಕೆ ಅಸಿಂಧುಗೊಳಿಸಬೇಕು ಎಂದು ವರುಣಾ ವಿಧಾನಸಭಾ ಕ್ಷೇತ್ರದ ಕೂಡನಹಳ್ಳಿಯ ಕೆ.ಶಂಕರ್ ಎಂಬುವವರು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ದರ್ಶನ್ ಅರ್ಜಿ ಮೇ 14ಕ್ಕೆ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಮತ್ತೆ ಮೇ 14ಕ್ಕೆ ಮುಂದೂಡಲಾಗಿದೆ. ಕೊಲೆ ಪ್ರಕರಣದಲ್ಲಿ ದರ್ಶನ್ ಸೇರಿ ಪ್ರಕರಣದ ಇತರೆ 7 ಆರೋಪಿಗಳಿಗೆ ಹೈಕೋರ್ಟ್ ಜಾಮೀನು ನೀಡಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಪೊಲೀಸರು ಸುಪ್ರೀಂ ಮೊರೆ ಹೋಗಿದ್ದರು. ವಾದ ಪ್ರತಿವಾದಗಳನ್ನು ಆಲಿಸಿದ ಬಳಿಕ ಮೇ 14ಕ್ಕೆ ವಿಚಾರಣೆಯನ್ನು ಮುಂದೂಡಿತು.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜಾತಿಗಣತಿ ಕಾವು | ವಿರೋಧಿಗಳ ಕೈಗೆ ಪ್ರಮುಖಾಸ್ತ್ರ

ಜಾತಿಗಣತಿ ಅಂಕಿಅಂಶ: ಮುಗಿಯದ ಆರೋಪ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಜಾತಿಗಣತಿಯ ಕಾವು ಏರುತ್ತಿದೆ. ಇದೀಗ ಈ ಹಿಂದಿನ ಜಾತಿಗಣತಿಯನ್ನು ವಿರೋಧಿಸುತ್ತಿ ರುವ ಸಮುದಾಯಗಳಿಗೆ, ತಮ್ಮ ಹೋರಾಟ ವನ್ನು ಮತ್ತಷ್ಟು ತೀವ್ರಗೊಳಿಸಲು ಮತ್ತೊಂದು ಪ್ರಮುಖಾಸ್ತ್ರ ಸಿಕ್ಕಿದೆ.

ಹೌದು, 1984ರ ವೆಂಕಟಸ್ವಾಮಿ ಆಯೋಗಕ್ಕೆ ಹೋಲಿಸಿದರೆ 2015ರ ಕಾಂತರಾಜ್ ಅವರು ಸಲ್ಲಿಸಿರುವ ವರದಿಯಲ್ಲಿ ಜನಸಂಖ್ಯೆ ಯಲ್ಲಿ ತೀವ್ರ ವ್ಯತ್ಯಾಸಗಳಿವೆ. ಅದರಲ್ಲಿಯೂ ಪರಿಶಿಷ್ಟ ಹಾಗೂ ಮುಸ್ಲಿಮರ ಜನಸಂಖ್ಯೆ ಯಲ್ಲಿ ತೀವ್ರ ಏರಿಕೆಯಾಗಿದ್ದರೆ, ಲಿಂಗಾಯತ ಸಮುದಾಯದ ಜನಸಂಖ್ಯೆ ಯಲ್ಲಿ ಮಾತ್ರ ಗಣನೀಯ ಕಡಿಮೆಯಿದೆ ಎನ್ನುವುದು ಇದೀಗ ಬಯಲಾಗಿದೆ. 1984, 2015ರ ವರದಿ ಗಮನಿಸಿದರೆ ಮುಸ್ಲಿಮರ ಜನಸಂಖ್ಯೆ ಯಲ್ಲಿ ಶೇ.90ರಷ್ಟು ಸಂಖ್ಯೆ ಏರಿಕೆಯಾಗಿದೆ. 30 ವರ್ಷಗಳಲ್ಲಿ ಮುಸ್ಲಿಮರ ಜನಸಂಖ್ಯೆ ಶೇ.90ರಷ್ಟು ಏರಿಕೆಯಾಗಿರು ವುದು ಸ್ಪಷ್ಟವಾಗಿದೆ. 1984ರಲ್ಲಿ ವೆಂಕಟಸ್ವಾಮಿ ಆಯೋಗ ನಡೆಸಿದ್ದ ಸಮೀಕ್ಷೆ ಪ್ರಕಾರ ವೀರ ಶೈವ ಲಿಂಗಾಯತ ಸಮುದಾಯದ ರಾಜ್ಯ ದಲ್ಲಿ 61 ಲಕ್ಷ ಜನಸಂಖ್ಯೆ ಹೊಂದುವ ಮೂಲಕ ಮೊದಲ ಸ್ಥಾನದಲ್ಲಿದ್ದರು. → 4

» 1985ರ ವರದಿಗೆ ಹೋಲಿಸಿದರೆ ಹಲವು ಸಮುದಾಯಗಳ ಸಂಖ್ಯೆಯಲ್ಲಿ ಕುಸಿತ

» 30 ವರ್ಷಗಳಲ್ಲಿ ಮುಸ್ಲಿಮರ ಜನಸಂಖ್ಯೆ ಬರೋಬ್ಬರಿ ಶೇ.90ರಷ್ಟು ಏರಿಕೆ

» ★ 2015ರಲ್ಲಿ 66 ಲಕ್ಷ ಇದ್ದ ವೀರಶೈವ ಲಿಂಗಾಯತರು ಮೂರನೇ ಸ್ಥಾನಕ್ಕೆ

ಸೇನಾಧಿಕಾರಿಯೇ ಆರೋಪಿ

» ಪ್ರಕರಣಕ್ಕೆ ಭಾಷೆಯ ಬಣ್ಣ ಕಟ್ಟಿದ್ದ ಬೋಸ್

» ಕಮಾಂಡರ್ ನಡೆಗೆ ಸಿಎಂ, ಡಿಸಿಎಂ ವಿರೋಧ

ಬೆಂಗಳೂರು: ಸಿ.ವಿ.ರಾಮನ್ ನಗರದ, ಗೋಪಾಲನ್ ಗ್ರ್ಯಾಂಡ್ ಮಾಲ್ ಬಳಿ ನಡೆದ ರೋಡ್ ರೇಜ್ ಪ್ರಕರಣದಲ್ಲಿ ಪೊಲೀಸರು ಇದೀಗ ಐಎಎಫ್ ವಿಂಗ್ ಕಮಾಂಡರ್ ಬೋಸ್ ವಿರುದ್ಧವೇ ಹತ್ಯಾ ಪ್ರಯತ್ನ ಕೇಸ್ ದಾಖಲಿಸಿದ್ದಾರೆ. ಸೋಮವಾರ ತನ್ನ ಮೇಲೆ ಬೈಕ್ ಸವಾರನೊಬ್ಬ ಹಲ್ಲೆ ಮಾಡಿದ್ದಾನೆ ಎಂದು ಆರೋಪಿಸಿ ವಿಂಗ್ ಕಮಾಂಡರ್ ಶೀಲಾಧಿತ್ಯ ಬೋಸ್ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಹಿನ್ನೆಲೆಯಲ್ಲಿ ಬೈಕ್ ಸವಾರ ವಿನಯ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಇದಾದ ನಂತರ ಘಟನಾ ಸ್ಥಳದ ಸಿಸಿಟಿವಿ ದೃಶ್ಯಾವಳಿಗಳು ವೈರಲ್ ಆಗಿದ್ದು, ಶೀಲಾಧಿತ್ಯನೇ ವಿನಯ್ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿರುವುದು ಬಯಲಾಗಿತ್ತು. ಮತ್ತೊಂದೆಡೆ ಘಟನೆ ಸಂಬಂಧಿಸಿದಂತೆ ವಿಂಗ್ ಕಮಾಂಡರ್ ಆಗಲಿ ಯಾರೇ ಆಗಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ತನಿಖೆಗೆ ಸಹಕರಿಸುವುದಾಗಿ ಭಾರತೀಯ ವಾಯುಪಡೆ ತಿಳಿಸಿದೆ.

ಸಮಾಚಾರ ಸಣ್ಣದಲ್ಲ

ಅಕ್ರಮ ಗೋವುಗಳ ಸಾಗಾಣೆ: ರಕ್ಷಣೆ

ಭದ್ರಾವತಿ: ತಾಲೂಕಿನ ವೀರಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೌಡರಹಳ್ಳಿ ಗ್ರಾಮದಲ್ಲಿ ಅಕ್ರಮವಾಗಿ ಬಂಧಿಸಿಟ್ಟಿದ್ದ, ಸುಮಾರು 27 ಗೋವುಗಳನ್ನು ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪೊಲೀಸರ ನೆರವಿನೊಂದಿಗೆ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಕ್ರಮ ಕಸಾಯಿಖಾನೆಯ ಪಕ್ಕದಲ್ಲಿ ಯಾವುದೇ ಪರವಾನಗಿ ಇಲ್ಲದೆ ಸೋಮವಾರ ರಾತ್ರಿ 12 ಕರುಗಳು ಮತ್ತು 6 ಹೋರಿಗಳನ್ನ ಬಂಧಿಸಿಡಲಾಗಿದೆ ಎಂಬ ಮಾಹಿತಿಯೊಂದಿಗೆ ಕ್ರಮ ಕೈಗೊಳ್ಳುವಂತೆ ಗ್ರಾಮಾಂತರ ಪೊಲೀಸರಿಗೆ ನೀಡಲಾಗಿತ್ತು. ಈ ಹಿನ್ನಲೆಯಲ್ಲಿ ಪೊಲೀಸರು ದಾಳಿ ನಡೆಸಿ ಗೋವುಗಳನ್ನು ರಕ್ಷಿಸಿದ್ದಾರೆ. ರಕ್ಷಣೆ ಮಾಡಿರುವ ಗೋವುಗಳನ್ನು ಕೂಡ್ಲಿ ಶೃಂಗೇರಿ ಮಠದ ಗೋ ಶಾಲೆಗೆ ಬಿಡಲಾಗಿದೆ. ಯಶಸ್ವಿ ಕಾರ್ಯಾಚರಣೆ ಕೈಗೊಂಡಿರುವ ಪೊಲೀಸರಿಗೆ ಹಿಂದೂ ಜಾಗರಣ ವೇದಿಕೆ ಪ್ರಶಂಸಿಸಿದೆ.

ಚಿನ್ನ ಕದ್ದು ಮಹಿಳೆ ಕೊಲೆ

ಬೆಳಗಾವಿ: ಅಪಾರ್ಟ್‌ಮೆಂಟ್ ಗೆ ನುಗ್ಗಿ ಮಹಿಳೆ ಮಂಗಳಸೂತ್ರ ಕದ್ದು ಕತ್ತು ಹಿಸುಕಿ ಕೊಲೆ ಮಾಡಿರುವ ಘಟನೆ ಇಲ್ಲಿನ ಗಣೇಶಪುರದ ಲಕ್ಷ್ಮೀ ನಗರದಲ್ಲಿ ನಡೆದಿದ್ದು ತಡವಾಗಿ ಬೆಳಕಿಗೆ ಬಂದಿದೆ. ಲಕ್ಷ್ಮೀ ನಗರದ ನಿವಾಸಿ ಅಂಜನಾ ಅಜೀತ ದಡ್ಡೀಕರ್(49) ಕೊಲೆಯಾದ ದುರ್ದೈವಿ. ಅಪಾರ್ಟ್‌ಮೆಂಟ್ ನಲ್ಲಿ ಗಂಡ-ಹೆಂಡತಿ ಮಾತ್ರ ವಾಸ ಮಾಡುತ್ತಿದ್ದರು. ಆಟೋ ಚಾಲಕನಾಗಿದ್ದ ಮಾಡಿ ಜೀವನ ಸಾಗಿಸುತ್ತಿದ್ದ ಅಜೀತ್ ದಡ್ಡೀಕರ್ ಸೋಮವಾರ ಸಂಜೆ ಮನೆಗೆ ವಾಪಸ್ ಬಂದಾಗ ಕೊಲೆಯಾಗಿರೋ ಪ್ರಕರಣ ಬೆಳಕಿಗೆ ಬಂದಿದೆ. ಪ್ರಜ್ಞೆತಪ್ಪಿ ಬಿದ್ದಿದ್ದ ಅಂಜನಾರನ್ನ ಬೆಳಗಾವಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಕೊರಳಲ್ಲಿದ್ದ ಮಂಗಳಸೂತ್ರ, ಕಿವಿಯೊಲೆ, ಕೈಯಲ್ಲಿ ಬಂಗಾರ ಉಂಗುರು ಕದ್ದು ಕೊಲೆ ಮಾಡಿರುವ ಶಂಕೆ ಮಾಡಿದ್ದಾರೆ ಎಂದು ಕುಟುಂಬಸ್ಥರ ಆರೋಪಿಸಿದ್ದಾರೆ. ಬೆಳಗಾವಿ ಕ್ಯಾಂಪ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೃತ್ತ ಡಿಜಿಪಿ ಓಂ ಪ್ರಕಾಶ್ ಕೊಲೆ ಪ್ರಕರಣ | ದಿನದಿಂದ ದಿನಕ್ಕೆ ರೋಚಕ ತಿರುವು

ಕೊಲೆಗೆ ವಾರದಿಂದಲೇ ಸ್ಕೆಚ್; ಗೂಗಲ್‌ನಲ್ಲಿ ಕಲಿತ ಕೊಲೆ ವಿದ್ಯೆ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪೊಲೀಸ್ ಮಹಾನಿರ್ದೇಶಕರಾಗಿದ್ದ ಓಂ ಪ್ರಕಾಶ್ ಕೊಲೆ ಪ್ರಕರಣದ ವಿಚಾರಣೆ ಸಾಗಿದಂತೆ, ದಿನಕ್ಕೊಂದು ತಿರುವು ಹಾಗೂ ಕೊಲೆಗೆ ಮಾಡಿದ್ದ ತಯಾರಿಯ ವಿಷಯ ಬಹಿರಂಗವಾಗುತ್ತಿದೆ.

ಈಗಾಗಲೇ ಪೊಲೀಸರ ವಶದಲ್ಲಿರುವ ಓಂ ಪ್ರಕಾಶ್ ಪತ್ನಿ ಪಲ್ಲವಿ ಹಾಗೂ ಪುತ್ರಿ ಕೃತಿಯ ವಿಚಾರಣೆ ವೇಳೆ ಕೊಲೆಗೆ ವಾರದ ಮೊದಲೇ ಸಂಚು ರೂಪಿಸಲಾಗಿತ್ತು ಎನ್ನುವ ಅಂಶವನ್ನು ಒಪ್ಪಿಕೊಂಡಿದ್ದಾರೆ. ಆದರೆ ತೀವ್ರ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ವ್ಯಕ್ತಿಗಳಿಂದ ಈ ರೀತಿಯ ತಯಾರಿ ನಡೆಸಲು ಸಾಧ್ಯವೇ? ಎನ್ನುವ ಅನುಮಾನಗಳು ಶುರುವಾಗಿದೆ. ಪ್ರಕರಣ ದಿನದಿಂದ ದಿನಕ್ಕೆ ರೋಚಕತೆ ಪಡೆಯುತ್ತಿರುವುದರಿಂದ ಹಾಗೂ ನಿವೃತ್ತ ಡಿಜಿಯ ಕೊಲೆಯ ಪ್ರಕರಣ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿರುವುದರಿಂದ ಪ್ರಕರಣವನ್ನು ಸಿಸಿಬಿಗೆ ಹಸ್ತಾಂತರಿಸಲಾಗಿದೆ.

ಓಂ ಪ್ರಕಾಶ್ ಅವರು ಕಾರವಾರ ಎಸ್‌ಪಿಯಾಗಿದ್ದಾಗಿನಿಂದಲೂ ಪತ್ನಿಯೊಂದಿಗೆ ಮನಸ್ತಾಪ ಹೊಂದಿದ್ದರು. ಆದರೆ ಈ ಮನಸ್ತಾಪ ಕೊಲೆಯ ಹಂತಕ್ಕೆ ತಲುಪಿದ್ದು ಕಳೆದ ಮೂರು ತಿಂಗಳಿನಿಂದ ಎನ್ನುವುದು ವಿಚಾರಣೆ ವೇಳೆ ಬಹಿರಂಗವಾಗಿದೆ. ಆಸ್ತಿ ವಿಷಯದಲ್ಲಿ ಅನ್ಯಾಯ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಅಸಮಾಧಾನ ಹೊಂದಿದ್ದ ಪತ್ನಿ ಪಲ್ಲವಿ, ಬಲವಂತವಾಗಿ ಓಂ ಪ್ರಕಾಶ್ ಅವರನ್ನು ಕರೆತಂದಿದ್ದರು. ಆದರೆ ಕೊಲೆಯನ್ನು ಯಾವ ರೀತಿ ಮಾಡಬೇಕು? ರಕ್ತನಾಳಗಳು ಎಲ್ಲಿರುತ್ತವೆ? ಯಾವುದನ್ನು ಕತ್ತರಿಸಿದರೆ ವ್ಯಕ್ತಿ ಸಾಯುತ್ತಾರೆ ಎನ್ನುವ ಅಂಶವನ್ನು ಗೂಗಲ್‌ನ ಯುಟ್ಯೂಬ್ ನೋಡಿ ಕಲಿತಿದ್ದರು ಎನ್ನುವ ಅಂಶ ಬಯಲಾಗಿದೆ.

ಕಳೆದ ಮೂರು ತಿಂಗಳ ಹಿಂದೆಯೇ ಓಂಪ್ರಕಾಶ್ ಕೊಲೆಗೆ ಪೂರ್ವ ತಯಾರಿ ನಡೆಸಿದ್ದ ಪಲ್ಲವಿ, ಮಾನವನ ರಕ್ತನಾಳಗಳನ್ನು ಕತ್ತರಿಸಿದರೆ ರಕ್ತಸಂಚಾರ ನಿಂತು ಹೋಗುತ್ತದೆ. ಇದರಿಂದ ಸುಲಭವಾಗಿ ಪ್ರಾಣ ತೆಗೆಯಬಹುದೆಂಬ ಮುಂದಾಲೋಚನೆಯಿಂದ ಗೂಗಲ್ ನೆರವು ಪಡೆದಿದ್ದರು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ. ವಿಶೇಷವಾಗಿ ಓಂಪ್ರಕಾಶ್ ಕೊಲೆಯಾಗುವ ಮುನ್ನ 5 ದಿನಗಳ ಮುಂಚೆ ನಿರಂತರವಾಗಿ ಯೂಟ್ಯೂಬ್ ನೋಡುತ್ತಿದ್ದ ಪಲ್ಲವಿ, ಮನುಷ್ಯನನ್ನು ಕತ್ತರಿಸುವುದು, ಕೊಲೆ ಮಾಡುವುದು, ಕೊಲೆಗೂ ಮುನ್ನ ಯಾವ ರೀತಿ ಪೂರ್ವ ತಯಾರಿ ನಡೆಸಬೇಕು? ಎನ್ನುವ ಬಗ್ಗೆ ಮಾಹಿತಿ ಪಡೆದಿದ್ದರು ಎನ್ನಲಾಗಿದೆ.

ಎರಡು ಬೆರಳಚ್ಚು ಗುರುತು ಪತ್ತೆ

ಇಡೀ ಪ್ರಕರಣದಲ್ಲಿ ಪಲ್ಲವಿ ಹಾಗೂ ಕೃತಿಯನ್ನು ಬಂಧಿಸಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಆದರೆ ಈ ಪ್ರಕರಣದಲ್ಲಿ ಪುತ್ರಿ ಕೃತಿಯನ್ನು ರಕ್ಷಿಸಲು ಕೊಲೆಯನ್ನು ತಾನೊಬ್ಬಳೇ ಮಾಡಿದ್ದೇನೆ ಎಂದು ಪಲ್ಲವಿ ಪೊಲೀಸರ ಮುಂದೆ ಹೇಳುತ್ತಿದ್ದಾಳೆ. ಆದರೆ ಕೊಲೆ ನಡೆದ ಸ್ಥಳದಲ್ಲಿದ್ದ ಚಾಕು ಹಾಗೂ ಬಾಟಲಿಯ ಮೇಲೆ ಎರಡು ಭಿನ್ನ ಬೆರಳಚ್ಚು ಸಿಕ್ಕಿರುವುದರಿಂದ ಪ್ರಕರಣದಲ್ಲಿ ಪುತ್ರಿ ಕೃತಿಯ ಕೃತ್ಯವೂ ಇದೆ ಎನ್ನುವ ಅನುಮಾನ ಬಲಗೊಂಡಿದೆ. ಒಂದು ವೇಳೆ ಎರಡನೇ ಬೆರಳಚ್ಚು ಕೃತಿಯದ್ದು ಅಲ್ಲ ಎನ್ನುವುದಾದರೆ ಮತ್ತೊಂದು ಈ ಕೃತ್ಯದಲ್ಲಿ ಭಾಗವಹಿಸಿದ್ದರೆಯೇ ಎನ್ನುವ ಬಗ್ಗೆ ತನಿಖೆಯಾಗಬೇಕಿದೆ.

- ಕೊಲೆಯಾಗುವ ಮುನ್ನ 5 ದಿನಗಳ ಮುಂಚೆ ಯೂಟ್ಯೂಬ್ ನೋಡುತ್ತಿದ್ದ ಪಲ್ಲವಿ, ಮನುಷ್ಯನನ್ನು ಕತ್ತರಿಸುವುದು, ಕೊಲೆ ಮಾಡುವುದು, ಕೊಲೆಗೂ ಮುನ್ನ ಯಾವ ರೀತಿ ಪೂರ್ವ ತಯಾರಿ ನಡೆಸಬೇಕು?
- ಓಂ ಪ್ರಕಾಶ್ ಅವರು ಕಾರವಾರ ಎಸ್ ಪಿಯಾಗಿದ್ದಾಗಿನಿಂದಲೂ ಪತ್ನಿಯೊಂದಿಗೆ ಮನಸ್ತಾಪ.
- ಆಸ್ತಿ ವಿಷಯದಲ್ಲಿ ಅನ್ಯಾಯ ಮಾಡಿದ್ದಾರೆ ಎನ್ನುವ ಕಾರಣಕ್ಕೆ ಅಸಮಾಧಾನ

ನಿವೃತ್ತ ಡಿಜಿಪಿ ಓಂಪ್ರಕಾಶ್ ಅವರ ಹತ್ಯೆ ಪ್ರಕರಣದಲ್ಲಿ ಪತ್ನಿ ಪಲ್ಲವಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಪ್ರಕರಣವನ್ನು ಸಿಸಿಬಿ ತನಿಖೆಗೆ ವಹಿಸಲಾಗಿದೆ. ಕೊಲೆ ಮಾಡಿರುವುದನ್ನು ಪತ್ನಿ ಒಪ್ಪಿಕೊಂಡಿದ್ದಾರೆ. ಕೊಲೆಯ ಉದ್ದೇಶ ಸೇರಿದಂತೆ ಹೆಚ್ಚಿನ ವಿಚಾರಣೆಗಾಗಿ ಸಿಸಿಬಿಗೆ ವಹಿಸಲಾಗಿದೆ. ಓಂಪ್ರಕಾಶ್ ಹಿರಿಯ ಅಧಿಕಾರಿಯಾಗಿದ್ದರು. ಇದೊಂದು ಸೂಕ್ಷ್ಮ ಪ್ರಕರಣ. ಪೊಲೀಸರು ಎಲ್ಲಾ ದೃಷ್ಟಿಕೋನಗಳಿಂದಲೂ ತನಿಖೆ ನಡೆಸುತ್ತಾರೆ.

-ಡಾ.ಜಿ. ಪರಮೇಶ್ವರ, ಗೃಹ ಸಚಿವ

ಕೊಲೆ ಮಾಡಲೆಂದೇ ಕರೆತಂದಿದ್ದ ಪುತ್ರಿ?

ಮನೆಯುಲ್ಲಿನ ಮನಸ್ತಾಪದಿಂದಾಗಿ ಓಂ ಪ್ರಕಾಶ್ ಒಂದಷ್ಟು ದಿನ ಬೇರೆ ಕಡೆ ಇದ್ದರು. ನಂತರ ಬಲವಂತವಾಗಿ ಅವರನ್ನು ಮನೆಗೆ ಕರೆದುಕೊಂಡು ಬರಲಾಗಿತ್ತು. ಮನೆಗೆ ಕರೆದುಕೊಂಡು ಬಂದ ನಂತರವೂ ಗಲಾಟೆ ನಡೆದಿತ್ತು. ಗಲಾಟೆ ಜೋರಾದ ಕಾರಣ ಓಂ ಪ್ರಕಾಶ್ ಅವರು ಸಹೋದರಿ ಸರಿತಾ ಮನೆಗೆ ತಂದೆ ಹೋಗಿದ್ದರು. ಶುಕ್ರವಾರ ಪುತ್ರಿ ಕೃತಿ ಸರಿತಾ ಅವರ ಮನೆಗೆ ಹೋಗಿ ಪೀಡಿಸಿ ಕರೆ ತಂದಿದ್ದಳು. ಮನೆಗೆ ಕರೆ ತಂದ ಬಳಿಕ ಮತ್ತೆ ಗಲಾಟೆ ನಡೆದಿದೆ. ಗಲಾಟೆ ನಡೆಯುತ್ತಿದ್ದಂತೆ ಈ ಮನುಷ್ಯನನ್ನು ಹೇಗಾದರೂ ಮಾಡಿ ಮುಗಿಸಿಬಿಡಬೇಕು ಎಂದು ಪ್ಲ್ಯಾನ್ ಮಾಡಿದ್ದಾರೆ. ಈ ಪ್ಲ್ಯಾನ್‌ನಂತೆ ಭಾನುವಾರ ಮಧ್ಯಾಹ್ನ ಮತ್ತೆ ಗಲಾಟೆ ಮಾಡಿದ್ದಾರೆ. ಗಲಾಟೆಯ ಬಳಿಕ ಓಂ ಪ್ರಕಾಶ್ ಅವರು ಊಟಕ್ಕೆ ಎರಡು ಮೀನು ತರಿಸಿದ್ದರು. ಮಧ್ಯಾಹ್ನ ಮೀನಿನ ಊಟ ಮಾಡುತ್ತಿದ್ದಾಗ ಪಲ್ಲವಿ ಮತ್ತು ಕೃತಿ ದಾಳಿ ನಡೆಸಿ ಓಂ ಪ್ರಕಾಶ್ ಅವರನ್ನು ಹತ್ಯೆ ಮಾಡಿರುವ ವಿಚಾರ ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಹಾಲು ಸಂಗ್ರಹಣೆ, ಸಹ ಪ್ಯಾಕೇಜಿಂಗ್ ಕೇಂದ್ರಗಳು ಆರಂಭಕ್ಕೆ ಕ್ರಮ

ರಾಜಸ್ಥಾನದಲ್ಲಿ ಮಾರಾಟ ಕೇಂದ್ರ, ಆರಂಭಕ್ಕೆ ಮುಂದಾದ ಕೆಎಂಎಫ್

ಬೆಂಗಳೂರು: ದೆಹಲಿಯ ಕೇಂದ್ರ ಸ್ಥಾಪನೆಯ ಬಳಿಕ ಕೆಎಂಎಫ್ ಇದೀಗ ರಾಜಸ್ಥಾನ ಹಾಗೂ ಮಧ್ಯಪ್ರದೇಶದಲ್ಲಿ ಹಾಲು ಸಂಗ್ರಹಣೆ ಹಾಗೂ ಸಹ ಪ್ಯಾಕೇಜಿಂಗ್ ಕೇಂದ್ರಗಳನ್ನು ಆರಂಭಿಸಲು ಮುಂದಾಗಿದೆ.

ನಂದಿನಿ ಹಾಲಿನ ಬ್ರ್ಯಾಂಡ್ ದೇಶದ ಎರಡನೇ ಅತಿ ದೊಡ್ಡ ಹಾಲು ಉತ್ಪಾದಕ ರಾಜ್ಯವಾಗಿ ರಾಜಸ್ಥಾನದಲ್ಲಿ ತನ್ನ ಕೇಂದ್ರವನ್ನು ಆರಂಭಿಸಲು ಮುಂದಾಗಿದೆ. ದೆಹಲಿಯಲ್ಲಿ ತನ್ನ ಕೇಂದ್ರ ಸ್ಥಾಪಿಸಿದ ನಂತರ, ಕೆಎಂಎಫ್ ಹಾಲು ಸಂಗ್ರಹಣೆಯನ್ನು ಪ್ರಾರಂಭಿಸಲು ಮತ್ತು ರಾಜಸ್ಥಾನದಲ್ಲಿ ಸಹ-ಪ್ಯಾಕೇಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಿದ್ದು, ಉತ್ತರದ ಮಾರುಕಟ್ಟೆಗೆ ಪ್ರವೇಶಿಸಲು, ಮಧ್ಯಪ್ರದೇಶವನ್ನು ಸಹ ಅದರ ವಿಶಾಲ ರಾಷ್ಟ್ರೀಯ ವಿಸ್ತರಣಾ ಕಾರ್ಯತಂತ್ರದ ಭಾಗವಾಗಿ ಮಾಡಿಕೊಳ್ಳಲು ಮುಂದಾಗಿದೆ.

ಕೆಎಂಎಫ್ ಅಧಿಕಾರಿಗಳು ಈ ಕುರಿತು ಮಾತನಾಡಿ, ಉತ್ತರ ಭಾರತದ ಮಾರುಕಟ್ಟೆಗಳಲ್ಲಿ ಸಹ ಪ್ಯಾಕೇಜಿಂಗ್ ಘಟಕಗಳನ್ನು ಸ್ಥಾಪಿಸುವ ಮೂಲಕ ಕೆಎಂಎಫ್ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಉತ್ತರ ಭಾರತದಲ್ಲೂ ಪ್ರಚಾರ ಮಾಡಲು ಮುಂದಾಗಿದೆ. ಈ ಕ್ರಮದಿಂದ ಕೋಲ್ಡ್ ಚೈನ್‌ನ ಮೇಲಿನ ಹೊರೆಯನ್ನು ಕಡಿಮೆ ಮಾಡುವ ನಿರೀಕ್ಷೆಯಿದ್ದು, ಪೌಷ್ಟಿಕಾಂಶದ ಮೌಲ್ಯವನ್ನು ಸಂರಕ್ಷಿಸಲು ಹಾಗೂ ಹಾಳಾಗಿ ಹೋಗುವ ಅಪಾಯವನ್ನು ಕಡಿಮೆ ಮಾಡಲು ಸಹಾಯಕವಾಗಲಿದೆ. ಪ್ರಾದೇಶಿಕವಾಗಿ ಹೆಚ್ಚು ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಲು ಇದು ಸಹಾಯವಾಗಲಿದೆ. ತಾಜಾ ಉತ್ಪನ್ನಗಳು ಚಿಲ್ಲರೆ ಮಾರಾಟ ಮಳಿಗೆಗಳನ್ನು ವೇಗವಾಗಿ ತಲುಪುತ್ತವೆ ಎಂದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ ಶಿವಸ್ವಾಮಿ ಮಾತನಾಡಿ, ಪ್ರೋಟಿನ್ ಭರಿತ ಆಹಾರಗಳು ಜನಪ್ರಿಯತೆ ಗಳಿಸುತ್ತಿರುವುದರಿಂದ, ಕೆಎಂಎಫ್ ಈ ಮೇ ತಿಂಗಳಲ್ಲಿ ಹೊಸ ಶ್ರೇಣಿಯ ಹೈ-ಪ್ರೋಟಿನ್ ಡೈರಿ ಉತ್ಪನ್ನಗಳನ್ನು ಬಿಡುಗಡೆ ಮಾಡಲು ಸಜ್ಜಾಗಿದೆ. ಮುಂಬರುವ ಸಾಲಿನಲ್ಲಿ ಟೆಟ್ರಾ ಪ್ಯಾಕ್‌ಗಳಲ್ಲಿ ಪ್ರೋಟಿನ್-ಪ್ಯಾಕ್ಡ್ ಫ್ಲೇವರ್ಡ್ ಹಾಲು, ಜತೆಗೆ ಸಾದಾ ಮತ್ತು ಫ್ಲೇವರ್ಡ್ ಗ್ರೀಕ್ ಮೊಸರುಗಳ ಸ್ಟಾಕ್ ಕೀಪಿಂಗ್ ಯೂನಿಟ್ (ಎಸ್ಕೆಯು) ಇರುತ್ತದೆ ಎಂದು ಹೇಳಿದರು.

ವಿಶಿಷ್ಟ ಉತ್ಪನ್ನಗಳ ಪರಿಚಯ

ಇಲ್ಲಿಯವರೆಗೆ ಯಾವುದೇ ಕಂಪನಿಯು ಪ್ರಾರಂಭಿಸದ ವಿಶಿಷ್ಟ ಉತ್ಪನ್ನಗಳನ್ನು ಪರಿಚಯಿಸಲು ನಾವು ಕೆಲಸ ಮಾಡುತ್ತಿದ್ದೇವೆ. ವಿಸ್ತರಿಸುತ್ತಿರುವ ಪ್ರೋಟಿನ್ -ಕೇಂದ್ರಿತ ಮಾರುಕಟ್ಟೆಯಲ್ಲಿ ನಾವೀನ್ಯತೆ ಮತ್ತು ವಿಭಿನ್ನತೆಯ ಮೇಲೆ ಬ್ರ್ಯಾಂಡ್ ಗಮನ ಹರಿಸಿದೆ. ಬೇಕರಿ ಮತ್ತು ಮಿಠಾಯಿ ವಿಭಾಗದ ಅಡಿಯಲ್ಲಿ ಕೇವಲ ಮೂರು ವಸ್ತುಗಳನ್ನು ಮಾತ್ರ ನೀಡುವ ಕೆಎಂಎಫ್ - ಸ್ಲೈಸ್ಡ್ ಕೇಕ್‌ಗಳು, ಹಣ್ಣಿನ ಕೇಕ್‌ಗಳು, ಕಪ್ ಕೇಕ್‌ಗಳು, ಮಫಿನ್‌ಗಳು ಮತ್ತು ಹೆಚ್ಚಿನವುಗಳಂತಹ ಹೊಸ ಉತ್ಪನ್ನಗಳನ್ನು ಸೇರಿಸಲು ವಿಸ್ತರಿಸುತ್ತಿದೆ. ಈ ಉತ್ಪನ್ನಗಳ ಅಡಿಯಲ್ಲಿ ಒಟ್ಟು 22 ವಿಧ ಹಾಗೂ ಫ್ಲೇವರ್‌ಗಳೊಂದಿಗೆ ಹೊರ ಬರಲಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ ಶಿವಸ್ವಾಮಿ ತಿಳಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ- ೦೪, ಭೂತರಾಮನಹಟ್ಟಿ, ಬೆಳಗಾವಿ – 591156
(ನ್ಯಾಕ್ ಮಾನ್ಯತೆಃ+ ಗ್ರೇಡ್ - 2021)
E-mail:rcubuilding2016@gmail.com Phone No.: 0831-2565242/03
ಕುಲಸಚಿವರ ಕಾರ್ಯಾಲಯ

ಪತ್ರಿಕಾ ಪ್ರಕಟಣೆ

-:ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ):-

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಚೇರಿ ಕೆಲಸಗಳಿಗೆ ಬೇಕಾಗುವ ಬಾಡಿಗೆ ವಾಹನಗಳ ಕುರಿತಂತೆ ದ್ವೈವಾರ್ಷಿಕ ದರ ಒಪ್ಪಂದಕ್ಕಾಗಿ ಆಸಕ್ತರಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ **21.04.2025** ರಂದು ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು **http://kppp.karnataka.gov.in** ಮೂಲಕ ದಿನಾಂಕ **05.05.2025** ರ ಸಂಜೆ **05.00** ಗಂಟೆಯೊಳಗಾಗಿ ಸದರಿ ಟೆಂಡರ್‌ಗೆ ಅರ್ಜಿಯನ್ನು ಸಲ್ಲಿಸ ಬಹುದಾಗಿದೆ. ಟೆಂಡರ್‌ನ ಇ.ಎಮ್.ಡಿ ಮೊತ್ತ **ರೂ.90,000/-ಆಗಿರುತ್ತದೆ.** ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.rcub.ac.in** ನಲ್ಲಿ ಹಾಗೂ ವಿಶ್ವವಿದ್ಯಾಲಯದ ಎಸ್ಟೇಟ್ ವಿಭಾಗದಿಂದ ಪಡೆಯಬಹುದಾಗಿದೆ.

ಸಹಿ/-
ಕುಲಸಚಿವರು
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,ಬೆಳಗಾವಿ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರು ಟೆಂಡರು ಅಧಿಸೂಚನೆ ಸಂಖ್ಯೆ : 02/2025-26
ದಿನಾಂಕ: 21.04.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಇವರಿಂದ 02 ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 4059-80-051-0-29-386 ಇಲಾಖಾ ಕಟ್ಟಡಗಳ ನಿರ್ಮಾಣ ಮತ್ತು 8443 ಠೇವಣಿವಂತಿಕೆ ಅಡಿಯಲ್ಲಿ KW-3 & KW-1 ರ ನಿಬಂಧನೆ ಮತ್ತು ಷರತ್ತುಗಳನ್ವಯ ಕರ್ನಾಟಕ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು (http://KPPP.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್ ಕ್ವೇರೀಸ್ ಗೆ ದಿನಾಂಕ:29.04.2025 ಆಗಿರುತ್ತದೆ. ಟೆಂಡರ್‌ನ್ನು ದಿನಾಂಕ: 02.05.2025 ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಕನಿಷ್ಠ ಮೊತ್ತ ರೂ.14.25 ಲಕ್ಷಗಳಿಂದ ಮತ್ತು ಗರಿಷ್ಠ ಮೊತ್ತ ರೂ.58.077 ಲಕ್ಷಗಳವರೆಗೆ ಹಾಗೂ ಇ.ಎಂ.ಡಿ.ಯ ಕನಿಷ್ಠ ಮೊತ್ತ ರೂ.0.36 ಲಕ್ಷಗಳಿಂದ ಮತ್ತು ಇ.ಎಂ.ಡಿ. ಯ ಗರಿಷ್ಠ ಮೊತ್ತ ರೂ.1.17 ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ 4ನೇ ದರ್ಜೆ ಹಾಗೂ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.
DIPR-DD-MYS/86/KSMCA-75/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಬಾಗಲಕೋಟೆ ಪ್ರಾದೇಶಿಕ ಉಪವಿಭಾಗ, ಬಾಗಲಕೋಟೆ
OFFICE OF THE ASSISTANT CONSERVATOR OF FORESTS, BAGALKOTE TERRITORIAL SUB DIVISION, BAGALKOTE
ದೂರವಾಣಿ ಸಂಖ್ಯೆ: 9481992902 ಇ-ಮೇಲ್: acfbgk@gmail.com

ಸಂಖ್ಯೆ: ಸಅಸಂ/ಇ-ಟೆಂಡರ್/2025-26/13 ದಿನಾಂಕ: 21-04-2025

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2025-26ನೇ ಸಾಲಿಗೆ ಬಾಗಲಕೋಟೆ ಪ್ರಾದೇಶಿಕ ಉಪವಿಭಾಗ ವ್ಯಾಪ್ತಿಯ ಬಾಗಲಕೋಟೆ, ಬಾದಾಮಿ ಮತ್ತು ಹುನಗುಂದ ವಲಯಗಳಲ್ಲಿ ಮುಂಗಡ ಕಾಮಗಾರಿ ಹಾಗೂ ಸಸಿ ಬೆಳೆಸುವ ಕಾಮಗಾರಿ, ನೆಡುತೋಪು ನಿರ್ಮಾಣ ಕಾಮಗಾರಿ, ನೆಡುತೋಪು ನಿರ್ವಹಣೆ ಹಾಗೂ ಇತರೆ ಕಾಮಗಾರಿಗಳನ್ನು ಕೈಗೊಳ್ಳಲು ನೋಂದಾಯಿತ ಅರ್ಹ ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 01-05-2025 ರಂದು ಮಧ್ಯಾಹ್ನ 12-00 ಗಂಟೆ ಇರುತ್ತದೆ. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು. ಸದರಿ ದಿನಾಂಕಗಳಂದು ಟೆಂಡರ್ ಸ್ವೀಕೃತವಾಗದೇ ಇದ್ದಲ್ಲಿ ಮರು ಟೆಂಡರ್ ದಿನಾಂಕ ಸ್ವಯಂ ಚಾಲಿತವಾಗಿ 7 ದಿನ ವಿಸ್ತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ಉಪವಿಭಾಗ, ಬಾಗಲಕೋಟೆ
DIPR/BGK/RO-NO-31/KSMCA/2025-26

ಯುಪಿಎಸ್‌ಸಿ ಫಲಿತಾಂಶ ಪ್ರಕಟ

← ಮೊದಲಪುಟದಿಂದ

2024ರ ಕೇಂದ್ರ ಲೋಕಸೇವಾ ಆಯೋಗದ ಪೂರ್ವಭಾವಿ ಪರೀಕ್ಷೆಯು ಜೂನ್ 16ರಂದು ನಡೆದಿತ್ತು. 9,92,599 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಇವರಲ್ಲಿ 5,83,213 ಅಭ್ಯರ್ಥಿಗಳು ಮಾತ್ರ ಪರೀಕ್ಷೆ ಬರೆದಿದ್ದರು. ಮುಖ್ಯ ಪರೀಕ್ಷೆಗೆ 14,627 ಅಭ್ಯರ್ಥಿಗಳು ಆಯ್ಕೆಯಾಗಿದ್ದರು. ಕಳೆದ ಸೆಪ್ಟೆಂಬರ್‌ನಲ್ಲಿ ಮುಖ್ಯ ಪರೀಕ್ಷೆ ನಡೆದಿತ್ತು. ಇವರಲ್ಲಿ 2,845 ಅಭ್ಯರ್ಥಿಗಳು ಸಂದರ್ಶನ ಹಂತಕ್ಕೆ ಆಯ್ಕೆಯಾಗಿದ್ದರು. ಐಎಎಸ್, ಐಎಫ್‌ಎಸ್, ಐಪಿಎಸ್ ಸೇರಿದಂತೆ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಕೇಂದ್ರ ನಾಗರಿಕ ಸೇವಾ ಪರೀಕ್ಷೆಯ ವಿವಿಧ ಹುದ್ದೆಗಳಿಗೆ ಅಂತಿಮವಾಗಿ 1,009 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. ಇವರಲ್ಲಿ 725 ಪುರುಷರು ಹಾಗೂ 284 ಮಹಿಳೆಯರು ಸೇರಿದ್ದಾರೆ. ಈ ಬಾರಿ 45 ಅಂಗವಿಕಲ ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. 50 ರ‍್ಯಾಂಕ್ ಒಳಗೆ ಕರ್ನಾಟಕದ ಇಬ್ಬರು ವೈದ್ಯರು ಯಶಸ್ಸು ಸಾಧಿಸಿದ್ದಾರೆ. ಡಾ.ರಂಗ ಮಂಜು 24ನೇ ರ‍್ಯಾಂಕ್ ಮತ್ತು ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಕೋಡಿಯಾಲ ಹೊಸಪೇಟೆ ಗ್ರಾಮದ ಡಾ.ಸಚಿನ್ ಗುತ್ತೂರು 41ನೇ ಸ್ಥಾನ ಪಡೆದಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಜಾತಿಗಣತಿ ಅಂಕಿಅಂಶ: ಮುಗಿಯದ ಆರೋಪ

← ಮೊದಲಪುಟದಿಂದ

ಆದರೆ, 2015ರ ಕಾಂತರಾಜು ಆಯೋಗದ ಸಮೀಕ್ಷೆ ಪ್ರಕಾರ 66 ಲಕ್ಷ ಜನಸಂಖ್ಯೆಯಿರುವ ವೀರಶೈವ ಲಿಂಗಾಯತರು ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ಇವರ ಜನಸಂಖ್ಯೆ ವೃದ್ಧಿ ಕೇವಲ 8.50ರಷ್ಟಿದೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಆದರೆ ವೆಂಕಟಸ್ವಾಮಿ ಅವರ ಆಯೋಗದಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ 30 ವರ್ಷದಲ್ಲಿ ಒಂದು ಕೋಟಿಯಾಗಿದ್ದು ಬರೋಬ್ಬರಿ 90ರಷ್ಟು ಜನಸಂಖ್ಯೆ ವೃದ್ಧಿಯಾಗಿದೆ. ಇನ್ನೂ ಮುಸ್ಲಿಮರು ಕೂಡ 1984ರಲ್ಲಿ ಕರ್ನಾಟಕದಲ್ಲಿ ಕೇವಲ 39 ಲಕ್ಷ ಜನರಿದ್ದರು. ಆದರೆ, ಈಗ ಇವರ ಸಂಖ್ಯೆ ಕಾಂತರಾಜು ಆಯೋಗದ ವರದಿ ಪ್ರಕಾರ 76 ಲಕ್ಷವಾಗಿದೆ. ಅಂದರೆ ಬರೋಬ್ಬರಿ ಶೇ.94ರಷ್ಟು ಜನಸಂಖ್ಯೆ ಹೆಚ್ಚಾಗಿದೆ.

ಏಕಾಏಕಿ ಜನಸಂಖ್ಯೆ ಏರಿದ್ದು ಹೇಗೆ?

1984ರಲ್ಲಿ ಇಡೀ ರಾಜ್ಯದಲ್ಲಿ ಶೇ.17ರಷ್ಟು ಜನಸಂಖ್ಯೆ ಹೊಂದಿದ್ದ ಲಿಂಗಾಯತರು ಈಗ ಮೂರನೇ ಸ್ಥಾನಕ್ಕೆ ಕುಸಿದಿದ್ದಾರೆ. ಲಿಂಗಾಯತರಿಗೆ ಮೂರನೇ ಸ್ಥಾನದಲ್ಲಿದ್ದರೆ, ಮುಸ್ಲಿಮರು ಎರಡನೇ ಸ್ಥಾನ ಹಾಗೂ ಪರಿಶಿಷ್ಟ ಜಾತಿಗಳು ಅತಿದೊಡ್ಡ ವರ್ಗ ಎಂದು ಹೇಳಲಾಗಿದೆ. ಆದರೆ ಈಗ ಉಳಿದ ಸಮುದಾಯಗಳು ನಿಧಾನಗತಿಯಲ್ಲಿ ಏರಿಕೆ ಕಂಡಿದ್ದರೂ ಮುಸ್ಲಿಮರ ಜನಸಂಖ್ಯೆ ಏಕಾಏಕಿ 30 ವರ್ಷದಲ್ಲಿ ಶೇ.90ರಷ್ಟು ಬೆಳವಣಿಗೆಯಾಗಿರುವುದು ಹೇಗೆ ಎನ್ನುವುದು ಹಲವರ ಪ್ರಶ್ನೆಯಾಗಿದೆ.

ವೆಂಕಟಸ್ವಾಮಿ ಆಯೋಗವು 1984ರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಿತು. ಆ ವೇಳೆ ರಾಜ್ಯದ 3.61 ಕೋಟಿ ಜನಸಂಖ್ಯೆರು ಒಳಗೊಂಡಿದ್ದರು. 2015ರ ಸಮೀಕ್ಷೆಯಲ್ಲಿ, ಪರಿಶಿಷ್ಟ ಜಾತಿಗಳು ಏಕೈಕ ಅತಿದೊಡ್ಡ ಸಮುದಾಯವಾಗಿದ್ದು, ನಂತರದ ಸ್ಥಾನದಲ್ಲಿ ಮುಸ್ಲಿಮರು ಇದ್ದಾರೆ. ವೀರಶೈವ-ಲಿಂಗಾಯತರು ಮೂರನೇ ಸ್ಥಾನ ಪಡೆದಿದ್ದು, ನಂತರದ ಸ್ಥಾನಗಳಲ್ಲಿ ಒಕ್ಕಲಿಗರು, ಕುರುಬರು ಮತ್ತು ಬ್ರಾಹಣರು ಇದ್ದಾರೆ.

ಶೈಕ್ಷಣಿಕ-ಸಾಮಾಜಿಕ ಗಣತಿ ವೈಜ್ಞಾನಿಕವಾಗಿದೆ

ಗಂಗಾವತಿ: ರಾಜ್ಯದಲ್ಲಿ ಕೈಗೊಂಡಿದ್ದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಗಣತಿ ಕಾರ್ಯ ವೈಜ್ಞಾನಿಕವಾಗಿದ್ದು, ರಾಜ್ಯದ ಸರ್ವ ಜಾತಿ ಬಾಂಧವರ ಪ್ರಗತಿಗೆ ಪೂರಕವಾಗಿದೆ. ವಿಪಕ್ಷದವರು ಇನ್ನಿಲ್ಲದಂತೆ ಜನರಿಗೆ ತಪ್ಪು ಮಾಹಿತಿ ಹೇಳುತ್ತಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಕೆಲ ಜಾತಿಗಳನ್ನು ಹೆಚ್ಚು ಮಾಡಿ ಉಳಿದ ಜಾತಿಯವರನ್ನು ಕಡಿಮೆ ತೋರಿಸಲಾಗಿದೆ ಎನ್ನುವ ವಿಚಾರ ಸರಿಯಲ್ಲ. ಮುಖ್ಯಮಂತ್ರಿಗಳು ಸಚಿವ ಸಂಪುಟದಲ್ಲಿ ವರದಿ ಮಂಡಿಸಿ ಎಲ್ಲಾ ಸಚಿವರಿಗೆ ವರದಿ ನೀಡಿದ್ದು ಅಭಿಪ್ರಾಯ ಹೇಳಲು ಸೂಚನೆ ನೀಡಿದ್ದಾರೆ. ಮುಂಬರುವ ಸಚಿವ ಸಂಪುಟದಲ್ಲಿ ಈ ಕುರಿತು ಎಲ್ಲಾ ಸಚಿವರು ಅವರವರ ಅಭಿಪ್ರಾಯ ಹೇಳುವ ಮೂಲಕ ವರದಿ ಅನುಷ್ಠಾನಕ್ಕೆ ಸಹಕರಿಸಲಿದ್ದಾರೆ.

ಕೊಲೆ ಪ್ರಯತ್ನಕ್ಕೆ ಬಳಸಿದ್ದ ಗನ್‌ಗಳ ಮೇಲೆಯೇ ಪೊಲೀಸರಿಗೆ ಅನುಮಾನ | ಸ್ವಯಂ ದಾಳಿ ನಡೆಸಿಕೊಂಡಿರುವ ಅನುಮಾನ?

ರಿಕ್ಕಿ ಗನ್‌ಮ್ಯಾನ್ ವಿಠ್ಠಲ್ ಪೊಲೀಸ್ ವಶಕ್ಕೆ

ಬೆಂಗಳೂರು: ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲಿನ ಕೊಲೆ ಯತ್ನ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಇಷ್ಟು ದಿನ ಮಲತಾಯಿಯ ಮೇಲಿದ್ದ ಅನುಮಾನ ಇದೀಗ ರಿಕ್ಕಿ ರೈ ಗನ್‌ಮ್ಯಾನ್ ಮೇಲೆ ಹೆಚ್ಚಿರುವುದರಿಂದ ಅವರನ್ನು ವಶಕ್ಕೆ ಪಡೆಯಲಾಗಿದೆ.

ಹೌದು, ರಿಕ್ಕಿ ರೈ ಮೇಲೆ ದಾಳಿಯಾದ ಸ್ಥಳ ಪರಿಶೀಲನೆ ಹಾಗೂ ಬಳಸಿರುವ ಬಂದೂಕನ್ನು ಗಮನಿಸಿದಾಗ ಶಾರ್ಪ್ ಶೂಟರ್‌ಗಳ ಬಳಕೆಯಾಗಿರುವುದು ತೀವ್ರ ಕಡಿಮೆ ಎನ್ನಲಾಗಿತ್ತು. ಆದ್ದರಿಂದ ಇದೀಗ ನಿಜವಾಗಿಯೂ ಕೊಲೆಯ ಪ್ರಯತ್ನ ನಡೆದಿತ್ತೇ ಅಥವಾ 'ಫೇಕ್ ದಾಳಿ' ನಡೆಯಿತೇ? ಒಂದು ವೇಳೆ ಫೇಕ್ ದಾಳಿ ನಡೆದಿದ್ದರೆ, ಅದಕ್ಕೆ ಕಾರಣವೇನು ಎನ್ನುವ ಆಯಾಮದಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ನಿಟ್ಟಿನಲ್ಲಿ ಬಿಡದಿ ಫಾರ್ಮ್ ಹೌಸ್ ಭದ್ರತೆಗಿದ್ದ ಮಡಿಕೇರಿ ಮೂಲದ ವಿಠ್ಠಲ್ ಅವರನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ. ಪ್ರಮುಖವಾಗಿ ಘಟನೆಯಲ್ಲಿ ಸಿಕ್ಕಿರುವ ಗುಂಡಿಗೂ, ವಿಠ್ಠಲ್ ಬಳಸುತ್ತಿದ್ದ ಬುಲೆಟ್‌ಗೆ ಸಾಮ್ಯತೆ ಇರುವುದರಿಂದ, ವಿಠ್ಠಲ್ ಅವರೇ ದಾಳಿ ನಡೆಸಿದ್ದಾರೆಯೇ ಎನ್ನುವ ಅನುಮಾನಗಳಿವೆ. ಇದಕ್ಕೆ ಪೂರಕವಾಗಿ ಘಟನೆಯ ಕೆಲ ನಿಮಿಷಗಳ ಮೊದಲು ರಿಕ್ಕಿ ಹಾಗೂ ವಿಠ್ಠಲ್ ಪ್ರತ್ಯೇಕವಾಗಿ ಚರ್ಚಿಸಿರುವುದು ಅನುಮಾನಕ್ಕೆ ಪುಷ್ಠಿ ನೀಡುತ್ತಿದೆ. ಗುಂಡಿನ ದಾಳಿ ನಡೆದ ಸ್ಥಳದಲ್ಲಿ ಸಿಕ್ಕ ಬುಲೆಟ್ ಕಾಟ್ರಿಡ್ಜ್ ಆಗಿದ್ದು, ಈ ಬುಲೆಟ್ ಅನ್ನು ಯಾವ ಗನ್ ಮೂಲಕ ಹಾರಿಸಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಿದ್ದಾರೆ. ಮೇಲ್ನೋಟಕ್ಕೆ ಸಿಂಗಲ್ ಬ್ಯಾರೆಲ್ ಬ್ರೀಚ್ ಲೋಡರ್ ಅಥವಾ ಡಬಲ್ ಬ್ಯಾರೆಲ್ ಬ್ರೀಚ್ ಲೋಡರ್ ಬಂದೂಕು ಎಂಬುದು ಪತ್ತೆಯಾಗಿದೆ. ಇದರ ನಡುವೆ ಹೇಗೆ ಫೈರಿಂಗ್ ಮಾಡಿದ್ದರು ಎಂಬ ಕುರಿತು ತನಿಖೆ ಚುರುಕು ಗೊಂಡಿದೆ.

ಸ್ವಯಂ ದಾಳಿ ಮಾಡಿಸಿಕೊಂಡು ಇಕ್ಕಟ್ಟಿಗೆ ಸಿಲುಕಿದ್ದನಾ ರಿಕ್ಕಿ ರೈ?: ಸ್ವಯಂ ದಾಳಿ ಮಾಡಿಸಿಕೊಂಡು ಇಕ್ಕಟ್ಟಿಗೆ ಸಿಲುಕಿದ್ದನಾ ರಿಕ್ಕಿ ರೈ ಎಂಬ ಅನುಮಾನ ಪೊಲೀಸರಿಗೂ ಮೂಡಿದೆ. ರಿಕ್ಕಿ ರೈಗೆ ಮೂವರು ಗನ್‌ಮ್ಯಾನ್‌ಗಳಿದ್ದು, ತನಿಖೆ ವೇಳೆ ಮೂವರು ವಿಭಿನ್ನ ಹೇಳಿಕೆ ನೀಡಿದ್ದಾರೆಂದು ಪೊಲೀಸ್ ಮೂಲಗಳು ತಿಳಿಸಿವೆ. ಹೀಗಾಗಿ ರಿಕ್ಕಿ ರೈ ಗನ್‌ಮ್ಯಾನ್‌ಗಳ ಮೇಲೆ ಪೊಲೀಸರಿಗೆ ಅನುಮಾನ ಮೂಡಿದೆ. ಅಷ್ಟೇ ಅಲ್ಲ ಪ್ರಕರಣವನ್ನು ಡೈವರ್ಟ್ ಮಾಡಲು, ಮತ್ತಪ್ಪ ರೈ 2ನೇ ಪತ್ನಿ ಅನುರಾಧ, ರಾಕೇಶ್ ಮಲ್ಲಿ ಸೇರಿದಂತೆ ನಾಲ್ವರ ವಿರುದ್ಧ ದೂರು ಕೊಟ್ಟರೇ ಎಂಬ ಶಂಕೆ ಪೊಲೀಸರಿಗೆ ಮೂಡಿದೆ ಎಂದು ಮೂಲಗಳು ತಿಳಿಸಿವೆ. ಆದ್ದರಿಂದ ಇದೀಗ ಈ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತಿದೆ.

ಮುತ್ತಪ್ಪ ರೈ 2ನೇ ಪತ್ನಿ ಅನುರಾಧಾಗೆ ಸದ್ಯಕ್ಕೆ ರಿಲೀಫ್

ಇತ್ತ ಗುಂಡಿನ ದಾಳಿ ಪ್ರಕರಣದ ಎ 2 ಆಗಿದ್ದ ಮುತ್ತಪ್ಪ ರೈ 2ನೇ ಪತ್ನಿ ಅನುರಾಧಾಗೆ ಹೈಕೋರ್ಟ್ ರಿಲೀಫ್ ನೀಡಿದೆ. ಅನುರಾಧಾ ಪ್ರಕರಣದಿಂದ ಕೈ ಬಿಡುವಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅನುರಾಧ ಪರ ವಕೀಲ ವೆಂಕಟೇಶ್ ಅರಬಟ್ಟಿ ಮಂಗಳವಾರ ವಾದ ಮಂಡಿಸಿದರು. ಪ್ರಕರಣದಲ್ಲಿ ವಿನಾಕಾರಣ ಅನುರಾಧಾ ಹೆಸರು ತಂದಿದ್ದಾರೆ. ಆಸ್ತಿ ವಿವಾದ 6 ತಿಂಗಳ ಹಿಂದೆಯೇ ಇತ್ಯರ್ಥವಾಗಿದೆ. ಏ. 14 ರಂದೇ ಅನುರಾಧಾ ಯುರೋಪ್‌ಗೆ ತೆರಳಿದ್ದಾರೆ. ಕೊಲೆ ಯತ್ನ ಪ್ರಕರಣಕ್ಕೂ ಅವರಿಗೂ ಯಾವುದೇ ಸಂಬಂಧವಿಲ್ಲ ಎಂದು ಅನುರಾಧ ಪರ ವಕೀಲ ವೆಂಕಟೇಶ್ ಅರಬಟ್ಟಿ ವಾದ ಮಂಡಿಸಿದರು. ವಾದ ಆಲಿಸಿದ ಜಡ್ಜ್ ಅನುರಾಧ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಮಧ್ಯಂತರ ಆದೇಶ ಹೊರಡಿಸಿದೆ. ಸದ್ಯಕ್ಕೆ ಅನುರಾಧಾಗೆ ರಿಲೀಫ್ ಸಿಕ್ಕಿದೆ.

ವಿಚಾರಣೆಗೆ ಹಾಜರಾದ ರಾಕೇಶ್ ಮಲ್ಲಿ

ರಿಕ್ಕಿ ರೈ ಮೇಲೆ ಗುಂಡಿನ ದಾಳಿ ಪ್ರಕರಣ ಸಂಬಂಧ ಮುತ್ತಪ್ಪ ರೈ ಒಂದು ಕಾಲದ ಆಪ್ತ ರಾಕೇಶ್ ಮಲ್ಲಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಸಹ ಕೊಟ್ಟಿದ್ದರು. ಆದರೆ ರಾಕೇಶ್ ಮಲ್ಲಿ ಮೊಬೈಲ್ ಸ್ವಿಚ್ಡ್ ಆಫ್ ಆಗಿತ್ತು. ಮಂಗಳವಾರ ರಾಕೇಶ್ ಮಲ್ಲಿ ಬಿಡದಿ ಠಾಣೆಗೆ ವಿಚಾರಣೆಗೆ ಹಾಜರಾಗಿದ್ದಾನೆ. ವಕೀಲರ ಜತೆ ಆಗಮಿಸಿದ ರಾಕೇಶ್ ಮಲ್ಲಿಯನ್ನು, ಎಸ್‌ಪಿ ಶ್ರೀನಿವಾಸ್ ಗೌಡ ವಿಚಾರಣೆ ನಡೆಸಿದ್ದಾರೆ.

ಸಿದ್ದರಾಮಯ್ಯ ಶಾಸಕರಾಗಿ ಆಯ್ಕೆ ಅಸಿಂಧುಗೊಳಿಸಲು ಕೋರಿದ್ದ ಅರ್ಜಿ ವಜಾ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣಾ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವುದನ್ನು ಅಸಿಂಧು ಎಂದು ಘೋಷಣೆ ಮಾಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಹೈಕೋರ್ಟ್ ರದ್ದುಪಡಿಸಿ ಆದೇಶಿಸಿದೆ.

ವರುಣಾ ವಿಧಾನಸಭಾ ಕ್ಷೇತ್ರದ ಕೂಡನಹಳ್ಳಿಯ ಕೆ. ಶಂಕರ್ ಎಂಬುವರು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ನ್ಯಾಯಪೀಠ ಅರ್ಜಿ ವಜಾಗೊಳಿಸಿ ಆದೇಶಿಸಿದೆ. ಅರ್ಜಿಯ ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಗ್ಯಾರಂಟಿ ಯೋಜನೆಗಳು ಮೂಲಭೂತ ಹಕ್ಕುಗಳು ಮತ್ತು ಸಂವಿಧಾನದ ನಿರ್ದೇಶಕ ತತ್ವಗಳಿಗೆ ವಿರುದ್ಧವಾಗಿವೆ. ಆ ಯೋಜನೆಗಳನ್ನು ಒಳಗೊಂಡ ಪ್ರಣಾಳಿಕೆಯು ನೋಂದಾಯಿತ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ಪಕ್ಷದ ಪ್ರಣಾಳಿಕೆ ಅಲ್ಲ. ಅದು ಕೆಪಿಸಿಸಿಯ ಪ್ರಣಾಳಿಕೆಯಾಗಿದೆ. ಕೆಪಿಸಿಸಿಯು ನೋಂದಾಯಿತ ಪಕ್ಷವಲ್ಲ. ಹೀಗಾಗಿ, ಅದರ ಹೆಸರಿನಲ್ಲಿ ರೂಪಿಸಿರುವ ಪ್ರಣಾಳಿಕೆಯು ಭ್ರಷ್ಟಾಚಾರಕ್ಕೆ ಸಮ. ಗ್ಯಾರಂಟಿ ಯೋಜನೆಗಳ ಕಾರ್ಡ್‌ಗೆ ಸಹಿ ಮಾಡಿ ರುವುದು ಕೆಪಿಸಿಸಿ ಅಧ್ಯಕ್ಷ ಡಿ. ಕೆ. ಶಿವಕುಮಾರ್ ಮತ್ತು ಸಿದ್ದರಾ ಮಯ್ಯ. ಸಿದ್ದರಾಮಯ್ಯನವರೇ ಪ್ರಣಾಳಿಕೆ ರೂಪಿಸಿ, ಪ್ರಚಾರ ಮಾಡಿದ್ದಾರೆ. ಆ ಮೂಲಕ ಭ್ರಷ್ಟಾಚಾರ ಎಸಗಿದ್ದಾರೆ. ಹೀಗಾಗಿ, ಅವರ ಆಯ್ಕೆ ಅನೂರ್ಜಿತಗೊಳಿಸಬೇಕು ಎಂದು ಪೀಠಕ್ಕೆ ಕೋರಿದ್ದರು.

ಕ್ರೋಢೀಕೃತ ನಿಧಿಯನ್ನು ಉಚಿತ ಯೋಜನೆಗೆ ಬಳಸಲಾಗದು. ಸರಕಾರಕ್ಕೆ ಅಧಿಕಾರವಿಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ವಿಶೇಷ ಮಸೂದೆಯನ್ನು ಹಣಕಾಸು ಮಸೂದೆಯ ಪ್ರಕಾರ ಅಂಗೀಕರಿಸಬೇಕು. ಹಾಲಿ ಪ್ರಕರಣದಲ್ಲಿ ಯಾವುದೇ ಹಣಕಾಸು ಮಸೂದೆಯನ್ನು ಅಂಗೀಕರಿಸಲಾಗಿಲ್ಲ. ಇದು ತೆರಿಗೆದಾರರ ಹಣದ ದುರ್ಬಳಕೆಯಾಗಲಿದೆ. ಪ್ರಕರಣದಲ್ಲಿ ಸಿದ್ದರಾಮಯ್ಯ ಅಪರಾಧಿಯಾಗಿದ್ದಾರೆ. ಹೀಗಾಗಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿದ್ದರು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ನೀಡಿರುವ ಸೇವೆಯನ್ನು ಪುರುಷರಿಗೆ ವಿಸ್ತರಿಸದಿರುವುದು ಸಂವಿಧಾನದ 14ನೇ ವಿಧಿಯ ಉಲ್ಲಂಘನೆಯಾ ಗಿದೆ. ಗ್ಯಾರಂಟಿ ಯೋಜನೆಗಳನ್ನು ಅಗತ್ಯವಿರುವವರಿಗೆ ನೀಡಬಹು ದಿತ್ತು. ಅದನ್ನು ಎಲ್ಲರಿಗೂ ವಿಸ್ತರಿಸಲಾಗದು. ಇಲ್ಲಿ ಕರ್ನಾಟಕದ ಮತದಾರರನ್ನು ಲಘುವಾಗಿ ಪರಿಗಣಿಸಲಾಗಿದೆ. ಆದ್ದರಿಂದ ಸಿದ್ದರಾಮಯ್ಯ ಅವರ ಆಯ್ಕೆ ಅಸಿಂಧುಗೊಳಿಸಬೇಕು ಎಂದು ಕೋರಿದ್ದರು.

ಸಿದ್ದರಾಮಯ್ಯ ಪರ ವಕೀಲರ ವಾದ ಏನು?

ಸಿದ್ದರಾಮಯ್ಯ ಪರ ವಕೀಲರು, ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ವಿರುದ್ಧ 11 ಆರೋಪ ಮಾಡಲಾಗಿದೆ. ಈ ಪೈಕಿ ಚುನಾವಣಾ ವೆಚ್ಚದ ಬಗ್ಗೆ ಪ್ರಮುಖ ಆರೋಪ ಮಾಡಲಾಗಿದೆ. ಚುನಾವಣಾಧಿಕಾರಿ ಅಥವಾ ಚುನಾವಣಾ ಆಯೋಗಕ್ಕೆ ಚುನಾವಣಾ ವೆಚ್ಚದ ಮಿತಿ ಮೀರಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ದೂರು ನೀಡಿಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಗಳಾದ ಬಳಿಕ ಆರೋಪ ಸೃಷ್ಟಿ ಮಾಡಲಾಗಿದೆ. ಅರ್ಜಿದಾರರು ನ್ಯಾಯಾಲಯವನ್ನು ಮಾತ್ರ ದಾರಿ ತಪ್ಪಿಸುತ್ತಿಲ್ಲ. ಇಡೀ ಜಗತ್ತನ್ನು ದಾರಿ ತಪ್ಪಿಸಿದ್ದಾರೆ. ನಾನು ಎಷ್ಟು ವೆಚ್ಚ ಮಾಡಿದ್ದೇನೆ ಎಂಬುದು ಮುಖ್ಯ. ಅದನ್ನು ಉಲ್ಲೇಖಿಸಿಲ್ಲ. ಗ್ಯಾರಂಟಿಗಳನ್ನೊಳಗೊಂಡ ಪ್ರಣಾಳಿಕೆ ಪಕ್ಷಕ್ಕೆ ಸೇರಿದ್ದಾಗಿದ್ದು, ನಮ್ಮ ಕಕ್ಷಿದಾರರ ವೆಚ್ಚಕ್ಕೆ ಸೇರಿಸಬಹುದೇ? ಗ್ಯಾರಂಟಿ ಯೋಜನೆ ಘೋಷಿಸಲಾ ಗಿದೆ ಎಂದು ಹೇಳಿದ್ದಾರೆ. ಈ ಅಂಶ ನನ್ನ ಕಕ್ಷಿದಾರರ ಚುನಾವಣಾ ವೆಚ್ಚಕ್ಕೆ ಸೇರುತ್ತದೆಯೇ? ಎಂದು ಪ್ರಶ್ನಿಸಿದರು.

ಶ್ರೀ ಚನ್ನಕೇಶವಸ್ವಾಮಿ ವಿಗ್ರಹ ಸ್ಪರ್ಶಿಸಿದ ಸೂರ್ಯ ರಶ್ಮಿ

ಹಾಸನ: 4 ವರ್ಷಗಳ ನಂತರ ಮತ್ತೇ ಅಪರೂಪದ ಕ್ಷಣ ಸೃಷ್ಟಿಯಾಗಿದ್ದು, ಮಂಗಳವಾರ ಬೆಳಗ್ಗೆ ಐತಿಹಾಸಿಕ ಬೇಲೂರು ಶ್ರೀ ಚನ್ನಕೇಶವಸ್ವಾಮಿ ವಿಗ್ರಹವನ್ನು ಸೂರ್ಯನ ರಶ್ಮಿ ಸ್ಪರ್ಶಿಸಿದೆ.

ದೇವಾಲಯದಲ್ಲಿ ಕಳೆದ 4 ವರ್ಷಗಳಿಂದ ಸೂರ್ಯನ ರಶ್ಮಿ ಶ್ರೀ ಚನ್ನಕೇಶವಸ್ವಾಮಿ ವಿಗ್ರಹವನ್ನು ಸ್ಪರ್ಶಿಸಿರಲಿಲ್ಲ. ಮಳೆ, ಮೋಡ ಕವಿದ ವಾತಾವರಣದಿಂದ ವಿಗ್ರಹದ ಮೇಲೆ ಸೂರ್ಯನ ರಶ್ಮಿ ಬೀಳಲು ಅಡ್ಡಿಯುಂಟಾಗಿತ್ತು. ಈ ವರ್ಷ ಅಡೆತಡೆ ನಿವಾರಣೆಯಾಗಿದ್ದು, ಭಕ್ತರಲ್ಲಿ ಸಾರ್ಥಕದ ಕ್ಷಣ ಮನೆ ಮಾಡಿತ್ತು. ಪ್ರತಿ ವರ್ಷ ಏ.21 ಅಥವಾ ಏ.22 ರಂದು ದೇವರ ವಿಗ್ರಹಕ್ಕೆ ಸ್ಪರ್ಶಿಸುತ್ತಿದ್ದ ಸೂರ್ಯ ಮಂಗಳೂರು ಬೆಳಗ್ಗೆ 6:10ಕ್ಕೆ ಗೋಪುರವನ್ನು ಸ್ಪರ್ಶಿಸಿ, ಬಳಿಕ 6:15ಕ್ಕೆ ದೇವರ ವಿಗ್ರಹಕ್ಕೆ ಸ್ಪರ್ಶಿಸಿದ. ದೇವರ ವಿಗ್ರಹದ ಮೇಲೆ ಸೂರ್ಯನ ರಶ್ಮಿ ಬೀಳುವು ದನ್ನು ನೂರಾರು ಭಕ್ತರು ಕಣ್ತುಂಬಿ ಕೊಂಡರು. ಸೂರ್ಯನ ರಶ್ಮಿ ಶ್ರೀ ಚನ್ನಕೇಶ ವಸ್ವಾಮಿ ವಿಗ್ರಹ ಸ್ಪರ್ಶಿಸುತ್ತಿದ್ದಂತೆ ಗರ್ಭ ಗುಡಿ ಬಂದ್ ಮಾಡಲಾಯಿತು. ಬಳಿಕ 9 ಗಂಟೆ ನಂತರ ಅರ್ಚಕರು ಹಾಲಿನಿಂದ ದೇವರ ಪಾದ ತೊಳೆದು ಪೂಜೆ ಸಲ್ಲಿಸಲಿ ದರು. ಕಳೆದ 4 ವರ್ಷಗಳಿಂದ ಕಾದು ಕಾದು ಬೇಸರದಿಂದ ಹಿಂದಿರುಗುತ್ತಿದ್ದ ಭಕ್ತರು, ಈ ಬಾರಿ ಅಪರೂಪದ ದೃಶ್ಯ ಕಣ್ತುಂಬಿಕೊಂಡು ಸಂತಸ ವ್ಯಕ್ತಪಡಿಸಿದರು.

ಟ್ವೀಟೂ-ಖಾರಾ

-ಆರ್. ಅಶೋಕ, ಪ್ರತಿಪಕ್ಷ ನಾಯಕ

ಭ್ರಷ್ಟ ಕಾಂಗ್ರೆಸ್ ಸರಕಾರದ ರೇಟ್ ಕಾರ್ಡ್, ಸರಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ನೇಮಕಾತಿಗೆ ಸಿಎಂ siddaramaiah ಅವರು ಫಿಕ್ಸ್ ಮಾಡಿರುವ ಲಂಚದ ರೇಟ್ ಕಾರ್ಡ್ ಇಲ್ಲಿದೆ ನೋಡಿ.ಪ್ರಾಧ್ಯಾಪಕ ಹುದ್ದೆ : 50 ಲಕ್ಷ, ಸಹ ಪ್ರಾಧ್ಯಾಪಕ ಹುದ್ದೆ : 40 ಲಕ್ಷ, ಸಹಾಯಕ ಪ್ರಾಧ್ಯಾಪಕ ಹುದ್ದೆ: 30 ಲಕ್ಷ, ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಈ ಕಡುಭ್ರಷ್ಟ INCKarnataka ಸರಕಾರದಲ್ಲಿ ಭ್ರಷ್ಟಾಚಾರ, ಅವ್ಯವಹಾರ, ಅಕ್ರಮ ನಡೆಯದಿರುವ ಇಲಾಖೆಯೇ ಇಲ್ಲ.



ರಮೇಶ್

ತಮ್ಮ ಪಕ್ಷ ಸರಕಾರದಲ್ಲಿ ಯಾವುದೇ ಅಕ್ರಮ ಆಗಿಲ್ಲವಾ ಸಾಮ್ರಾಟ್ ಆಶೋಕಣ್ಣ, ಪಿಎಸ್ಐ ನೇಮಕಾತಿ ಅಕ್ರಮ ಆಗಿದ್ದು ನಿಮ್ಮ ಪಕ್ಷದ ಅಧಿಕಾರದಲ್ಲಿದ್ದಾಗ ತಾನೇ.

ವಿಶ್ವವಾಣಿ ಕ್ಲಬ್ ಹೌಸ್
23.04.2025
ಸಂಜೆ: 06.55 ರಿಂದ 08.05 ರವರೆಗೆ



ಬುಧವಾರದ ಅತಿಥಿ
ಶ್ರೀ ಸಚಿನ್ ನಾಯಕ್
ವಿಷಯ
ಧ್ವನಿ ಹರಿದು ಬಂದ ದಾರಿ
vishwavani.news

ಸಮಾಚಾರ ಸಣ್ಣದಲ್ಲ

ಯುವತಿಗೆ ಚಾಕು ಇರಿದ ಪ್ರಿಯಕರ

ವಿಜಯನಗರ: ಯುವತಿ ಮದುವೆಯಾಗಲು ನಿರಾಕರಿಸಿದಕ್ಕೆ ಪ್ರಿಯಕರ ಜನನಿಬಿಡ ಸ್ಥಳದಲ್ಲಿಯೇ ಚಾಕು ಇರಿದು ಹತ್ಯೆಗೆ ಯತ್ನಿಸಿರುವ ಘಟನೆ ವಿಜಯನಗರ ಜಿಲ್ಲೆಯ ಹೊಸಪೇಟೆಯ ನಗರಸಭೆ ಕಾರ್ಯಾಲಯ ಎದುರು ಗಡೆ ನಡೆದಿದೆ. ಭಾರತಿ

ಶಾವಿ(26) ಹಲ್ಲೆಗೊಳಗಾದ ಯುವತಿ. ವಿಜಯಭಾಸ್ಕರ್ (26) ಹಲ್ಲೆ ಮಾಡಿದ ಪ್ರೇಮಿ. ಕಳೆದ 10 ವರ್ಷಗಳಿಂದ ಯುವತಿ ಭಾರತಿ ಹೊಸಪೇಟೆಯಲ್ಲಿ ತಂದೆ-ತಾಯಿ ಜೊತೆ ವಾಸವಿದ್ದಳು. 5 ವರ್ಷಗಳ ಹಿಂದೆ ಯುವಕನ ಜತೆ ಫೇಸ್‌ಬುಕ್‌ನಲ್ಲಿ ಪರಿಚಯ ಆಗಿ ಇಬ್ಬರಿಗೂ ಲವ್ ಆಗಿತ್ತು. ಆ ಬಳಿಕ ಯುವತಿ ಆಂಧ್ರದ ಸ್ವಗ್ರಾಮಕ್ಕೆ ಹೋದಾಗಲೆಲ್ಲಾ ತೀರಾ ಸಲುಗೆಯಿಂದ ಇರುತ್ತಿದ್ದರು. ಇತ್ತೀಚೆಗೆ ಯುವತಿ ಯುವಕನಿಂದ ಅಂತರ ಕಾಯ್ದುಕೊಂಡು ವಿಜಯ ಭಾಸ್ಕರ ಪ್ರೀತಿ ನಿರಾಕರಿಸಿದ್ದಳು ಎನ್ನಲಾಗು ತ್ತಿದೆ. ಯುವತಿಯು ಮದುವೆಗೆ ನಿರಾಕರಿಸಿದಕ್ಕೆ ಆಂಧ್ರ ಪ್ರದೇಶದ ನಂದ್ಯಾಲ ಗ್ರಾಮದಿಂದ ಹೊಸಪೇಟೆ ನಗರಕ್ಕೆ ಆಗಮಿಸಿದ ಯುವಕ, ಯುವತಿ ಕೆಲಸಕ್ಕೆ ತೆರಳುತ್ತಿದ್ದಾಗ ಚಾಕುವಿನಿಂದ ಆಕೆಯ ಹೊಟ್ಟೆ ಹಾಗೂ ಕೈಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದಾನೆ. ಗಂಭೀರವಾಗಿ ಗಾಯ ಗೊಂಡಿರುವ ಯುವತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಯುವಕರಿಂದ ಅಸಭ್ಯ ವರ್ತನೆ

ಮೈಸೂರು: ಚಾಮುಂಡಿ ಬೆಟ್ಟದಲ್ಲಿ ಹೊರ ರಾಜ್ಯದ ಯುವಕರ ಗುಂಪು ಬಟ್ಟೆ ಬಿಚ್ಚಿ ಅಸಭ್ಯ ವರ್ತಿಸಿದ್ದು, ಪೊಲೀಸರು ಅವರನ್ನು ವಶಕ್ಕೆ ಪಡೆದು ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ. ಯುವಕರು ಸಾರ್ವಜನಿಕ ಸ್ಥಳದಲ್ಲಿ ಬಟ್ಟೆ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದಾರೆ. ಇದರಿಂದ ಬೇಸತ್ತ ಜನ, ಫೋಟೊ ಸಮೇತ ಪೊಲೀಸರಿಗೆ ದೂರು ನಿಡಿದ್ದಾರೆ. ಬಳಿಕ ಚಾಮುಂಡಿ ಬೆಟ್ಟ ಠಾಣೆ ಪೊಲೀಸರು ಯುವಕರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಣೆ ನಡೆಸಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯವಾಗಿ ವರ್ತಿಸದಂತೆ ಯುವಕರಿಗೆ ಪೊಲೀಸರು ತಿಳುವಳಿಕೆ ಹೇಳಿದ್ದಾರೆ. ಅಲ್ಲದೇ ಮುಚ್ಚಳಿಕೆ ಪತ್ರ ಬರೆಸಿಕೊಂಡ ಠಾಣೆಯಿಂದ ಕಳುಹಿಸಿದ್ದಾರೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪೋಸ್ಟ್ ಹಂಚಿಕೊಂಡಿದ್ದಾರೆ.

ನನಗೆ ಬೆದರಿಕೆ ಇದೆ, ದಾಳಿ ನಡೆಯಬಹುದು

ದಾವಣಗೆರೆ: ನನ್ನ ಮೇಲೆ ಅಟ್ಯಾಕ್ ಆಗ್ಬಹುದು, ಅದು ದೈಹಿಕವಾಗಿ ಇಲ್ಲವೇ ಸರಕಾರಿ ಯಂತ್ರ ಬಳಸಿ ಅಟ್ಯಾಕ್ ಮಾಡಬಹುದು. ಅದು ನನ್ನ ಗಮನಕ್ಕೆ ಬಂದಿದೆ ಎಂದು ಲೋಕಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿ ಜಿ.ಬಿ.ವಿನಯ್ ಕುಮಾರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಸಂಸ್ಥೆಯನ್ನು ಟಾರ್ಗೆಟ್ ಮಾಡಲು ಶುರು ಮಾಡಿದ್ದಾರೆ. ನನ್ನನ್ನು ಗುರಿಯಾಗಿಸಿಕೊಂಡಿದ್ದಾರೆ. ಎಂತಹ ಬೆದರಿಕೆಯೇ ಬರಲಿ, ಎಂತಹ ಅಪಾಯವೇ ಬರಲಿ, ನಾನು ಎದುರಿಸಲು ಸಿದ್ಧ ಎಂದರು. ಜಾತಿಗಣತಿ ಮೂಲಕ ಶೋಷಿತರು ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ಬರಲಿ ಎಂಬುದು ನಮ್ಮ ಉದ್ದೇಶ. ನಾನು ಶೋಷಿತರ ಪರ ನಿಲ್ಲುವೆ ಎಂದರು.

ದೇವರ ಪೂಜಿಸುವವರಿಗೆ ಆಷಾಢಭೂತಿತನ ಸಲ್ಲ

ಮಾಡಬಾರದ್ದನ್ನೆಲ್ಲಾ ಮಾಡಿ ದೇವರ ಪೂಜೆ ಮಾಡಿದ ತಕ್ಷಣ ಪಾಪ ಕಾರ್ಯ ಹೋಗಲ್ಲ: ಮುಖ್ಯಮಂತ್ರಿ ಸಿದ್ದರಾಮಯ್ಯ

ಮಂಡ್ಯ: ದೇವರನ್ನು ಪೂಜಿಸುವವರಿಗೆ ಆಷಾಡಭೂತಿತನ ಇರಬಾರದು. ಮಾಡಬಾರದ್ದನ್ನೆಲ್ಲಾ ಮಾಡಿ ದೇವರ ಪೂಜೆ ಮಾಡಿದ ತಕ್ಷಣ ಪಾಪಕಾರ್ಯ ಹೋಗಲ್ಲ. ಮನುಷ್ಯ ಪ್ರೀತಿ ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಹೋಬಳಿಯ ದೊಡ್ಡಬಾಲ ಗ್ರಾಮದಲ್ಲಿ 39 ವರ್ಷಗಳ ಬಳಿಕ ನಡೆಯುತ್ತಿರುವ ಹುಚ್ಚಪ್ಪಸ್ವಾಮಿಯ ಹಾಗೂ ಹದಿನಾಲ್ಕು ಕೂಟದ ದೇವರುಗಳ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿ, ಮಾಡಬಾರದ ಪಾಪಗಳನ್ನು, ಮನುಷ್ಯ ವಿರೋಧಿ ಕೃತ್ಯಗಳನ್ನು ಮಾಡಿ ದೇವರನ್ನು ಅರಸಿ ಹೋಗುವುದರಿಂದ ಪ್ರಯೋಜನ ಇಲ್ಲ. ಮನುಷ್ಯ ಮನುಷ್ಯ ಪ್ರೀತಿಸಬೇಕು. ಸಹಿಷ್ಣತೆ ಇರಬೇಕು ಎಂದರು.

ಪರಸ್ಪರ ಗೌರವಗಳಿಂದ ಎಲ್ಲರ ನಂಬಿಕೆಗಳನ್ನು ಕಾಣಬೇಕು: ಸಮಾಜದಲ್ಲಿ ಎಲ್ಲಾ ಜಾತಿ, ಎಲ್ಲಾ ಧರ್ಮದವರಿಗೂ ಬೇರೆ ಬೇರೆ ನಂಬಿಕೆಗಳಿರುತ್ತವೆ. ಒಬ್ಬರ ನಂಬಿಕೆ ಬಗ್ಗೆ ಉಳಿದವರೆಲ್ಲರಿಗೂ ಗೌರವ ಇರಬೇಕು. ಪರಸ್ಪರ ಗೌರವಗಳಿಂದ ಎಲ್ಲರ ನಂಬಿಕೆಗಳನ್ನು ಕಾಣಬೇಕು. ಸಂಸ್ಕೃತ ಕಲಿಯುವ ಶೂದ್ರರ ಕಿವಿಗೆ ಕಾದ ಸೀಸವನ್ನು ಸುರಿಯುತ್ತಿದ್ದರು. ಸಂವಿಧಾನದ ಕಾರಣದಿಂದ ಇಂಥಾ ಸ್ಥಿತಿ ಹೋಗಿ ನಮಗೆಲ್ಲಾ ಶಿಕ್ಷಣ ಸಿಕ್ಕಿದೆ ಎಂದರು.

ಕೆರೆ ತುಂಬಿಸಲು ಶೀಘ್ರ ಕ್ರಮ: ಸಚಿವ ಚಲುವರಾಯ ಸ್ವಾಮಿ ಮಾತನಾಡಿ, ಈ ಭಾಗದ ಎಲ್ಲಾ ಕೆರೆ ಕಟ್ಟೆಗಳನ್ನು ಏತ ನೀರಾವರಿ ಯೋಜನೆ ಮೂಲಕ ತುಂಬಿಸುವ ಸಲುವಾಗಿ ಹಳೆಯ ಅನುದಾನ 250 ಕೋಟಿ ಹಾಗೂ 113 ಕೋಟಿಯನ್ನು ಮುಖ್ಯಮಂತ್ರಿ ಗಳು 6 ತಿಂಗಳ ಹಿಂದೆಯೇ ಮಂಜೂರು ಮಾಡಿದ್ದಾರೆ ಮುಂದಿನ ಎರಡು ತಿಂಗಳಲ್ಲಿ ಕಾಮಗಾರಿ ಪ್ರಾರಂಭವಾಗಲಿದೆ. ಇನ್ನೂ ಎರಡು ಮೂರು ವರ್ಷಗಳ ನಂತರ ನಾಗಮಂಗಲದ ಎಲ್ಲ ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಮಾಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಳವಳ್ಳಿ ಶಾಸಕ ನರೇಂದ್ರಸ್ವಾಮಿ, ಮದ್ದೂರು ಶಾಸಕ ಕೆ.ಎಂ. ಉದಯ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಕಾಂಗ್ರೆಸ್ ಮುಖಂಡರಾದ ಸ್ಟಾರ್‌ಚಂದ್ರು, ಎಲ್. ಆರ್. ಶಿವರಾಮೇಗೌಡ, ಜಿಲ್ಲಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ. ಗಂಗಾಧರ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್. ಜೆ. ರಾಜೇಶ್ ಇದ್ದರು.

ನಾಗಮಂಗಲ ತಾಲೂಕಿನ ದೊಡ್ಡಬಾಲ ಗ್ರಾಮದಲ್ಲಿ ಹುಚ್ಚಪ್ಪಸ್ವಾಮಿಯ ಹಾಗೂ ಹದಿನಾಲ್ಕು ಕೂಟದ ದೇವರುಗಳ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಳ್ಳಿಗದೆ, ಕುರಿಮರಿ ಮತ್ತು ಕಂಬಳಿ ನೀಡಿ ಅಭಿಮಾನಿಗಳು ಗೌರವಿಸಿದರು.

ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ವರದಿ

ಬಿಜೆಪಿ ಸರಕಾರದ ಅವಧಿಯಲ್ಲಿ ನೇಮಕವಾಗಿದ್ದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗಡೆಯವರು ನೀಡಿದ ವರದಿ ಸರಿಯಿಲ್ಲವೆಂದು ಹೇಳಲು ಬಿಜೆಪಿಯವರಿಗೆ ನೈತಿಕ ಹಕ್ಕಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಮೀಕ್ಷೆ ವರದಿ ಬಗ್ಗೆ ಪಕ್ಷದ ನಾಯಕರಿಂದ ಅಪಸ್ವರ ಎದ್ದಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿ, ವರದಿಯಲ್ಲಿ ಯಾವುದೇ ನ್ಯೂನ್ಯತೆಗಳಿದ್ದರೆ ಸರಿಪಡಿಸಲಾಗುವುದು. ವರದಿ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಂತೆ ಸಚಿವರಿಗೆ ತಿಳಿಸಲಾಗಿದ್ದು, ಅವುಗಳನ್ನು ಪರಿಶೀಲಿಸಿ ನಂತರ ಸೂಕ್ತ ತೀರ್ಮಾನವನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗುವುದು ಎಂದರು.

ಶಿಕ್ಷಣ ಇಲ್ಲದಿದ್ದರೆ ಗುಲಾಮಗಿರಿ

ಶಿಕ್ಷಣ ಇಲ್ಲದೇ ಹೋದರೆ ಗುಲಾಮಗಿರಿ ಮನೆ ಮಾಡುತ್ತದೆ. ಜಾತ್ರೆ ಹಬ್ಬ ಎಲ್ಲವನ್ನೂ ಮಾಡಿ. ಆದರೆ ಮಕ್ಕಳ ವಿದ್ಯೆ ತಪ್ಪಿಸಬೇಡಿ. ಸಮಾಜದಲ್ಲಿ ಓದಿರುವ ವರಿಗೆ ಸ್ವಾಭಿಮಾನ ಗೌರವ ಇರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ದೇವರಾಜ ಅರಸು ಬಿಟ್ರೆ 5 ವರ್ಷ ಸಿಎಂ ಆಗಿದ್ದು ನಾನೇ. ಬರೀ ಕುರುಬರ ಪ್ರೀತಿಯಿಂದ ಅಲ್ಲ ಸಮಾಜದ ಎಲ್ಲ ವರ್ಗದವರ ಪ್ರೀತಿ ಯಿಂದ. ಹೀಗಾಗಿ ಎಲ್ಲಾ ಜಾತಿ ಧರ್ಮದವರಿಗೆ ಗ್ಯಾರಂಟಿ ಯೋಜನೆ ಕೊಟ್ಟಿದ್ದೇವೆ ಎಂದರು.

ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನ ಎಲ್ಲರ ನಂಬಿಕೆಗಳ ಆಚರಣೆಗೆ ಅವಕಾಶ ಇದೆ. ಸಂವಿಧಾನ ಕೊಟ್ಟ ಅವಕಾಶದಿಂದ ನಾನು ಶಿಕ್ಷಣ ಪಡೆದು ಮುಖ್ಯಮಂತ್ರಿಯಾದೆ. ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಪ್ರಥಮ ಆಧ್ಯತೆ ನೀಡಿದ್ದಾರೆ. ಅದ್ದರಿಂದ ಪ್ರತಿಯೊಬ್ಬರೂ ಇದನ್ನು ಪಾಲಿಸಬೇಕು . ಜಾತಿ ವ್ಯವಸ್ಥೆಗೆ ಚಾಲನೆ ಇಲ್ಲ. ಆರ್ಥಿಕ ಶಕ್ತಿ ಬಂದಾಗ, ಸಾಮಾಜಿಕ ಶಕ್ತಿ ಬಂದಾಗ ಚಲನೆ ಸಿಗುತ್ತದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಪ್ರತಿಭಟನೆ ಹೆಸರಲ್ಲಿ ಗೂಂಡಾಗಿರಿ ಸಹಿಸಲ್ಲ

ವಿಜಯದಶಮಿವರೆಗೆ ರಾಜ್ಯಾದ್ಯಂತ ಸಂಚಾರ ನಡೆಸುವೆ: ಯತ್ನಾಳ

ವಿಜಯಪುರ: ಪ್ರತಿಭಟನೆ ಎಲ್ಲರ ಹಕ್ಕು, ಆದರೆ ಪ್ರತಿಭಟನೆ ಹೆಸರಿನಲ್ಲಿ ಗೂಂಡಾಗಿರಿ ಸಹಿಸಲ್ಲ, ಏ.28 ರ ಪ್ರತಿಭಟನೆ ವೇಳೆ ಹಿಂದೂಗಳ ಆಸ್ತಿಗೆ ಹಾನಿಯಾದರೆ ಪ್ರತಿಭಟನೆಗೆ ಕರೆ ನೀಡಿದವರಿಂದಲೇ ಆ ಹಾನಿಯನ್ನು ಭರಣಾ

ಮಾಡಿಸಿಕೊಳ್ಳಬೇಕು ಎಂದು ಗೃಹ ಸಚಿವರು ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಪತ್ರ ಬರೆದಿರುವೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನನ್ನ ಹೇಳಿಕೆ ಕುರಿತು ಈಗಾಗಲೇ ಸ್ಪಷ್ಟೀಕರಣ ನೀಡಿರುವೆ, ಆದರೆ ಕ್ಷಮೆಯಾಚಿಸುವ ಮಾತಿಲ್ಲ, ಅಷ್ಟೂ ಮೀರಿ ಅವರು ಪ್ರತಿಭಟನೆ ಮಾಡುವುದಾದರೆ ಮಾಡಲಿ, ಪ್ರತಿಭಟನೆ ಎಲ್ಲರ ಹಕ್ಕು. ಆದರೆ ಪ್ರತಿಭಟನೆಯ ಹೆಸರಿನಲ್ಲಿ ಹಿಂದೂಗಳ ಆಸ್ತಿ ಮೇಲೆ ದಾಳಿ ನಡೆಸಿದರೆ, ಗೂಂಡಾಗಿರಿ ನಡೆಸಿದರೆ ನಾವು ಸಹಿಸುವುದಿಲ್ಲ, ಅವರು ಒಂದು ಲಕ್ಷ ಜನರನ್ನು ಸೇರಿಸಿದರೆ ನಾವು 10 ಲಕ್ಷ ಜನರನ್ನು ಸೇರಿಸುತ್ತೇವೆ, ನಾವು ಸುಮ್ಮನಿರುವುದಿಲ್ಲ ಎಂದರು.

ವಿಜಯದಶಮಿವರೆಗೆ ರಾಜ್ಯಾದ್ಯಂತ ಸಂಚಾರ ನಡೆಸುವೆ, ಈಗ ಹಾವೇರಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲಾಗುತ್ತಿದ್ದು ರಾಜ್ಯದ ಕಾಂಗ್ರೆಸ್ ಸರಕಾರದ ಹಿಂದೂ ವಿರೋಧಿ ನೀತಿ ಖಂಡಿಸಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಜನಾಕ್ರೋಶ ಸಂಪೂರ್ಣ ವಿಫಲ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆಯುತ್ತಿರುವ ಜನಾಕ್ರೋಶ ಯಾತ್ರೆ ಸಂಪೂರ್ಣ ವಿಫಲವಾಗಿದೆ. ವಿಜಯಪುರ, ಹಾವೇರಿ, ದಾವಣಗೆರೆ ಎಲ್ಲ ಕಡೆ ಸಂಪೂರ್ಣ ವೈಫಲ್ಯವಾಗಿದ್ದು ಸಾವಿರ ಜನರು ಸಹ ಸೇರಿಲ್ಲ. ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿರುವುದರಿಂದ ಟಿಕೆಟ್‌ಗಾಗಿ ವಿಜಯೇಂದ್ರ ವಾರ್ನಿಂಗ್ ಮಾಡಿರುವುದರಿಂದ ಆಕಾಂಕ್ಷಿಗಳು ಬರುತ್ತಿದ್ದಾರೆ, ಆದರೆ ಘಟಾನುಘಟಿ ನಾಯಕರಾದ ಆರ್. ಅಶೋಕ, ಬಸವರಾಜ ಬೊಮ್ಮಾಯಿ ಅವರಂತಹ ನಾಯಕರೇ ಗೈರಾಗಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಕಿಡಿಕಾರಿದರು.

ಜಾತಿಗಣತಿ ಹೆಸರಿನಲ್ಲಿ ಸಿಎಂ ಸಿದ್ದರಾಮಯ್ಯ ಹೊಸ ಕುತಂತ್ರ

ಜನಾಕ್ರೋಶ ಯಾತ್ರೆಯಲ್ಲಿ ಸಿಎಂ ವಿರುದ್ಧ ಬಿ.ವೈ ವಿಜಯೇಂದ್ರ ಕಿಡಿ

ಗದಗ: ಸಿಎಂ ಸ್ಥಾನ ಬಿಟ್ಟುಕೊಡಬೇಕು ಎಂಬ ಕಾರಣಕ್ಕೆ ಸಿದ್ದರಾಮಯ್ಯ ಅವರು ಹೊಸ ಕುತಂತ್ರ ನಡೆಸುತ್ತಿದ್ದಾರೆ. ಜಾತಿ ಜನಗಣತಿ ಹೆಸರಿನಲ್ಲಿ ಮುಸ್ಲಿಮರನ್ನು ಹಿಂದೂಗಳ ವಿರುದ್ಧ ಎತ್ತಿಕಟ್ಟುವ ಕೆಲಸವನ್ನು ಸ್ವತಃ ಮುಖ್ಯಮಂತ್ರಿಯವರೇ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪ ಮಾಡಿದರು.

ನಗರದ ಗಾಂಧಿ ವೃತ್ತದಲ್ಲಿ ಮಂಗಳವಾರ ನಡೆದ ಜನಾಕ್ರೋಶ ಯಾತ್ರೆಯಲ್ಲಿ ಮಾತನಾಡಿ, ಸಮಾಜಗಳ ನಡುವೆ ಕಂದಕ ಸೃಷ್ಟಿಸಿ, ಬೆಂಕಿ ಹಚ್ಚುವ ಕೆಲಸವನ್ನು ಸಿಎಂ ಮಾಡಲು ಹೊರಟಿದ್ದಾರೆ ಎಂದು ಹರಿಹಾಯ್ದರು.

ಸಿದ್ದರಾಮಯ್ಯ ಸ್ವಚ್ಛ ರಾಜಕಾರಣಿ ಎಂದು ಹೇಳಿಕೊಳ್ಳುತ್ತಿದ್ದರು. ಆದರೆ, ಸಿಎಂ ಸ್ವಚ್ಛ ರಾಜಕಾರಣಿಯಲ್ಲ, ಭ್ರಷ್ಟ ರಾಜಕಾರಣಿ ಎಂದು ರಾಜ್ಯದ ಜನ ಅರ್ಥ ಮಾಡಿಕೊಂಡಿದ್ದಾರೆ. ಈ ಕಾಂಗ್ರೆಸ್ ಸರಕಾರದಲ್ಲಿ ಅಭಿವೃದ್ಧಿ ಶೂನ್ಯವಾಗಿದ್ದು, ಬೆಲೆ ಏರಿಕೆಯಿಂದ ರಾಜ್ಯದ ಎಲ್ಲ ವರ್ಗದ ಜನರು ಬೇಸತ್ತಿದ್ದಾರೆ ಎಂದರು.

ಶಾಸಕ ಜನಾರ್ದನ ರೆಡ್ಡಿ ಮಾತನಾಡಿ, ನಾನು ಯಾವುದೇ ತಪ್ಪು ಮಾಡದಿದ್ದರೂ ಜೈಲಿಗೆ ಹಾಕಿಸಿದರು. ಕರ್ಮ ತಿರುಗಿ ಬರುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ಈಗ ಸಿಎಂ ಸಿದ್ದರಾಮಯ್ಯ ಅವರೇ ಮುಡಾ ಹಗರದಲ್ಲಿ ಸಿಲುಕಿದ್ದಾರೆ. ಇದು ಕೇವಲ 14 ನಿವೇಶನಗಳ ವಿಚಾರವಲ್ಲ. ಬೇನಾಮಿ ಹೆಸರಿನಲ್ಲಿ ಸಾಕಷ್ಟು ನಿವೇಶನಗಳನ್ನು ಸಿಎಂ ಮಾಡಿಕೊಂಡಿದ್ದಾರೆ. ಈ ಸಂಬಂಧ 900 ಮಂದಿ ಇಡಿ ಮುಂದೆ ಹೇಳಿಕೆ ಕೊಟ್ಟಿದ್ದಾರೆ. ಮುಡಾ ಹಗರಣದಲ್ಲಿ ಸಿಎಂ ಜೈಲು ಪಾಲಾಗುವ ದಿನಗಳು ದೂರವಿಲ್ಲ ಎಂದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಈ ಸರಕಾರ ಬಂದ ನಂತರ 1,530 ಕೊಲೆಗಳಾಗಿವೆ. 1,500 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಹಿಳೆಯರಿಗೆ ರಕ್ಷಣೆ ಇಲ್ಲವಾಗಿದೆ. ಇದೊಂದು ರಾಕ್ಷಸರ ಸರಕಾರ ಎಂದು ಹರಿಹಾಯ್ದರು. ಸಾವಿರಾರು ಮಂದಿ ಕಾರ್ಯಕರ್ತರು ಜನಾಕ್ರೋಶ ಯಾತ್ರೆಯಲ್ಲಿ ಭಾಗವಹಿಸಿದ್ದರು.

ನಗರದ ಗಾಂಧಿ ವೃತ್ತದಲ್ಲಿ ಮಂಗಳವಾರ ನಡೆದ ಜನಾಕ್ರೋಶ ಯಾತ್ರೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಲೇ ಇವೆ. ಇದರ ಪರಿಣಾಮವಾಗಿ ರೈತರು, ಜನಸಾಮಾನ್ಯರು ಜೀವನ ಸಾಗಿಸುವುದು ಕಷ್ಟವಾಗಿದೆ. ಅಹಿಂದ ಹೆಸರಿನಲ್ಲಿ ಅಧಿಕಾರ ಪಡೆದುಕೊಂಡ ಸಿದ್ದರಾಮಯ್ಯ ಅವರು ಎಸ್‌ಸಿಪಿ- ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿಗೆ ಬಳಕೆ ಮಾಡಿಕೊಂಡು ಎಸ್‌ಸಿ, ಎಸ್‌ಟಿ ಸಮುದಾಯದವರಿಗೆ ಮೋಸ ಮಾಡಿದ್ದಾರೆ.

-ಬಿ.ವೈ.ವಿಜಯೇಂದ್ರ , ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಯುಪಿಎಸ್‌ಸಿಯಲ್ಲಿ ಕನ್ನಡಿಗರ ಅಮೋಘ ಸಾಧನೆ

ಬೆಂಗಳೂರು: ಯುಪಿಎಸ್ ನಾಗರಿಕ ನಾಗರಿಕ ಸೇವೆಗಳ ಫಲಿತಾಂಶ ಪ್ರಕಟವಾಗಿದೆ. ಪರೀಕ್ಷೆ-2024ರ ಯುಪಿಎಸ್ಸಿ 1009 ಅಭ್ಯರ್ಥಿಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಇದರಲ್ಲಿ ಕರ್ನಾಟಕ ಅಭ್ಯರ್ಥಿಗಳು ಅಮೋಘ ಸಾಧನೆ ಮಾಡಿದ್ದಾರೆ.

ವೈದ್ಯ ಸಚಿನ್ ಗುತ್ತೂರ್‌ಗೆ 41ನೇ ಸ್ಥಾನ: ಕೇಂದ್ರ ಲೋಕಸೇವಾ ಆಯೋಗವು ಮಂಗಳವಾರ ಪ್ರಕಟಿಸಿರುವ 2024ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಗಳ ಅಂತಿಮ ಫಲಿತಾಂಶದಲ್ಲಿ ಹಾವೇರಿ ಜಿಲ್ಲೆಯ ಸಚಿನ್ ಬಸವರಾಜ ಗುತ್ತೂರ್ ಅವರು ಉತ್ತಮ ಸಾಧನೆ ಮಾಡಿದ್ದಾರೆ. 29 ವರ್ಷದ ಸಚಿನ್ ಅವರು ಒಟ್ಟಾರೆ ರ‍್ಯಾಂಕಿಂಗ್‌ನಲ್ಲಿ 41ನೇ ಸ್ಥಾನ ಪಡೆದಿದ್ದಾರೆ. ಇವರು ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಕೋಡಿಯಾಲ ಹೊಸಪೇಟೆ ಗ್ರಾಮದ ನಿವಾಸಿಯಾಗಿದ್ದಾರೆ. ವೃತ್ತಿಯಲ್ಲಿ ವೈದ್ಯರಾಗಿರುವ ಸಚಿನ್ ಗುತ್ತೂರ್ ಅವರು ತಮ್ಮ ನಾಲ್ಕನೇ ಪ್ರಯತ್ನದಲ್ಲಿ ನಾಗರಿಕ ಸೇವಾ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ. ಹರಿಹರದಲ್ಲಿ ಪ್ರಾಥಮಿಕ ಶಿಕ್ಷಣ, ಉನ್ನತ ವಿದ್ಯಾಭ್ಯಾಸವನ್ನು ದಾವಣಗೆರೆಯಲ್ಲಿ ಮುಗಿಸಿದ್ದಾರೆ.

ಸಾಗರದ ವಿಕಾಸ್‌ಗೆ 288ನೇ ರ‍್ಯಾಂಕ್: ಶಿವಮೊಗ್ಗ ಜಿಲ್ಲೆಯ ಸಾಗರದ ಕಾಗೋಡು ತಿಮ್ಮಪ್ಪ ನಗರದ ಅಣಲೆಕೊಪ್ಪ ಬಡಾವಣೆ ನಿವಾಸಿ, ಅಲ್ಲಿನ ಸರಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ವಿಜಯೇಂದ್ರ ಸಿ.ಪಾಟೀಲ ಹಾಗೂ ಶಿಕ್ಷಕಿ ಮಹಾಲಕ್ಷ್ಮಿ ಹೆಗಡೆ ದಂಪತಿ ಪುತ್ರ ವಿ. ವಿಕಾಸ್ ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್ಸಿ) ಪರೀಕ್ಷೆಯಲ್ಲಿ 288ನೇ ರ‍್ಯಾಂಕ್ ಪಡೆದಿದ್ದಾರೆ. ಐಐಟಿ ರೂರ್ಕಿಯಲ್ಲಿ ಇ ಅಂಡ್ ಇಯಲ್ಲಿ ಎಂಟೆಕ್ ಪದವೀಧರ ವಿಕಾಸ್, ಹೊಸನಗರದ ಹೋಲಿರೆಡಿಮರ್ ಹಾಗೂ ಕುವೆಂಪು ಶಾಲೆ, ಸಾಗರದ ಸೆಂಟ್ ಜೋಸೆಫ್, ಹೊಂಗಿರಣ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಎಂಜಿಎನ್ ಪೈ ಶಾಲೆಯಲ್ಲಿ ಪ್ರೌಢಶಿಕ್ಷಣ ಪಡೆದಿದ್ದಾರೆ. ಶಿವಮೊಗ್ಗದ ಪೇಸ್ ಕಾಲೇಜು ಹಾಗೂ ಸಾಗರದ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪಿಯುಸಿ ಹಾಗೂ ಮೈಸೂರಿನ ಎನ್‌ಐಇಯಲ್ಲಿ ಇ ಅಂಡ್ ಇ ವಿಷಯದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ಡಾ.ಮಹೇಶ ಗೆ 482ನೇ ರ‍್ಯಾಂಕ್

ಯುಪಿಎಸ್ ಸಿ ಫಲಿತಾಂಶದಲ್ಲಿ ವಿಜಯಪುರ ಜಿಲ್ಲೆಯ ವೈದ್ಯಾಧಿಕಾರಿ ಡಾ.ಮಹೇಶ ಮಡಿವಾಳರ ಅವರು 482ನೇ

ರ‍್ಯಾಂಕ್‌ಗಳಿಸಿದ್ದಾರೆ. ಮುದ್ದೇಬಿಹಾಳ ತಾಲೂಕಿನ ಮಡಿಕೇಶ್ವರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಯಾಗಿರುವ ಡಾ.ಮಹೇಶ ಮಡಿವಾಳರ 3ೀ ಚಾನ್ಸ್‌ನಲ್ಲಿ ಯಶಸ್ಸು ಕಂಡಿದ್ದಾರೆ. ಕಳೆದ ವರ್ಷದಿಂದ ಮಡಿಕೇಶ್ವರ ಆರೋಗ್ಯ ಕೇಂದ್ರದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಮೊದಲು ಸಕಲೇಶಪುರ ಗ್ರಾಮೀಣ ಭಾಗದಲ್ಲಿ ಒಂದುವರೆ ವರ್ಷ ಆರೋಗ್ಯ ಅಧಿಕಾರಿಯಾಗಿ ಕೆಲಸ ಮಾಡಿದ್ದರು.

ಶಿಕ್ಷಕನ ಪುತ್ರನಿಗೆ 462ನೇ ರ‍್ಯಾಂಕ್

ವಿಜಯಪುರ ಜಿಲ್ಲೆಯ ಕೊಲ್ಹಾರ ತಾಲೂಕಿನ ಮಸೂತಿ

ಗ್ರಾಮದ ರಾಹುಲ್ ಯರಂತೇಲಿ ಯುಪಿಎಸ್ಸಿ ಪರೀಕ್ಷೆಯಲ್ಲಿ 462 ನೇ ರ‍್ಯಾಂಕ್ ಗಳಿಸಿ ಬಸವನಾಡಿಗೆ ಕೀರ್ತಿ ತಂದಿದ್ದಾರೆ. ರಾಹುಲ್ ಅವರ ತಂದೆ ಚನ್ನಪ್ಪ ಯರಂತೇಲಿ ಮುದ್ದೇಬಿಹಾಳ ತಾಲ್ಲೂಕಿನ ಬಿದರಕುಂದಿ ಬಳಿ ಗೋನಾಳ ಹೆಚ್.ಪಿ.ಎಸ್ ಶಾಲೆಯಲ್ಲಿ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರೈತನ ಪುತ್ರನಿಗೆ ಐಆರ್‌ಎಸ್ ರ‍್ಯಾಂಕ್

ಕೋಲಾರ ಜಿಲ್ಲೆಯ ಇರಗಸಂದ್ರದ ಎ.ಮಧು ಅವರು 544 ನೇ ರ‍್ಯಾಂಕ್ ಪಡೆದುಕೊಳ್ಳುವ ಮೂಲಕ ಐಆರ್‌ಎಸ್‌ಗೆ ಆಯ್ಕೆ

ಆಗಿದ್ದಾರೆ. ಕೃಷಿಕ ಆನಂದ್ -ಸುಶೀಲ ದಂಪತಿ ಪುತ್ರ ಮಧು ಸ್ವಗ್ರಾಮದ ಸರಕಾರಿ ಶಾಲೆಯಲ್ಲಿ 5ನೇ ತರಗತಿವರೆಗೆ ಓದಿ 6ನೇ ಕ್ಲಾಸ್‌ಗೆ ಚಿಂತಾಮಣಿ ಸಮೀಪದ ಏನಿಗದೆಲೆಯ ನವೋದಯ ಶಾಲೆಗೆ ಸೇರ್ಪಡೆ ಆಗಿ ಎಸ್ಸೆಸ್ಸೆಲ್ಸಿ ಮುಗಿಸಿದ ನಂತರ ಕೋಲಾರದ ವಿದ್ಯಾಜ್ಯೋತಿ ಕಾಲೇಜಿನಲ್ಲಿ ಪಿಯುಸಿ ಓದಿದ್ದಾರೆ. ಬೆಂಗಳೂರಿನ ಜಿಕೆವಿಕೆಯಲ್ಲಿ ಬಿಎಸ್ಸಿ(ಕೃಷಿ) ಪೂರೈಸಿದ ನಂತರ 4ನೇ ಅವಕಾಶದಲ್ಲಿ ಐಆರ್‌ಎಸ್ ಹುದ್ದೆ ಪಡೆದುಕೊಂಡಿದ್ದಾರೆ.

ಕೇಂದ್ರ ಸರಕಾರದ ವಿರುದ್ಧ ಬೆಳಗಾವಿಯಲ್ಲಿ ಪ್ರತಿಭಟನೆ

ಬೆಳಗಾವಿ: ಅಗತ್ಯ ವಸ್ತುಗಳ ಬೆಲೆಯನ್ನು ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಪಾಲಿಗೆ ಹೊರೆಯಾಗುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ವಿರುದ್ಧ ಚಿಕ್ಕೋಡಿ ಹಾಗೂ ಬೆಳಗಾವಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಏ. 27 ಅಥವಾ 28 ರಂದು ಬೃಹತ್ ಪ್ರತಿಭಟನೆ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಗತ್ಯ ವಸ್ತುಗಳ ಬೆಲೆ ಏರಿಕೆ, ನ್ಯಾಷನಲ್ ಹೆರಾಲ್ಡ್ ಪ್ರಕರಣ ಕುರಿತು ಕೇಂದ್ರದ ನೀತಿ ವಿರುದ್ಧ ಪ್ರತಿಭಟಿಸಲಾಗುವುದು ಎಂದರು. ಕೇಂದ್ರ ಸರಕಾರ ಅಡುಗೆ ಅನಿಲ, ಪೆಟ್ರೋಲ್, ಡಿಸೇಲ್ ದರವನ್ನು ಏರಿಕೆ ಮಾಡಿ, ಬಡವರ ರಕ್ತ ಹೀರುವ ಕೆಲಸ ಮಾಡುತ್ತಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಹೇಳಿದರು.

ಬಿಜೆಪಿ ನಾಯಕರು ತಮ್ಮ ಒಳಬೇಗುದಿಯನ್ನು ಮರೆಯಾಚಿಸುವ ಸಲುವಾಗಿ ರಾಜ್ಯ ಸರಕಾರದ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳು ಹುಟ್ಟಿಕೊಂಡಿದ್ದೇ ಬೆಲೆ ಏರಿಕೆಯ ಕಾರಣದಿಂದ, ಗ್ಯಾರಂಟಿ ಯೋಜನೆಗಳಿಂದ ಬೆಲೆ ಏರಿಕೆಯಾಗುತ್ತಿದೆ ಎನ್ನುತ್ತಿರುವುದು ಶುದ್ಧ ಸುಳ್ಳು. ಬಿಜೆಪಿ ನಾಯಕರ ನಡುವಿನ ಆಂತರಿಕ ಕಚ್ಚಾಟವನ್ನು ಮರೆಮಾಚಲು ಜನರ ದಾರಿ ತಪ್ಪಿಸುವ ಸಲುವಾಗಿ ಜನಾಕ್ರೋಶ ಯಾತ್ರೆ ಮಾಡಲಾಗುತ್ತಿದೆ ಎಂದು ಸಚಿವರು ಆರೋಪಿಸಿದರು.

ಸುಳ್ಳುಗಳನ್ನು ಸತ್ಯ ಮಾಡಲು ಬಿಜೆಪಿಯವರು ಹೊರಟಿದ್ದಾರೆ. ಗ್ಯಾರಂಟಿ ಯೋಜನೆಗಳನ್ನು ಯಾಕೆ ತರಲಾಯಿತು ಅನ್ನೋದನ್ನ ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಜನರ ದಾರಿ ತಪ್ಪಿಸುವುದೇ ಬಿಜೆಪಿಯವರ ಕೆಲಸ. ಜನ ಸಾಮಾನ್ಯರ ಬದಲಿಗೆ ಕೇಂದ್ರ ಸರಕಾರ ಅದಾನಿ, ಅಂಬಾನಿಯವರಿಗಾಗಿ ಕೆಲಸ ನಿರ್ವಹಿಸುತ್ತಿದೆ.

-ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ವರದಿ ನಕಲಿ ಅಲ್ಲ, ಬಿಜೆಪಿಗರೇ ನಕಲಿ

ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಪ್ರಶ್ನೆ

ಕೊಪ್ಪಳ: ಈ ಹಿಂದಿನ ಸರಕಾರ ಪಂಚಮಸಾಲಿ ಸಮುದಾಯಕ್ಕೆ 2ಡಿ ಕೊಡುವಾಗ ಯಾವ ಮಧ್ಯಂತರ ವರದಿ ಪಡೆದಿತ್ತು? ಈ ಹಿಂದೆ ಇದೇ ವರದಿ ಆಧರಿಸಿ, ಬಿಜೆಪಿ ಸರಕಾರ 2ಡಿ ಜಾರಿ ಮಾಡಿತ್ತು? ಅದೇ ವರದಿ ಈಗ ನಕಲಿ ಆಗಿದೆಯೇ? ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ವರದಿ ನಕಲಿ ಅಲ್ಲ, ಬಿಜೆಪಿಗರೇ ನಕಲಿ. ಡಾ.ಜಯಪ್ರಕಾಶ ಹೆಗ್ಡೆ ಅವರ ವರದಿ ಆಧರಿಸಿಯೇ ಪಂಚಮಸಾಲಿ ಸಮುದಾಯಕ್ಕೆ 2ಡಿ ಅಡಿ ಮೀಸಲಾತಿ ನೀಡಿದ್ದರು. ಈಗ ನಾಚಿಕೆ, ಮಾನ, ಮರ್ಯಾದೆ ಇಲ್ಲದಂತೆ ಮಾತನಾಡುತ್ತಿರುವ ಬಿಜೆಪಿಗರು ನಕಲಿ ವರದಿ ಎನ್ನುತ್ತಿದ್ದಾರೆ. ಈಗ ವೈಜ್ಞಾನಿಕ ಆಗಿದ್ದ ವರದಿ ಈಗ ಅವೈಜ್ಞಾನಿಕವಾಗಿದೆಯೇ? ಎಂದು ಪ್ರಶ್ನಿಸಿದರು.

ವರದಿಯ ಮೂಲ ಪ್ರತಿ ಆಯಾ ಜಿಲ್ಲೆಯಲ್ಲಿ ಇದೆ. ಬಿಜೆಪಿಗರು ಹಿಂದುಳಿದ ವರ್ಗದ ಪರವಾಗಿ ಇದ್ದೀರೋ? ವಿರೋಧಿಗಳಾ ಎಂಬುದು ಸ್ಪಷ್ಟಪಡಿಸಬೇಕಿದೆ ಎಂದು ಹೇಳಿದರು.

ಸಿಇಟಿ ಬರೆಯಲು ಹೋಗಿದ್ದ ವಿದ್ಯಾರ್ಥಿಯ ಜನಿವಾರ ತೆಗೆಸಿದ ವಿಚಾರಕ್ಕೆ ಪ್ರತಿಕ್ರಿಯಿಸಿ, ಈಗಾಗಲೇ ಮೂವರು ಅಧಿಕಾರಿಗಳು ಅಮಾನತು ಆಗಿದ್ದಾರೆ. ತಪ್ಪಿತಸ್ಥರಿಗೆ ಕಾನೂನು ವ್ಯಾಪ್ತಿಯಲ್ಲಿ ಶಿಕ್ಷೆ ಆಗಲಿದೆ. ನಾವು ಇಂಥ ವಿಚಾರದ ಬಗ್ಗೆ ರಾಜಕೀಯ ಮಾಡುವುದಿಲ್ಲ ಎಂದು ತಿಳಿಸಿದರು.

ಶ್ರೀ ಕೃಷ್ಣ ದೇವರಾಯ ಸಮಾದಿಯಲ್ಲಿ ಮಟನ್ ಕಡಿಯುವ ವಿಡಿಯೊ ವೈರಲ್ ವಿಚಾರ ಗಮನಕ್ಕೆ ಇದೆ, ಕೊಪ್ಪಳ ಹಾಗೂ ಆನೆಗೊಂದಿ ಪಿಡಿಒಗೆ ನಾನೇ ಖುದ್ದು ಮಾತನಾಡಿದ್ದೇನೆ. ಅಧಿಕಾರಿಗಳಿಗೆ ಹೇಳಿ ಭದ್ರತೆಗೆ ವ್ಯವಸ್ಥೆ ಮಾಡುವಂತೆ ಸೂಚಿಸಿದ್ದೇನೆ ಎಂದರು.

ಜನಾಕ್ರೋಶ ಯಾತ್ರೆ ಮಾಡುತ್ತಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರಗೆ ಒಂದು ಸಲಹೆ ನೀಡಲು ಬಯಸುತ್ತೇನೆ. ಇವರು ದೆಹಲಿಗೆ ಹೋಗಿ, ಪೆಟ್ರೋಲ್-ಡಿಸೇಲ್ ಬೆಲೆ ಏರಿಕೆ ವಿರುದ್ಧ ಜನಾಕ್ರೋಶ ಯಾತ್ರೆ ಮಾಡಲಿ. ಪೆಟ್ರೋಲ್ ಬೆಲೆ ಜಾಸ್ತಿ ಆಗಿದ್ದರಿಂದ ದೇಶಾದ್ಯಂತ ಬೆಲೆ ಜಾಸ್ತಿ ಆಗಿದೆ. ಆದ್ದರಿಂದ ಮೋದಿ, ಅಮಿತ್ ಶಾ ಮನೆ ಮುಂದೆ ಹೋಗಿ ಆಕ್ರೋಶ ವ್ಯಕ್ತಪಡಿಸಲಿ. ಇದು ಜನಾಕ್ರೋಶ ಯಾತ್ರೆಯಲ್ಲ ಬಿಜೆಪಿ ಆಕ್ರೋಶ ಅಷ್ಟೇ.

- ಶಿವರಾಜ ತಂಗಡಗಿ ಸಚಿವ

ನೇಣುಬಿಗಿದ ಸ್ಥಿತಿಯಲ್ಲಿ ಪ್ರೇಮಿಗಳಿಬ್ಬರು ಪತ್ತೆ

ವಿಜಯನಗರ: ನಾಪತ್ತೆಯಾಗಿದ್ದ ಪ್ರೇಮಿಗಳಿಬ್ಬರು ಹರಪನಹಳ್ಳಿ ಪಟ್ಟಣದ ಹೊರವಲಯದ ಅನಂತನಹಳ್ಳಿ ಸರಕಾರಿ ಐಟಿಐ ಎದುರಿಗಿರುವ ಅರಣ್ಯದಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಜಿಟ್ಟಿನಕಟ್ಟೆ ಗ್ರಾಮದ ಮದ್ದನಸ್ವಾಮಿ(18), ಬಂಡ್ರಿ ಗ್ರಾಮದ ದೀಪಿಕಾ(18) ನೇಣಿಗೆ ಶರಣಾದ ಪ್ರೇಮಿಗಳು. ಒಂದೇ ಮರದ ಕೊಂಬೆಗೆ ಇಬ್ಬರೂ ನೇಣು ಬಿಗಿದುಕೊಂಡಿದ್ದಾರೆ.

ಮದ್ದನಸ್ವಾಮಿ ಹಾಗೂ ದೀಪಿಕಾ ಹರಪನಹಳ್ಳಿ ಸರಕಾರಿ ಪಿಯು ಕಾಲೇಜ್‌ನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದರು. ಇವರಿಬ್ಬರೂ ಏ.15 ಪಿಯುಸಿ ಫಲಿತಾಂಶ ಬಂದ ದಿನದಿಂದ ನಾಪತ್ತೆಯಾಗಿದ್ದರು.

ಇಬ್ಬರೂ ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ದೀಪಿಕಾ 438 ಹಾಗೂ ಮದ್ದನಸ್ವಾಮಿ 373 ಅಂಕ ಪಡೆದಿದ್ದರು. ಘಟನಾ ಸ್ಥಳಕ್ಕೆ ಹರಪನಹಳ್ಳಿ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಪ್ರೇಮಿಗಳಿಬ್ಬರು ಯಾವ ಕಾರಣಕ್ಕಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನುವುದರ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಪ್ರತಿ ಜಿಲ್ಲೆಯಲ್ಲಿ ಸರಕಾರಿ ವೈದ್ಯ ಕಾಲೇಜು-ಆಸ್ಪತ್ರೆ ಆಗಬೇಕು

ಹುಬ್ಬಳ್ಳಿ: ಪ್ರತಿ ಜಿಲ್ಲೆಯಲ್ಲಿ ಒಂದು ಸರಕಾರಿ ವೈದ್ಯಕೀಯ ಕಾಲೇಜು - ಆಸ್ಪತ್ರೆ ಆಗಬೇಕು, ಅದು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಟ್ರಾಮಾ ಕೇಂದ್ರ ಹಾಗೂ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ ಹೊಂದಬೇಕು ಇದು ನಮ್ಮ ಸರಕಾರದ ಸಂಕಲ್ಪವಾಗಿದ್ದು, ಈ ನಿಟ್ಟಿನಲ್ಲಿ ಸಾಕಷ್ಟು ಯತ್ನ

ಮಾಡಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸೂಪರ್ ಸ್ಪೆಶಾಲಿಟಿ ಕೇಂದ್ರ ಹುಬ್ಬಳ್ಳಿಯಲ್ಲಿ ಇದೆ, ಕಲಬುರಗಿ, ಮೈಸೂರಿನಲ್ಲಿ ಉದ್ಘಾಟಿಸಲಾಗಿದೆ. ಇನ್ನು ಶೀಘ್ರವೇ ಬೆಳಗಾವಿಯಲ್ಲಿ ಉದ್ಘಾಟನೆಯಾಗಲಿದೆ ಎಂದು ಹೇಳಿದರು.

ದೇಶದಲ್ಲಿಯೇ ಅತಿ ಹೆಚ್ಚಿನ ವೈದ್ಯಕೀಯ ಕಾಲೇಜು, ಆಸ್ಪತ್ರೆ ಹೊಂದಿದ 2ನೇ ರಾಜ್ಯವಾಗಿದೆ. ರಾಜ್ಯದಲ್ಲಿ ಸುಮಾರು 800 ಎಂಬಿಬಿಎಸ್ ಸೀಟುಗಳು ಹಾಗೂ 750 ಸ್ನಾತಕೋತ್ತರ ಸೀಟುಗಳ ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ರಾಜ್ಯದಲ್ಲಿ ಕಿಡ್ನಿ ಕಸಿಗಾಗಿ ಸುಮಾರು 5000ಕ್ಕೂ ಅಧಿಕ ಜನರು ಸರದಿಯಲ್ಲಿದ್ದರೆ, 1,000ಕ್ಕೂ ಅಧಿಕ ಜನರು ಯಕೃತ್ತು ಕಸಿಗೆ ಕಾಯುತ್ತಿದ್ದಾರೆ. ಯುವನಿಧಿಯಡಿ ನೋಂದಣಿಯಾದ ಸುಮಾರು2.80 ಲಕ್ಷ ಯುವಕರಲ್ಲಿ 1.75 ಲಕ್ಷ ಯುವಕರಿಗೆ ಬಹು ಕೌಶಲ ತರಬೇತಿ ನೀಡಲಾಗುತ್ತಿದೆ. ಸರಕಾರದಿಂದ ಉದ್ಯೋಗ ಮೇಳ ನಡೆಸಲಾಗುತ್ತಿದೆ. ಹುಬ್ಬಳ್ಳಿ ಅಥವಾ ಬೆಳಗಾವಿಯಲ್ಲಿ ಉದ್ಯೋಗ ಮೇಳ ನಡೆಸಲಾಗುವುದು ಎಂದರು.

ವಿಶ್ವವಾಣಿ

ಸಂಪಾದಕೀಯ

ಅರಿವಿಲ್ಲದಿದ್ದರೆ ಅಪಾಯ ಖಾತ್ರಿ!

ಮಧ್ಯಪ್ರದೇಶದ ಉಜ್ಜಯಿನಿ ಜಿಲ್ಲೆಯ ಆಧ್ಯಾತ್ಮಿಕ ಸಂಸ್ಥೆಯೊಂದರ ಕಾರ್ಯದರ್ಶಿಯನ್ನು 'ಡಿಜಿಟಲ್ ಅರೆಸ್ಟ್' ಮೂಲಕ ಬೆದರಿಸಿದ ದುರುಳರು ಅವರ ಬ್ಯಾಂಕ್ ಖಾತೆಯಿಂದ ಹಣ ಕೊಳ್ಳೆ ಹೊಡೆದಿರುವುದು ವರದಿಯಾಗಿದೆ. ಈ ಸಂತ್ರಸ್ತರ ಖಾತೆಯಿಂದ ಒಟ್ಟು 26 ದಿನಗಳ ಅವಧಿಯಲ್ಲಿ ಎರಡೂವರೆ ಕೋಟಿ ರುಪಾಯಿ ಹಣ ದೋಚಲ್ಪಟ್ಟಿದ್ದು ಈ ಸಂಬಂಧವಾಗಿ ನಾಲ್ವರು ಸೈಬರ್ ವಂಚಕರನ್ನು ಮಾತ್ರವಲ್ಲದೆ ಖಾಸಗಿ ಬ್ಯಾಂಕ್‌ನ ಇಬ್ಬರು ಸಿಬ್ಬಂದಿಯನ್ನೂ ಬಂಧಿಸಲಾಗಿದೆ ಎಂಬುದು ಲಭ್ಯ ಸುದ್ದಿ. ಅಮಾಯಕರನ್ನು ವಂಚಿಸಲು ದುರುಳರು ಕಂಡುಕೊಂಡಿರುವ 'ಡಿಜಿಟಲ್ ಅರೆಸ್ಟ್' ಎಂಬ ವಾಮಮಾರ್ಗದ ಕುರಿತು ಎಚ್ಚರದಿಂದಿರುವಂತೆ ಆಳುಗರು ಮತ್ತು ಪೊಲೀಸ್ ಇಲಾಖೆಯವರು ಕಾಲಾನುಕಾಲಕ್ಕೆ ಎಚ್ಚರಿಸುತ್ತಿದ್ದರೂ ಇಂಥ ಪ್ರಕರಣಗಳ ಸಂಖ್ಯೆ ತಗ್ಗುತ್ತಿಲ್ಲ ಎಂಬುದು ವಿಷಾದನೀಯ. 'ವ್ಯಕ್ತಿಯೊಬ್ಬನು ಅಹಿತಕರ ಸಂಗತಿ ಅಥವಾ ಸನ್ನಿವೇಶದ ಬಗ್ಗೆ ತಿಳಿದಿಲ್ಲದಿದ್ದರೆ, ಅದರಿಂದ ತೊಂದರೆಗೊಳಗಾಗಲು ಸಾಧ್ಯವಿಲ್ಲ' ಎಂಬರ್ಥದ ಮಾತು ಪಾರಮಾರ್ಥಿಕ ನೆಲೆಯಲ್ಲಿ ಸ್ವೀಕಾರಾರ್ಹವೇನೋ? ಆದರೆ ಲೌಕಿಕ ಬದುಕಿನಲ್ಲಿ ಇದನ್ನು ನೆಚ್ಚಲಾಗದು. ಏಕೆಂದರೆ, ಅಹಿತಕರ ಮತ್ತು ಕೆಟ್ಟ ಪರಿಸ್ಥಿತಿಗಳ ಕುರಿತು ಮಾಹಿತಿವಂತರಾಗಿದ್ದು, ಒಂದೊಮ್ಮೆ ಅವು ಎರಗಿದರೆ ತಪ್ಪಿಸಿಕೊಳ್ಳುವುದಕ್ಕಿರುವ ಮಾರ್ಗೋಪಾಯವನ್ನೂ ಅರಿತಿರಬೇಕಾದ್ದು ವರ್ತಮಾನದ ಅನಿವಾರ್ಯತೆಯಾಗಿದೆ. ಏಕೆಂದರೆ, ಸ್ಮಾರ್ಟ್‌ಫೋನ್ ತಂತ್ರಜ್ಞಾನವು ಕಾಲಕ್ರಮೇಣ ಸುಧಾರಣೆಗೊಳ್ಳುತ್ತ, ದಿನಕ್ಕೊಂದರಂತೆ ಹೊಸ ವೈಶಿಷ್ಟ್ಯಗಳ ರೆಕ್ಕೆ-ಪುಕ್ಕಗಳನ್ನು ಜೋಡಿಸಿಕೊಂಡು ಬರುತ್ತಿರುವಂತೆಯೇ, ಇಂಥ ಫೋನುಗಳ ಬಳಕೆದಾರರನ್ನು ಮೋಸದ ಬಲೆಗೆ ಕೆಡವಬಲ್ಲ ಹೊಸ ಕುತಂತ್ರ ಮಾರ್ಗಗಳನ್ನೂ ಸೈಬರ್ ವಂಚಕರು ಕಂಡುಕೊಳ್ಳುತ್ತಿದ್ದಾರೆ. ಆದ್ದರಿಂದ, 'ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ' ಎಂಬ ಆಧುನಿಕ ನೀತಿಪಾಠವನ್ನು ಮನನ ಮಾಡಿಕೊಂಡು ಇಂಥ ವಂಚಕರ ಬಲೆಗೆ ಬೀಳದಂತೆ ಜನರು ಜಾಗೃತರಾಗಬೇಕಿದೆ. ಮೊಬೈಲ್ ಮಡಿಲಿಗೆ ದಂಡಿಯಾಗಿ ಬಂದು ಬೀಳುವ ಬಹುಮಾನ ನೀಡಿಕೆಯಂಥ ಆಮಿಷಗಳಿಗೆ ಬಲಿಯಾಗದಿರುವ, ಅಪರಿಚಿತ ಸಂಖ್ಯೆಗಳಿಂದ ಬಂದ ಲಿಂಕ್ ಅನ್ನು ಒತ್ತದಿರುವ ಜಾಣ್ಮೆಯನ್ನು ಜನರು ತೋರಬೇಕಿದೆ. ಜತೆಗೆ, ಸೈಬರ್ ವಂಚಕರನ್ನು ಬಲಿಹಾಕುವ ವಿಷಯದಲ್ಲಿ ಪೊಲೀಸರೂ ಮತ್ತಷ್ಟು ಚುರುಕಾಗಬೇಕಿದೆ.

ಸೊಂಪಾದಕೀಯ

ಪ್ರೀತಿ ಕೊಂದ ಕೊಲೆಗಾತಿ/ರ

ಇತ್ತೀಚಿನ ದಿನಗಳಲ್ಲಿ ಕೊಲೆ ಸುದ್ದಿಗಳಲ್ಲಿ ಅತಿ ಹೆಚ್ಚು ಕೇಳಿಬರುತ್ತಿರೋದು ಗಂಡನನ್ನೇ ಕೊಂದ ಹೆಂಡತಿ, ಹೆಂಡತಿಯನ್ನೇ ಕೊಂದ ಗಂಡ ಅನ್ನೋದು. ಈಗಿನ ಸಮಾಜದಲ್ಲಿ ಕ್ಷುಲ್ಲಕ ಕಾರಣಗಳಿಗೆ ಕೊಲೆಗಳು ಆಗುತ್ತಿವೆ. ರಸ್ತೆಯಲ್ಲಿ ಗಾಡಿ ಓಡಿಸುವಾಗ ತನ್ನ ಗಾಡಿಯನ್ನು ಓವರ್‌ಟೇಕ್ ಮಾಡಿದ ಅನ್ನೋ ಕಾರಣಕ್ಕೆ, ನನಗೆ ಹಾರ್ನ್ ಮಾಡಿದ ಅನ್ನೋ ಕಾರಣಕ್ಕೆ ತಗಾದೆ ತೆಗೆದು ಕೊನೆಗೆ ಅದು ಕೊಲೆಯಲ್ಲಿ ಅಂತ್ಯ ಆಗಿರೋದನ್ನ ನಾವು ನೋಡಿದ್ದೇವೆ, ಕೇಳಿದ್ದೇವೆ. ಇನ್ನು ರಸ್ತೆಯಲ್ಲಿ ಮೆಟ್ರೋ ಕಾಮಗಾರಿಯಲ್ಲೂ ಅವಘಡಗಳು ಆಗಿ ಪ್ರಾಣ ಹೋಗಿವೆ. ಇನ್ನು ಅಪಘಾತಗಳಂತೂ ಕೇಳಲೇಬೇಡಿ. ನಾವು ಸುಮ್ಮನೇ ನಿಂತಿದ್ದರೂ ಬಂದು ಗುದ್ದಿ ಸಾಯಿಸುವ ಯಮಸ್ವರೂಪಿ ವಾಹನಗಳು ಇವೆ. ಹಾಗಾಗಿ ಈಗ ಮನುಷ್ಯ ಹೊರಗೆ ಹೋದರೆ ಜೀವಸಮೇತ ಮನೆಗೆ ವಾಪಸ್ ಬರೋದು ಖಾತ್ರಿಯಿಲ್ಲ ಅನ್ನೋ ಮಾತಿಗೆ ಸಾಕಷ್ಟು ಪುಷ್ಟಿ ದೊರೆತಿದೆ. ಆದರೆ ಹಾಗಂತ ಮನೆಯಲ್ಲೇ ಇದ್ದರೆ ಸೇಫ್ ಅನ್ನೋ ಭಾವನೆಗೂ ಈ ಗಂಡ-ಹೆಂಡಿರ ಕೊಲೆಗಳಿಂದ ಸಂಚಕಾರ ಬಂದಿದೆ. ಮನೆಯಲ್ಲೇ ಇದ್ದರೂ ಸಂಗಾತಿಯಿಂದಲೇ ಒಂದು ಗತಿ ಕಾಣಿಸಿಕೊಂಡ ಅನೇಕರು ಪ್ರತಿದಿನ ಕಾಣಿಸುತ್ತಿದ್ದಾರೆ. ಮೊದಲು ಇವೆಲ್ಲ ಕೂಲಿ ಕೆಲಸ ಮಾಡೋ ಗಂಡ ಕುಡಿದು ಬಂದು ಹೆಂಡತಿಯನ್ನು ಹೊಡೆದು ಸಾಯಿಸಿದ ಅನ್ನೋ ಮಟ್ಟಕ್ಕೆ ನಿಂತಿದ್ದವು. ಆದರೆ ಈಗ ಸೊಫಿಸ್ಟಿಕೇಟೆಡ್ ಅನಿಸಿಕೊಂಡ ಫ್ಯಾಮಿಲಿಗಳಲ್ಲೇ ಕೊಲೆಗಳು ಆಗುತ್ತಿವೆ. ಇತ್ತೀಚೆಗೆ ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ಕೊಲೆ ಆಗಿದ್ದಾರೆ. ಇದಕ್ಕೆ ಈಗ ಅವರ ಹೆಂಡತಿ ಮತ್ತು ಮಗಳನ್ನು ಹೊಣೆ ಮಾಡಲಾಗಿದೆ. ಹಾಗಂತ ಇದೊಂದು ಅಪರೂಪದ ಕೇಸು ಏನಲ್ಲ. ಗಂಡನನ್ನು ಕೊಲೆ ಮಾಡಿ ಸೂಟ್‌ಕೇಸಿನಲ್ಲಿ ತುಂಬಿಡೋದು, ಹೆಂಡತಿಯನ್ನು ಕೊಲೆ ಮಾಡಿ ಫ್ರಿಜ್‌ನಲ್ಲಿ ತುಂಬೋದು ಇವೆಲ್ಲಾ ಈಗ ಕಾಮನ್ ಆಗಿದೆ. ಇವುಗಳಲ್ಲಿ ಆಸ್ತಿ ಮತ್ತು ಅನೈತಿಕ ಸಂಬಂಧಗಳದ್ದೇ ಪಾರುಪತ್ಯ. ಇನ್ನು ಹೆಂಡತಿ ಮತ್ತು ಗಂಡನ ಮೇಲೆ ಆಪಾದನೆ ಹೊರಿಸಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯೂ ಕಡಿಮೆ ಏನಿಲ್ಲ. ಒಟ್ಟಿನಲ್ಲಿ ಇವನ್ನೆಲ್ಲಾ ನೋಡಿ 'ನಮಗೆಲ್ಲಾ ಯಾರ್ ಬೀಳ್ತಾರೆ' ಅಂತ ಕೊರಗುತ್ತಿದ್ದ ಸಿಂಗಲ್‌ಗಳು ಮಾತ್ರ 'ಸದ್ಯ ಯಾರೂ ಬೀಳದೇ ಇದ್ದಿದ್ದೇ ಒಳ್ಳೇದಾಯ್ತು, ಇಲ್ಲಾಂದ್ರೆ ನಮ್ಮ ಹೆಣ ಬೀಳುತ್ತಿತ್ತು' ಅಂತ ಸಮಾಧಾನ ಮಾಡಿಕೊಳ್ಳುತ್ತಿದ್ದಾರೆ.

ಸಂಪಾದಕರ ಸದ್ಯಶೋಧನೆ

ಜಪಾನಿನಲ್ಲಿ ಹಿತವಾದ ಆಘಾತಗಳು

ನೀವು ಯಾವುದೇ ದೇಶಕ್ಕೆ ಹೋದರೂ ನಿಮಗೆ ಸಾಂಸ್ಕೃತಿಕ ಅಥವಾ ಸಾಮಾಜಿಕ ಆಘಾತ ಆಗುವುದು ಸಹಜ. ಇದನ್ನು ಇಂಗ್ಲಿಷಿನಲ್ಲಿ culture shock ಅಥವಾ social shock ಎಂದು ಕರೆಯುತ್ತಾರೆ. ಅಲ್ಲಿನ ರೀತಿ-ರಿವಾಜು, ಜೀವನ ವಿಧಾನ, ಆಚರಣೆಗಳನ್ನು ನೋಡಿ ನಮಗೆ ವಿಸ್ಮಯವಾಗುತ್ತದೆ. ಇದನ್ನು 'ಹಿತವಾದ ಆಘಾತ' ಎಂದೂ ಕರೆಯಬಹುದು. ಉದಾಹರಣೆಗೆ, ಭಾರತೀಯರಿಗೆ ಮೊದಲ ಸಲ ವಿದೇಶಗಳಿಗೆ ಹೋದಾಗ ಅಲ್ಲಿನ ಅತಿಯಾದ ಸ್ವಚ್ಛತೆ, ವಿಶಾಲ ರಸ್ತೆ, ವಾಹನಗಳನ್ನು ನೋಡಿ ಅತೀವ ಅಚ್ಚರಿಯಾಗುತ್ತದೆ. ಇದು ಇನ್ನು ಕೆಲವರಲ್ಲಿ ಆಘಾತವನ್ನುಂಟುಮಾಡಬಹುದು. ಅದರಲ್ಲೂ ಭಾರತೀಯರು ಮೊದಲ ಬಾರಿಗೆ ಜಪಾನಿಗೆ ಹೋದಾಗ ಈ ಅನುಭವ ಸಹಜ. ಜಪಾನ್ ತಂತ್ರಜ್ಞಾನದಲ್ಲಿ ಬಹಳ ಮುಂದುವರಿದ ದೇಶ. ಆದರೂ ಆ ದೇಶ ಇಂದಿಗೂ ನಗದು ಆಧರಿತ (cash based) ವ್ಯಾವಹಾರಿಕ ವ್ಯವಸ್ಥೆಯನ್ನೇ ಹೊಂದಿದೆ. ಜಪಾನಿನಲ್ಲಿ ಎಲ್ಲ ವ್ಯವಹಾರಗಳೂ cashless ಎಂದು ಭಾವಿಸಿದವರಿಗೆ ಅಚ್ಚರಿಯಾಗಬಹುದು. ಬಿಲ್ ಪಾವತಿಸಲು ಯಾವುದೇ ಕೌಂಟರಿಗೆ ಹೋದರೂ ಪುಟ್ಟ ಟ್ರೇ ಇರುವುದನ್ನು ಗಮನಿಸಬಹುದು. ನಾವು ನೋಟನ್ನು ಆ ಟ್ರೇಯಲ್ಲಿ ಇಟ್ಟರೆ, ಚಿಲ್ಲರೆ ಹಣವನ್ನು ಟ್ರೇಯಲ್ಲಿಯೇ ಇಟ್ಟು ಕೊಡುತ್ತಾರೆ. ಕೆಲವು ಮಾಲ್‌ಗಳಲ್ಲಿ ಹಣವನ್ನು ಕೈಯಲ್ಲಿ ಮುಟ್ಟುವುದಿಲ್ಲ. ಹಣವನ್ನು ಇಟ್ಟ ತಕ್ಷಣ ಯಂತ್ರವೇ ಅದನ್ನು ಸೆಳೆದುಕೊಂಡು, ಸರಿಯಾದ ಚಿಲ್ಲರೆ ಹಣವನ್ನು ನೀಡುತ್ತದೆ. ಕೌಂಟರಿನಲ್ಲಿ ಇದ್ದವರಿಗೆ ಅದನ್ನು ನೋಡುವುದಷ್ಟೇ ಕೆಲಸ. ಇನ್ನು ಕೆಲವು ಮಾಲ್‌ಗಳಲ್ಲಿ ಹತ್ತು ಡ್ರೆಸ್‌ಗಳನ್ನು ಖರೀದಿಸಿದರೆ, ಎಲ್ಲವನ್ನೂ ಬಾರ್ ಕೋಡ್ ಸ್ಕ್ಯಾನಿಂಗ್‌ಗೆ ಹೊರಗೆ ತೆಗೆಯಬೇಕೆಂದಿಲ್ಲ. ಆರಿಸಿದ ಸಾಮಾನುಗಳನ್ನು ಬ್ಯಾಗ್ ಸಹಿತ ಒಂದು ಯಂತ್ರದ ಮೇಲೆ ಇಟ್ಟರಾಯಿತು. ಅದೇ ಕ್ಷಣಾರ್ಧದಲ್ಲಿ ಸ್ಕ್ಯಾನ್ ಮಾಡಿ, ಪಾವತಿಸಬೇಕಾದ ಹಣವನ್ನು ತಿಳಿಸುತ್ತದೆ. ಅಲ್ಲಿಯೇ ಕ್ರೆಡಿಟ್ ಕಾರ್ಡ್ ಮೂಲಕ ಹಣ ಪಾವತಿ ಮಾಡಬಹುದು. ಅನೇಕ ಸಲ ಸಾಮಾನುಗಳನ್ನು ಆಯ್ಕೆ ಮಾಡುವಷ್ಟೇ, ಕ್ಯೂದಲ್ಲಿ ನಿಂತು ಹಣ ಪಾವತಿಸಲು ಸಮಯ ಹಿಡಿಯುತ್ತದೆ. ಅದನ್ನು ತಪ್ಪಿಸಲು ಈ ಕ್ರಮ. ಜಪಾನಿನಲ್ಲಿ ಮೇಕಪ್ ಮಾಡಿಕೊಂಡು ಬಟ್ಟೆ ಖರೀದಿಸುವ ಹೆಂಗಸರಿಗೆ ಸಣ್ಣ ಆಘಾತವಾಗುವುದು ಸಹಜ. ಬಟ್ಟೆಯನ್ನು ಆಯ್ಕೆ ಮಾಡಿ ಟ್ರಯಲ್ ಮಾಡುವಾಗ, ಒಂದೋ ಮೇಕಪ್ ಅನ್ನು ಅಳಿಸಬೇಕು, ಇಲ್ಲವೇ ಪಾರದರ್ಶಕ ಮುಖವಾಡ ಧರಿಸಬೇಕು. ಹೊಸ ಬಟ್ಟೆಗೆ ಮೇಕಪ್ ಅಂಟುವುದನ್ನು ತಪ್ಪಿಸಲು ಈ ಕ್ರಮ. ಜಪಾನಿನಲ್ಲಿ 'ರಿಸೈಕ್ಲಿಂಗ್' ಅನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಲಾಗುತ್ತದೆ. ಬಿಸಾಡುವ ವಸ್ತುಗಳನ್ನು ನಿರ್ದಿಷ್ಟ ವಿಧಾನದಲ್ಲಿಯೇ ವರ್ಗೀಕರಿಸಬೇಕು. ಪ್ಲಾಸ್ಟಿಕ್ ಬಾಟಲಿಯನ್ನು ಎಸೆಯುವಾಗ ಅದನ್ನು ಶುದ್ಧವಾಗಿ ತೊಳೆಯಬೇಕು. ಬಾಟಲಿಗೆ ಅಂಟಿಕೊಂಡಿರುವ ಲೇಬಲ್ ಅನ್ನು ಕೀಳಬೇಕು ಮತ್ತು ಬಾಟಲಿಯ ಮುಚ್ಚಳವನ್ನು ಪ್ರತ್ಯೇಕಿಸಬೇಕು. ನಂತರ ಬಾಟಲಿ, ಲೇಬಲ್ ಮತ್ತು ಮುಚ್ಚಳ ಆ ಮೂರನ್ನೂ ಬೇರೆ ಬೇರೆಯಾಗಿ ವಿಂಗಡಿಸಿ ಎಸೆಯಬೇಕು. ಪರಿಸರ ಕಾಳಜಿ ಮತ್ತು ಸ್ವಚ್ಛತೆಗೆ ಮಹತ್ವ ನೀಡುವ ಜಪಾನಿನಲ್ಲಿ ಪ್ಲಾಸ್ಟಿಕ್ ಅನ್ನು ಬಳಸಲಿಕ್ಕಿಲ್ಲ ಎಂದು ಭಾವಿಸಿದರೆ ನಮ್ಮ ಊಹೆ ತಪ್ಪು. ಜಪಾನಿಯರು ಯಥೇಚ್ಛ ಪ್ಲಾಸ್ಟಿಕ್ ಬಳಸುತ್ತಾರೆ. ಆದರೆ ಅದನ್ನು ಎಲ್ಲೂ ಎಸೆಯುವುದಿಲ್ಲ. ಬಳಸಿದ ಪ್ಲಾಸ್ಟಿಕ್‌ಗಳೆಲ್ಲವೂ ರಿಸೈಕಲ್ ಆಗುತ್ತವೆ. ಹೀಗಾಗಿ ಪ್ಲಾಸ್ಟಿಕ್ ಬ್ಯಾಗ್ ವಿಚಾರದಲ್ಲಿ ಚೌಕಾಶಿ ಇಲ್ಲ. ಜಗತ್ತಿನಲ್ಲಿಯೇ ಅತ್ಯಂತ ಸ್ವಚ್ಛ ನಗರ ಎಂದು ಕರೆಯಿಸಿಕೊಂಡಿರುವ ಟೋಕಿಯೋ ನಗರದ ಬೀದಿಗಳಲ್ಲಿ ಒಂದೇ ಒಂದು ಕಸದ ಬುಟ್ಟಿ ಕಾಣುವುದಿಲ್ಲ. ಹಾಗಂತ ಜನ ಬಳಸಿದ ವಸ್ತುಗಳನ್ನು ಬೇಕಾಬಿಟ್ಟಿ ರಸ್ತೆ ಮೇಲೆ ಅಥವಾ ಕಂಡಕಂಡಲ್ಲಿ ಎಸೆಯುವುದಿಲ್ಲ. ಅನೇಕರು ಬಿಸಾಡಬೇಕೆಂದಿರುವ ವಸ್ತುಗಳನ್ನು ತಮ್ಮ ಜೇಬಿನೊಳಗೆ ದಿನವಿಡೀ ಇಟ್ಟುಕೊಂಡಿರುತ್ತಾರೆ. ಜನರು ಬೀದಿಯಲ್ಲಿ ನಿಂತು ತಿನ್ನುವುದಿಲ್ಲ ಅಥವಾ ಕುಡಿಯುವುದಿಲ್ಲ. ಅಲ್ಲಿನ ಕೆಲವು ನಿರ್ದಿಷ್ಟ ಅಂಗಡಿ ಮುಂದೆ ನಿಂತು ಹಾಗೆ ಮಾಡಬಹುದಷ್ಟೆ. ಟೋಕಿಯೋ ನಗರದ ಬೀದಿಗಳಲ್ಲಿ ಸಣ್ಣ ಕಾಗದದ ಚೂರು, ತುಣುಕುಗಳನ್ನು ನೋಡಲು ಸಾಧ್ಯವಿಲ್ಲ. ಇದು ಯಾರಿಗಾದರೂ ಹಿತವಾದ ಆಘಾತವನ್ನುಂಟುಮಾಡಬಹುದು.

ಹುಳುಗಳನ್ನು ಔಷಧವನ್ನಾಗಿ ಬಳಸಬಹುದೇ?



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಹುಳುಗಳನ್ನು ಔಷಧವನ್ನಾಗಿ ಬಳಸಬಹುದೋ ಇಲ್ಲವೋ ಎನ್ನುವುದರ ಬಗ್ಗೆ ವಿಚಾರ ಮಾಡುವುದಕ್ಕೆ ಮೊದಲು, ಕೆಲವು ಮೂಲಭೂತ ವಿಚಾರಗಳನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ವಾಸ್ತವದಲ್ಲಿ ನಮ್ಮ ದೇಹವೊಂದು 'ಝೂ' ಎನ್ನುವುದು ನಮಗೆ ತಿಳಿದಿಲ್ಲ. ನಾವು ಊಟಮಾಡಿದರೆ, ನಾವೊಬ್ಬರು ಮಾತ್ರ ಊಟವನ್ನು ಮಾಡುತ್ತಿಲ್ಲ, ನಮ್ಮ ಜತೆಯಲ್ಲಿ ಲಕ್ಷಕೋಟಿ (ಟ್ರಿಲಿಯನ್) ಗಟ್ಟಲೆ ಜೀವಿಗಳೂ ಊಟವನ್ನು ಮಾಡುತ್ತವೆ ಎಂದರೆ, ಅದು ಖಂಡಿತ ಅತಿಶಯೋಕ್ತಿಯಲ್ಲ.

1. ನಾವು, ನಾವು ಮಾತ್ರವಲ್ಲ! ನಮ್ಮ ಶರೀರವು 30 ಲಕ್ಷಕೋಟಿ ಜೀವಕೋಶಗಳಿಂದ ಆಗಿದ್ದರೆ, ನಮ್ಮ ಮೈಮೇಲೆ ಹಾಗೂ ಮೈ ಒಳಗೆ 100 ಲಕ್ಷಕೋಟಿ ಸೂಕ್ಷ್ಮಜೀವಿಗಳು ವಾಸಿಸುತ್ತವೆ. ನಮಗಿಂತಲೂ ಮೂರು ಪಟ್ಟು ಹೆಚ್ಚು. ನಮ್ಮ ದೇಹದಲ್ಲಿ ನಾವೇ ಅಲ್ಪಸಂಖ್ಯಾತರು!

2. ನಮ್ಮ ದೇಹದಲ್ಲಿ ಬರಿಗಣ್ಣಿಗೆ ಕಾಣದ ಸೂಕ್ಷ್ಮಜೀವಿಗಳು ವಾಸಿಸುವಂತೆ, ನಮ್ಮ ದೇಹದ ಮೇಲೆ ಹಾಗೂ ಒಳಗೆ ಕಣ್ಣಿಗೆ ಕಾಣುವ ಜೀವಿಗಳು ವಾಸಿಸುತ್ತವೆ. ಚರ್ಮದ ಮೇಲೆ ಹೇನು, ಒಡಲಹೇನು, ಜನನಾಂಗ ಹೇನು, ಕಜ್ಜಿನುಸಿಗಳು ವಾಸಿಸುತ್ತವೆ. ರಕ್ತದಲ್ಲಿ ಮಲೇರಿಯ, ಫೈಲೇರಿಯ, ಆಫ್ರಿಕನ್ ನಿದ್ರಾ ರೋಗದ ಆದಿಜೀವಿಗಳಿರುತ್ತವೆ. ಕರುಳಿನಲ್ಲಿ ದುಂಡುಹುಳ, ಕೊಕ್ಕೆಹುಳ, ಲಾಡಿಹುಳ, ಚಾವಟಿಹುಳ, ಜಿಯಾರ್ಡಿಯ, ಎಂಟಮೀಬಗಳಿರುತ್ತವೆ. ಯಕೃತ್ತಿನಲ್ಲಿ ಎಂಟಮೀಬ, ಎಕೈನೋಕಾಕಸ್, ಕ್ಲೋನಾರ್ಕಿಸ್, ಶಿಸ್ಟೋಸೋಮ, ಫೇಸಿಯೋಲ ಹೆಪಾಟಿಕ ಇತ್ಯಾದಿಗಳಿರುತ್ತವೆ. ನಮ್ಮ ಸ್ನಾಯುಗಳಲ್ಲಿ ಟ್ರೈಕಿನೆಲ್ಲ ಸ್ಪೈರಾಲಿಸ್, ಟೀನಿಯ ಸೋಲಿಯಂ, ಸಾರ್ಕೋಸಿಸ್ಟಿಸ್ ಇರುತ್ತವೆ. ಮಿದುಳಿನಲ್ಲಿ ನೆಗ್ಲೇರಿಯ, ಟೀನಿಯ ಸೋಲಿಯಂ, ಟಾಕ್ಸೋಪ್ಲಾಸ್ಮ ಗೊಂಡಿ, ಟ್ರಿಪನೋಸೋಮ ಬ್ರೂಸಿ, ಅಕ್ಯಾಂಥಮೀಬಗಳಿರುತ್ತವೆ. ಕಣ್ಣಿನಲ್ಲಿ ಲೋವಲೋವಾ, ಟಾಕ್ಸೋಕ್ಯಾರ ಕ್ಯಾನಿಸ್, ಆಂಕೋಸೆರ್ಕ ವಾಲ್ವ್ಯುಲಸ್, ಟಾಕ್ಸೋಪ್ಲಾಸ್ಮ ಗೊಂಡಿಗಳಿರುತ್ತವೆ. ಮೂಗು ಮತ್ತು ಶ್ವಾಸಕೋಶಗಳಲ್ಲಿ ಪ್ಯಾರಗೋನಿಮಸ್, ಸ್ಟ್ರಾಂಗೈಲಾಯ್ಡಸ್, ಆಸ್ಕ್ಯಾರಿಸ್ ಲುಂಬ್ರಿಕಾಯ್ಡ್ಸ್ ಹುಳುಗಳಿರುತ್ತವೆ. ಇವು ಕೆಲವು ಉದಾಹರಣೆಗಳು ಮಾತ್ರ.

3. ನಾವು ಸ್ವತಂತ್ರರಲ್ಲ! ನಾವು ಆರೋಗ್ಯಕರ ಜೀವನವನ್ನು ನಡೆಸಬೇಕಾದರೆ, ಈ ಸೂಕ್ಷ್ಮಜೀವಿಗಳು ಹಾಗೂ ಕೆಲವು ಹುಳುಗಳು ಅಗತ್ಯ ಎನ್ನುವುದು ಆಧುನಿಕ ವಿಜ್ಞಾನದ ಅಭಿಮತ.

4. ಒಂಟೆ ಮತ್ತು ಅರಬ್ಬನ ಕಥೆ ನಮಗೆ ತಿಳಿದಿದೆ. ಹೊರಗೆ ವಿಪರೀತ ಚಳಿ, ನನ್ನ ತಲೆಯನ್ನು ಮಾತ್ರ ಗುಡಾರದಲ್ಲಿ ಇರಿಸುತ್ತೇನೆ ಎಂದ ಒಂಟೆ ಮುಂದೇನು ಮಾಡಿತು ಎಂಬುದು ನಮಗೆ ಗೊತ್ತಿದೆ. ಹಾಗೆಯೇ ಈ ಝೂ ಜೀವಿಗಳು! ಇವುಗಳನ್ನು ಸಾಕಲೇಬೇಕಾದದ್ದು ನಮ್ಮ ಅನಿವಾರ್ಯ 'ಕರ್ಮ'! ಇವನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಳ್ಳಲಿಲ್ಲವೆಂದರೆ, ನಮಗೂ ಅರಬ್ಬನ ಕಥೆಯೇ ಆಗುತ್ತದೆ. ಹಾಗಾಗಿ ನಮ್ಮ ದೇಹದಲ್ಲಿ ಒಂದು 'ರೋಗರಕ್ಷಣಾ ವ್ಯವಸ್ಥೆ' ಅಥವಾ 'ಇಮ್ಯೂನ್ ಸಿಸ್ಟಮ್' ಇರುತ್ತದೆ. ಈ ರಕ್ಷಣಾ ವ್ಯೂಹಕ್ಕೆ ಝೂನಲ್ಲಿರುವ ಎಲ್ಲ ಪ್ರಾಣಿಗಳ ಪರಿಚಯವಾಗಬೇಕು. ಪರಿಚಯವಾದರೆ, ಅವುಗಳ ಬಲಾಬಲವನ್ನು ತಿಳಿದುಕೊಂಡು, ಅವು ಹದ್ದುಮೀರಿದಾಗ, ಅವನ್ನು ನಿಗ್ರಹಿಸಬೇಕಾದ ಎಲ್ಲ ತಂತ್ರಗಳನ್ನು ಸಿದ್ಧಪಡಿಸಿಟ್ಟುಕೊಳ್ಳುತ್ತದೆ. ಈ ರೋಗರಕ್ಷಣಾ ವ್ಯವಸ್ಥೆಯ ಕಾರಣದಿಂದಲೇ ನಾವೆಲ್ಲ ನೆಮ್ಮದಿಯಿಂದ ಬದುಕಲು ಸಾಧ್ಯವಾಗಿದೆ.

5. 'ಕೆಲಸವಿಲ್ಲದಾತ ತನ್ನ ಮಗನ ಬೆನ್ನು ಕೆತ್ತಿದ' ಎಂಬ ಗಾದೆ ಮಾತನ್ನು ನಾವೆಲ್ಲ ಕೇಳಿದ್ದೇವೆ. ಈ ಗಾದೆಯು ನಮ್ಮ ರೊಗರಕ್ಷಣಾ ವ್ಯೂಹಕ್ಕೆ ಹೇಳಿ ಮಾಡಿಸಿರುವಂಥದ್ದು. ರೋಗರಕ್ಷಣಾ ವ್ಯೂಹಕ್ಕೆ ನಮ್ಮ ಒಡಲು ಝೂ ಜೀವಿಗಳ ಪರಿಚಯವು ಕಾಲಕಾಲಕ್ಕೆ ಆಗುತ್ತಿದ್ದರೆ, ಅವುಗಳನ್ನು ನಿಗ್ರಹಿಸುವ ಕುರಿತು ಸದಾ ವ್ಯಸ್ತವಾಗಿರುತ್ತವೆ. ಇಲ್ಲದಿದ್ದರೆ ಇವು ನಮ್ಮ ದೇಹದ ವಿವಿಧ ಅಂಗಗಳನ್ನೇ 'ಶತ್ರು'ಗಳೆಂದು ಭಾವಿಸಿ ಅವುಗಳ ಮೇಲೆ ಉಗ್ರ ಆಕ್ರಮಣವನ್ನು ಮಾಡಿ ಕಾಯಿಲೆಗಳನ್ನು ತರುತ್ತವೆ. ಉದಾ: ಅಸ್ತಮಾ, ರುಮಟಾಯ್ಡ್ ಆರ್ಥ್ರೈಟಿಸ್, ತೊನ್ನು, ಮಲ್ಟಿಪಲ್ ಸ್ಕ್ಲೀರೋಸಿಸ್ ಇತ್ಯಾದಿ ಕಾಯಿಲೆಗಳು ಬರುತ್ತವೆ. ಇಂಥವನ್ನು 'ಸ್ವಯಂ ವಿನಾಶಕ ರೋಗಗಳು' ಅಥವಾ 'ಆಟೋಇಮ್ಯೂನ್ ಡಿಸಾರ್ಡರ್ಸ್' ಎಂದು ಕರೆಯುತ್ತೇವೆ.

6. ಸತ್ಯಮೇವ ಜಯತೆ ಎನ್ನುವ ಮಾತು ಎಷ್ಟು ಸತ್ಯವೋ ಹಾಗೆಯೇ ಸ್ವಚ್ಛಮೇವ ಜಯತೆ ಎನ್ನುವ ಮಾತೂ ಅಷ್ಟೇ ಸತ್ಯ. ಆದರೆ ಸ್ವಚ್ಛತೆಯೂ ಸದಾ ಹಿತ-ಮಿತವಾಗಿದ್ದರೆ ಮಾತ್ರ ಅದು ಉಪಯುಕ್ತ. ಮಿತಿಮೀರಿದರೆ ಅಪಾಯಕಾರಿ. ನ್ಯೂಯಾರ್ಕ್ ನಗರದಲ್ಲಿರುವ ಹೆತ್ತವರು ತಮ್ಮ ಮಕ್ಕಳನ್ನು ಮಣ್ಣಿನಲ್ಲಿ ಆಡುವುದನ್ನು ಬಿಡಿ, ನಡೆದಾಡಲೂ ಬಿಡಲಿಲ್ಲ.

ಅಷ್ಟು ಸ್ವಚ್ಛತೆಯ ವ್ಯಸನವು ಅವರನ್ನು ಆವರಿಸಿತು. ಆಗ ಮಕ್ಕಳಲ್ಲಿ ವಿಚಿತ್ರ ನಮೂನೆಯ ಅಲರ್ಜಿ ಮತ್ತು ಅಸ್ತಮಾಗಳು ಕಂಡುಬಂದವು. ವಿಜ್ಞಾನಿಗಳು ಅಧ್ಯಯನವನ್ನು ನಡೆಸಿದರು. ಮಣ್ಣಿನಲ್ಲಿ 'ಮೈಕೋಬ್ಯಾಕ್ಟೀರಿಯಂ ವ್ಯಾಕೆ' ಎಂಬ ಬ್ಯಾಕ್ಟೀರಿಯವಿರುತ್ತದೆ. ಮಕ್ಕಳು ಮಣ್ಣಿನಲ್ಲಿ ಆಟವಾಡದ ಕಾರಣ, ಅವರು ಈ ಬ್ಯಾಕ್ಟೀರಿಯದ ಸಂಪರ್ಕಕ್ಕೆ ಬರಲಿಲ್ಲ. ಹಾಗಾಗಿ ಅವರಲ್ಲಿ ಅಪರೂಪದ ಅಲರ್ಜಿಯ ಲಕ್ಷಣಗಳು ಕಂಡುಬಂದವು. ಹಾಗಾಗಿ ಸರಕಾರವು ನ್ಯೂಯಾರ್ಕಿನ ಸೆಂಟ್ರಲ್ ಪಾರ್ಕಿನಲ್ಲಿ ರಾಶಿ ರಾಶಿ ಮರಳನ್ನು ಸುರಿದು, ವಾರಾಂತ್ಯದಲ್ಲಿ ಆ ಮರಳಿನಲ್ಲಿ ಆಟವಾಡುವಂತೆ ಮಕ್ಕಳನ್ನು ಪ್ರೇರೇಪಿಸಿತು. ಆಗ ಅವರ ಅಲರ್ಜಿಯು ಕಡಿಮೆಯಾಯಿತು. 'ಅತಿ ಸರ್ವತ್ರಮ್ ವರ್ಜಯೇತ್' ಎಂಬ ಮಾತಿಗೆ ಮತ್ತೊಮ್ಮೆ ಪುರಾವೆಯು ದೊರೆಯಿತು.

● **ಅನಾದಿಕಾಲ:** ಮಾನವ ದೇಹದ ಝೂನಲ್ಲಿರುವ ಪ್ರಾಣಿಗಳು ಮನುಷ್ಯನೊಡನೆ ತಾವೂ ವಿಕಾಸವಾಗುತ್ತ ಕೋಟ್ಯಂತರ ವರ್ಷಗಳಿಂದ ಅವನ ಒಡನಾಡಿಯಾಗಿ ಬದುಕುತ್ತಿವೆ. ಇವುಗಳ ಬಗ್ಗೆ ಜಗತ್ತಿನ ಎಲ್ಲ ಪ್ರಧಾನ ಸಂಸ್ಕೃತಿಗಳು ದಾಖಲಿಸಿವೆ. ಈಜಿಪ್ಷಿಯನ್ನರ 'ಈಬರ್ಸ್ ಪ್ಯಾಪಿರಸ್' (ಕ್ರಿ.ಪೂ.1500) ನಮ್ಮ ದೇಹದಲ್ಲಿರುವ ಹುಳುಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಬಹುಶಃ ಕ್ರಿ.ಪೂ.600ರ ಆಸುಪಾಸಿನಲ್ಲಿ ರೂಪುಗೊಂಡ ಸುಶ್ರುತ ಸಂಹಿತೆಯು ನಮ್ಮ ಒಡಲ ಝೂಗಳ ಬಗ್ಗೆ ಅದ್ಭುತ ಮಾಹಿತಿಯನ್ನು ನೀಡುತ್ತದೆ. ಮೊದಲನೆಯದು 'ರಕ್ತಜ', ನಮ್ಮ ರಕ್ತದಲ್ಲಿ ಇರುವಂಥವು. ಎರಡನೆಯದು 'ಮಲಜ', ಎಂದರೆ ನಮ್ಮ ಕರುಳಿನಲ್ಲಿ ವಾಸವಾಗಿದ್ದು ಹೆಚ್ಚುವರಿ ಹುಳುಗಳು ಮಲದ ಮೂಲಕ ಹೊರಬೀಳುವಂಥವು. ಮೂರನೆಯದು 'ಕಫಜ', ನಮ್ಮ ಮೂಗು ಮತ್ತು ಶ್ವಾಸಕೋಶಗಳಲ್ಲಿ ವಾಸಮಾಡುವಂಥವು ಹಾಗೂ ನಾಲ್ಕನೆಯದು 'ಭೂತಜ' ಅಂದರೆ ನಮ್ಮ ಬರಿಗಣ್ಣಿಗೆ ಕಾಣದೆ, ಅದೃಶ್ಯವಾಗಿ ನಮ್ಮ ದೇಹವನ್ನು ಪ್ರವೇಶಿಸಿ, ವಾಸಿಸುವಂಥವು. ಇವು ಬಹುಶಃ ಬ್ಯಾಕ್ಟೀರಿಯ, ವೈರಸ್, ಶಿಲೀಂಧ್ರ ಮುಂತಾದ ಸೂಕ್ಷ್ಮಜೀವಿಗಳೇ ಆಗಿರಬಹುದು. ಹಿಪ್ಪೋಕ್ರೇಟ್ಸ್ ಸಹ ಒಡಲ ಹುಳುಗಳು ಹಾಗೂ ಅವುಗಳನ್ನು ನಿವಾರಿಸುವ ಬಗ್ಗೆ ಬರೆದಿದ್ದಾನೆ.

● **20ನೆಯ ಶತಮಾನ:** 20ನೆಯ ಶತಮಾನದಲ್ಲಿ ಆರೋಗ್ಯ ವಿಜ್ಞಾನವು ಸರ್ವತೋಮುಖ ಪ್ರಗತಿಯನ್ನು ಕಂಡಿತು. ಅದರ ಫಲವಾಗಿ, ಸ್ವಚ್ಛತೆಗೆ ಆದ್ಯತೆಯನ್ನು ನೀಡುವುದರ ಮೂಲಕ ಅಸಂಖ್ಯ ರೋಗಗಳನ್ನು ತಡೆಗಟ್ಟಬಹುದು ಎಂಬ ವಿಚಾರವು ತಿಳಿಯಿತು. ಕುಡಿಯಲು ಸ್ವಚ್ಛನೀರು, ಒಳಚರಂಡಿ ವ್ಯವಸ್ಥೆ, ಪ್ರತಿ 6 ತಿಂಗಳಿಗೊಮ್ಮೆ ಹೊಟ್ಟೆಹುಳಕ್ಕೆ (ಇದ್ದರೂ ಸರಿ, ಇರದಿದ್ದರೂ ಸರಿ) ಔಷಧಿಗಳನ್ನು ತೆಗೆದುಕೊಳ್ಳುವ ಹವ್ಯಾಸ ಎಲ್ಲೆಡೆ ಹರಡಿತು. ಇದರಿಂದ ಕರುಳ ಹುಳುಗಳನ್ನು ಬಹುಪಾಲು ನಿವಾರಿಸಲು ಸಾಧ್ಯವಾಯಿತು. 1989ರಲ್ಲಿ ಬ್ರಿಟನ್ನಿನ ಡಾ.ಡೇವಿಡ್ ಪಿ. ಸ್ಟ್ರಾನ್ ಎನ್ನುವವನು ಅತಿ ಸ್ವಚ್ಛತೆಯಿಂದ ಅಲರ್ಜಿ, ಅಸ್ತಮ, ಎಕ್ಜಿಮ ಮುಂತಾದ ಕಾಯಿಲೆಗಳು ಹೆಚ್ಚಿವೆ ಎನ್ನುವುದನ್ನು ಆಧಾರ ಸಮೇತ ನಿರೂಪಿಸಿದ. ಜತೆಗೆ 'ಪುರಾತನ ಮಿತ್ರರ ಸಿದ್ಧಾಂತ'ವನ್ನು (ಓಲ್ಡ್ ಫ್ರೆಂಡ್ ಹೈಪಾಥೆಸಿಸ್) ಮಂಡಿಸಿದ. ಈ ಸಿದ್ಧಾಂತದ ಅನ್ವಯ, 'ನಮ್ಮ ಒಡಲು, ಸಕಾಲದಲ್ಲಿ ಹುಳುಗಳ ಸಂಪರ್ಕಕ್ಕೆ ಬಂದರೆ ಮಾತ್ರ, ನಮ್ಮ ರೋಗರಕ್ಷಣಾ ವ್ಯವಸ್ಥೆಯು ಸಮರ್ಪಕವಾಗಿ ಕೆಲಸಕ್ಕೆ ಬರುತ್ತದೆ. ಅತಿ ಸ್ವಚ್ಛತೆಯ ಕಾರಣ ಹುಳುಗಳ ಸಂಪರ್ಕಕ್ಕೆ ಬರದಿದ್ದರೆ, ರೋಗರಕ್ಷಣಾ ವ್ಯವಸ್ಥೆಯು ನಮ್ಮ ಮೇಲೆಯೇ ದಾಳಿ ಮಾಡುತ್ತದೆ' ಎಂಬ ವಿಚಾರವು ಮನದಟ್ಟಾಯಿತು.

ಈ ಹಿನ್ನೆಲೆಯಲ್ಲಿ ಸ್ವಯಂ ವಿನಾಶಕ ರೋಗಗಳಾದ ಮಲ್ಟಿಪಲ್ ಸ್ಕ್ಲೀರೋಸಿಸ್ ಮತ್ತು ರುಮಟಾಯ್ಡ್ ಆರ್ಥ್ರೈಟಿಸ್, ಅಲರ್ಜಿಯ ನಮೂನೆಗಳಾದ ಅಸ್ತಮಾ, ಎಕ್ಜಿಮ ಮತ್ತು ಆಹಾರ ಅಲರ್ಜಿಗಳು ಹಾಗೂ ಕರುಳ ಉರಿಯೂತ ರೋಗಗಳಾದ ಕ್ರಾನ್ಸ್ ಡಿಸೀಸಸ್ ಮತ್ತು ಅಲ್ಸರೇಟಿವ್ ಕೊಲೈಟಿಸ್ ಕಾಯಿಲೆಗಳಿಗೂ ಈ ಹುಳುಗಳ ಗೈರುಹಾಜರಿಗೂ ಸಂಬಂಧವಿರಬೇಕೆಂದು ವಿಜ್ಞಾನಿಗಳು ತರ್ಕಿಸಿದರು. ಹಾಗಾಗಿ ಹುಳುಗಳ ಚಿಕಿತ್ಸೆಯಿಂದ ಈ ಕಾಯಿಲೆಗಳನ್ನು ಗುಣಪಡಿಸಬಹುದೇ ಅಥವಾ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದೇ ಎನ್ನುವ ಬಗ್ಗೆ ಅಧ್ಯಯನಗಳನ್ನು ಆರಂಭಿಸಿದರು.

● **ದಿಟ್ಟ ಪ್ರಯೋಗಗಳು:** 2005ರಲ್ಲಿ ಡಾ.ಜೋಯಲ್ ವೀನ್‌ಸ್ಟಾಕ್ (1948-2022) ಸ್ವಯಂವಿನಾಶಕ ರೋಗವಾದ ಕ್ರಾನ್ಸ್ ಡಿಸೀಸ್ ಕಾಯಿಲೆಯ ಚಿಕಿತ್ಸೆಯಲ್ಲಿ, 'ಟ್ರಿಚುರೀಸ್ ಸ್ಯೂಸ್' ಎಂಬ ಹಂದಿ ಚಾವಟಿಹುಳದ ಮೊಟ್ಟೆಯನ್ನು ಬಳಸಲು ನಿರ್ಧರಿಸಿದರು. ಪ್ರತಿ ಮೂರು ವಾರಕ್ಕೆ ಒಮ್ಮೆ 2500 ಮೊಟ್ಟೆಗಳನ್ನು ನುಂಗಿಸಿದರು ಹಾಗೂ 24 ವಾರಗಳವರೆಗೆ ಮುಂದುವರಿಸಿದರು. ಶೇ.72ರಷ್ಟು ರೋಗಿಗಳ ರೋಗಲಕ್ಷಣಗಳೆಲ್ಲ ಸಂಪೂರ್ಣವಾಗಿ ಶಮನವಾದವು ಹಾಗೂ ಶೇ.62ರಷ್ಟು ರೋಗಿಗಳ ಲಕ್ಷಣಗಳು ಸುಧಾರಿಸಿದವು. ಮಕ್ಕಳು ಚಿಕ್ಕವರಾಗಿದ್ದಾಗ ಅವರ ಕರುಳಿನಲ್ಲಿ ಹುಳುಗಳು ಇರದಿದ್ದರೆ, ರೋಗರಕ್ಷಣಾ ವ್ಯೂಹಕ್ಕೆ ಅಪೂರ್ಣ ತರಬೇತಿ ದೊರೆಯುವ ಕಾರಣ, ವಯಸ್ಕರಾದಾಗ ಅವರಿಗೆ ಬಾಯಿಯಿಂದ ಗುದನಾಳದವರೆಗೆ ಕರುಳಿನ ಯಾವುದೇ ಭಾಗವನ್ನು ಉರಿಯೂತಕ್ಕೊಳಪಡಿಸಿ ನಾನಾ ರೋಗಲಕ್ಷಣಗಳನ್ನು ತೋರುತ್ತದೆ ಎಂದು, ಅತಿ ಸ್ವಚ್ಛತೆ ಅಪಾಯಕಾರಿ ಎಂದು ನಿರೂಪಿಸಿದ.

ಮಲ್ಟಿಪಲ್ ಸ್ಕ್ಲೀರೋಸಿಸ್ (ಎಂ.ಎಸ್) ಎನ್ನುವುದು ಒಂದು ಸ್ವಯಂವಿನಾಶಕ ರೋಗ. ಇದು ಮಿದುಳು ಮತ್ತು ನರಮಂಡಲವನ್ನು ಕಾಡುತ್ತದೆ. ನರಕೋಶಗಳ ಮೇಲೆ 'ಮಯಲಿನ್' ಎನ್ನುವ ಹೊದಿಕೆಯಿರುತ್ತದೆ. ನರಸಂಜ್ಞೆಗಳು ಒಂದು ನರಕೋಶದಿಂದ ಮತ್ತೊಂದು ನರಕೋಶಕ್ಕೆ ಸಾಗಲು ಮಯಲಿನ್ ಶೀತ್ ಆರೋಗ್ಯಕರವಾಗಿರಬೇಕು. ಆದರೆ ರೋಗರಕ್ಷಣಾ ವ್ಯೂಹವು ಮಯಲಿನ್ ಹೊದಿಕೆಯನ್ನು 'ಅಪಾಯಕಾರಿ' ವಸ್ತು ಎಂದು ಪರಿಗಣಿಸಿ, ಅದನ್ನು ನಾಶಪಡಿಸುತ್ತದೆ. ಆಗ ವ್ಯಕ್ತಿಯ ಎಲ್ಲ ಕೆಲಸಗಳು ಮಂದವಾಗುತ್ತವೆ.

ಡಾ.ಜಾರ್ಜ್ ಕೊರಿಲೇಟ್ ಅರ್ಜೆಂಟೀನ ದೇಶದ ಓರ್ವ ನರವೈದ್ಯ. ಈತ 24 ಎಂ.ಎಸ್ ರೋಗಿಗಳನ್ನು ಆಯ್ಕೆ ಮಾಡಿಕೊಂಡ. ಅವರಲ್ಲಿ 12 ಜನರ ಕರುಳಿನಲ್ಲಿ ಸಹಜವಾಗಿ ಹುಳುಗಳಿದ್ದವು (ಚಾವಟಿಹುಳ, ಲಾಡಿಹುಳ, ಜಂತುಹುಳ, ದಾರದ ಹುಳ ಮತ್ತು ಶಿಸ್ಟೋಸೋಮ ಎಂಬ ರಕ್ತಪರೋಪಜೀವಿ). ಉಳಿದ 12 ಜನರ ಕರುಳಿನಲ್ಲಿ ಯಾವುದೇ ಹುಳುಗಳಿರಲಿಲ್ಲ. ಈ ಎರಡೂ ಗುಂಪಿನವರನ್ನು 5 ವರ್ಷಗಳ ಕಾಲ ಅಧ್ಯಯನ ಮಾಡಿದರು. ಹುಳುಗಳಿದ್ದವರಲ್ಲಿ ರೋಗಲಕ್ಷಣಗಳು ಕಡಿಮೆಯಾದವು. ಕಾಯಿಲೆ ಸ್ಥಗಿತವಾಗಿತ್ತು. ಎಂ.ಆರ್.ಐ ಪರೀಕ್ಷೆಗಳಲ್ಲಿ ಕರುಳುಹುಣ್ಣು ಕಡಿಮೆಯಾಗಿರುವುದು ತಿಳಿಯಿತು. ರೋಗರಕ್ಷಣಾ ವ್ಯವಸ್ಥೆಯ ಟಿ-ರೆಗ್ಯುಲೇಟರಿ ಸೆಲ್ಸ್, ಐಎಲ್-10, ಟಿಜಿಎಫ್-ಬೀಟ ಇತ್ಯಾದಿ ರಾಸಾಯನಿಕಗಳ ಸುಧಾರಣೆಯ ಕಾರಣ ಮೇಲಿನ ಗುಣಕಾರಿ ಲಕ್ಷಣಗಳು ಕಂಡುಬಂದಿದ್ದವು. ಇಂಥ ಗುಣಕಾರಿ ಲಕ್ಷಣಗಳು ಹುಳುಗಳಿಲ್ಲದ 12 ಎಂ.ಎಸ್.ರೋಗಿಗಳಲ್ಲಿ ಕಂಡುಬರಲಿಲ್ಲ. ಗುಣಕಾರಿ ರೋಗಲಕ್ಷಣಗಳನ್ನು ತೋರಿದ 12 ರೋಗಿಗಳಲ್ಲಿ ನಾಲ್ವರು ರೋಗಿಗಳಿಗೆ ಜಂತುನಾಶಕ ಔಷಧಗಳನ್ನು ನೀಡಿದಾಗ, ಅವರ ಕರುಳ ಹುಳುಗಳೆಲ್ಲ ನಾಶವಾದವು. ಆಗ ಆ ನಾಲ್ವರಲ್ಲಿ ಎಂ.ಎಸ್. ರೋಗಲಕ್ಷಣಗಳು ಒಂದೊಂದಾಗಿ ಕಾಣಿಸಿಕೊಂಡವು.

● **ಸಾರಾಂಶ:** ಮಾನವನ ಒಡಲಿನ ಝೂ ಅನಾದಿಕಾಲದ್ದು. ಅವನ್ನು ಸಂಪೂರ್ಣ ನಿರ್ನಾಮ ಮಾಡಬಾರದು. ಅತಿ ಸ್ವಚ್ಛತೆ ಅಪಾಯಕಾರಿ. ಹುಳುಗಳ ಚಿಕಿತ್ಸೆ ಭರವಸೆದಾಯಕವಾಗಿದ್ದರೂ ಅಮೆರಿಕದ ಎಫ್‌ಡಿಎ ಇದಕ್ಕೆ ಅನುಮತಿಯನ್ನು ನೀಡಿಲ್ಲ. ಆಸ್ಟ್ರೇಲಿಯಾ, ಜರ್ಮನಿ, ಮೆಕ್ಸಿಕೊ, ಅರ್ಜೆಂಟೀನ, ಯುಕೆ, ಅಮೆರಿಕಗಳಲ್ಲಿ ಇಂಥ ಚಿಕಿತ್ಸೆಗಳು ನಡೆದಿವೆ. ಅವನ್ನು ಪ್ರಾಯೋಗಿಕ ಚಿಕಿತ್ಸೆ (ಎಕ್ಸ್‌ಪರಿಮೆಂಟಲ್ ಥೆರಪಿ) ಎಂದು ಪರಿಗಣಿಸಿದ್ದಾರೆಯೇ ಹೊರತು ಪ್ರಮಾಣಬದ್ಧ ಚಿಕಿತ್ಸೆ ಎಂದು ಪರಿಗಣಿಸಿಲ್ಲ. ಆದರೂ ಆಟಿಸಂ, ಡಯಾಬಿಟಿಸ್-ಟೈಪ್ 1, ಡಿಪ್ರೆಶನ್ ಅಂಡ್ ಆಂಕ್ಸೈಟಿ, ಸೋರಿಯಾಸಿಸ್, ಏಟೋಪಿಕ್ ಡರ್ಮಟೈಟಿಸ್ ಮುಂತಾದ ರೋಗಗಳನ್ನು ಹುಳುಚಿಕಿತ್ಸೆಯಿಂದ ನಿಗ್ರಹಿಸಬಹುದೇ ಎನ್ನುವ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ.

ಇದುವರೆಗೂ ನಡೆದ ಹುಳುಗಳ ಚಿಕಿತ್ಸೆಯಿಂದ ಒಂದು ಹೊಸ ಸಂಶೋಧನೆಯು ಆರಂಭವಾಗಿದೆ. ಹುಳುಗಳ ಒಡಲಿನ ಯಾವ ರಾಸಾಯನಿಕ ಅಂಶವು ನಮ್ಮ ರೋಗರಕ್ಷಣಾ ವ್ಯೂಹವನ್ನು ಜಾಗೃತಗೊಳಿಸುತ್ತದೆ ಎನ್ನುವುದನ್ನು ತಿಳಿದು, ಅವನ್ನು ಕೃತಕವಾಗಿ ತಯಾರಿಸಿ, ಔಷಧರೂಪದಲ್ಲಿ ಬಳಸುವ ಪ್ರಯತ್ನಗಳು ಆರಂಭವಾಗಿವೆ. ಅಲ್ಲಿಯವರೆಗೆ ಝೂ ಜೀವಿಗಳೊಡನೆ ಹೊಂದಿಕೊಂಡು ಬದುಕುವುದು ಅನಿವಾರ್ಯವಾಗಿದೆ.

ಆಧ್ಯಾತ್ಮಿಕ ವೀರಶೈವ ಬಸವಣ್ಣನನ್ನು ನಿರೂಪಿಸಬೇಕಿದೆ

ಬಸವ ಮಂಟಪ

ರವಿ ಹಂಜ್
vveditoped@gmail.com

ವರ್ತಮಾನದಲ್ಲಿ ವೀರಶೈವ ಮಹಾಸಭಾದ ಶಂಕರ್ ಬಿದರಿ ಅವರು, 'ಬಸವ ಜಯಂತಿಯಂದು ಲಿಂಗವಂತ ವೀರಶೈವರ ಆದ್ಯಪುರುಷರಾದ ರೇಣುಕಾಚಾರ್ಯರ ಫೋಟೋವನ್ನು ಸಹ ಜತೆಗಿಟ್ಟು ಆಚರಿಸಿ' ಎಂದು ತಮ್ಮ ಮಹಾಸಭಾದ ಶಾಖೆಗಳಿಗೆ ಕೇಳಿಕೊಂಡಿರುವುದನ್ನು ಲಿಂಗಾಹತ ಮಹಾಸಭಿಕರು ಉಗ್ರವಾಗಿ ಬಸವಣ್ಣ ಐತಿಹಾಸಿಕ, ರೇಣುಕಾಚಾರ್ಯ ಪೌರಾಣಿಕ ಎಂಬ ಅಭಿಯಾನ ಆರಂಭಿಸಿದ್ದಾರೆ! ಈ ಹಿನ್ನೆಲೆಯಲ್ಲಿ ಮೇಲಿನ ಎಲ್ಲಾ ವಾಸ್ತವಿಕ ಆಯಾಮದಲ್ಲಿ ನಿಸ್ಸಂಶಯವಾಗಿ ಬಸವಣ್ಣ ಪೌರಾಣಿಕ ವ್ಯಕ್ತಿ ಎನಿಸುತ್ತಾನೆ. ಇನ್ನು ರೇಣುಕಾಚಾರ್ಯರು ಪೌರಾಣಿಕವೇ?!

★★★

ಕಲ್ಲಿನ ಲಿಂಗದಿಂದ ಉದ್ಭವಿಸಿದ ರೇಣುಕಾಚಾರ್ಯರು ಪೌರಾಣಿಕ ಎನ್ನುವುದು ಮೇಲೆ ಹೇಳಿದ ರೀತಿಯಲ್ಲಿ ಮಹಾಮಹಿಮ ಸಾಧಕರನ್ನು 'ಅವತಾರ ಪುರುಷರು' ಎಂದು ವ್ಯಾಖ್ಯಾನಿಸುವ ಜಾಗತಿಕ ಮಾನವ ಪ್ರವೃತ್ತಿಯ ಹಿನ್ನೆಲೆಯಲ್ಲಿ ಸೃಜಿಸಿದ ಪುರಾಣವಾಗಿದೆ. ಅಂದರೆ ಅಂಥ ಸಾಧಕರು ಇರಲೇ ಇಲ್ಲ ಎನ್ನಲಾಗದು. ಏಕೆಂದರೆ ಐತಿಹಾಸಿಕ ಶಿಲಾಸ್ತಂಭಗಳಲ್ಲಿ ಲಿಂಗದಿಂದ ಅವತಾರ ಪುರುಷರು ಉದ್ಭವಿಸುವ ಲಿಂಗೋದ್ಭವ ಮೂರ್ತಿಗಳು ಭಾರತದ ತುಂಬೆಲ್ಲಾ ಇವೆ. ಭಾರತೀಯ ಪುರಾತತ್ವ ಇಲಾಖೆ ಪ್ರಮಾಣಿಸಿದ ಒಂದನೇ ಶತಮಾನದ ಗುಡಿಲಿಂಗಮಲ್ಲ, 2ನೇ ಶತಮಾನದ ಕುಶಾಣರು ಆರಾಧಿಸುತ್ತಿದ್ದ ಲಿಂಗೋದ್ಭವ ಮೂರ್ತಿ, 8ನೇ ಶತಮಾನದ ಪಟ್ಟದಕಲ್ಲಿನಲ್ಲಿರುವ ಲಿಂಗೋದ್ಭವ ಮೂರ್ತಿ, 9ನೇ ಶತಮಾನದ ಚೋಳರ ಲಿಂಗೋದ್ಭವಮೂರ್ತಿ ಅಂಥ ಕೆಲವು ಉಲ್ಲೇಖನೀಯ ಶಿಲ್ಪಗಳು. ತೈಮೂರ್, ಘಜ್ನಿ, ಘೋರಿ, ಖಿಲ್ಜಿ, ತುಘಲಕ್, ಔರಂಗಜೇಬರ ದಾಳಿ ಮತ್ತು ದಬ್ಬಾಳಿಕೆಯ ಆಡಳಿತದಲ್ಲಿ ನಾಶವಾದ ಪಟ್ಟಣ, ಕಟ್ಟಡಗಳ ನಡುವೆ ಈ ಲಿಂಗೋದ್ಭವ ಶಿಲ್ಪಗಳಲ್ಲದೆ ಅನೇಕ ಇತರೆ ಪಳೆಯುಳಿಕೆಗಳು ಈಗಲೂ ಇವೆ. ಆದರೆ ಕಲ್ಯಾಣದಲ್ಲಿ ಬಸವಣ್ಣನ ಕುರುಹುಗಳೇಕೆ ಇಲ್ಲ? ಬಿಜ್ಜಳ ಪುತ್ರ ಸೋವೇಶ ಈ ಎಲ್ಲಾ ದಾಳಿಕೋರರಿಗಿಂತ ಉಗ್ರವಾಗಿ ತನ್ನದೇ ಪಟ್ಟಣವನ್ನು ಖುದ್ದು ತಾನೇ ನಾಶಮಾಡಿಕೊಂಡನೇ?! ಸಾಮಾನ್ಯವಾಗಿ ರಾಜದ್ರೋಹಿಗಳ ಆಸ್ತಿ ಮುಟ್ಟುಗೋಲು ಮಾಡಿಕೊಂಡು ಅವರನ್ನು ಕೊಲ್ಲುತ್ತಾರೆಯೇ ಹೊರತು ಅವರ ಆಸ್ತಿಗಳ ಲವಲೇಶದ ಕುರುಹೂ ಇಲ್ಲದಂತೆ ನಾಶಮಾಡಲು ಸಾಧ್ಯವೇ ಎಂಬುದು ತಾರ್ಕಿಕ ಪರಾಮರ್ಶನ ಜಿಜ್ಞಾಸೆ. ರೇಣುಕರ ಲಿಂಗೋದ್ಭವದ ಶಿಲ್ಪಗಳ ಹಾಜರಿ ಮತ್ತು ಬಸವಣ್ಣನ ಐತಿಹಾಸಿಕ ಪುರಾವೆಗಳ ಗೈರು ಏನೆನ್ನುತ್ತದೆ? ಒಬ್ಬರನ್ನು ಸಂತ ಎಂದು ಘೋಷಿಸಲು ವ್ಯಾಟಿಕನ್ ಚರ್ಚು ಮಾಪಕಗಳನ್ನು ರೂಪಿಸಿದಂತೆ ಆಯಾಯ ಹಿಂದೂ ಸಂಸ್ಕೃತಿಯಲ್ಲಿ ಸಹ ಸಾಧನೆಗೈದ ವ್ಯಕ್ತಿಗಳನ್ನು ಅವರವರ ಸಾಧನೆಗೆ ತಕ್ಕಂತೆ ದೇವರು, ಅವತಾರ ಪುರುಷ, ಮಹಾಮಹಿಮ, ಶಾಪಗ್ರಸ್ತ ಗಣ, ಶಾಪಗ್ರಸ್ತ ಯಕ್ಷಿ ಇತ್ಯಾದಿ ಶ್ರೇಣಿಗಳು ಇದ್ದವೆನಿಸುತ್ತದೆ. ಅದಕ್ಕೆ ತಕ್ಕಂತೆ ಸ್ಮಾರಕಗಳು ಸಹ. ಹಾಗಾಗಿಯೇ ರೇಣುಕರನ್ನು ಅವತಾರ ಪುರುಷರು ಎಂದೂ, ಬಸವಣ್ಣನನ್ನು ಶಾಪಗ್ರಸ್ತ ಗಣ ಎಂದೂ ವರ್ಣಿಸಿರುವುದು. ಈ ತಾರ್ಕಿಕ ಹಿನ್ನೆಲೆಯಲ್ಲಿ ಸಹ ಸಾಧನೆಗೆ ಹಿಡಿದ ಮಾಪಕದಂತೆ ರೇಣುಕರು 'ಅವತಾರ ಪುರುಷರು' ಮತ್ತು ಬಸವಣ್ಣನು 'ಭಕ್ತಿ ಭಂಡಾರಿ' ಎನಿಸುತ್ತದೆ. ಈ ರೀತಿಯ ಒಂದು ಶ್ರೇಣೀಕರಣ ಈಗಲೂ ವೀರಶೈವ ಗುರು ವಿರಕ್ತ ಪೀಠಗಳ ಮಠಗಳಲ್ಲಿಯೂ ಇದೆ. ಆದರೂ ಕಟ್ಟಕಡೆಯ ಮಠದ ಪೀಠಿಯೂ ಜಗದ್ಗುರು ಎಂದೇ ಸ್ವಘೋಷಿಸಿಕೊಳ್ಳುತ್ತಾರೆ ಎಂಬುದು ಮತ್ತೊಂದು ಉಪಕತೆಯಾಗುತ್ತದೆ.

''ಸಾಮಾನ್ಯವಾಗಿ ಒಂದು ಸಂಸ್ಕೃತಿಯು ಸಾಮಾಜಿಕವಾಗಿ ತನ್ನ ನಂಬಿಕೆ, ಮೌಲ್ಯಗಳಿಗನುಗುಣವಾಗಿ ಬಹುಮತದಿಂದ ಒಪ್ಪಿದ ಪ್ರಮುಖ ಐತಿಹಾಸಿಕ ಘಟನೆಗಳನ್ನು, ವ್ಯಕ್ತಿಗಳನ್ನು ಸಾಂಕೇತಿಕವಾಗಿ ಶ್ರೇಣೀಕರಿಸಿ ಪ್ರತಿನಿಧಿಗಳಾಗಿ ರೂಪಾಂತರಿಸಿ ಪ್ರತಿಬಿಂಬಿಸುವ ಸಾಕಾರ ರೂಪವೇ ಪೌರಾಣಿಕ ಕಥೆ'' ಎಂದು ಜಾಗತಿಕವಾಗಿ ಸಾಂಸ್ಕೃತಿಕ ಅಧ್ಯಯನದ ಸಂಶೋಧಕರು ಭಾರತದ ಪುರಾಣಗಳನ್ನೂ ಸೇರಿಸಿಕೊಂಡು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಪೌರಾಣಿಕ ಕಥೆಗಳಿಗೆ ತಾಳೆಯಾಗುವಂಥ ಉತ್ಖನನ, ಐತಿಹಾಸಿಕ ದಾಖಲೆಯ ಪುರಾವೆಗಳು ಸಿಕ್ಕರೆ ಆಗ ಈ ಪೌರಾಣಿಕಗಳಿಗೆ ಐತಿಹಾಸಿಕ ಮೌಲ್ಯ ಬರುತ್ತದೆ. ಹಾಗಾಗಿ ಜಾಗತಿಕ ಮಾನವಿಕ ಪ್ರವೃತ್ತಿಯ ಅನ್ವಯ ಆಗಿಹೋದ ಮಹಾಮಹಿಮ ಸಾಧಕರನ್ನು ದೈವತ್ವಕ್ಕೇರಿಸಿ ಪೂಜಿಸುವ ಪರಿಪಾಠದ ಹಿನ್ನೆಲೆಯಲ್ಲಿ ಸಹ ರೇಣುಕರನ್ನು ಪೌರಾಣಿಕವಾಗಿ ಲಿಂಗೋದ್ಭವರು ಎನ್ನಲಾಗಿದೆ. ಅದಕ್ಕೆ ತಕ್ಕಂತೆ ಉತ್ಖನನ ಪುರಾವೆಯಾಗಿ ಮೇಲೆ ತಿಳಿಸಿದ ಲಿಂಗೋದ್ಭವ ಮೂರ್ತಿಗಳಿವೆ. ಅಲ್ಲಿಗೆ ಯಾರು ಐತಿಹಾಸಿಕ, ಯಾರು ಪುರಾತನ ಎಂಬುದನ್ನು ನೀವೇ ನಿರ್ಧರಿಸಿ. ಏಕೆಂದರೆ ಈ ವ್ಯತ್ಯಾಸವು ಬಸವಣ್ಣನ, 'ನುಡಿದಡೆ ಮುತ್ತಿನ ಹಾರದಂತಿರಬೇಕು. ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು. ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು. ನುಡಿದಡೆ ಲಿಂಗ ಮೆಚ್ಚಿ ಅಹುದಹುದನಬೇಕು. ನುಡಿಯೊಳಗಾಗಿ ನಡೆಯದಿದ್ದಡೆ, ಕೂಡಲಸಂಗಮದೇವನೆಂತೊಲಿವನಯ್ಯಾ' ವಚನದಷ್ಟೇ ಸುಸ್ಪಷ್ಟ ಮತ್ತು ಖಚಿತ!

ಇನ್ನು ಎಲ್ಲಾ ಸಂಶೋಧಕರು ಬಸವಣ್ಣನ ಚಿತ್ರಣವನ್ನು ವಚನಗಳ ಆಧರಿತ 'ಶೂನ್ಯ ಸಂಪಾದನೆ'ಯ ತಿದ್ದಿದ ತೀಡಿದ ಪರಿಷ್ಕೃತ ಭಾಗದಂತೆ ಏಕಮುಖವಾಗಿಯೇ ಕಟ್ಟಿಕೊಟ್ಟಿದ್ದಾರೆ. ''ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ'' ಎನ್ನುವ ಬಸವನುಡಿಗಳ ಕಟ್ಟಾನುಯಾಯಿಗಳಾಗಿ ಮತಾಂಧರಂತೆ ತಮ್ಮ ಎಲ್ಲಾ ವಿಶ್ಲೇಷಣೆಯಲ್ಲಿ ತರ್ಕಶಾಸ್ತ್ರಕ್ಕೆ ನಿಗಳವನಿಕ್ಕಿದ್ದಾರೆ. ಈ ಎಲ್ಲಾ ಸಂಶೋಧಕರೂ ತರ್ಕದ ಒರೆಗೆ ಬಸವಣ್ಣನನ್ನು ಹಚ್ಚಿದ್ದರೆ ಬಸವಣ್ಣ ಕೇವಲ ಒಂದು ಪಂಥದ ನಾಯಕನಾಗದೆ ವಿಶ್ವಮಾನವ ಸಂಸ್ಕೃತಿಯ ಪ್ರತೀಕವಾಗುತ್ತಿದ್ದ. ಸಿಡಿದೇಳುವ ಪ್ರವೃತ್ತಿಯ ವಚನಕಾರರ ವಚನಗಳು ಮೂಲತಃ ತರ್ಕ, ವಿಡಂಬನೆ, ಶ್ಲೇಷೆಯ ಆದಿಗ್ರಂಥಗಳೆನ್ನಬಹುದು. ಹಾಗಾಗಿಯೇ ಈ ಎಲ್ಲಾ ವಚನಗಳ ಕೊಂಚವೇ ಕೊಂಚ ಆಳಕ್ಕಿಳಿದು ನೋಡಿದಾಗ ಅವುಗಳಲ್ಲಿನ ಸತ್ಯದ ಹೊಳಹು ದೇದೀಪ್ಯಮಾನವಾಗಿ ಗೋಚರಿಸುತ್ತದೆ. ''ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯಾ. ಮಹಾದಾನಿ ಕೂಡಲಸಂಗಮದೇವಾ, ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ'' ಎಂಬುವ ವಚನದ ಆಳಕ್ಕಿಳಿದು ನೋಡಿದಾಗ ಗೋಚರಿಸುವ ಹೊಳಹೇ ಬೇರೆ. ಶಾಸ್ತ್ರ (ವಿಜ್ಞಾನ)ಗಳ ಪರಿಣಿತನು, ವೇದಾಗಮಗಳ ಪಂಡಿತನು, ತರ್ಕದ ಮೂರ್ತವೇ ಆಗಿದ್ದನೆನ್ನುವ ಬಸವಣ್ಣನ ಈ ವಚನವನ್ನು ಇಂದು ಜನಜನಿತವಾಗಿರುವ ತೇಲರ್ಥದಲ್ಲಿ ತಲೆಮಾಸಿ ನಿರೂಪಿಸಿರುವುದು ಬಸವಣ್ಣನಿಗೆ ಮಾಡಿದ ಮಹಾದ್ರೋಹ. ಇಂದಿನ ಬಹುಪಾಲು ವ್ಯಾಖ್ಯಾನಗಳು ವಚನಗಳಲ್ಲಿನ ತರ್ಕ, ವಿಡಂಬನೆ, ಟೀಕೆ, ವಿಮರ್ಶೆಗಳನ್ನೆಲ್ಲಾ ನಿಶ್ಶೂನ್ಯವಾಗಿಸಿವೆ. ಹಾಗಾಗಿಯೇ ಕಮ್ಯುನಿಸ್ಟ್ ಪ್ರಣೀತ ವ್ಯಾಖ್ಯಾನಕಾರರು ವಚನಗಳ ಆಧಾರವಾಗಿ ನಿರೂಪಿಸಿರುವ ಬಸವಣ್ಣನ ವ್ಯಕ್ತಿತ್ವವು ಸಂಕುಚಿತವೂ, ಪರಮತ ಅಸಹಿಷ್ಣುವೂ, ಸೃಜನಶೀಲವೂ ಎನಿಸಿ ವಾಸ್ತವಿಕ ಬಸವಣ್ಣ ನಿಶ್ಶೂನ್ಯವಾಗಿದ್ದಾನೆ.

ಅಕ್ಷತ ಯೋನಿಯಿಂದ ಯಾವುದೇ ಪುರುಷ ಸಂಪರ್ಕವಿಲ್ಲದೆ ಮಕ್ಕಳು ಹುಟ್ಟುತ್ತವೆಯೇ? ಹಾಗಾಗಿ ಹಾಗೆ ಹುಟ್ಟಿದ ಕ್ರಿಸ್ತನ ಜನ್ಮಾಧರಿತ ಕ್ರಿಸ್ತಪೂರ್ವ, ಕ್ರಿಸ್ತಶಕ ಎನ್ನುವ ಗ್ರೆಗೋರಿಯನ್ ಕ್ಯಾಲೆಂಡರ್ ಬಳಸಬೇಡಿ ಎಂದು ಕರೆ ನೀಡುವುದು ಎಷ್ಟು ಮೂರ್ಖತನವೋ ಅಷ್ಟೇ ಮೂರ್ಖತನ- ವಿಶ್ಲೇಷಣಾರಹಿತವಾಗಿ ಭಕ್ತಿಲೋಲುಪ್ತ ಸಾಂಕೇತಿಕ ಲಿಂಗೋದ್ಭವವನ್ನು ನಿರಾಕರಿಸುವುದು, ವಚನಕಾರ ಸಿದ್ಧರಾಮೇಶ್ವರನು ಕೊಂಡಕ್ಕೆ ಹಾರುವಾಗ ಸಾಕ್ಷಾತ್ ಶಿವನೇ ಅವನ ಕೈಹಿಡಿದು ಉಳಿಸಿದನು ಎನ್ನುವುದು, ಖುದ್ದು ನೀಲಮ್ಮನೂ ಬಸವಣ್ಣನು ಪವಾಡಗಳನ್ನು ಮಾಡಿದನು ಎನ್ನುವ ಭಕ್ತಿಲೋಲುಪ್ತತೆಯ ಪ್ರಕ್ಷಿಪ್ತ ವಚನವನ್ನು ಭಜಿಸುವುದು, ಮಾತೆ ಮಹಾದೇವಿಯು ಖುದ್ದು ಬಸವಣ್ಣನೇ ತನ್ನ ಕನಸಲ್ಲಿ ಬಂದು, ''ತಾಯೇ ಜನನಿ ಜಗನ್ಮಾತೆ, ನನ್ನ ಅಂಕಿತವನ್ನು 'ಲಿಂಗಾನಂದ' ಎಂದು ತಿದ್ದು'' ಎಂಬ ಪವಾಡವನ್ನು ಅಪ್ಪಿ ಒಪ್ಪಿರುವುದು, ಮೈಸೂರಿನ ಚಾಮುಂಡಿಯ ದೈವತ್ವವನ್ನು, ಮಹಿಷಾಸುರನ ದೇವತ್ವವನ್ನು ಐತಿಹಾಸಿಕ ಎಂದು ಪ್ರಮಾಣಿಸುತ್ತಿರುವುದು- ಎಲ್ಲವೂ ಇಬ್ಬಗೆಯ ಲಿಂಗಸಂಸ್ಕಾರವಿಲ್ಲದ ಕಮ್ಯುನಿಸ್ಟ್-ಪ್ರಣೀತ ಲಿಂಗಾಹತಿಗಳ ಇಬ್ಬಗೆಯ ಕೆಲವು ಸಾಂಸ್ಕೃತಿಕ ಸಂಶೋಧನಾ ಉದಾಹರಣೆಗಳು.

ಒಟ್ಟಾರೆ ಪೌರಾಣಿಕವೋ ಐತಿಹಾಸಿಕವೋ, ರಾಷ್ಟ್ರೀಯವಾಗಿ ಸೃಜನಶೀಲ ರಾಮನನ್ನು ಭಾರತೀಯ ಸಮಾಜ ಅಪ್ಪಿ ಒಪ್ಪಿರುವ ಹಿನ್ನೆಲೆಯಲ್ಲಿ ಬಸವಣ್ಣನೂ ಒಪ್ಪಿತವೇ ಆಗಬೇಕು. ಏಕೆಂದರೆ ಮೂರ್ತರೂಪದ ಇಂಥ ಒಂದು ಅಮೂರ್ತ ಆದರ್ಶವು ಜಗತ್ತಿನ ಪ್ರತಿಯೊಬ್ಬ ಮನುಷ್ಯಜೀವಿಗೆ ಮಾದರಿಯಾಗಲೇಬೇಕು. ರಾಮನು 'ಮರ್ಯಾದಾ ಪುರುಷೋತ್ತಮ' ಎನಿಸಿದರೆ ಬಸವಣ್ಣನು 'ಸಾಂಸ್ಕೃತಿಕ ಪುರುಷೋತ್ತಮ.' ಮಾನವ ಧರ್ಮಕ್ಕೆ ಜಯವಾಗಲಿ ಎಂಬ ವೀರಶೈವ ಲಿಂಗವಂತ ಮಾನವ ಧರ್ಮದ ಆಚಾರವಂತ ತತ್ವವನ್ನು ವಿಚಾರವಂತನಾಗಿ ಸಮಾನತೆಯನ್ನು ಮೆರೆಸಿದವನು ಭಕ್ತಿ ಭಂಡಾರಿ ಬಸವಣ್ಣ! ಹಾಗಾಗಿಯೇ ಈತ ಕೇವಲ ಕರ್ನಾಟಕದ ಸಾಂಸ್ಕೃತಿಕ ಪ್ರತೀಕವಲ್ಲದೆ ಇಡೀ ಮಾನವಕುಲದ ಸಾಂಸ್ಕೃತಿಕ ಪ್ರತೀಕವೇ ಎನಿಸಿದ್ದಾನೆ. ಆದರೆ ಅವನನ್ನು ನಿರೂಪಿಸುವಲ್ಲಿ ಕರ್ನಾಟಕದ ಪೂರ್ವಗ್ರಹಿ ಸಾಂಸ್ಕೃತಿಕ ಸಂಶೋಧನಾ ವಲಯ ದಾರುಣವಾಗಿ ಸೋತಿದೆ. ತಾರ್ಕಿಕವಾಗಿ ವಾಸ್ತವಿಕ ಹೊಳಹುಗಳನ್ನು ಎತ್ತಿಹಿಡಿಯುವ ಕೆಲವೇ ಕೆಲವು ಸಂಶೋಧಕರನ್ನು ಕೂಪಮಂಡೂಕ ಸಂಶೋಧಿಗ ಲಿಂಗಾಹತಿಗಳು ಗುಂಪುಗೂಡಿ ಸೈದ್ಧಾಂತಿಕ ಮಾಫಿಯಾ ರೂಪಿಸಿ ಗೌಣವಾಗಿಸುವಲ್ಲಿ ನಿರತರಾಗಿದ್ದಾರೆ.

ಭಾಗ-2

ಉದಾಹರಣೆಗೆ, ಹಿರಿಯ ಸಂಶೋಧಕರಾದ ಪ್ರೊ.ಸಂಗಮೇಶ ಸವದತ್ತಿಮಠರು, ''ವಚನಗಳು 12ನೇ ಶತಮಾನದವೇ ಇರಬೇಕು ಎಂದು ಭಾಷಾದೃಷ್ಟಿಯಿಂದ ನೋಡಿದಾಗ ಕೆಲ ಎಳೆಗಳು ಸಿಗುತ್ತವೆ. ಉದಾಹರಣೆಗೆ ಅಕ್ಕಮಹಾದೇವಿಯ ವಚನಗಳಲ್ಲಿ ಶಕಟ ರೇಫ್ ಬಳಕೆ ಆಗಿದೆ. ಆ ವರ್ಣವು 12ನೇ ಶತಮಾನದ ನಂತರ ನಿಂತುಹೋಗಿದೆ. ಆ ಕಾಲದ ಕೆಲವು ಶಬ್ದ ಪ್ರಯೋಗಗಳು ವಚನಗಳಲ್ಲಿದ್ದರೂ ಅವುಗಳ ಸಂಖ್ಯೆ ಕಡಿಮೆ ಇದ್ದು ವಚನಗಳ ತುಂಬ ಮಧ್ಯಕಾಲೀನ ಕನ್ನಡ ಬಳಕೆ ಆಗಿದೆ. ಈ ಕುರಿತು ಸಂಶೋಧನೆಗಳೂ ಆಗಿವೆ. ವಿಚಾರ ಸಂಕಿರಣಗಳೂ ಆಗಿವೆ. ಈ ಬಗ್ಗೆ ಹೆಚ್ಚಿನ ಸಂಶೋಧನೆಗಳು ಆದರೆ ತಾರ್ಕಿಕವಾಗಿ ವಚನಗಳನ್ನು 12ನೇ ಶತಮಾನದವೆಂಬ ಖಚಿತತೆಯನ್ನು ತರಬಹುದು'' ಎನ್ನುತ್ತಾರೆ. ಆದರೆ ಜಾತಿಯ ಕಾರಣ ಇವರ ಎಲ್ಲಾ ಸಂಶೋಧನೆಗಳನ್ನು ಜನಾಂಗೀಯ ದ್ವೇಷದ ಲಿಂಗಾಹತಿಗಳು ಗೌಣವಾಗಿಸುತ್ತಾರೆ. ಅದೇ ರೀತಿ ಇನ್ನೊಂದು ವಾಸ್ತವಿಕ ಹೊಳಹು ಎಂದರೆ ಬಸವಣ್ಣನು ಆತ್ಮಹತ್ಯೆ ಮಾಡಿಕೊಂಡಿರದೆ ತನ್ನದೇ ಶರಣ ಪಡೆಯ ಅಪ್ರಾಮಾಣಿಕರ ಕುತಂತ್ರಕ್ಕೆ ಬಲಿಯಾಗಿರಬಹುದು ಎನ್ನುವುದು! ತುರುಗಾಹಿ ರಾಮಣ್ಣನ ವಚನ ಈ ಬಗ್ಗೆ ಹೊಳಹು ನೀಡುತ್ತದೆ: ''ಬಂದಿತ್ತು ದಿನ ಬಸವಣ್ಣ ಕಲ್ಲಿಗೆ ಚನ್ನಬಸವಣ್ಣ ಉಳುವೆಯಲ್ಲಿಗೆ ಪ್ರಭು ಅಕ್ಕ ಕದಳಿದ್ವಾರಕ್ಕೆ ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ ನಾ ತುರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ ಅಡಗಿಹರೆಲ್ಲರು ಅಡಗಿದುದ ಕೇಳಿ ನಾ ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೆ ಉಡುಗುವೆನು''- ಇಲ್ಲಿ 'ಕಲ್ಲಿಗೆ' ಎಂದರೆ ನಾನೂ ಸೇರಿದಂತೆ ಹಲವರು ಸಮಾಧಿಗೆ ಎಂದು ಅರ್ಥೈಸಿದ್ದಾರೆ. ಆದರೆ 'ಕಲ್ಲಿಗೆ' ಎಂಬುದು ಬಲೆ/ಜಾಲ ಎಂಬ ಅರ್ಥವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಬಸವಣ್ಣನ ಅತೃಪ್ತ ಸಹವರ್ತಿಗಳು ಸೋವೇಶನ ಸೈನ್ಯದ ಜತೆಗೋ ರಾಯಮುರಾರಿಯ ಜತೆಗೋ ಕೈಜೋಡಿಸಿ ಹತ್ಯೆ ಮಾಡಿಸಿರಲೂಬಹುದು. ಅಥವಾ ಮೀನಿನ ಬಲೆಯಲ್ಲಿ ಸಿಲುಕಿಸಿ ಮುಳುಗಿಸಿರಲೂಬಹುದು. ಇದನ್ನೆಲ್ಲಾ ತಾರ್ಕಿಕವಾಗಿ ವಿಶ್ಲೇಷಿಸುವ ಯಾವ ಸಂಶೋಧನೆಗಳು ನಡೆದಿವೆಯೋ ಗೊತ್ತಿಲ್ಲ. ಏಕೆಂದರೆ ವಚನಗಳನ್ನು ಬಸವ ತಾಲಿಬಾನಿಗಳು ಪ್ರಾಮಾಣಿಸಿದ, ಅಧಿಕೃತಗೊಳಿಸಿದ ಪಾಮರರು ಮಾತ್ರ ವ್ಯಾಖ್ಯಾನಿಸಬೇಕು ಎಂಬ ಲಿಂಗಾಹತ ಬಸವಫತ್ವಾ ಜಾರಿಗೊಳಿಸಿದ್ದಾರೆ. ಹೀಗೆ ಬಸವ ತಾಲಿಬಾನಿಗಳು ತಮ್ಮ ಮೂರ್ಖತನವನ್ನು ಇನ್ನಷ್ಟು ಮೇಲ್‌ಸ್ತರಕ್ಕೇರಿಸಿ(?) ಬಸವಣ್ಣನನ್ನು ತಾರ್ಕಿಕವಾಗಿ ನಿರ್ನಾಮ ಮಾಡುವ ಎಲ್ಲಾ ಕುತರ್ಕಗಳನ್ನು ಕರ್ಮಠರಾಗಿ ಪಾಲಿಸುತ್ತಿದ್ದಾರೆ. ಇವರ ಜನಾಂಗೀಯ ಜುಗುಪ್ಸೆ ಅವರನ್ನೇ ಸುಡುವುದು ನಿಶ್ಚಿತ. ಇವರ ಆದ್ಯ ಮುಖಂಡ ಮಾಜಿ ಐಎಎಸ್ ಅಧಿಕಾರಿ ತಾವಿನ್ನೂ ''ಅಂಗ್ರೇಜೋಂಕೆ ಜಮಾನೆ ಕಾ ಲಾರ್ಡ್ ಸಾಬ್'' ಎಂಬ ದರ್ಪದಲ್ಲಿ ಬಸವಣ್ಣನ, ''ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ'' ಎಂಬ ಸಹಮಾನವತ್ವದ ಒಂದು ವಚನವನ್ನೂ ಪಾಲಿಸದೆ ಬಸವ ಮುಖಂಡತ್ವದ ಸರ್ವಾಧಿಕಾರಿಯಂತೆ ಎಲ್ಲರನ್ನೂ ಸಾರ್ವಜನಿಕ ಮಾಧ್ಯಮಗಳಲ್ಲಿ ಸಹ ಏಕವಚನದಲ್ಲಿ ಸಂಬೋಧಿಸುವ ಕರ್ಮಠ ಅಹಮ್ಮಿನ ಮಾದರಿಯಾಗಿದ್ದಾರೆ.

ಧರ್ಮದ ತಿರುಳಿನ ಎರಡಿಂಚು ಆಳಕ್ಕೂ ಇಳಿಯದೆ ಕೇವಲ ಜಾತಿಲಾಬಿ ಮಾಡುವ ಕಾವಿಧಾರಿಗಳು, ಸಾಂಸ್ಕೃತಿಕ ಅಧ್ಯಯನಗಳ ಗಂಧಗಾಳಿಯೂ ಇರದ ಆದರೆ ಅದರಲ್ಲಿ ಪಿಎಚ್‌ಡಿ ಪಡೆದ 'ಡಾ. ದಟ್', 'ಡಾ. ದಿಸ್' ಮಹಾಶಯರು, ಕಳಬೇಡ ಕೊಲಬೇಡ ವಚನದಾಚೆಗೆ ಏನನ್ನೂ ಅರಿಯದ ಶಿಶುವಿಹಾರಿ ಗೌರವ(?) ಡಾಕ್ಟೋರೇಟ್ ಶ್ವೇತವಸ್ತ್ರಧಾರಿ ಅಣ್ಣಂದಿರು/ಅಕ್ಕಂದಿರು, ವಿಶ್ವವಿದ್ಯಾಲಯದ ಪ್ರೊಫೆಸರರು, ಸಂಶೋಧಕರು, ಸ್ವಘೋಷಿತ ಬುದ್ಧಿಜೀವಿಗಳು ಈ ಶಿಥಿಲ ಸಂಕಥನವನ್ನು ಸೃಷ್ಟಿಸಿ ಜನಸಾಮಾನ್ಯರಿಗೆ ಮೀಸಲಾತಿಯ ತುಪ್ಪ ಹಚ್ಚಿ ಧಾರ್ಮಿಕ ಶೋಷಣೆ ನಡೆಸುತ್ತಿರುವುದು ಕರ್ನಾಟಕದ ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಅಧ್ಯಯನದ 'ಶತಮಾನದ ವಿಪರ್ಯಾಸ!' ಲಿಂಗಾಹತ ಚಳವಳಿಯ ಬಳುವಳಿಯೇ ಸದ್ಯದ ಸುದ್ದಿಯಾಗಿರುವ ಜನಗಣತಿಯ ಕುಸಿತ! ಈ ಕರ್ಮಠರಿಂದ ಬಸವಣ್ಣನನ್ನು ಬಿಡಿಸಿ ಆತನ ಮಾರ್ಕ್ಸ್‌ವಾದಿ ರೂಪವನ್ನು ತೊಡೆದು ಆಧ್ಯಾತ್ಮಿಕ ವೀರಶೈವ ಬಸವಣ್ಣನನ್ನು ನಿರೂಪಿಸುವ ಜವಾಬ್ದಾರಿ ಎಲ್ಲಾ ಲಿಂಗವಂತ ವೀರಶೈವರ ತುರ್ತು! ಇಲ್ಲದಿದ್ದರೆ ಇವನಾರವ ಇವನಾರವ ಇವನಾರವ ರವರವವಷ್ಟೇ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಭಟ್ಟರ್ ಸ್ಕಾಚ್

- **ಬನ್ನೂರು ರಾಜು, ಮೈಸೂರು**
  ಭಟ್ರೇ, 'ನಾನು ಗೌರಿ'ಯಲ್ಲಿ 'ನಾನು' ಯಾರು?
- **ಗೌರಿ!**

- **ಸಂಗೀತಾ ಉಪಾಧ್ಯ, ಬೆಂಗಳೂರು**
  ಭಟ್ರೇ, ಸರಕಾರದ ಆಧಾರ ಯಾರು?
- **ನಿತ್ಯವೂ ಆದಾಯ ಕೊಡುವ ಕುಡುಕರು!**

- **ರೂಪಾ ಚಂದ್ರು, ದಾವಣಗೆರೆ**
  ಭಟ್ರೇ, ಕ್ರೇಜಿ ಐಡಿಯಾಗಳು ರವಿಚಂದ್ರನ್ ಅವರಿಗೆ ಮಾತ್ರ ಬರುತ್ತವಂತೆ?
- **ಹಾಗೇನಿಲ್ಲ, ಡೊನಾಲ್ಡ್ ಟ್ರಂಪ್‌ಗೂ ಬರುತ್ತವೆ!**

- **ಶ್ರೀನಿವಾಸ ದೇಶಕುಲಕರ್ಣಿ, ಧಾರವಾಡ**
  ಭಟ್ರೇ, ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಮೂತ್ರಾಲಯಗಳು ಕಮ್ಮಿಯಾಗುತ್ತಿವೆಯಲ್ಲ?
- **ಈಗ ಅವನ್ನು ಹೆಚ್ಚಾಗಿ ಸಾಮಾಜಿಕ ಜಾಲತಾಣಗಳಲ್ಲಿ ಕಾಣಬಹುದು!**

- **ರವಿರಾಜ ಶೇಷಪ್ಪ, ಕೆಂಗೇರಿ**
  ಭಟ್ರೇ, 'ನಾನು' ಕವನದ ತಾತ್ಪರ್ಯ ಏನು?
- **ನಾನು ಅಂದ್ರೆ, ನಾನು ಅಂತ ಕವಯತ್ರಿಯೇ ಹೇಳಿದ್ದಾಳಲ್ಲ!**

- **ನವೀನ್ ಭರತಕುಮಾರ, ತುಮಕೂರು**
  ಭಟ್ರೇ, ಜಯವೀರ ಗೌಡ ನಿಮ್ಮ ಉತ್ತರಾಧಿಕಾರಿ ಅಂತಾರಲ್ಲ?
- **ಮೊದಲು ಆತ ನನ್ನ ಸಂದೇಶಗಳಿಗೆ ಉತ್ತರ ಕೊಡುವುದನ್ನು ರೂಢಿಸಿಕೊಳ್ಳಲಿ!**

- **ಕೆ.ವಿ.ರಾಚಪ್ಪ, ಚಿತ್ರದುರ್ಗ**
  ಭಟ್ರೇ, ಎಲ್ಲರಿಗೂ ನಾನು ಗೊತ್ತಿರಬೇಕು, ಆದರೆ ಯಾರನ್ನೂ ಭೇಟಿ ಮಾಡುವುದಿಲ್ಲ... ಹಾಗಾದ್ರೆ, ನಾನು ಏನಾಗಬೇಕು?
- **ದಾವುದ್ ಇಬ್ರಾಹಿಂ!**

- **ವಿಶಾಲ ಗೌಡ, ಮಂಡ್ಯ**
  ಭಟ್ರೇ, ನೀವು ಬರೆಯುವುದನ್ನು ಒಂದು ದಿನವೂ ತಪ್ಪಿಸುವುದಿಲ್ಲವಂತೆ?
- **ಊಟ ಮಾಡುವುದನ್ನೂ!**

- **ಕಾಶಿನಾಥ ಬಿ., ಬೆಂಗಳೂರು**
  ಭಟ್ರೇ, ಯತ್ನಾಳ್ ಇನ್ನೇನು ಬಾಯಿ ಮುಚ್ಚಿದಂತೆ, ಅಲ್ವಾ?
- **ವಿಜಯೇಂದ್ರ ಹಾಗೆ ಹೇಳಿ ನೋಡಲಿ ಆಂದ್ರಂತೆ ಯತ್ನಾಳ್!**

- **ಕೆ.ಚಂದ್ರು, (ಇಮೇಲ್ ಮೂಲಕ)**
  ಭಟ್ರೇ, ಜನಿವಾರದಲ್ಲಿ ಏನಿದೆ?
- **ಅದು ದಾರವಲ್ಲ, ಹೈ ಟೆನ್ಷನ್ ವೈರ್ ಅಂತ ಸಾಬೀತಾಯ್ತಲ್ಲ!**

- **ವಿ.ಹೇಮಂತಕುಮಾರ, ಬೆಂಗಳೂರು**
  ಭಟ್ರೇ, ಜಗಳ ಆಡಿಲ್ಲ ಅಂದ್ರೆ ನಿದ್ರೆ ಬರಲ್ಲ ಅಂತಾಳಲ್ಲ?
- **ಅದೇ ವಾಸಿ, ಇನ್ನು ಕೆಲವರು ತಿಂದಿದ್ದು ಕರಗೋಲ್ಲ ಅಂತಾರೆ!**

ರಾಜಕೀಯದಲ್ಲಿ ಕೂಗುಮಾರಿಗಳಿಗೆ ಹೆಚ್ಚು ಬೆಲೆ !

ಪಕ್ಷ ನಾಯಕರ ಬೆಂಬಲ, ಜಾತಿ ಬೆಂಬಲ ಇಲ್ಲವೇ ಕ್ಷೇತ್ರದ ಮತದಾರರ ಬೆಂಬಲ ಈ ಮೂರರ ಪೈಕಿ ಒಂದೂ ಇಲ್ಲದೇ ಹೋದರೆ ಎಷ್ಟೇ ಪ್ರಭಾವಿ ನಾಯಕರಾದರೂ ರಾಜಕೀಯದಲ್ಲಿ ದೀರ್ಘ ಕಾಲ ಮುಂದುವರಿಯಲು ಸಾಧ್ಯವಿಲ್ಲ. ಪಕ್ಷನಿಷ್ಠೆ, ಮೌಲ್ಯ, ತತ್ವ-ಸಿದ್ಧಾಂತ, ವೈಯಕ್ತಿಕ ವರ್ಚಸ್ಸು ಇವುಗಳಿಂದ ಸದ್ಯದ ಚುನಾವಣೆ ರಾಜಕೀಯವನ್ನು ಗೆಲ್ಲಲು ಸಾಧ್ಯವಿಲ್ಲ. ರಾಜಕೀಯ ಮೌಲ್ಯಗಳಿಗೆ ಹೆಸರಾದ ಎ.ಟಿ. ರಾಮಸ್ವಾಮಿ. ವೈಎಸ್‌ವಿ ದತ್ತ ಮುಂತಾದವರು ಜೆಡಿಎಸ್ ಮಾತ್ರವಲ್ಲ ಈಗ ಯಾವ ಪಕ್ಷದಲ್ಲೂ ಪ್ರಸ್ತುತರಾಗಲು ಸಾಧ್ಯವಿಲ್ಲ.

ಲೋಕಮತ
ಲೋಕೇಶ್ ಕಾಯರ್ಗ
kaayarga@gmail.com

ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು ಎಂಬ ಮಾತಿದೆ. ಇದಕ್ಕಿಂತ ರಾಜಕೀಯದಲ್ಲಿ ಏನಾದರೂ ಮಾಡಲು ಸಿದ್ಧವಿರಬೇಕು ಎನ್ನುವುದು ಹೆಚ್ಚು ಸೂಕ್ತ. ತಮ್ಮ ರಾಜಕೀಯ ಗುರಿಯನ್ನು ಸಾಧಿಸಲು ಏನು ಬೇಕಾದರೂ ಮಾಡಲು ಸಿದ್ಧ ಎನ್ನುವವರಿಂದಲೇ ರಾಜಕೀಯದಲ್ಲಿ ಅಸಂಭವ ಎನಿಸಿದ್ದು ಸಂಭವಿಸುತ್ತದೆ. ಮಿತ್ರರಾಗಿದ್ದವರು ಶತ್ರುಗಳಾಗುತ್ತಾರೆ. ಶತ್ರುಗಳಾಗಿದ್ದವರು ಮಿತ್ರರಾಗುತ್ತಾರೆ. ಆದರೆ ಇಲ್ಲಿ ಪಕ್ಷದ ಸಿದ್ಧಾಂತ, ಧೋರಣೆಗಳ ಹೊರತಾಗಿಯೂ ತಮ್ಮದೇ ನಿಲುವು, ಸಿದ್ಧಾಂತಗಳನ್ನು ಇಟ್ಟುಕೊಂಡವರು ಹೆಚ್ಚು ಕಾಲ ಉಳಿಯಲು ಸಾಧ್ಯವಿಲ್ಲ ಎನ್ನುವುದು ಸ್ಪಷ್ಟ.

ಪಕ್ಷ ಭೇದವಿಲ್ಲದೆ ಸದ್ಯದ ರಾಜಕಾರಣವನ್ನು ಒಮ್ಮೆ ಗಮನಿಸಿ ನೋಡಿ. ಅಲ್ಲಿ ನಾಯಕರು ಮತ್ತು ಹಿಂಬಾಲಕರು ಎಂಬ ಎರಡೇ ವರ್ಗವಿದೆ. ಹಾಲಿ 223 ಶಾಸಕರ ಪಟ್ಟಿ ತೆಗೆದುಕೊಂಡು ನೋಡಿದರೆ ಕಾಂಗ್ರೆಸ್‌ನ ಅಷ್ಟೂ ಶಾಸಕರನ್ನು ಎರಡು ಅಥವಾ ಮೂರು ಬಣಗಳಲ್ಲಿ ವಿಂಗಡಿಸಬಹುದು. ಬಿಜೆಪಿಯಲ್ಲಿ ಪಕ್ಷದ ಹೆಸರಿನಲ್ಲಿ ಗೆದ್ದು ಬರುವ ಬೆರಳೆಣಿಕೆಯ ಶಾಸಕರನ್ನು ಹೊರತುಪಡಿಸಿ ಉಳಿದವರು ನಾಲ್ಕೈದು ಬಣಗಳಲ್ಲಿ ಹಂಚಿ ಹೋಗಿದ್ದಾರೆ. ಕೆಲವರು ಕಾಂಗ್ರೆಸ್ ಬಣದಲ್ಲಿದ್ದಾರೆ. ಜೆಡಿಎಸ್‌ನಲ್ಲೂ ಅಪ್ಪ-ಮಕ್ಕಳ ಬಣ ಮತ್ತು ಕಾಂಗ್ರೆಸ್‌ನತ್ತ ವಾಲಿದ ಎರಡು ಬಣಗಳನ್ನು ಕಾಣಬಹುದು. ಇವೆಲ್ಲದರ ನಡುವೆ ಎಲ್ಲ ಪಕ್ಷಗಳಲ್ಲೂ ತಮ್ಮದೇ ಅಭಿಪ್ರಾಯ, ಸೈದ್ಧಾಂತಿಕ ನೀತಿ, ನಿಲುವುಗಳನ್ನು ಹೊಂದಿದ ಕೆಲವು ನಾಯಕರಿದ್ದಾರೆ. ಮಾಧ್ಯಮಗಳಲ್ಲಿ ಆಗಾಗ ಇವರ ಹೆಸರು ಬರುತ್ತಲೇ ಇರುತ್ತದೆ. ಆದರೆ ಚುನಾವಣಾ ರಾಜಕಾರಣದಲ್ಲಿ ಇಂಥವರ ರಾಜಕೀಯ ಜೀವನ ಅರ್ಧದಲ್ಲಿಯೇ ಕೊನೆಗೊಂಡಿದ್ದು ಹೆಚ್ಚು.

ಆರಂಭದಲ್ಲಿ ಕಾಂಗ್ರೆಸ್ ಬಳಿಕ ಜೆಡಿಎಸ್ ನಾಯಕರಾಗಿ ಗುರುತಿಸಿಕೊಂಡು ವಿಧಾನಸಭೆಗೆ ಆಯ್ಕೆಯಾದ ಎ.ಟಿ. ರಾಮಸ್ವಾಮಿ ಅವರು ಕಳೆದ ಲೋಕಸಭಾ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸೇರಿದ್ದರು. ಇದೀಗ ಈ ಪಕ್ಷಕ್ಕೂ ರಾಜೀನಾಮೆ ನೀಡಿದ್ದಾರೆ. ಬಿಜೆಪಿಗೆ ರಾಜೀನಾಮೆ ನೀಡಲು ಅವರು ನೀಡಿರುವ ನೀಡಿರುವ ಕಾರಣಗಳನ್ನು ಗಮನಿಸಿದರೆ ರಾಜಕಾರಣದಿಂದ ಕಾಯಂ ಆಗಿ ದೂರವುಳಿಯುವ ಸುಳಿವು ನೀಡಿದ್ದಾರೆ. ಹವಾಮಾನ ವೈಪರೀತ್ಯದ ಇಂದಿನ ದಿನಗಳಲ್ಲಿ ಪರಿಸರ ಸಂರಕ್ಷಣೆ ಮಾಡುವುದು ಅತ್ಯಗತ್ಯವಾಗಿದೆ. ರಾಜಕಾರಣಕ್ಕಿಂತ ಪ್ರಕೃತಿಯನ್ನು ರಕ್ಷಿಸುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹೆಚ್ಚು ಅತ್ಯಗತ್ಯವಾಗಿದೆ ಎಂದು ರಾಮಸ್ವಾಮಿ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಅವರ ಕೊಟ್ಟ ಕಾರಣ ನಿಜಕ್ಕೂ ಗಂಭೀರ ವಿಷಯ. ಆದರೆ ಎರಡೂವರೆ ದಶಕಗಳ ಕಾಲ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡ ನಾಯಕರೊಬ್ಬರು ಇದ್ದಕ್ಕಿದ್ದಂತೆ ರಾಜಕೀಯ ಬಿಟ್ಟು ಪರಿಸರ ಚಳವಳಿಗೆ ಧುಮುಕುತ್ತೇನೆ ಎಂದರೆ ಜನರು ಅಷ್ಟು ಸುಲಭವಾಗಿ ನಂಬುವುದಿಲ್ಲ. ಸ್ವತ: ಎಟಿಆರ್ ಅವರ ಅಂತರಂಗಕ್ಕೂ ಇದು ಸಕಾರಣವಾಗಿ ಕಂಡಿರಲಿಕ್ಕಿಲ್ಲ.

"ಜಗತ್ತಿನಲ್ಲಿ ತಾಪಮಾನ ಏರಿಕೆಯಿಂದಾಗಿ ಹವಾಮಾನ ವೈಪರೀತ್ಯ ಉಂಟಾಗಿದೆ. ಪರಿಸರ ಅಸಮತೋಲನದಿಂದಾಗಿ ನೆರೆ, ಬರ, ಚಂಡಮಾರುತ, ಭೂಕಂಪನಗಳು ಸೃಷ್ಟಿಯಾಗುತ್ತಿವೆ. ನಾವು ಕುಡಿಯುವ ನೀರು, ಉಸಿರಾಡುವ ಗಾಳಿ, ಸೇವಿಸುವ ಆಹಾರ ಸಹ ವಿಷಪೂರಿತವಾಗಿವೆ. ಬೆಟ್ಟ, ಗುಡ್ಡ, ಅರಣ್ಯಗಳ ನಾಶದಿಂದ ನದಿ, ತೊರೆಗಳೂ ಬತ್ತಿ ಹೋಗಿವೆ. ಅಂತರ್ಜಲ ಸಾಕಷ್ಟು ಪ್ರಮಾಣದಲ್ಲಿ ಕುಸಿದಿದೆ. ಜೀವ ಸಂಕುಲಗಳಿಗೆ ಈ ಬೆಳವಣಿಗೆಯಿಂದ ಸಂಕಷ್ಟ ಬಂದೊದಗಿದೆ' ಎಂದು ಎ.ಟಿ. ರಾಮಸ್ವಾಮಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಬರೆದ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಜಾಗತಿಕ ತಾಪಮಾನದ ಈ ಪರಿಸ್ಥಿತಿಯನ್ನು ಇಂದಿನ ರಾಜಕಾರಣಕ್ಕೂ ಅನ್ವಯಿಸಬಹುದು. ನಂಬಿಕೆ, ವಿಶ್ವಾಸ, ನೀತಿ, ಸಿದ್ಧಾಂತಗಳ ಬರದಿಂದ ವಿಷಮಯವಾಗಿರುವ ರಾಜಕಾರಣದಲ್ಲಿ ಪ್ರಾಮಾಣಿಕರಿಗೆ ಸಂಕಷ್ಟ ಬಂದೊದಗಿದೆ. ರಾಜಕಾರಣ ಎಂದರೆ ವ್ಯಾಪಾರ ಎಂದುಕೊಂಡವರ ನಡುವೆ ಮೌಲ್ಯಗಳು ಗೌಣವಾಗಿದ್ದು, ಹಣದ ಥೈಲಿ ಹಿಡಿದು ಬಂದವರಿಗೆ ಮಾತ್ರ ಪಕ್ಷದ ಟಿಕೆಟ್ ಸಿಗುತ್ತಿದೆ ಎಂದು ಹೇಳಿದ್ದರೂ ಎಟಿಆರ್ ರಾಜೀನಾಮೆಗೆ ಸೂಕ್ತ ಕಾರಣಗಳಾಗುತ್ತಿತ್ತು. ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳಿಂದಲೂ ಪರಿತ್ಯಕ್ತರಾದ ಎಟಿಎಆರ್ ಮಾದರಿಯ ರಾಜಕಾರಣಿಗಳಿಗೆ ಇದನ್ನು ಬಿಟ್ಟು ಹೆಚ್ಚೇನೂ ಆಯ್ಕೆಗಳಿರುವುದಿಲ್ಲ.

ಎಟಿಆರ್ ಅವರನ್ನು ಕರ್ನಾಟಕದ ಕ್ಷೇತ್ರದ ಜನರು ಜನರನ್ನು ನೆನಪಿಸಿಕೊಳ್ಳುವುದು ರಾಜಧಾನಿ ಬೆಂಗಳೂರಿನಲ್ಲಿ ಸರಕಾರಿ ಜಮೀನು ಒತ್ತುವರಿ ಸಂಬಂಧ ಅವರು ನೀಡಿದ ವರದಿಗಾಗಿ. ಈಗಲೂ ವಿಧಾನಸಭೆಯಲ್ಲಿ ಒತ್ತುವರಿ ತೆರವು ಸಂಬಂಧ ಮಾತನಾಡುವಾಗ ಶಾಸಕರು, ಸಚಿವರು ಅವರು ನೀಡಿದ ವರದಿಯನ್ನು ನೆನಪಿಸಿಕೊಳ್ಳುತ್ತಾರೆ. ಈ ವರದಿ ಎಟಿಎಆರ್ ಅವರ ಪ್ರಾಮಾಣಿಕತೆ ಮತ್ತು ನೆಲ, ಜಲದ ಸಂರಕ್ಷಣೆ ವಿಷಯದಲ್ಲಿ ಅವರ ಪಕ್ಷಾತೀತ ನಿಲುವಿಗೂ ಉತ್ತಮ ಉದಾಹರಣೆ. ಆದರೆ ಸಮಾನ ಫಲಾನುಭವಿಗಳನ್ನು ಹೊಂದಿರುವ ಒತ್ತುವರಿ ವಿಚಾರದಲ್ಲಿ ಈ ವರದಿಗೆ ಯಾವ ಪಕ್ಷದ ಒತ್ತಾಸೆಯೂ ಸಿಗಲಿಲ್ಲ ಎನ್ನುವುದು ಬೇರೆ ಮಾತು.

ರಾಮಸ್ವಾಮಿ ತಮ್ಮ ಸ್ವಂತದ ನಿಲುವಿಗೆ ಅಂಟಿಕೊಳ್ಳದೆ ನಾಯಕರ ಮರ್ಜಿ ನೋಡಿಕೊಂಡು ಮಾತನಾಡುತ್ತಿದ್ದರೆ ಅವರ ರಾಜಕೀಯ ಜೀವನ ಅಭದ್ರವಾಗುತ್ತಿರಲಿಲ್ಲ. ಕನಿಷ್ಠ ಪಕ್ಷ ಎಚ್.ಡಿ. ರೇವಣ್ಣ ಅವರ ಬೆಂಬಲಿಗನಾಗಿ ಉಳಿದಿದ್ದರೂ ರಾಜಕೀಯದಲ್ಲಿ ಇನ್ನಷ್ಟು ಕಾಲ ಮುಂದುವರಿಯಬಹುದಿತ್ತು. ಆದರೆ ತನ್ನದೇ ಸ್ವಂತಿಕೆ ಹೊಂದಿರುವ ಯಾವ ನಾಯಕನೂ ಹೆಚ್ಚು ಕಾಲ ಸರ್ವಾಧಿಕಾರದಡಿಯಲ್ಲಿ ಇರಲು ಸಾಧ್ಯವಿಲ್ಲ. ತಮ್ಮ ಪ್ರತಿಸ್ಪರ್ಧಿ ಎ. ಮಂಜು ಅವರಂತೆ 'ಹಿಂದಿನದೆಲ್ಲವನ್ನೂ ಮರೆತು ಬಿಡುವ' ಸಂದರ್ಭೋಚಿತ ನಿರ್ಧಾರ ಕೈಗೊಂಡಿದ್ದರೂ ರಾಮಸ್ವಾಮಿ ಸಕ್ರಿಯ ರಾಜಕಾರಣಿಯಾಗಿ ಮುಂದುವರಿಯಬಹುದಿತ್ತು.

ಪಕ್ಷ ನಾಯಕರ ಬೆಂಬಲ, ಜಾತಿ ಬೆಂಬಲ ಇಲ್ಲವೇ ಕ್ಷೇತ್ರದ ಮತದಾರರ ಬೆಂಬಲ ಈ ಮೂರರ ಪೈಕಿ ಒಂದೂ ಇಲ್ಲದೇ ಹೋದರೆ ಎಷ್ಟೇ ಪ್ರಭಾವಿ ನಾಯಕರಾದರೂ ರಾಜಕೀಯದಲ್ಲಿ ದೀರ್ಘ ಕಾಲ ಮುಂದುವರಿಯಲು ಸಾಧ್ಯವಿಲ್ಲ. ಪಕ್ಷ ನಿಷ್ಠೆ, ಮೌಲ್ಯ, ತತ್ವ-ಸಿದ್ಧಾಂತ, ವೈಯಕ್ತಿಕ ವರ್ಚಸ್ಸು ಇವೆಲ್ಲವೂ ಸದ್ಯದ ಚುನಾವಣೆ ರಾಜಕೀಯವನ್ನು ಗೆಲ್ಲಲು ಸಾಧ್ಯವಿಲ್ಲ.

ಇದಕ್ಕೆ ಎಲ್ಲ ಪಕ್ಷಗಳಲ್ಲೂ ಹಲವು ಉದಾಹರಣೆಗಳು ಸಿಗುತ್ತವೆ. ಜೆಡಿಎಸ್‌ನಲ್ಲಿ ಎಲ್ಲ ಪಕ್ಷಗಳಿಗಿಂತಲೂ ಹೆಚ್ಚು ಉದಾಹರಣೆಗಳು ಸಿಗುತ್ತವೆ. ಜೆಡಿಎಸ್ ವರಿಷ್ಠ ದೇವೇಗೌಡರ ದತ್ತುಪುತ್ರ ಎಂದು ಕರೆಸಿಕೊಳ್ಳುತ್ತಿದ್ದ ವೈಎಸ್‌ವಿ ದತ್ತ ಅವರನ್ನು ಪಕ್ಷವು ಮೂಲೆಗುಂಪು ಮಾಡಿದ ರೀತಿ ಗಮನಿಸಿದವರಿಗೆ ಘಾತುಕ ರಾಜಕಾರಣದ ಒಳಮರ್ಮ ಅರ್ಥವಾಗಬಹುದು. ಒಂದು ಕಾಲದಲ್ಲಿ ಪಕ್ಷದ ಘಟಾನುಘಟಿ ನಾಯಕರಾಗಿದ್ದ, ಸದನದಲ್ಲೂ, ಹೊರಗೂ ಪಕ್ಷವನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದ್ದ ಎಂ.ಸಿ. ನಾಣಯ್ಯ ಅವರಂತಹ ನಾಯಕರನ್ನು ಪಕ್ಷವು ನಡೆಸಿಕೊಂಡ ರೀತಿ ಯಾರಿಗಾದರೂ ಬೇಸರ ತರಿಸದೇ ಇರದು. ಜನತಾ ಪರಿವಾರದ ನಾಯಕರಾಗಿದ್ದ ಪಿ.ಜಿ.ಆರ್ ಸಿಂಧ್ಯಾ, ಸೋಮಶೇಖರ್ ಮುಂತಾದ ನಾಯಕರು ಪಕ್ಷದಾಚೆಗೂ ವ್ಯಕ್ತಿತ್ವ ರೂಪಿಸಿಕೊಂಡವರು. ಆದರೆ ಚುನಾವಣೆ ರಾಜಕೀಯದಲ್ಲಿ ಗೆದ್ದು ಬರಲು ವ್ಯಕ್ತಿತ್ವಕ್ಕಿಂತಲೂ ಬೇರೆ ಹಾದಿಯಲ್ಲಿ ಸಾಗುವುದು ಅನಿವಾರ್ಯ.

ಬಿಜೆಪಿಯ ಆರಂಭಿಕ ದಿನಗಳ ನಾಯಕ ಬಿ.ಬಿ. ಶಿವಪ್ಪ ಅವರ ರಾಜಕೀಯ ಜೀವನವೂ ರಾಜಕೀಯ ಸಂಚಿನಲ್ಲಿ ಕೊನೆಗೊಂಡಿದ್ದು ಇತಿಹಾಸ. ಬಿಜೆಪಿಯಲ್ಲಿ ನಾಲ್ಕೈದು ಬಾರಿ ಶಾಸಕರಾಗಿದ್ದ ಯೋಗೀಶ್ ಭಟ್, ಹಾಲಾಡಿ ಶ್ರೀನಿವಾಸ ಶೆಟ್ಟಿ ಮುಂತಾದ ನಾಯಕರ ಬಗ್ಗೆ ಎಲ್ಲ ಪಕ್ಷಗಳಲ್ಲೂ ಸದಭಿಪ್ರಾಯವಿತ್ತು. ಆದರೆ ರಾಜಕೀಯದಲ್ಲಿ ಸದಭಿಪ್ರಾಯ, ಚಾರಿತ್ರ್ಯ, ಪ್ರಾಮಾಣಿಕತೆಗಿಂತಲೂ ನಾಯಕರ ಕೃಪಾಶೀರ್ವಾದ ಮುಖ್ಯ. ಜನತಾ ಪರಿವಾರದಲ್ಲಿದ್ದು ಈಗ ಕಾಂಗ್ರೆಸ್‌ನಲ್ಲಿರುವ ಬಿ.ಎಲ್ ಶಂಕರ್ ಮುಂತಾದ ನಾಯಕರು ತಮ್ಮ ವೈಯಕ್ತಿಕ ವರ್ಚಸ್ಸಿನ ಹೊರತಾಗಿಯೂ ರಾಜಕೀಯವಾಗಿ ಮೇಲೇರಲು ಸಾಧ್ಯವಾಗುತ್ತಿಲ್ಲ. ಇಲ್ಲಿ ಸಕಾರಣಕ್ಕೆ ಸದ್ದು ಮಾಡದೇ ವಿನಾ ಕಾರಣ ಸದ್ದು ಮಾಡುವವರಿಗೆ, ನಾಯಕರ ಹೊಗಳುಭಟರಿಗೆ, ಸೂಟ್‌ಕೇಸ್ ವ್ಯವಸ್ಥೆ ಮಾಡುವವರಿಗೆ ಹೆಚ್ಚು ಬೆಲೆ, ಮನ್ನಣೆ.

ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಇತ್ತೀಚಿನ ವರದಿಯ ಪ್ರಕಾರ, ಕೋಟ್ಯಧಿಪತಿ ಶಾಸಕರ ವಿಷಯದಲ್ಲಿ ಕರ್ನಾಟಕವು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ದೇಶದ ಅಗ್ರ 10 ಶ್ರೀಮಂತ ಶಾಸಕರ ಪಟ್ಟಿಯಲ್ಲಿ ಕರ್ನಾಟಕದ ನಾಲ್ವರು ಸ್ಥಾನ ಪಡೆದಿದ್ದಾರೆ. ಕರ್ನಾಟಕದ 223 ಶಾಸಕರ ಒಟ್ಟು ಘೋಷಿತ ಆಸ್ತಿ ಮೊತ್ತ 14,179 ಕೋಟಿ ರು. ಕರ್ನಾಟಕದ 31 ಶಾಸಕರು 100 ಕೋಟಿ ರೂ.ಗಿಂತ ಹೆಚ್ಚಿನ ಆಸ್ತಿಯನ್ನು ಹೊಂದಿದ್ದಾರೆ. ಕರ್ನಾಟಕದ ರಾಜಕಾರಣ ಯಾವ ದಿಕ್ಕನ್ನು ಹಿಡಿದಿದೆ ಎನ್ನುವುದಕ್ಕೆ ಈ ಅಂಕಿ ಅಂಶಗಳೇ ಸ್ಪಷ್ಟಪಡಿಸುತ್ತವೆ. ಎ. ಟಿ. ರಾಮಸ್ವಾಮಿ, ವೈಎಸ್‌ವಿ ದತ್ತ ಮುಂತಾದವರು ಈ ರಾಜಕೀಯದಲ್ಲಿ ಪ್ರಸ್ತುತರಾಗಲು ಸಾಧ್ಯವೇ ಇಲ್ಲ.

ಧರ್ಮಜಿಜ್ಞಾಸೆ
ಅರುಣ್ ಜೋಶಿ
vveditoped@gmail.com

ಜನಿವಾರ-ಶಿವದಾರಗಳ ಧಾರ್ಮಿಕ ಶ್ರದ್ಧೆ ಪ್ರಶ್ನೆ

ಭಾರತವು ಸಂವಿಧಾನಾತ್ಮಕವಾಗಿ ಜಾತ್ಯತೀತ ರಾಷ್ಟ್ರ. ಅಂದರೆ, ಇಲ್ಲಿ ಎಲ್ಲ ಜಾತಿ, ಮತ, ಪಂಥಗಳ ಜನರು ತಾವು ನಂಬಿದ ಆಚರಣೆಗಳನ್ನು, ಶ್ರದ್ಧೆಯನ್ನು ಶಾಂತಿಯುತವಾಗಿ ಆಚರಿಸಿಕೊಂಡು ಹೋಗಲು ಸಂವಿಧಾನಾತ್ಮಕ ಹಕ್ಕನ್ನು ಹೊಂದಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೂಡ ಶತಮಾನಗಳ ಕಾಲ ಭಾರತೀಯ ಜನಾಂಗ ಅಂದರೆ ಇಲ್ಲಿಯ ಸನಾತನ ಮೂಲಧರ್ಮವು ಬೇರೆ ಯಾವುದೇ ಧಾರ್ಮಿಕ ನಂಬಿಕೆಗಳಿಗೆ ಅಡೆತಡೆ ಒಡ್ಡದೆ, ಬೇರೆ ಧರ್ಮಗಳ ಆಚರಣೆಗೆ ಅನುಕೂಲ ಮಾಡಿಕೊಟ್ಟಂಥ ಜನಾಂಗವಾಗಿದೆ. ಪಾರ್ಸಿಗಳು, ಯಹೂದಿಗಳಂಥ ಅತಿ ಚಿಕ್ಕ ಜನಾಂಗಗಳು ಜಗತ್ತಿನೆಲ್ಲೆಡೆ ದೌರ್ಜನ್ಯಕ್ಕೊಳಗಾದರೂ ಸಾವಿರಾರು ವರ್ಷಗಳಿಂದ ಭಾರತದಲ್ಲಿ ಸುರಕ್ಷಿತವಾಗಿರುವುದು ಮತ್ತು ಅವರು ತಮ್ಮ ಧರ್ಮದ ಉಳಿವಿಗೆ ಭಾರತೀಯರ ಕೊಡುಗೆ ಕಾರಣ ಎಂಬ ಬಗ್ಗೆ ಇಂದಿಗೂ ಕೃತಜ್ಞರಾಗಿರುವುದು ಉದಾಹರಣೆಯಾಗಿದೆ.

ಇತ್ತೀಚೆಗೆ ಸಿಇಟಿ ಪರೀಕ್ಷೆ ನಡೆಯುವ ವೇಳೆ ರಾಜ್ಯದ ಒಂದೆರಡು ಕಡೆ ಜನಿವಾರವನ್ನು ತೆಗೆಯುವಂತೆ ವಿದ್ಯಾರ್ಥಿಗಳನ್ನು ಆಗ್ರಹಿಸಿರುವುದು ಅಥವಾ ಜನಿವಾರವನ್ನು ತೆಗೆಯಿಸಿ ಪರೀಕ್ಷೆಗೆ ಪ್ರವೇಶ ನೀಡಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ. ಜನಿವಾರ ಎಂಬುದು ಒಂದು ಧಾರ್ಮಿಕ ಕಟ್ಟಳೆಯ ದಾರವಾಗಿದ್ದು, ಹಿಂದೂ ಸಮಾಜದ ಅನೇಕ ಜಾತಿಗಳಲ್ಲಿ ಇದನ್ನು ಧರಿಸಲಾಗುತ್ತದೆ ಮತ್ತು ಇದು ಶ್ರದ್ಧೆ-ನಂಬಿಕೆಗಳ ಸಂಕೇತವಾಗಿದೆ. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಮರಾಠರು, ಕುಂಬಾರರು, ಎಸ್‌ಎಸ್‌ಕೆ ಸಮಾಜದವರು ಮತ್ತು ಹಿಂದುಳಿದ ವರ್ಗದ ಪಟ್ಟಿಯಲ್ಲಿ ಬರುವ ಕೆಲ ಜನಾಂಗದವರು ಜನಿವಾರವನ್ನು ಧಾರ್ಮಿಕ ಶ್ರದ್ಧೆಯ ಪ್ರತಿರೂಪವಾಗಿ ಧರಿಸುತ್ತಾರೆ. ಅದರ ಆಧಾರದಿಂದ ಜಪ-ತಪ, ನಿಯಮ-ತತ್ವಗಳನ್ನು ಆಚರಿಸುತ್ತಾರೆ. ಇದೇ ರೀತಿ ಲಿಂಗಾಯತ ಸಮಾಜದಲ್ಲಿ ಕೂಡ ಧಾರ್ಮಿಕ ಶ್ರದ್ಧೆಯ ಸಂಕೇತವೆಂದು ಶಿವದಾರ-ಇಷ್ಟಲಿಂಗ ಧಾರಣೆ ರೂಢಿಯಲ್ಲಿದ್ದರೆ, ಜೈನ ಸಮುದಾಯದ ಕೆಲ ಪಂಥೀಯರು ಪೂಜಾ ದಿನಗಳಲ್ಲಿ ಪವಿತ್ರ ದಾರಗಳನ್ನು ಧರಿಸುತ್ತಾರೆ. ಧಾರ್ಮಿಕ ವಿಧಿ-ವಿಧಾನಗಳಲ್ಲಿ, ಪೂಜಾ ಪದ್ಧತಿಗಳಲ್ಲಿ ಕಂಕಣ ಧರಿಸುವುದು ಕೂಡ ಇಂಥದೇ ಒಂದು ಪದ್ಧತಿಯಾಗಿದೆ. ಭಾರತೀಯ ಸಮಾಜದಲ್ಲಿ ಬೇರೆ ಬೇರೆ ಸಮುದಾಯಗಳ ಜನರು ತಮ್ಮ ನಂಬಿಕೆಯಂತೆ ಇಂಥ ಯಾವೆಲ್ಲ 'ಸಂಕೇತ'ಗಳನ್ನು ಧಾರಣೆ ಮಾಡುತ್ತಾರೆ ಎಂದು ಹುಡುಕುತ್ತಾ ಹೋದರೆ, ಅದೇ ಒಂದು ದೊಡ್ಡ ಅಧ್ಯಯನ ವಿಷಯವಾಗಬಹುದು. ಆದರೆ ಎಲ್ಲ ಆಚರಣೆಗಳೂ ಒಂದು ಮೂಲಶ್ರದ್ಧೆ, ನಂಬಿಕೆಯನ್ನು ಆಧರಿಸಿರುವುದಂತೂ ದಿಟ.

ಈಗ ಸಿಇಟಿ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರವನ್ನು ತೆಗೆಸಿರುವ ಅಥವಾ ತೆಗೆಸಲು ಯತ್ನಿಸಿರುವ ಪ್ರಸಂಗವು ಕೇವಲ ಆ ಒಬ್ಬ ವಿದ್ಯಾರ್ಥಿ ಅಥವಾ ಆ ಒಂದು ಸಮುದಾಯಕ್ಕಷ್ಟೇ ಮಾಡಿದ ಅಪಚಾರವಲ್ಲ; ಅದು ಸಂಪೂರ್ಣವಾಗಿ ಜಾತ್ಯತೀತ ಭಾರತದ ಮೇಲೆ, ಸಂವಿಧಾನದ ಆಶಯದ ಮೇಲೆ, ಧಾರ್ಮಿಕ ಶ್ರದ್ಧೆ-ನಂಬಿಕೆಗಳ ಮೇಲೆ ಮಾಡಿರುವ ಪ್ರಹಾರವಾಗಿದೆ. ಏಕೆಂದರೆ, ಇಂಥ ಧಾರ್ಮಿಕ ವಿಧಿಗಳನ್ನು ಆಚರಿಸಿಕೊಂಡು ಹೋಗಲು ಸಮುದಾಯಗಳಿಗೆ ನೀಡಲಾಗಿರುವ ಹಕ್ಕನ್ನು ಇಲ್ಲಿ ಗಾಳಿಗೆ ತೂರಲಾಗಿದೆ.

ಕೆಲ ವರ್ಷಗಳ ಹಿಂದೆ, ಒಂದಿಷ್ಟು ಇಂಗ್ಲಿಷ್ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಣೆಯ ತಿಲಕ, ಗಂಧ, ಭಸ್ಮ, ವಿಭೂತಿ ಅಳಿಸುವಂತೆ ಹಾಗೂ ವಿದ್ಯಾರ್ಥಿನಿಯರ ಬಳೆ, ಓಲೆ ತೆಗೆಯುವಂತೆ ತಾಕೀತು ಮಾಡಿದ ಪ್ರಸಂಗಗಳು ಭಾರಿ ಕೋಲಾಹಲ ಉಂಟುಮಾಡಿದ್ದುಂಟು. ಇದರ ಹಿಂದಿರುವ ಅಜೆಂಡಾ ಒಂದೇ- ಅದುವೇ ಈ ದೇಶದ ಸನಾತನ ಸಂಸ್ಕೃತಿ, ಪದ್ಧತಿ, ಶ್ರದ್ಧೆಗಳನ್ನು ಕಿತ್ತೆಸೆಯುವುದು. ಇದನ್ನು ಸಾಕಷ್ಟು ದಶಕಗಳ ಹಿಂದೆ ಆಕ್ರಮಣಕಾರರಾದ ಹೂಣರು, ಮಂಗೋಲರು, ಮೊಘಲರು, ಯುರೋಪಿಯನ್ನರು ಮಾಡಿದ್ದರು. ಸ್ವಾತಂತ್ರ್ಯನಂತರ ಪಾಶ್ಚಾತ್ಯ ಮನಸ್ಥಿತಿಯ ಅಧಿಕಾರಿಗಳು, ಎಡಪಂಥೀಯ ವಿಚಾರವಾದಿಗಳು ಇದನ್ನು ಮುಂದುವರಿಸಿದರು. ಅದರ ಮತ್ತೂ ಮುಂದುವರಿದ ಭಾಗವೇ ಈಗಿನ ಸಿಇಟಿ ಪರೀಕ್ಷೆಯ ಸಂದರ್ಭದಲ್ಲಾದ ಜನಿವಾರದ ಜಟಾಪಟಿ.

ಹಾಗೆ ನೋಡಿದರೆ, ಸಿಖ್ ಪಂಥೀಯರಿಗೆ ಎಲ್ಲಾ ಸ್ಥಳಗಳಲ್ಲೂ ಸಂದರ್ಭಗಳಲ್ಲೂ 'ಕ್ರಿಪಾನ' ಎಂಬ ಅಸ್ತ್ರವನ್ನು ಧಾರ್ಮಿಕ ಸಂಕೇತವೆಂದು ಜತೆಗಿಟ್ಟುಕೊಳ್ಳುವ ಹಕ್ಕನ್ನು ನಮ್ಮ ಸಂವಿಧಾನ ಕೊಟ್ಟಿದೆ, ಅದಕ್ಕೆ ರಕ್ಷಣೆಯನ್ನೂ ನೀಡಲಾಗಿದೆ. ಹೀಗಿರುವಾಗ ಮೂರೆಳೆಯ ತೆಳು ಹತ್ತಿದಾರದ ಜನಿವಾರದ ಧಾರಣೆಗೆ ಆಕ್ಷೇಪಿಸಿದ್ದು ಯಾವ ಪುರುಷಾರ್ಥಕ್ಕಾಗಿ? ಎಂಬ ಪ್ರಶ್ನೆಗೆ ಸಂಬಂಧಿತ ಅಧಿಕಾರಿಗಳು ಉತ್ತರಿಸಬೇಕಾಗಿದೆ. ಜನಿವಾರವನ್ನು ಕಿತ್ತೊಗೆಯಲು ಮುಂದಾದ ಕೈಗಳು ಮುಂಬರುವ ದಿನಗಳಲ್ಲಿ ಶಿವದಾರ, ಉಡದಾರ, ಕಂಕಣಗಳನ್ನು ಕಿತ್ತೆಸೆಯುವುದಿಲ್ಲ ಎಂಬುದಕ್ಕೆ ಖಾತ್ರಿಯೇನು?

ಸಮಾಧಾನದ ಸಂಗತಿಯೆಂದರೆ, ಸದರಿ ಪರೀಕ್ಷಾರ್ಥಿಗಳಿಗೆ ಆದ ಅನ್ಯಾಯದ ಬಗ್ಗೆ ಪಕ್ಷಾತೀತವಾಗಿ, ಜಾತ್ಯತೀತವಾಗಿ ಎಲ್ಲರೂ ಸಹಾನುಭೂತಿ ವ್ಯಕ್ತಪಡಿಸಿ ಸಹಾಯಕ್ಕೆ ನಿಲ್ಲುತ್ತಿದ್ದಾರೆ. ಆದರೆ ಅಧೀನ ಸಿಬ್ಬಂದಿಯ ಮೇಲೆ ಗೂಬೆ ಕೂರಿಸಿ ಹಿರಿಯ ಅಧಿಕಾರಿಗಳ ರಕ್ಷಣೆ ಮಾಡಲಾಗುತ್ತಿದೆ ಎಂಬ ಗುಸುಗುಸು ಎಲ್ಲೆಡೆ ಕೇಳಿಬರುತ್ತಿದೆ. ಇಂಥ ಸಂದರ್ಭದಲ್ಲಿ, ಸಂಬಂಧಿಸಿದ ಎಲ್ಲ ಬಾಧ್ಯಸ್ಥರ ತಲೆದಂಡವಾಗದಿದ್ದರೆ, ಮಹಿಳೆಯರ ಮಂಗಲಸೂತ್ರವನ್ನು ಕಿತ್ತೆಸೆಯಲೂ ಇಂಥ ದುರುಳರು ಕೈಹಚ್ಚಬಹುದು. ಜನಿವಾರ ಎಂದಾಕ್ಷಣ ಯಾವುದೇ ಒಂದು ಜಾತಿಗೆ ಅದನ್ನು ತಳುಕುಹಾಕದೆ, ಅದೊಂದು ಧಾರ್ಮಿಕ ಶ್ರದ್ಧೆಯ ಸ್ವರೂಪ ಎಂಬುದಾಗಿ ಪರಿಗಣಿಸಬೇಕು. ಹಿಂದೆ ಸನಾತನ ಸಮಾಜದಲ್ಲಿ ಅಧ್ಯಯನನಿರತ ಎಲ್ಲಾ ವಿದ್ಯಾರ್ಥಿಗಳು ಜಾತಿಭೇದವಿಲ್ಲದೆ 'ಪವಿತ್ರಬಂಧ'ವನ್ನು ಧಾರಣೆ ಮಾಡಿದ ಉದಾಹರಣೆಗಳಿವೆ. ಮಾತ್ರವಲ್ಲದೆ, ಕೆಲ ವಿದೇಶಿಯರು ಕೂಡ ಧಾರ್ಮಿಕ ಸಂಸ್ಥೆಗಳನ್ನು ಸೇರಿಕೊಂಡು ಜನಿವಾರವನ್ನು ಧರಿಸಿದ ನಿದರ್ಶನಗಳಿವೆ. ಜನಿವಾರ ಧಾರಣೆ ಯಾವುದೇ ಒಂದು ನಿರ್ದಿಷ್ಟ ಸಮಾಜದ ಸ್ವತ್ತಲ್ಲ, ಶ್ರದ್ಧೆ-ನಂಬಿಕೆ ಇರುವವರು ಅದನ್ನು ಧರಿಸಲು ಅರ್ಹರು. ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ಸಂದರ್ಭದಲ್ಲಿ ಮೊದಲು ಅವರಿಗೆ ಉಪನಯನದ ಮೂಲಕ ಜನಿವಾರ ತೊಡಿಸಿ, ನಂತರ ಸಿಂಹಾಸನ ಆರೋಹಣಕ್ಕೆ ಅನುವು ಮಾಡಿಕೊಟ್ಟ ಐತಿಹಾಸಿಕ ಘಟನೆ ಹಲವು ಪುಸ್ತಕಗಳಲ್ಲಿದೆ. ಅಷ್ಟೇಕೆ, ಕರ್ನಾಟಕದಲ್ಲಿಯೇ ಕಳಸದ ಗುರು ಗೋವಿಂದಭಟ್ಟರು ಸಂತ ಶಿಶುನಾಳ ಷರೀಫರಿಗೆ ಜನಿವಾರ ಹಾಕಿ ಶಿಷ್ಯತ್ವ ನೀಡಿದರೆಂಬ ಜಾನಪದ ಹಾಡು ಪ್ರಚಲಿತವಾಗಿದೆ.

ಇಂಥ ವಸ್ತುಸ್ಥಿತಿಯ ಆಧಾರದ ಮೇಲೆ, ಸಂವಿಧಾನಬದ್ಧ ಧಾರ್ಮಿಕ ನಂಬಿಕೆಗಳು ಮತ್ತು ಶ್ರದ್ಧೆಗಳನ್ನು ಹೊಸಕಿ ಹಾಕುವ ಯತ್ನಗಳಿಗೆ ಕಾನೂನಾತ್ಮಕವಾಗಿ ಯೋಗ್ಯ ಉತ್ತರವನ್ನು ನೀಡುವುದು ಸರಕಾರದ ಕೆಲಸವಾಗಿದೆ. ಅಲ್ಲದೆ ಈ ಬಗ್ಗೆ ಜಾಗೃತಿ ಮೂಡಿಸುವುದು ಕೂಡ ಸಮಾಜದ ಕೆಲಸವಾಗಿದೆ.

(ಲೇಖಕರು ನ್ಯಾಯವಾದಿಗಳು ಮತ್ತು ನಿಕಟಪೂರ್ವ ಸಹಾಯಕ ಸಾಲಿಸಿಟರ್ ಜನರಲ್, ಭಾರತ ಸರಕಾರ)

ಬಾಳ ಪಾಠಶಾಲೆಯಲ್ಲಿ ಪುಸ್ತಕಗಳೇ ಬೋಧಕರು

'ಓದುವುದು' ಒಂದು ಸುಲಭಸಾಧ್ಯವಾದ, ಉತ್ತಮವಾದ ಹವ್ಯಾಸ. ಇಲ್ಲಿ ಓದಲು ಬಂದರೆ ಸಾಕು, ಮತ್ತೇನೂ ಕೌಶಲದ ಅಥವಾ ಸಲಕರಣೆಗಳ ಅಗತ್ಯವೇ ಇರುವುದಿಲ್ಲ! ಶಿಕ್ಷಕರಾಗಲೀ ತರಬೇತಿಯಾಗಲೀ ಇದಕ್ಕೆ ಬೇಕಿಲ್ಲ, ಪುಸ್ತಕವೊಂದಿದ್ದರೆ ಸಾಕು. ಯಾವ ವಯಸ್ಸಿನವರಾದರೂ ಸರಿ ಬೆಳೆಸಿಕೊಳ್ಳಬಹುದಾದ ಓದುವ ಹವ್ಯಾಸಕ್ಕೆ ಹೆಚ್ಚಿನ ಖರ್ಚು ಇಲ್ಲ. ಅನೇಕ ಒಳ್ಳೆಯ ಪುಸ್ತಕಗಳು ಕೈಗೆಟುಕುವ ಬೆಲೆಗೇ ದೊರಕುತ್ತವೆ. ದುಬಾರಿ ಬೆಲೆಯ ಪುಸ್ತಕಗಳನ್ನು ಕೊಳ್ಳಲು ಸಾಧ್ಯವಿಲ್ಲದಿದ್ದರೆ, ಅವನ್ನು ಉಚಿತವಾಗಿ ಓದಲು ಗ್ರಂಥಾಲಯಗಳಿವೆ.



ತನ್ನಿಮಿತ್ತ
ಲಕ್ಷ್ಮಣ್ ಗೋರ್ಲಕಟ್ಟೆ
vveditoped@gmail.com

ಏಪ್ರಿಲ್ ತಿಂಗಳ 23ರಂದು 'ಅಂತಾರಾಷ್ಟ್ರೀಯ ಪುಸ್ತಕ ಮತ್ತು ಹಕ್ಕುಸ್ವಾಮ್ಯ ದಿನ'ವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ವಿಭಾಗವು (ಯುನೆಸ್ಕೊ) 1995ರಲ್ಲಿ ಈ ದಿನದ ಆಚರಣೆಗೆಂದು ನಿರ್ಧರಿಸಿತು. ಪ್ರಸ್ತುತ 100ಕ್ಕೂ ಹೆಚ್ಚು ದೇಶಗಳಲ್ಲಿ ಈ ದಿನಾಚರಣೆಯ ಪರಿಪಾಠವಿದೆ. ಪ್ರಸಿದ್ಧ ಆಂಗ್ಲಕವಿ ಮತ್ತು ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್‌ನ ಜನನ ಮತ್ತು ಮರಣ ಎರಡೂ ಏಪ್ರಿಲ್ 23ರಂದೇ ಆಗಿದ್ದು; ಹೀಗಾಗಿ ಅವರ ಸ್ಮರಣಾರ್ಥವಾಗಿಯೂ ಈ ದಿನವನ್ನು 'ಪುಸ್ತಕ ದಿನ'ವಾಗಿ ಆಚರಿಸಲಾಗುತ್ತದೆ ಎಂಬುದು ಗಮನಾರ್ಹ ಸಂಗತಿ.

ಜ್ಞಾನಾರ್ಜನೆಗೆ ಮತ್ತು ವ್ಯಕ್ತಿತ್ವದ ವಿಕಸನಕ್ಕೆ ದೇಶವನ್ನು ಪರ್ಯಟನೆ ಮಾಡುವುದು ಹಾಗೂ ಪುಸ್ತಕಗಳನ್ನು ಓದುವುದು ಅವಶ್ಯಕ ಎಂಬ ಗ್ರಹಿಕೆಯನ್ನು 'ದೇಶ ಸುತ್ತು, ಕೋಶ ಓದು' ಎಂಬ ನಾಣ್ಣುಡಿಯು ಒತ್ತಿಹೇಳುತ್ತದೆ. ಇತ್ತೀಚೆಗೆ ಜನರು ದೇಶ-ವಿದೇಶಗಳ ಪ್ರವಾಸದಲ್ಲಿ ಹೆಚ್ಚೆಚ್ಚು ಆಸಕ್ತಿ ತೋರುತ್ತಿದ್ದಾರೆ; ಆದರೆ ಇವರಲ್ಲಿ ಕೆಲವರಿಗೆ ಪುಸ್ತಕ ಓದುವುದರಲ್ಲಿ ಮಾತ್ರ ನಿರಾಸಕ್ತಿ! ಇದೇಕೆ ಹೀಗೆ? ಓದುವುದರ ಮಹತ್ವದ ಅರಿವು ಇಲ್ಲದಿರುವುದೇ ಇದಕ್ಕೆ ಕಾರಣ. ಓದಿದರೆ ತಾನೇ ಅದರ ರುಚಿ ಗೊತ್ತಾಗುವುದು?! ಓದಲು ಬಾರದ 'ಅನಕ್ಷರಸ್ಥ' ಹಾಗೂ ಓದಲು ಬಂದರೂ ಓದಿನಿಂದ ವಿಮುಖನಾಗುವ 'ಅಕ್ಷರಸ್ಥ' ಇವರಿಬ್ಬರ ನಡುವೆ ಏನೂ ವ್ಯತ್ಯಾಸವಿಲ್ಲ!

ಯಾವುದೇ ಪ್ರವಾಸಿ ತಾಣದ ಭೇಟಿ ಫಲಪ್ರದವಾಗಬೇಕಾದರೆ, ಅದರ ಬಗೆಗಿನ ವಿವರವಾದ ಮಾಹಿತಿಯನ್ನು ಮೊದಲೇ ಓದಿರಬೇಕು. ಇಲ್ಲದಿದ್ದರೆ ಅಂಥ ಪ್ರವಾಸವು ಸಾರ್ಥಕವಾಗಲಾರದು. 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರು ಜಪಾನ್ ಪ್ರವಾಸ ಮಾಡಿಬಂದ ನಂತರ, ಆ ದೇಶದ ಜನರ ಶಿಸ್ತು-ಶಿಷ್ಟಾಚಾರ, ಸಂಸ್ಕೃತಿ ಮತ್ತು ಜೀವನಶೈಲಿ ಮುಂತಾದವು ಓದುಗರಿಗೆ ಕಣ್ಣಿಗೆ ಕಟ್ಟುವ ರೀತಿಯಲ್ಲಿ ಸರಣಿ ಲೇಖನಗಳನ್ನು ಬರೆದಿದ್ದಾರೆ, ಇನ್ನೂ ಬರೆಯುತ್ತಿದ್ದಾರೆ. ಕೆಲವೇ ದಿನಗಳ ಪ್ರವಾಸದಲ್ಲಿ ಅಷ್ಟೊಂದು ಸ್ವಾರಸ್ಯಕರ ಮಾಹಿತಿಯನ್ನು ದಕ್ಕಿಸಿಕೊಂಡು ಬರೆಯುವುದು ತಮಾಷೆಯ ಬಾಬತ್ತಲ್ಲ; ಅವರು ಪ್ರವಾಸಕ್ಕೆ ತೆರಳುವುದಕ್ಕೂ ಮೊದಲು ಜಪಾನ್ ಬಗ್ಗೆ ವಿಪುಲ ಮಾಹಿತಿಯನ್ನು ಕಲೆಹಾಕಿ ಓದಿದ್ದರಿಂದಲೇ ಅದು ಸಾಧ್ಯವಾಯಿತು. ಆದ್ದರಿಂದ, ನಾವು ಪ್ರವಾಸ ಮಾಡುವುದು 'ಹೋದ ಪುಟ್ಟ, ಬಂದ ಪುಟ್ಟ' ಎಂಬಂತೆ ಆಗಬಾರದು. ಪ್ರವಾಸಕ್ಕೆ ತೆರಳುವ ಮುನ್ನ ಆಯಾ ತಾಣಗಳ ಬಗ್ಗೆ ಒಂದಿಷ್ಟು ಓದಿಕೊಂಡು ಹೋದರೆ ಪ್ರವಾಸವು ಅರ್ಥಪೂರ್ಣವೂ ಸಾರ್ಥಕವೂ ಆಗುವುದು.

ಇಂದು ಅಂತಾರಾಷ್ಟ್ರೀಯ ಪುಸ್ತಕ ಮತ್ತು ಹಕ್ಕುಸ್ವಾಮ್ಯ ದಿನಾಚರಣೆ

ಹಿಂದೆ ಆಗಿಹೋದ ಅನೇಕ ಮಹನೀಯರು, ತಾವು ಪುಸ್ತಕಗಳನ್ನು ಓದಿ ಪ್ರಭಾವಿತರಾಗಿ ಜೀವನದಲ್ಲಿ ಸಾಫಲ್ಯವನ್ನು ಪಡೆದ ಬಗ್ಗೆ ಆತ್ಮಚರಿತ್ರೆಗಳಲ್ಲಿ ವಿವರಿಸಿದ್ದಾರೆ. ಒಂದು ಒಳ್ಳೆಯ ಪುಸ್ತಕ ಅಥವಾ ಅದರಲ್ಲಿನ ಒಂದು ಉತ್ತಮ ಅಂಶವು ತಮ್ಮ ಜೀವನದ ದಿಕ್ಕನ್ನೇ ಬದಲಿಸಿ ಮೇಲಕ್ಕೆ ಕೊಂಡೊಯ್ದ ಬಗ್ಗೆ ಹೇಳಿಕೊಂಡಿರುವ ಇಂಥ ಮಹನೀಯರು 'ಪುಸ್ತಕಗಳನ್ನು ಓದಿ' ಅಂತ ಒತ್ತಿ ಒತ್ತಿ ಹೇಳಿದ್ದಾರೆ. 'ಟೈಮ್' ಪತ್ರಿಕೆಯ 2011ರ ಜಗತ್ತಿನ 100 ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿದ್ದ ಅಮೆರಿಕನ್‌ನ ಲೇಖಕ ಜಾರ್ಜ್ ಆರ್.ಆರ್. ಮಾರ್ಟಿನ್, "ಒಬ್ಬ ಓದುಗನು ಒಂದು ಸಾವಿರ ಜನ್ಮಗಳನ್ನು ಜೀವಿಸಿದರೆ, ಓದದೇ ಇರುವವನು ಒಂದು ಜನ್ಮ ಮಾತ್ರ ಜೀವಿಸುತ್ತಾನೆ!" ಎಂದು ಉದ್ಗರಿಸಿದ್ದಾನೆ. ಶೈಕ್ಷಣಿಕ ಪದವಿ ಗಳಿಸಿ ಒಂದು ಉದ್ಯೋಗವನ್ನೂ ದಕ್ಕಿಸಿಕೊಂಡ ಕೆಲವರು, "ಬದುಕಿನಲ್ಲಿ ಸೆಟ್ಲ್ ಆಗಿದ್ದೇವೆ, ಇನ್ನೇಕೆ ಓದುವುದು?" ಎಂಬ ಮನೋಭಾವವನ್ನು ತಳೆಯುತ್ತಾರೆ. ಇದು ಸಲ್ಲದು. ಜಗತ್ತಿನಲ್ಲಿ ಹೊಸ ಹೊಸ ಆವಿಷ್ಕಾರಗಳು, ಪ್ರಯೋಗಗಳು ನಿರಂತರವಾಗಿ ಆಗುತ್ತಿರುತ್ತವೆ. ಇವುಗಳನ್ನು ಅರಿತು ಬದಲಾವಣೆಗಳಿಗೆ ಹೊಂದಿಕೊಂಡು ಹೋಗದಿದ್ದರೆ ಹಿಂದೆ ಉಳಿಯಬೇಕಾಗುತ್ತದೆ. ಉದಾಹರಣೆಗೆ, 2-3 ದಶಕಗಳ ಹಿಂದೆ ವೈದ್ಯಕೀಯ ಪದವಿ ಪಡೆದಾತನೊಬ್ಬ ವೈದ್ಯನಾದ ನಂತರ ಅದೆಷ್ಟೋ ಹೊಸ ಆವಿಷ್ಕಾರಗಳ ಬಗ್ಗೆ ಅಧ್ಯಯನ ಮಾಡದಿದ್ದರೆ ತನ್ನ ವೃತ್ತಿಯಲ್ಲಿ ಪ್ರಗತಿ ಹೊಂದುವುದು, ಪ್ರಾವೀಣ್ಯವನ್ನು ದಕ್ಕಿಸಿಕೊಳ್ಳುವುದು ಸಾಧ್ಯವಾಗದು. ಇದು ವೈದ್ಯಕೀಯ ಮಾತ್ರವಲ್ಲದೆ ಬದುಕಿನ ಎಲ್ಲ ಕಾರ್ಯಕ್ಷೇತ್ರಗಳಿಗೂ ಅನ್ವಯಿಸುವ ಮಾತು.

'ಓದುವುದು' ಒಂದು ಸುಲಭಸಾಧ್ಯವಾದ, ಉತ್ತಮವಾದ ಹವ್ಯಾಸ. ಇಲ್ಲಿ ಓದಲು ಬಂದರೆ ಸಾಕು, ಮತ್ತೇನೂ ಕೌಶಲದ ಅಥವಾ ಸಲಕರಣೆಗಳ ಅಗತ್ಯವೇ ಇರುವುದಿಲ್ಲ! ಶಿಕ್ಷಕರಾಗಲೀ ತರಬೇತಿಯಾಗಲೀ ಇದಕ್ಕೆ ಬೇಕಿಲ್ಲ, ಪುಸ್ತಕವೊಂದಿದ್ದರೆ ಸಾಕು. ಯಾವ ವಯಸ್ಸಿನವರಾದರೂ ಸರಿ ಬೆಳೆಸಿಕೊಳ್ಳಬಹುದಾದ ಓದುವ ಹವ್ಯಾಸಕ್ಕೆ ಹೆಚ್ಚಿನ ಖರ್ಚು ಇಲ್ಲ. ಅನೇಕ ಒಳ್ಳೆಯ ಪುಸ್ತಕಗಳು ಕೈಗೆಟುಕುವ ಬೆಲೆಗೇ ದೊರಕುತ್ತವೆ. ದುಬಾರಿ ಬೆಲೆಯ ಪುಸ್ತಕಗಳನ್ನು ಕೊಳ್ಳಲು ಸಾಧ್ಯವಿಲ್ಲದಿದ್ದರೆ, ಅವನ್ನು ಉಚಿತವಾಗಿ ಓದಲು ಗ್ರಂಥಾಲಯಗಳಿವೆ. ದೃಷ್ಟಿದೋಷವಿದ್ದು ಓದಲು ಆಗದಿರುವವರು ಕೂಡ 'ಶ್ರವ್ಯಪುಸ್ತಕ'ಗಳನ್ನು ನೆಚ್ಚಬಹುದು- ಅಂದರೆ, ಪುಸ್ತಕಗಳನ್ನು ಓದಿ ಹೇಳುವ ತಂತ್ರಜ್ಞಾನದ ಸೌಲಭ್ಯವನ್ನು ಪಡೆಯಬಹುದು.

ಪುಸ್ತಕಗಳು ಜ್ಞಾನಾರ್ಜನೆಗೆ, ವ್ಯಕ್ತಿತ್ವ ನಿರ್ಮಾಣ ಮತ್ತು ವಿಕಸನಕ್ಕೆ ಪೂರಕವಾಗಿರುವುದು ಮಾತ್ರವಲ್ಲದೆ, ಕಷ್ಟಗಳು ಬಂದಾಗ ಅವನ್ನು ಎದುರಿಸಲು, ಖಿನ್ನತೆಯನ್ನು ದೂರ ಮಾಡಲು, ಒಂಟಿತನವನ್ನು ಹೋಗಲಾಡಿಸಲು ಕೂಡ ಸಹಾಯಕಾರಿ. ಪುಸ್ತಕಗಳು ಮನೋರಂಜನೆಯನ್ನು ಒದಗಿಸುತ್ತವೆ. ಓದಿದರೆ ನಕ್ಕು ನಗಿಸುವ ಪುಸ್ತಕಗಳೂ ಇವೆ. ಬಂಧು-ಮಿತ್ರರು ಕೈಕೊಟ್ಟರೂ, ನಮ್ಮ ಕೈಬಿಡದ ಸಂಗಾತಿಯೆಂದರೆ ಅದು ಪುಸ್ತಕವೇ. ಆದರೆ ಅದಕ್ಕೆಂದು ನಾವು ಪುಸ್ತಕದ ಕೈಹಿಡಿಯಬೇಕು, ಅಷ್ಟೇ! ಬಸ್ಸು, ರೈಲು ಅಥವಾ ವಿಮಾನ ಪ್ರಯಾಣದ ವೇಳೆ ಕಾಯಬೇಕಾಗಿ ಬಂದಾಗ ಅಥವಾ ಪ್ರಯಾಣವು ವಿನಾಕಾರಣ ವಿಳಂಬವಾದಾಗ ಶಪಿಸುತ್ತಾ ಕಾಲಹರಣ ಮಾಡುವ ಬದಲು, ಒಂದೊಳ್ಳೆಯ ಪುಸ್ತಕ ಓದಿಕೊಂಡು ಸಮಯವನ್ನು ಸದುಪಯೋಗಪಡಿಸಿಕೊಳ್ಳುವುದು ಜಾಣತನ. ಆದ್ದರಿಂದ, ಮುಂದಿನ ಸಲ ಪ್ರಯಾಣಕ್ಕೆ ಹೊರಟಾಗ ಒಂದೊಳ್ಳೆಯ ಪುಸ್ತಕ ನಿಮ್ಮ ಸಂಗಾತಿಯಾಗಿರಲಿ!



ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ನಿಟ್ಟಿನಲ್ಲಿ ಪೋಷಕರು ಮತ್ತು ಶಿಕ್ಷಕರು ಮಹತ್ತರ ಪಾತ್ರ ವಹಿಸಬಲ್ಲರು, ವಹಿಸಲೇಬೇಕು. ಮಕ್ಕಳನ್ನು ಜತೆಗಿಟ್ಟುಕೊಂಡು ಪುಸ್ತಕವನ್ನು ಓದುತ್ತ ಕೂರುವುದರಿಂದ ಮಕ್ಕಳಲ್ಲೂ ಓದುವ ಆಸಕ್ತಿ ಸುಲಭವಾಗಿ ಬೆಳೆಯುತ್ತದೆ. ಇತ್ತೀಚೆಗೆ ಸ್ಮಾರ್ಟ್‌ಫೋನುಗಳ ಗೀಳು, ಅದರಲ್ಲೂ ನಿರ್ದಿಷ್ಟವಾಗಿ ಸಾಮಾಜಿಕ ಜಾಲತಾಣಗಳನ್ನು ಜಾಲಾಡುತ್ತಲೇ ಇರುವ ಗೀಳು ಜನರಲ್ಲಿ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ. ಕಡಿವಾಣವಿಲ್ಲದ ಕೆಲ ಜಾಲತಾಣಗಳಲ್ಲಿ ಸುಲಭಕ್ಕೆ ಸಿಗುವ ಅನಪೇಕ್ಷಿತ-ಅಶ್ಲೀಲ-ಹಾನಿಕಾರಕ ಅಂಶಗಳು ಮಕ್ಕಳ ಮತ್ತು ಯುವಜನರ ಮನವನ್ನು ಕೆಡಿಸಿ ಅವರ ಭವಿಷ್ಯವನ್ನೇ ಹಾಳುಮಾಡಬಹುದು. ಇಂಥ ಗೀಳಿನಿಂದ ಮಕ್ಕಳನ್ನು ದೂರವಿರಿಸಲು, ಅವರ ಜತೆಯಲ್ಲೇ ಕುಳಿತು ಒಳ್ಳೆಯ ಕಥೆಗಳನ್ನೋ, ಕಾರ್ಟೂನುಗಳನ್ನೋ ಓದಿ ವಿವರಿಸುವುದರಿಂದ ಮಕ್ಕಳು 'ಪುಸ್ತಕ ಪ್ರಪಂಚ'ಕ್ಕೆ ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಮಕ್ಕಳ ಮನಸ್ಸು-ಮಿದುಳು ಚುರುಕಾಗಲು ವಿಶೇಷ ಪುಸ್ತಕಗಳೂ ಲಭ್ಯವಿವೆ. ದೇಹಕ್ಕೆ ಮಾತ್ರವಲ್ಲದೆ ಮನಸ್ಸಿಗೂ ವ್ಯಾಯಾಮ ಬೇಕು. ಒಳ್ಳೆಯದೊಂದು ಪುಸ್ತಕವನ್ನು ಓದುವುದೇ ಮನಸ್ಸಿಗೆ ನೀಡುವ ಉತ್ತಮ ವ್ಯಾಯಾಮವೆನಿಸುತ್ತದೆ. ಈ ಪರಿಪಾಠದ ರುಚಿಯನ್ನು ಮಕ್ಕಳಿಗೆ ಹತ್ತಿಸಿಬಿಟ್ಟರೆ ಅವರು ತಾವಾಗಿಯೇ ಓದುವ ಹವ್ಯಾಸವನ್ನು ರೂಢಿಸಿಕೊಂಡು ಮುಂದುವರಿಸುತ್ತಾರೆ. ಆದ್ದರಿಂದ, ಮನೆಯಲ್ಲಿ ಒಂದೊಮ್ಮೆ ಅನುಕೂಲ/ಸೌಲಭ್ಯ ಇಲ್ಲದಿದ್ದರೂ ಪೋಷಕರು ಮಕ್ಕಳ ಜತೆಗೆ ಸನಿಹದ ಗ್ರಂಥಾಲಯಕ್ಕೆ ಭೇಟಿಯಿತ್ತು ಪುಸ್ತಕ-ಪತ್ರಿಕೆಗಳನ್ನು ಓದುವ ಪರಿಪಾಠವನ್ನು ಅವರಲ್ಲಿ ರೂಢಿಸಬೇಕು. ಇದಕ್ಕೆ ವೆಚ್ಚವಾಗುವುದು ಸಮಯವಷ್ಟೇ, ಹಣವಲ್ಲ! ಜತೆಗೆ, ಮಕ್ಕಳ ಜತೆಗಿನ ಪೋಷಕರ ಬಾಂಧವ್ಯದ 'ಭಾವತಂತು' ಕೂಡ ಮತ್ತಷ್ಟು ಗಟ್ಟಿಯಾಗುತ್ತದೆ.

ಇನ್ನು, ಜನ್ಮದಿನ, ಮದುವೆ, ಸನ್ಮಾನ ಮುಂತಾದ ಸಮಾರಂಭಗಳಲ್ಲಿ ಗುಣಮಟ್ಟದ ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವುದು ಒಂದು ಉತ್ತಮ ಪರಿಪಾಠ. ಪ್ರೀತಿಯ ಸಂದೇಶ ಮತ್ತು ಹಸ್ತಾಕ್ಷರವನ್ನು ಒಳಗೊಂಡ ಪುಸ್ತಕವೊಂದನ್ನು ಪ್ರೀತಿಪಾತ್ರರಿಗೆ ಉಡುಗೊರೆಯಾಗಿತ್ತರೆ, ಓದಲು ಅವರಿಗೆ ಪ್ರೇರಣೆ ಸಿಕ್ಕಂತಾಗುತ್ತದೆ. ಅವರು ಇಂಥ ಉಡುಗೊರೆಯನ್ನು ಜತನದಿಂದ ಇಟ್ಟುಕೊಂಡು ಎಂದಾದರೂ ತೆರೆದು ಓದಲೂಬಹುದು, ಆಗ ಅವರ ಮುಖವರಳಿ ಕೊಡುಗೆ ಕೊಟ್ಟವರನ್ನು ನೆನೆಯಲೂಬಹುದು!

ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿ ಇತ್ತೀಚೆಗೆ 'ಪುಸ್ತಕಮೇಳ'ವನ್ನು ಆಯೋಜಿಸಿ, ಆಸಕ್ತ ಓದುಗರಿಗೆ ರಿಯಾಯಿತಿ ದರದಲ್ಲಿ ಪುಸ್ತಕಗಳ ಮಾರಾಟಕ್ಕೆ ಅನುವುಮಾಡಿಕೊಡಲಾಗಿತ್ತು. ಇಂಥ ಮೇಳವನ್ನು ಪ್ರತಿವರ್ಷವೂ ನಡೆಸಬೇಕೆಂಬ ಹಾಗೂ ಪ್ರತಿ ಜಿಲ್ಲಾಕೇಂದ್ರಗಳಲ್ಲೂ ಆಯೋಜಿಸಬೇಕೆಂಬ ಯೋಜನೆ ಪರಿಶೀಲನೆಯಲ್ಲಿದೆ. ಇನ್ನು, ಕನ್ನಡ ಪುಸ್ತಕ ಪ್ರಾಧಿಕಾರವು ಇತರ ಪ್ರಕಾಶಕರ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವ, ಮೈಸೂರು ದಸರಾ ಮುಂತಾದ ಸಂದರ್ಭಗಳಲ್ಲಿ ಪುಸ್ತಕ ಮೇಳಗಳನ್ನು ಆಯೋಜಿಸಿ, ಓದುಗರಿಗೆ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ದೊರಕಿಸಿಕೊಡುತ್ತಿರುವುದು ಗೊತ್ತಿರುವ ಸಂಗತಿಯೇ. ಪುಸ್ತಕಗಳನ್ನು ಕೊಂಡು ಓದುವ ಪರಿಪಾಠವನ್ನು ಬೆಳೆಸುವ ನಿಟ್ಟಿನಲ್ಲಿ ಇಂಥ ಮೇಳಗಳು ಸಹಕಾರಿ.

'ಜೀವನವೊಂದು ನಿರಂತರ ಪಾಠಶಾಲೆ' ಎಂಬ ಮಾತಿದೆ. ಈ ಶಾಲೆಯಲ್ಲಿ ನಾವೆಲ್ಲರೂ ವಿದ್ಯಾರ್ಥಿಗಳೇ. ಇಲ್ಲಿ ಪುಸ್ತಕಗಳೇ ಶಿಕ್ಷಕರು. ಗುಣಮಟ್ಟದ ಪುಸ್ತಕಗಳನ್ನು ಓದೋಣ, ಬದುಕಿನಲ್ಲಿ ವಿವೇಕಿಗಳಾಗೋಣ.

(ಲೇಖಕರು ನಿವೃತ್ತ ಬ್ಯಾಂಕ್ ಅಧಿಕಾರಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 99

ಸಮಾಚಾರ ಸಣ್ಣದಲ್ಲ

ಹಿಂದಿ ಕಡ್ಡಾಯಕ್ಕೆ ಮಹಾ ಸರಕಾರ ತಡೆ

ಮುಂಬೈ: ಮರಾಠಿ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ 1 ರಿಂದ 5 ನೇ ತರಗತಿ ವಿದ್ಯಾರ್ಥಿಗಳಿಗೆ ಹಿಂದಿಯನ್ನು 3ನೇ ಭಾಷೆಯಾಗಿ ಕಡ್ಡಾಯಗೊಳಿಸಿ ಹೊರಡಿಸಿದ್ದ ಆದೇಶವನ್ನು ಮಹಾರಾಷ್ಟ್ರ ಸರಕಾರ ಮಂಗಳವಾರ ತಡೆಹಿಡಿದಿದೆ. ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರಿಗೆ ಹಿಂದಿ 3ನೇ ಭಾಷೆಯಾಗಿಸಿ ನೀಡಿದ ಆದೇಶ ಹಿಂತೆಗೆದುಕೊಳ್ಳುವಂತೆ ಮಹಾರಾಷ್ಟ್ರ ಸರಕಾರದ ಭಾಷಾ ಸಮಾಲೋಚನಾ ಸಮಿತಿ ಒತ್ತಾಯಿಸಿದ ಕೆಲವು ದಿನಗಳ ನಂತರ ಈ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಶಾಲಾ ಶಿಕ್ಷಣ ಸಚಿವ ದಾದಾ ಭೂಸೆ ಅವರು ಮಂಗಳವಾರ ತಿಳಿಸಿದ್ದಾರೆ. 1-5ನೇ ತರಗತಿ ವಿದ್ಯಾರ್ಥಿಗಳಿಗೆ ಹಿಂದಿ 3ನೇ ಭಾಷೆಯಾಗಿಸಿದ ಆದೇಶಕ್ಕೆ ಪ್ರತಿಪಕ್ಷಗಳು, ವಿವಿಧ ವರ್ಗಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಬಾಲಕಿಯ ಅಪಹರಿಸಿ ಅರಣ್ಯದಲ್ಲಿ ಅತ್ಯಾಚಾರ

ರೂರ್ಕೆಲಾ: ಒಡಿಶಾ ರಾಜ್ಯದ ತಲ್ಸಾರಾ ಪ್ರದೇಶದಲ್ಲಿ ಗ್ರಾಮೀಣ ರಸ್ತೆಯಲ್ಲಿ ಸಾಗಿದ್ದ 15 ವರ್ಷದ ಬಾಲಕಿಯನ್ನು ವಾಹನದಲ್ಲಿ ಅಪಹರಿಸಿದ ಮೂವರು ದುಷ್ಕರ್ಮಿಗಳು, ಕಾಡಿಗೆ ಹೊತ್ತೊಯ್ದು ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ. ಘಟನೆ ಏ.21ರ ಮಧ್ಯರಾತ್ರಿ ನಡೆದಿದೆ. ಬಾಲಕಿಯ ಕಡೆಯವರು ನೀಡಿದ ದೂರಿನ ಮೇರೆಗೆ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಏ.21ರ ತಡರಾತ್ರಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಬಾಲಕಿ, ಇತರೆ ಇಬ್ಬರು ಬಾಲಕಿಯರೊಂದಿಗೆ ಮನೆಗೆ ನಡೆದುಕೊಂಡು ಹೋಗುತ್ತಿದ್ದಾಗ ವಾಹನದಲ್ಲಿ ಬಂದ ದುಷ್ಕರ್ಮಿಗಳು ಅಪಹರಿಸಿದ್ದಾರೆ. ಈ ವೇಳೆ, ಇಬ್ಬರು ಬಾಲಕಿಯರು ತಪ್ಪಿಸಿಕೊಂಡಿದ್ದಾರೆ. ಹತ್ತಿರದ ಕಾಡಿನಲ್ಲಿ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ದುಷ್ಕರ್ಮಿಗಳು ಬಳಿಕ ನಿರ್ಜನ ಸ್ಥಳದಲ್ಲಿ ಬಿಟ್ಟು ಹೋಗಿದ್ದಾರೆ ಎಂದು ಸುಂದರಗಢ ಎಸ್‌ಪಿ ಪ್ರತ್ಯೂಷ್ ದಿವಾಕರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಾಹುಲ್‌ಗೆ ಭಾರತ ಜನತೆ ಅಪರಿಚಿತರು!

ಲಖನೌ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿದೇಶಿಯರನ್ನು ಸ್ವಂತದವರಂತೆ, ಭಾರತೀಯರನ್ನು ಅಪರಿಚಿತರಂತೆ ನೋಡುತ್ತಾರೆ ಎಂದು ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ಕಿಡಿಕಾರಿದ್ದಾರೆ. ಕಹಿ ಸತ್ಯವೆಂದರೆ ರಾಹುಲ್ ಗಾಂಧಿ ಅವರು ತಮ್ಮ ನಾಯಕತ್ವ ಕೌಶಲದ ಕೊರತೆಯನ್ನು ಮರೆಮಾಡಲು ವಿದೇಶ ಪ್ರವಾಸ ಕಾಲದಲ್ಲಿ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆಂದು ಟೀಕಿಸಿದ್ದಾರೆ.

ಕುಲಪತಿಗಳ ಸಭೆಗೆ ಧನಕರ್‌ಗೆ ಆಹ್ವಾನ!

ಚೆನ್ನೈ: ತಮಿಳುನಾಡು ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳು ಸಭೆಯನ್ನು ಇದೇ ವಾರಾಂತ್ಯದಲ್ಲಿ ಕರೆದಿರುವ ರಾಜ್ಯಪಾಲ ಆರ್.ಎನ್.ರವಿ

ಅವರು ಸಭೆಯ ಉದ್ಘಾಟನೆಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಅವರನ್ನು ಆಹ್ವಾನಿಸಿದ್ದಾರೆ. ನೀಲಗಿರಿ ಜಿಲ್ಲೆ ಯಲ್ಲಿ ಏ.25-26ರಂದು ಸಭೆ ನಡೆಯಲಿದೆ. ಆದರೆ, ಇದು ರಾಜ್ಯಪಾಲರು ಮತ್ತು ರಾಜ್ಯ ಸರಕಾರದ ನಡುವೆ ಮತ್ತೊಂದು ಸಮರಕ್ಕೆ ಕಾರಣ ವಾಗಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದೇ ವೇಳೆ, ಸಭೆ ಬಹಿಷ್ಕರಿಸುವಂತೆ ಕುಲಪತಿಗಳಿಗೆ ಎಡಪಕ್ಷಗಳು ಕರೆ ನೀಡಿವೆ.

ದೊಡ್ಡ ಮಾರುಕಟ್ಟೆಗೆ ಪ್ರವೇಶ ಕೊಡಿ: ವ್ಯಾನ್ಸ್

ಜೈಪುರ: ಭಾರತದ ದೊಡ್ಡ ಮಾರುಕಟ್ಟೆಗಳಿಗೆ ಅಮೆರಿಕ ಉತ್ಪನ್ನಗಳಿಗೆ ಹೆಚ್ಚಿನ ಪ್ರವೇಶ ಅವಕಾಶ ಮಾಡಿಕೊಡುವಂತೆ ಹಾಗೂ ಅಮೆರಿಕದ ಇಂಧನ ಮತ್ತು ರಕ್ಷಣಾ ಉಪಕರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವಂತೆ ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಕರೆ ನೀಡಿದರು. ಜೈಪುರದಲ್ಲಿ ಮಂಗಳವಾರ ಉದ್ಯಮಿಗಳನ್ನುದ್ದೇಶಿಸಿ ಮಾತನಾಡಿದ ವ್ಯಾನ್ಸ್, ಉನ್ನತ ತಂತ್ರಜ್ಞಾನ, ರಕ್ಷಣೆ, ವ್ಯಾಪಾರ ಮತ್ತು ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಮೆರಿಕ ಮತ್ತು ಭಾರತ ಒಟ್ಟಾಗಿ ಸಾಧಿಸಬಹುದಾದದ್ದು ಬಹಳಷ್ಟಿದೆ ಎಂದರು. ಎರಡೂ ದೇಶಗಳು ಪಾಲುದಾರಿಕೆ ಆದ್ಯತೆಗಳ ಆಧಾರದ ಮೇಲೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದೆಡೆಗೆ ಕೆಲಸ ಮಾಡುತ್ತಿವೆ. ನಾವು ಉಜ್ವಲ ಹೊಸ ಜಗತ್ತನ್ನು ರಚಿಸಲು ಬಯಸುತ್ತೇವೆ, ಅಮೆರಿಕ ಮತ್ತು ಭಾರತ ಒಟ್ಟಾಗಿ ಸಾಧಿಸಬಹುದಾದದ್ದು ಬಹಳಷ್ಟಿದೆ ಎಂದು ನಾನು ನಂಬುತ್ತೇನೆ ಎಂದು ವ್ಯಾನ್ಸ್ ಹೇಳಿದ್ದಾರೆ.

{ **ಡೊನಾಲ್ಡ್ ಟ್ರಂಪ್** } ಅಮೆರಿಕ ಅಧ್ಯಕ್ಷ

ರಷ್ಯಾ ಮತ್ತು ಉಕ್ರೇನ್ ವರ್ಷಕಾಲದ ಯುದ್ಧವನ್ನು ಕೊನೆಗೊಳಿಸಲು ಕಡೆಗೂ ಮನಸ್ಸು ಮಾಡಿವೆ. ಈ ವಾರ ಶಾಂತಿ ಒಪ್ಪಂದ ಆಗುವ ಸಾಧ್ಯತೆ ಇದೆ. ಆ ಬಳಿಕ ಎರಡೂ ದೇಶಗಳೂ ಅಮೆರಿಕ ಜತೆಗೆ ವ್ಯಾಪಾರ ಸಂಬಂಧ ವೃದ್ಧಿಸಿಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬಹುದಾಗಿದೆ. ಎರಡೂ ದೇಶಗಳ ಶಾಂತಿ ಒಪ್ಪಂದ ವಿಚಾರದಲ್ಲಿ ನನಗೆ ಭಾರೀ ವಿಶ್ವಾಸವಿದೆ.

ಉಗ್ರರ ದಾಳಿ ಪ್ರದೇಶದಲ್ಲಿ ಭದ್ರತಾ ಪಡೆ ಶೋಧ ಕಾರ್ಯಾಚರಣೆ

ಪ್ರವಾಸಿಗರ ಸ್ವರ್ಗ ಕಾಶ್ಮೀರದ ಪಹಲ್ಗಾಮ್‌ನಲ್ಲಿ ರಕ್ತದೋಕುಳಿ

ಪಹಲ್ಗಾಮ್: ಜಮ್ಮು-ಕಾಶ್ಮೀರದ ದಕ್ಷಿಣ ಭಾಗದಲ್ಲಿರುವ ಪಹಲ್ಗಾಮ್ 'ಭಾರತದ ಸ್ವಿಜರ್ಲೆಂಡ್' ಎಂದೇ ಪ್ರಸಿದ್ಧಿ. ಹಾಗಾಗಿಯೇ ಪ್ರವಾಸಿಗರ ಅಚ್ಚುಮೆಚ್ಚಿನ ತಾಣ. ಆದರೆ ಈಗ ಅಲ್ಲಿ ರಕ್ತದೋಕುಳಿಯಾಗಿದೆ. ಚಾರಣಕ್ಕೆ ತೆರಳಿದ್ದ ಪ್ರವಾಸಿಗರ ಮೇಲೆ ಪಾಕಿಸ್ತಾನ ಮೂಲದ ಉಗ್ರರ ತಂಡ ಮಾರಣಾಂತಿಕ ದಾಳಿ ಮಾಡಿದೆ. ಪರಿಣಾಮ, ಕನ್ನಡಿಗರೊಬ್ಬರು ಹತರಾಗಿದ್ದಾರೆ. ಇತರೆ 20 ಪ್ರವಾಸಿಗರು ಗಾಯಗೊಂಡಿದ್ದಾರೆ.

ಸೋಮವಾರ ಮಧ್ಯಾಹ್ನ 3 ಗಂಟೆಯ ವೇಳೆಯಲ್ಲಿ ನಡೆದ ಉಗ್ರ ದಾಳಿಯ ಬಳಿಕ ಪಹಲ್ಗಾಮ್‌ನಲ್ಲಿ ಆತಂಕ ಮಡುಗಟ್ಟಿದೆ. ಬೇಸಿಗೆಯಲ್ಲಿ ತಂಪು ಹವೆ, ಸುಂದರ ತಾಣವನ್ನು ಅರಸಿ ಪ್ರವಾಸಕ್ಕೆ ಬಂದಿದ್ದ ದೊಡ್ಡ ಸಂಖ್ಯೆಯ ಪ್ರವಾಸಿಗರೆಲ್ಲಾ ಆಘಾತಕ್ಕೊಳಗಾಗಿದ್ದಾರೆ. ಹಲವರಲ್ಲಿ ಭಯ ಮಡುಗಟ್ಟಿದೆ. ಮಹಿಳೆಯರು, ಮಕ್ಕಳಂತೂ ಭಯದಲ್ಲಿ ನಡುಗುತ್ತಿದ್ದರು. ಕೆಲವರು ಜೋರಾಗಿ ಅಳುತ್ತಿದ್ದರು. ಉಗ್ರರ ದಾಳಿ ನಡೆದ ಪ್ರದೇಶದಿಂದ ಗಾಯಾಳುಗಳನ್ನು ಕರೆದುಕೊಂಡು ಒಂದರ ಹಿಂದೊಂದು ಆಂಬ್ಯುಲೆನ್ಸ್‌ಗಳು ಸೈರನ್ ಮೊಳಗಿಸುತ್ತಾ ಆಸ್ಪತ್ರೆಯತ್ತ ಶರವೇಗದಲ್ಲಿ ಧಾವಿಸುತ್ತಿದ್ದವು. ಆಂಬ್ಯುಲೆನ್ಸ್‌ಗಳ ಜತೆಗೇ ಕೆಲವು ಪೊಲೀಸರು, ಸ್ಥಳೀಯರು ಆಸ್ಪತ್ರೆಗೆ ದೌಡಾಯಿಸಿ ಗಾಯಾಳುಗಳನ್ನು ದಾಖಲಿಸಲು ನೆರವಾಗುತ್ತಿದ್ದರು.

ಹೆಲಿಕಾಪ್ಟರ್ ಬಳಕೆ: ಗಂಭೀರವಾಗಿ ಗಾಯಗೊಂಡಿದ್ದವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯಲು ಸೇನೆಯ ಹೆಲಿಕಾಪ್ಟರ್ ಕೂಡಾ ಬಳಸಲಾಗಿದೆ. ಜಂಟಿ ಭದ್ರತಾ ಪಡೆಗಳ ಯೋಧರು ಬಂದೂಕು ಹಿಡಿದು ಓಡುತ್ತಾ ಉಗ್ರರ ದಾಳಿ ನಡೆಸಿದ ಪ್ರದೇಶವನ್ನು ಸುತ್ತುವರಿಯುತ್ತಾ ಪ್ರತಿದಾಳಿಗೆ ಮುಂದಾಗಿದ್ದರು. ಪಹಲ್ಗಾಮ್‌ನಲ್ಲಿನ ದಾಳಿ ಪ್ರದೇಶದಲ್ಲಿ ಆತಂಕ, ಧಾವಂತದ ಸನ್ನಿವೇಶ ಕಾಣಬರುತ್ತಿತ್ತು.

ಉಗ್ರರ ದಾಳಿ ನಡೆದ ಪ್ರದೇಶ

ಹಣೆಗೇ ಗುಂಡಿಕ್ಕಿದರು

ನನ್ನ ಪತಿಯ ಪತಿಯ ಹಣೆಗೇ ಗುರಿಯಿಟ್ಟು ಗುಂಡಿಕ್ಕಿದ್ದರು. ಅದೇ ಸ್ಥಳದಲ್ಲಿದ್ದ ಇತರೆ 7 ಮಂದಿಗೂ ಉಗ್ರರು ಗುಂಡು ಹಾರಿಸಿದರು ಎಂದು ಶಿವಮೊಗ್ಗದ ಮಂಜುನಾಥ್ ಅವರ ಪತ್ನಿ ಪಲ್ಲವಿ ಕಣ್ಣೀರ್ಗರೆಯುತ್ತಾ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಪೈನ್ ಮರಗಳ ಸಂದಿಯಿಂದ ಬಂದರು!

ಉಗ್ರರ ಗುಂಪು ದಟ್ಟವಾಗಿ ಬೆಳೆದಿರುವ ಪೈನ್ ಮರಗಳ ಅರಣ್ಯ ಪ್ರದೇಶದಿಂದ ನುಸುಳಿಕೊಂಡು ಪ್ರವಾಸಿಗರಿದ್ದ ಸ್ಥಳಕ್ಕೆ ಬಂದು ದಾಳಿ ನಡೆಸಿದೆ. ಬಳಿಕ ಅದೇ ಕಾಡಿನ ಮೂಲಕ ಪರಾರಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 1980ರ ದಶಕದಲ್ಲಿ ಹಿಂದಿ ಸಿನಿಮಾಗಳು ಚಿತ್ರೀಕರಣ ನಡೆಸುತ್ತಿದ್ದ ಸುಂದರವಾದ ಬೈಸಾರನ್ ಪ್ರದೇಶದಲ್ಲಿಯೇ ಉಗ್ರರು ದಾಳಿ ನಡೆದಿದೆ. ಸದ್ಯ ಭಾರತೀಯ ಸೇನೆ, ಸಿಆರ್‌ಪಿಎಫ್ ಮತ್ತು ಕಾಶ್ಮೀರ ಪೊಲೀಸ್ ಇಲಾಖೆಯ ಉಗ್ರರ ಧಮನ ಕಾರ್ಯದಲ್ಲಿ ನುರಿತ ಯೋಧರ ಜಂಟಿ ಪಡೆಗಳು ಈ ಅರಣ್ಯ ಪ್ರದೇಶವನ್ನು ಸುತ್ತುವರಿದಿವೆ. ಸೇನಾ ಕಾರ್ಯಾಚರಣೆ ಹಿನ್ನೆಲೆ ಬೈಸಾರನ್‌ನಲ್ಲಿನ ರೆಸಾರ್ಟ್‌ಗಳಿಂದ ಪ್ರವಾಸಿಗರನ್ನು ತೆರವುಗೊಳಿಸಲಾಗಿದೆ.

ಗೂಗಲ್‌ಗೆ ಸಿಸಿಐ 23.80 ಲಕ್ಷ ಡಾಲರ್ ದಂಡ

ಆಂಡ್ರಾಯ್ಡ್ ಟಿವಿಗಳಲ್ಲಿನ ಗೂಗಲ್ ಏಕಸ್ವಾಮ್ಯ ಅಂತ್ಯ

ದೆಹಲಿ: ಭಾರತದಲ್ಲಿನ ಆಂಡ್ರಾಯ್ಡ್ ಆಧಾರಿತ ಸ್ಮಾರ್ಟ್ ಟಿವಿಗಳಲ್ಲಿ ಇನ್ನು ಮುಂದೆ ಗೂಗಲ್ ಡೀಫಾಲ್ಟ್ ಆಪರೇಟಿಂಗ್ ಸಿಸ್ಟಂ ಆಗಿ ಬಳಕೆ ಆಗುವುದಿಲ್ಲ. ಡೀಫಾಲ್ಟ್ ಆಪ್ ಸ್ಟೋರ್ ಆಗಿರುವುದಿಲ್ಲ. ಭಾರತದ ಸ್ಪರ್ಧಾತ್ಮಕ ಆಯೋಗ(ಸಿಸಿಐ) ಅಂಗೀಕರಿಸಿದ ಮಹತ್ವದ ನಿಯಮದಿಂದ ಈ ಬದಲಾವಣೆ ಆಗಿದೆ.

ಭಾರತದಲ್ಲಿ ಸ್ಮಾರ್ಟ್ ಟಿವಿಗಳ ವಿಭಾಗದಲ್ಲಿ ಸ್ಪರ್ಧಾತ್ಮಕ ವಿರೋಧಿ ನಡೆಗಳನ್ನು ಅನುಸರಿಸುತ್ತಿರುವ ಬಗ್ಗೆ ಗೂಗಲ್‌ನ ಪೋಷಕ ಸಂಸ್ಥೆ 'ಆಲ್ಫಾಬೆಟ್' ಅನ್ನು ಸಿಸಿಐ ತರಾಟೆಗೆ ತೆಗೆದುಕೊಂಡಿತ್ತು. ಈ ವಲಯದಲ್ಲಿ ಏಕಸ್ವಾಮ್ಯ ಸೃಷ್ಟಿಗೆ ಗೂಗಲ್ ಯತ್ನಿಸುತ್ತಿದೆ ಎಂದು ಅಸಮಧಾನ ವ್ಯಕ್ತಪಡಿಸಿತ್ತು. ಅಲ್ಲದೇ, ಗೂಗಲ್‌ಗೆ 'ಸಿಸಿಐ' 23.80 ಲಕ್ಷ ಡಾಲರ್ ದಂಡವನ್ನೂ ವಿಧಿಸಿದೆ. ಭಾರತ ಗೂಗಲ್ ಅತಿದೊಡ್ಡ ಮಾರುಕಟ್ಟೆ. ಗೋಗಲ್‌ನ ಟೆಲಿವಿಷನ್ ಅಪ್ಲಿಕೇಶನ್ ವಿತರಣಾ ಒಪ್ಪಂದದಡಿ ತನ್ನ ಆಪರೇಟಿಂಗ್ ಸಿಸ್ಟಮ್, ಗೂಗಲ್ ಪ್ಲೇ ಸ್ಟೋರ್ ಮತ್ತು ಸಂಬಂಧಿತ ಅಪ್ಲಿಕೇಶನ್‌ಗಳನ್ನು ಮೊದಲೇ ಸ್ಥಾಪಿಸುವ ಕಂಪನಿಯ ನಡೆ ತನ್ನ ಪ್ರಬಲ ಸ್ಥಾನವನ್ನು ದುರುಪಯೋಗಪಡಿಸಿಕೊಂಡಂತೆ ಎಂದು 'ಸಿಸಿಐ' ಹೇಳಿದೆ. ಗೂಗಲ್ ಮತ್ತು ಆಲ್ಫಾಬೆಟ್ ವಿರುದ್ಧ ಇಬ್ಬರು ವಕೀಲರು ಅರ್ಜಿ ಸಲ್ಲಿಸಿದ್ದರು. ನಂತರ 'ಸಿಸಿಐ' ತನಿಖೆಗೆ ಆದೇಶಿಸಿತು. ಪರ್ಯಾಯ ಆಪರೇಟಿಂಗ್ ಸಿಸ್ಟಂ ಅಭಿವೃದ್ಧಿ ಅಥವಾ ಆಂಡ್ರಾಯ್ಡ್ ಸ್ಮಾರ್ಟ್ ಟಿವಿಗಳಾಗಿ ಮಾರ್ಪಾಟು ಮಾಡುವುದನ್ನು ಅಭಿವೃದ್ಧಿಪಡಿಸಲು ಬಯಸುವ ಸಣ್ಣ ಸಂಸ್ಥೆಗಳಿಗೆ ಗೋಗಲ್ ತಡೆಯೊಡ್ಡುತ್ತಿದೆ ಎಂದು ಅಭಿಪ್ರಾಯಪಟ್ಟಿತು. ಆಂಡ್ರಾಯ್ಡ್ ಸ್ಮಾರ್ಟ್ ಟಿವಿಗಳಿಗೆ ಸೇವೆಗಳನ್ನು ಒಟ್ಟುಗೂಡಿಸುವ ಬದಲು ಸ್ವತಂತ್ರ ಪರವಾನಗಿಗೆ ಅರ್ಜಿ ಸಲ್ಲಿಸಲು ಒಪ್ಪಿದೆ. ಪೂರ್ವ- ಸ್ಥಾಪನೆಗೆ ಉಚಿತವಿದ್ದ ಗೂಗಲ್ ಪ್ಲೇ ಸ್ಟೋರ್ ಮತ್ತು ಪ್ಲೇ ಸೇವೆಗೆ ಇನ್ನು ಮುಂದೆ ಶುಲ್ಕವಿರಲಿದೆ. ಆಂಡ್ರಾಯ್ಡ್ ಟಿವಿ ತಯಾರಕರು ತಮ್ಮಿಷ್ಟದ, ಓಪನ್-ಸೋರ್ಸ್‌ನಲ್ಲಿ ಲಭ್ಯವಿರುವ ಆಪರೇಟಿಂಗ್ ಸಿಸ್ಟಂಗಳನ್ನು ಟಿವಿಗೆ ಅಳವಡಿಸಲು ಮುಕ್ತರಾಗಿದ್ದಾರೆ ಎಂದು ತಿಳಿಸಲಾಗಿದೆ.

ವಿಮಾನಕ್ಕೆ ಬೆಂಕಿ, ಪ್ರಯಾಣಿಕರು ಪಾರು

ಫ್ಲೋರಿಡಾ: ಅಮೆರಿಕದಲ್ಲಿ ಸಂಭಾವ್ಯ ಬೃಹತ್ ವಿಮಾನ ದುರಂತವೊಂದು ಕೂದಲೆಳೆ ಅಂತರದಲ್ಲಿ ತಪ್ಪಿದೆ. ಡೆಲ್ಟಾ ಏರ್‌ಲೈನ್ಸ್ ಸಂಸ್ಥೆಯ ನಂ.1213ನೇ ಸಂಖ್ಯೆಯ ವಿಮಾನದ ಬಲಭಾಗದ ಎಂಜಿನ್‌ಗೆ ಬೆಂಕಿ ಹೊತ್ತಿ ಉರಿದು ಹೋಗಿದೆ. 282 ಪ್ರಯಾಣಿಕರು ಮತ್ತು ಸಿಬ್ಬಂದಿ ಸ್ವಲ್ಪದರಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಒರ್ಲ್ಯಾಂಡೊ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅಟ್ಲಾಂಟಾ ನಗರಕ್ಕೆ ತೆರಳಲು ಸಿದ್ಧವಾಗಿದ್ದ ಡೆಲ್ಟಾ ಏರ್‌ಲೈನ್ಸ್ ವಿಮಾನ ಸೋಮವಾರ ಬೆಳಗ್ಗೆ 11.15ರಲ್ಲಿ ಟೇಕ್ ಆಫ್ ಆಗುವ ಸಂದರ್ಭದಲ್ಲೇ ಎಂಜಿನ್‌ಗೆ ಬೆಂಕಿ ಹೊತ್ತಿದೆ. ಪೈಲಟ್ ತಕ್ಷಣ ಗಮನಿಸಿ ವಿಮಾನದ ಎಂಜಿನ್ ಸ್ಥಗಿತಗೊಳಿಸಿದ್ದರಿಂದ ದೊಡ್ಡ ಪ್ರಾಣಾಪಾಯ ತಪ್ಪಿದೆ. ಪ್ರಯಾಣಿಕರನ್ನು ಸ್ಲೈಡ್‌ಗಳನ್ನು(ಜಾರುಬಂಡಿಯಂತಹ ತುರ್ತು ನಿರ್ಗಮನ ವಿಧಾನ) ಬಳಸಿಕೊಂಡು ತ್ವರಿತಗತಿಯಲ್ಲಿ ವಿಮಾನದಿಂದ ಇಳಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ. ಅಟ್ಲಾಂಟಾಗೆ ತೆರಳುತ್ತಿದ್ದ ವಿಮಾನ ರನ್‌ವೇಗೆ ಹೊರಟಾಗ ಎರಡು ಎಂಜಿನ್‌ಗಳಲ್ಲಿ ಒಂದು ಬೆಂಕಿಗೆ ಆಹುತಿಯಾಯಿತು. ವಿಮಾನದ ಬಲಬದಿ ಎಂಜಿನ್ ಹೊತ್ತಿ ಉರಿಯುತ್ತಿರುವ ದೃಶ್ಯವನ್ನು ಟರ್ಮಿನಲ್‌ನಲ್ಲಿದ್ದ ಪ್ರಯಾಣಿಕರೊಬ್ಬರು ಮೊಬೈಲ್‌ನಲ್ಲಿ ವಿಡಿಯೋ ಮಾಡಿದ್ದು, ಅದೀಗ ವೈರಲ್ ಆಗಿದೆ. ಘಟನೆ ಬಗ್ಗೆ ಎಫ್‌ಎಎ ತನಿಖೆ ಆರಂಭಿಸಿದೆ.

ಯುಪಿಎಸ್‌ಸಿ ಪರೀಕ್ಷೆಯಲ್ಲೂ ನಾರಿಶಕ್ತಿಯ ಅದ್ಭುತ ಸಾಧನೆ

ದೆಹಲಿ: ಯುಪಿಎಸ್‌ಸಿ ನಾಗರಿಕ ಸೇವೆಗಳ ಪರೀಕ್ಷೆ-2024ರ ಫಲಿತಾಂಶ ಪ್ರಕಟವಾಗಿದೆ. ಯುಪಿಎಸ್‌ಸಿ 1009 ಅಭ್ಯರ್ಥಿಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಶಕ್ತಿ ದುಬೆ ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಯಲ್ಲೂ ನಾರಿ ಶಕ್ತಿಯ ಸಾಧನೆಯಾಗಿದೆ. ಶಕ್ತಿ ದುಬೆ ಮೊದಲ ರ‍್ಯಾಂಕ್ ಗಳಿಸಿದ್ದಾರೆ. ಅಲ್ಲದೇ, ಮೊದಲ 5 ರ‍್ಯಾಂಕ್ ಪಡೆದವರಲ್ಲಿ ಮೂವರು ಮಹಿಳೆಯರೇ ಇದ್ದಾರೆ. ಹರ್ಷಿತಾ ಗೋಯಲ್ ಮತ್ತು ಡೋಂಗ್ರೆ ಅರ್ಚಿತ್ ಪರಾಗ್ ಕ್ರಮವಾಗಿ 2 ಮತ್ತು 3ನೇ ರ‍್ಯಾಂಕ್ ಗಳಿಸಿದ್ದಾರೆ. ಯುಪಿಎಸ್‌ಸಿ ನಾಗರಿಕ ಸೇವೆಗಳ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ 2845 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗಿತ್ತು. ಜ.7ರಿಂದ ಸಂದರ್ಶನ ಸುತ್ತು ಪ್ರಾರಂಭವಾಗಿತ್ತು. ಸಂದರ್ಶನ ಏ.17ರವರೆಗೆ ನಡೆದಿವೆ. ಸಾಮಾನ್ಯ ವರ್ಗದ 335 ಅಭ್ಯರ್ಥಿ ಗಳು ರ‍್ಯಾಂಕ್ ಗಳಿಸಿದ್ದಾರೆ. ಆರ್ಥಿಕವಾಗಿ ದುರ್ಬಲ ವರ್ಗದಿಂದ (ಇಡಬ್ಲ್ಯುಎಸ್) 109 ಅಭ್ಯರ್ಥಿಗಳು ಮತ್ತು ಒಬಿಸಿ ವರ್ಗದಿಂದ 318 ಅಭ್ಯರ್ಥಿಗಳು ರ‍್ಯಾಂಕ್ ಗಳಿಸಿದ್ದಾರೆ.

ಮೊದಲ 20 ರ‍್ಯಾಂಕ್

- ಶಕ್ತಿ ದುಬೆ
- ಹರ್ಷಿತಾ ಗೋಯಲ್
- ಡೋಂಗ್ರೆ ಅರ್ಚಿತ್ ಪರಾಗ್
- ಶಾ ಮಾರ್ಗಿ ಚಿರಾಗ್
- ಆಕಾಶ್ ಗರ್ಗ್
- ಕೋಮಲ್ ಪುನಿಯಾ
- ಆಯುಷಿ ಬನ್ಸಾಲ್
- ರಾಜ್ ಕೃಷ್ಣ ಝಾ
- ಆದಿತ್ಯ ವಿಕ್ರಮ್ ಅಗರ್ವಾಲ್
- ಮಾಯಾಂಕ್ ತ್ರಿಪಾಠಿ
- ಎತ್ತಬೋಯಿನಾ ಸಾಯಿ ಶಿವಾನಿ
- ಆಶಿ ಶರ್ಮಾ
- ಹೇಮಂತ್
- ಅಭಿಷೇಕ್ ವಶಿಷ್ಠ
- ಬನ್ನ ವೆಂಕಟೇಶ್
- ಮಾಧವ್ ಅಗರ್ವಾಲ್
- ಸಂಸ್ಕೃತಿ ತ್ರಿವೇದಿ
- ಸೌಮ್ಯ ಮಿಶ್ರಾ
- ವಿಭೋರ್ ಭಾರದ್ವಾಜ್
- ತ್ರಿಲೋಕ್ ಸಿಂಗ್

2 ದಿನ ಸೌದಿ ಪ್ರವಾಸ | ಜೆಡ್ಡಾ ವಿಮಾನ ನಿಲ್ದಾಣದಲ್ಲಿ 21 ಗನ್ ಸೆಲ್ಯೂಟ್

ಪ್ರಧಾನಿ ಮೋದಿಗೆ ಸೌದಿಯಲ್ಲಿ ಭವ್ಯ ಸ್ವಾಗತ

ದೆಹಲಿ: ಸೌದಿ ರಾಜಕುಮಾರ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಮಂಗಳವಾರದಿಂದ 2 ದಿನ ಸೌದಿ ಅರೇಬಿಯ ಪ್ರವಾಸ ಕೈಗೊಂಡಿದ್ದಾರೆ. ಸೌದಿಗೆ ಇದು ಮೋದಿ ಅವರ 3ನೇ ಭೇಟಿಯಾಗಿದೆ.

ಸೌದಿ ಅರೇಬಿಯದ ಜೆಡ್ಡಾದಲ್ಲಿ ಮಂಗಳವಾರ ಮಧ್ಯಾಹ್ನ ಬಂದಿಳಿದ ಪ್ರಧಾನಿ ಮೋದಿ ಅವರನ್ನು 21 ಗನ್ ಸಲ್ಯೂಟ್‌ನೊಂದಿಗೆ ಸ್ವಾಗತಿಸಲಾಯಿತು. ಅದಕ್ಕೂ ಮುನ್ನ, ಮೋದಿ ಅವರ ವಿಮಾನ ಸೌದಿಯ ವಾಯು ಪ್ರದೇಶ ಪ್ರವೇಶಿಸುತ್ತಿದ್ದಂತೆಯೇ ಸೌದಿ ಅರೇಬಿಯ ವಾಯುಪಡೆಯ ಎಫ್-35 ಯುದ್ಧವಿಮಾನಗಳು ಬೆಂಗಾವಲಿಗೆ ಹಾರಿಬಂದು ಗೌರವ ಸಲ್ಲಿಸಿದವು. ಸೌದಿಯ ಗಾಯಕರೊಬ್ಬರು 'ಏ ವತನ್' ಹಿಂದಿ ಗೀತೆ ಹಾಡಿ ಪ್ರಧಾನಿ ಮೋದಿ ಅವರಿಗೆ ಸ್ವಾಗತ ಕೋರಿದರು. ಮೋದಿ ಮತ್ತು ಹಾಜರಿದ್ದ ಭಾರತೀಯ ಸಮೂಹ ಚಪ್ಪಾಳೆ ತಟ್ಟಿ ಗಾಯಕನ ಹಾಡಿಗೆ ಮೆಚ್ಚುಗೆ ಸೂಚಿಸಿದರು.

ಭಾರತ-ಸೌದಿ ಅರೇಬಿಯ ರಕ್ಷಣೆ, ವ್ಯಾಪಾರ, ಹೂಡಿಕೆ, ಇಂಧನ ಮತ್ತು ಜನರಿಂದ ಜನರಿಗೆ ಸಂಬಂಧಗಳ ಕ್ಷೇತ್ರಗಳಲ್ಲಿ ಪರಸ್ಪರ ಪ್ರಯೋಜನಕಾರಿ ಮತ್ತು ಗಣನೀಯ ಪಾಲುದಾರಿಕೆ ಅಭಿವೃದ್ಧಿಪಡಿಸಿವೆ ಎಂದು ಹೊರಡುವುದಕ್ಕೂ ಮುನ್ನ 'ಎಕ್ಸ್' ಸಂದೇಶದಲ್ಲಿ ಮೋದಿ ಬರೆದಿದ್ದಾರೆ. ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರನ್ನು ಸೋಮವಾರ ಸಂಜೆ ಭೇಟಿ ಮಾಡಿದ ಬಳಿಕ ಮೋದಿ, ಸೌದಿ ಅರೇಬಿಯಕ್ಕೆ ಹೊರಟರು. ಸೌದಿ ಅರೇಬಿಯ ಜತೆಗಿನ ಐತಿಹಾಸಿಕ ಸಂಬಂಧವನ್ನು ಭಾರತ ಸದಾ ಗೌರವಿಸುತ್ತದೆ. ಕಳೆದ ದಶಕದಲ್ಲಿ ದ್ವಿಪಕ್ಷೀಯ ಸಂಬಂಧಗಳು ಗಮನಾರ್ಹ ವೇಗವನ್ನು ಪಡೆದುಕೊಂಡಿವೆ. ಕಾರ್ಯತಂತ್ರ ಪಾಲುದಾರಿಕೆ ಮಂಡಳಿಯ 2ನೇ ಸಭೆಯಲ್ಲಿ ಭಾಗಿಯಾಗಲು ಎದುರು ನೋಡುತ್ತಿದ್ದೇನೆ. ಭಾರತೀಯ ಸಮುದಾಯದೊಂದಿಗೂ ಸಂವಹನ ನಡೆಸಲಿದ್ದೇನೆ. ಜೆಡ್ಡಾದಲ್ಲಿ ಹಲವು ಸಭೆಗಳು ಮತ್ತು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದೇನೆ ಎಂದು ಪ್ರಧಾನಿ 'ಎಕ್ಸ್'ನಲ್ಲಿ ಬರೆದಿದ್ದಾರೆ.

ಮೋದಿ ಅವರ ಜೆಡ್ಡಾ ಭೇಟಿ ಸಂದರ್ಭ ಭಾರತ-ಸೌದಿ ಅರೇಬಿಯ 6 ಒಡಂಬಡಿಕೆ ಪತ್ರಗಳಿಗೆ ಸಹಿ ಹಾಕಲಿವೆ. ಪ್ರಧಾನಿ ಮೋದಿ ಮಂಗಳವಾರ ಸಂಜೆ ಪ್ರಿನ್ಸ್ ಮೊಹಮ್ಮದ್ ಬಿನ್ ಸಲ್ಮಾನ್ ಅಲ್ ಸೌದ್ ಭೇಟಿ ವೇಳೆ, ಭಾರತದ ಹಜ್ ಯಾತ್ರಿಕರ ಕೋಟಾ ವಿಚಾರವನ್ನೂ ಚರ್ಚಿಸಲಿದ್ದಾರೆ ಎಂದು ತಿಳಿದುಬಂದಿದೆ.

ನಾನು ಭಾರತದಲ್ಲೇ ಇರುವೆ: ವ್ಯಾನ್ಸ್ ಪುತ್ರ ಇವಾನ್

ದೆಹಲಿ: 'ಅಪ್ಪಾ, ನನಗೆ ಭಾರತ ಬಹಳ ಇಷ್ಟವಾಗಿದೆ. ನಾನು ಭಾರತದಲ್ಲೇ ಇರಲು ಇಚ್ಛಿಸುವೆ'...

ಇದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ -ಭಾರತ ಮೂಲದ ಉಷಾ ವ್ಯಾನ್ಸ್ ದಂಪತಿಯ ಪುತ್ರ, 7 ವರ್ಷದ ಇವಾನ್ ಆಸೆಯಾಗಿದೆ.

ಜೆ.ಡಿ.ವ್ಯಾನ್ಸ್ ದಂಪತಿ ತಮ್ಮ ಮೂವರು ಮಕ್ಕಳೊಂದಿಗೆ ಭಾರತ ಪ್ರವಾಸದಲ್ಲಿದ್ದಾರೆ. ಸೋಮವಾರ ರಾತ್ರಿ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಉಪಾಧ್ಯಕ್ಷರ ಕುಟುಂಬಕ್ಕೆ ಏರ್ಪಡಿಸಿದ್ದ ವಿಶೇಷ ಔತಣಕೂಟ ಮೂರೂ ಮಕ್ಕಳಿಗೆ ಮೆಚ್ಚುಗೆಯಾಗಿದೆ. ಅದರಲ್ಲೂ 7 ವರ್ಷದ ಇವಾನ್‌ಗಂತೂ ಊಟದಲ್ಲಿನ ರುಚಿಕರ ತಿನಿಸುಗಳು ಬಹಳ ಇಷ್ಟವಾಗಿವೆ. ಅಲ್ಲದೇ, ಪ್ರಧಾನಿ ಮೋದಿ ಅವರ ಒಡನಾಟ, ತಮಾಷೆಯ ಮಾತು, ಅವರು ಕೊಟ್ಟ ನವಿಲುಗರಿ ಉಡುಗೊರೆ ಎಲ್ಲವೂ ಅವನ ಮನಗೆದ್ದಿವೆ. ಹಾಗಾಗಿ ಇವಾನ್, ಭಾರತದಲ್ಲೇ ಇರಲು ಇಷ್ಟಪಡುತ್ತಿದ್ದಾನೆ. ಅದೇ ಮಾತನ್ನು ತಂದೆ ವ್ಯಾನ್ಸ್ ಬಳಿಯೂ ಹೇಳಿದ್ದಾನೆ. 'ಅಪ್ಪ ನಾನು ಭಾರತದಲ್ಲೇ ಉಳಿಯಲು ಇಷ್ಟಪಡುವೆ' ಎಂದಿದ್ದಾನೆ. ಈ ಮಾತನ್ನು ಸ್ವತಃ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರೇ ಜೈಪುರದಲ್ಲಿ ಮಂಗಳವಾರದ ಕಾರ್ಯಕ್ರಮದಲ್ಲಿ ಬಹಿರಂಗಪಡಿಸಿದ್ದಾರೆ.

ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರ ಇಬ್ಬರು ಪುತ್ರರು, ಒಬ್ಬ ಪುತ್ರಿ, ಪೋಷಕರೊಂದಿಗೆ ತಮ್ಮ ಭೇಟಿಗೆ ಸೋಮವಾರ ಸಂಜೆ ಆಗಮಿಸಿದ್ದಾಗ ಪ್ರಧಾನಿ ನರೇಂದ್ರ ಮೋದಿ ನವಿಲುಗರಿ ನೀಡಿದರು.

ಟ್ರಂಪ್ ಆಡಳಿತ ವಿರುದ್ಧ ಹಾರ್ವರ್ಡ್ ವಿವಿ ದಾವೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯದ ನಡುವಿನ 'ಅನುದಾನ ಸ್ಥಗಿತ' ಮತ್ತು 'ಎಡಪಂಥೀಯ ಧೋರಣೆ' ಜಟಾಪಟಿ ದಿನದಿಂದ ದಿನಕ್ಕೆ ಜೋರಾಗುತ್ತಿದೆ.

ಹಾರ್ವರ್ಡ್ ವಿವಿ ಎಡಪಂಥೀಯ ದೋರಣೆ ಅನುಸರಿಸುತ್ತಿರುವುದು ಸರಿಯಲ್ಲ, ಅದು ದೇಶದ ಭದ್ರತೆಗೆ ಸವಾಲಾಗಿದೆ ಎಂದಿರುವ ಟ್ರಂಪ್ ಆಡಳಿತ, ಅಮೆರಿಕ ಸರಕಾರ ವಿಶ್ವವಿದ್ಯಾಲಯಕ್ಕೆ ನೀಡುತ್ತಿದ್ದ 220 ಕೋಟಿ ಡಾಲರ್ ಅನುದಾನವನ್ನು ಸ್ಥಗಿತಗೊಳಿಸುವುದಾಗಿ ಟ್ರಂಪ್ ಆಡಳಿತ ಎಚ್ಚರಿಸಿದೆ. ಇದರ ವಿರುದ್ಧ ಹಾರ್ವರ್ಡ್ ವಿವಿ ಆಡಳಿತ ಕೋರ್ಟ್ ಮೆಟ್ಟಿಲೇರಿದೆ. ಟ್ರಂಪ್ ಆಡಳಿತ ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನಿಲ್ಲಿಸಿದೆ. ಈಗ ಹಾರ್ವರ್ಡ್ ವಿವಿ ಮತ್ತು ಸರಕಾರದ ನಡುವೆ ಜಟಾಪಟಿ ನಡೆದಿದೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಆರೋಗ್ಯ ಸಂಶೋಧನೆ ಗುರಿಯಾಗಿಸಿ ಅನುದಾನ ತಡೆಹಿಡಿದಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ವಾಸ್ತವವಾಗಿ, ಟ್ರಂಪ್ ಸರಕಾರ ಈಗಾಗಲೇ 220 ಕೋಟಿ ಡಾಲರ್ ಅನುದಾನ ಸ್ಥಗಿತಗೊಳಿಸಿದೆ. ಅದಲ್ಲದೇ 2ನೇ ಹಂತದಲ್ಲಿ 100 ಕೋಟಿ ಡಾಲರ್ ಅನುದಾನ ಕಡಿತಗೊಳಿಸುವುದಾಗಿ ವಿವಿಗೆ ಎಚ್ಚರಿಕೆ ನೀಡಿದೆ.

ತೆಲುಗು ನಟ ಮಹೇಶ್ ಬಾಬುಗೆ ಇ.ಡಿ ನೋಟಿಸ್

ಹೈದರಾಬಾದ್: ತೆಲುಗು ಚಿತ್ರರಂಗದ ಜನಪ್ರಿಯ ನಟ ಮಹೇಶ್ ಬಾಬು ಅವರಿಗೆ ಜಾರಿ ನಿರ್ದೇಶನಾಲಯ(ಇ.ಡಿ.) ನೋಟಿಸ್ ನೀಡಿದೆ. ಹೈದರಾಬಾದ್‌ನ ಸುರಾನ ಗ್ರೂಪ್ ಮತ್ತು ಸಾಯಿಸೂರ್ಯ

ಡೆವಲಪರ್ಸ್‌ಗಳಿಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣ ಸಂಬಂಧ ಸಾಕ್ಷಿದಾರರಾಗಿ ಹೇಳಿಕೆ ನೀಡಲು ಏ.28ರ ಬೆಳಗ್ಗೆ 10.30ಕ್ಕೆ ಇ.ಡಿ. ಕಚೇರಿಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಈ ರಿಯಲ್ ಎಸ್ಟೇಟ್ ಕ್ಷೇತ್ರದ ಕಂಪನಿಗಳ ಯೋಜನೆಗಳ ಪ್ರಚಾರದಲ್ಲಿ ಮಹೇಶ್ ಬಾಬು ಭಾಗಿಯಾಗಿದ್ದು, ಜಾಹಿರಾತು ಒಪ್ಪಂದಕ್ಕಾಗಿ ಒಟ್ಟು 5.90 ಕೋಟಿ ರು.ಗಳನ್ನು ಪಡೆದಿದ್ದರು. ಇದರಲ್ಲಿ ಚೆಕ್ ಮೂಲಕ 3.40 ಕೋಟಿ ರು. ಮತ್ತು ನಗದು ರೀತಿಯಲ್ಲಿ 2.50 ಕೋಟಿ ರು.ಗಳನ್ನು ಪಡೆದಿದ್ದಾರೆ. ಈಗ, ನಗದು ಪಾವತಿ ಇ.ಡಿ ಪರಿಶೀಲನೆಗೆ ಒಳಪಟ್ಟಿದೆ.

ಸುರಾನ ಗ್ರೂಪ್ ಮತ್ತು ಸಾಯಿಸೂರ್ಯ ಡೆವಲಪರ್ಸ್ ಸಂಸ್ಥೆಗಳ ವಿರುದ್ಧ ವಂಚನೆ ಆರೋಪವೂ ಕೇಳಿಬಂದಿದ್ದು, ತೆಲಂಗಾಣ ಪೊಲೀಸರು ಭಾಗ್ಯನಗರ ಪ್ರಾಪರ್ಟೀಸ್ ಲಿ.ನ ನರೇಂದ್ರ, ಸುರಾನ ಮತ್ತು ಸಾಯಿ ಸೂರ್ಯ ಡೆವಲಪರ್ಸ್‌ನ ಸತೀಶ್ ಚಂದ್ರ ಗುಪ್ತಾ ವಿರುದ್ಧ ಹಲವು ಎಫ್‌ಐಆರ್‌ಗಳನ್ನು ದಾಖಲಿಸಿದ್ದಾರೆ. ಇಬ್ಬರೂ ಅನಧಿಕೃತ ಲೇಔಟ್‌ಗಳಲ್ಲಿ ಪ್ಲಾಟ್‌ಗಳ ಮಾರಾಟ ನೆಪದಲ್ಲಿ ಜನರಿಗೆ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಕೋಟ: ಮತ್ತೊಬ್ಬ ನೀಟ್ ಆಕಾಂಕ್ಷಿ ಆತ್ಮಹತ್ಯೆ

ಕೋಟಾ: ರಾಜಸ್ಥಾನ ರಾಜ್ಯದ ಕೋಟ ನಗರದಲ್ಲಿ ಬಿಹಾರದ 18 ವರ್ಷದ ನೀಟ್ ಆಕಾಂಕ್ಷಿ ಮಂಗಳವಾರ ಮುಂಜಾನೆ ಹಾಸ್ಟೆಲ್ ಕೋಣೆಯಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೊಠಡಿಯಲ್ಲಿ ಡೆತ್‌ನೋಟ್ ಪತ್ತೆಯಾಗಿದೆ. ಅದರಲ್ಲಿ, ತನ್ನ ಸಾವಿಗೆ ಕುಟುಂಬವಾಗಲಿ ಅಥವಾ ನೀಟ್-ಯುಜಿ ಪರೀಕ್ಷೆಯಾಗಲೀ ಕಾರಣವಲ್ಲವೆಂದು ವಿದ್ಯಾರ್ಥಿ ಬರೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.



ಬಿಹಾರದ ಛಪ್ರಾ ಜಿಲ್ಲೆಯ ವಿದ್ಯಾರ್ಥಿ ಒಂದು ವರ್ಷದಿಂದ ಇಲ್ಲಿನ ಕೋಚಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ನೀಟ್-ಯುಜಿಗೆ ತಯಾರಿ ನಡೆಸುತ್ತಾ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದ. ಆತ್ಮಹತ್ಯೆಗೂ ಮುನ್ನ ವಿದ್ಯಾರ್ಥಿ ಸಹೋದರಿಗೆ ವಾಟ್ಸಾಪ್ ಸಂದೇಶ ಕಳುಹಿಸಿದ್ದಾನೆ. ತಕ್ಷಣ ಸೋದರಿ ಹಾಸ್ಟೆಲ್ ಕೇರ್‌ಟೇಕರ್‌ಗೆ ಕರೆ ಮಾಡಿ ಸೋದರನ ಕೋಣೆಗೆ ತೆರಳಲು ಕೋರಿದ್ದಾರೆ. ಕೇರ್‌ಟೇಕರ್ ಬಂದು ಕೋಣೆಯ ಬಾಗಿಲು ತಟ್ಟಿದರೂ ಪ್ರತಿಕ್ರಿಯೆ ಬಾರದಿದ್ದಾಗ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎಂದು ಅಧಿಕಾರಿ ವಿವರಿಸಿದ್ದಾರೆ. ದೇಶದ ಕೋಚಿಂಗ್ ಕೇಂದ್ರವಾದ ಕೋಟಾದಲ್ಲಿ ಈ ವರ್ಷದ 11ನೇ ವಿದ್ಯಾರ್ಥಿಯ ಆತ್ಮಹತ್ಯೆ ಪ್ರಕರಣವಾಗಿದೆ. ಕಳೆದ ವರ್ಷ 17 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು.

ಮಣಿಪುರ: ಉಗ್ರರ ಬಂಧನ, ಶಸ್ತ್ರಾಸ್ತ್ರ ವಶ

ಇಂಫಾಲ: ಮಣಿಪುರದ ಇಂಫಾಲ ಪೂರ್ವ ಜಿಲ್ಲೆಯ ವಿವಿಧೆಡೆ ನಿಷೇಧಿತ ಸಂಘಟನೆಯ ನಾಲ್ವರು ಉಗ್ರರನ್ನು ಭದ್ರತಾ ಪಡೆಗಳು ಬಂಧಿಸಿವೆ. ಪ್ರಿಪಾಕ್(ಪ್ರೊ) ಉಗ್ರ ಸಂಘಟನೆಗೆ ಸೇರಿದ ಒಬ್ಬ

ಮಹಿಳೆ ಸೇರಿದಂತೆ ಮೂವರು ಉಗ್ರರನ್ನು ನಗಖಪತ್ ಅಡ್ವೆಂ ಚರ್ ಖರೋಕ್ ಪ್ರದೇಶದಲ್ಲಿ ಸೋಮವಾರ ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ.

ಬಂಧಿತರಿಂದ ಬಂದೂಕಿನ 5 ಕಾಟ್ರಿಡ್ಜ್, 32 ಪಿಸ್ತೂಲ್, 6 ಮೊಬೈಲ್ ಫೋನ್ ಮತ್ತು ಎರಡು ಮೋಟಾರ್ ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಉಗ್ರರು ಇತ್ತೀಚೆಗೆ ಇಂಫಾಲ ಪೂರ್ವ ಜಿಲ್ಲೆಯ ನವೋರೆಮ್ ಬಿರಾಹರಿ ಕಾಲೇಜಿನ ಬಳಿ ಇಬ್ಬರು ವ್ಯಕ್ತಿಗಳನ್ನು ಅಪಹರಿಸಿದ್ದರು ಎಂದು ಅಧಿಕಾರಿ ವಿವರಿಸಿದ್ದಾರೆ. ಇದಕ್ಕೂ ಮೊದಲು ಮತ್ತೊಬ್ಬ ಉಗ್ರನನ್ನು ಇಂಫಾಲ ಪೂರ್ವ ಜಿಲ್ಲೆಯ ಸಾವೊಂಬಂಗ್‌ನಿಂದ ಭಾನುವಾರ ಬಂಧಿಸಲಾಗಿದೆ. ಇನ್ನೊಂದೆಡೆ, ತೆಂಗ್‌ನೌಪಾಲ್ ಜಿಲ್ಲೆಯ ಯಾಂಗೌಬಂಗ್ ಮತ್ತು ಟಿ ಬೊಂಗ್‌ಮೋಲ್ ಗ್ರಾಮಗಳಲ್ಲಿ ಶನಿವಾರ ಶೋಧ ಕಾರ್ಯಾಚರಣೆ ವೇಳೆ 22 ಐಇಡಿ ಸ್ಫೋಟಕಗಳು, 7 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿ ವಿವರ ನೀಡಿದ್ದಾರೆ.

ತರಬೇತಿ ವಿಮಾನ ಪತನ, ಪೈಲಟ್ ಸಾವು

ಅಮ್ರೇಲಿ: ಖಾಸಗಿ ವಿಮಾನಯಾನ ಅಕಾಡೆಮಿಗೆ ಸೇರಿದ ಪುಟ್ಟ ತರಬೇತಿ ವಿಮಾನ ಗುಜರಾತ್‌ನ ಅಮ್ರೇಲಿ ಜಿಲ್ಲೆಯ ವಸತಿ ಪ್ರದೇಶವೊಂದರಲ್ಲಿ ಮಂಗಳವಾರ

ಮಧ್ಯಾಹ್ನ 12.30ರಲ್ಲಿ ಪತನವಾಗಿದೆ. ಪರಿಣಾಮ ಟ್ರೈನಿ ಪೈಲಟ್ ಸಾವನ್ನಪ್ಪಿದ್ದಾರೆ. ಅಮ್ರೇಲಿ ಪಟ್ಟಣದ ಶಾಸ್ತ್ರಿ ನಗರದ ಬಳಿ ಗಿರಿಯಾ ರಸ್ತೆಯ ವಸತಿ ಪ್ರದೇಶದಲ್ಲಿನ ಮನೆಯೊಂದರ ಹಿತ್ತಿಲಿನಲ್ಲಿರುವ ಮಾವಿನ ಮರದ ಮೇಲೆ ಬಿದ್ದ ವಿಮಾನ ತುಂಡುತುಂಡಾಗಿ ನೆಲಕ್ಕೆ ಬಿದ್ದಿದೆ. ಪತನವಾದ ವಿಮಾನದಲ್ಲಿ ತರಬೇತಿ ಪೈಲಟ್ ಒಬ್ಬರೇ ಇದ್ದರು. ವಿಮಾನ ಪತನಕ್ಕೆ ಯಾತ್ರಿಕ ಕಾರಣವೋ, ತರಬೇತಿ ನಿರತ ಪೈಲಟ್ ದೋಷವೇ ಕಾರಣವೋ ಎಂಬುದು ತನಿಖೆಯಿಂದ ತಿಳಿದುಬರಬೇಕಿದೆ ಎಂದು ಅಮ್ರೇಲಿ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ಖಾರತ್ ತಿಳಿಸಿದ್ದಾರೆ.

ಒಂದೇ ಎಂಜಿನ್‌ನ ಪುಟ್ಟ ವಿಮಾನ ಅಮ್ರೇಲಿ ವಿಮಾನ ನಿಲ್ದಾಣದಿಂದ ಹಾರಾಟ ಆರಂಭಿಸಿತ್ತು. ವಿಮಾನ ಪತನವಾದ ಜಾಗದಲ್ಲಿ ಮನೆಗಳಿದ್ದರೂ ಬೇರಾರಿಗೂ ಹಾನಿ ಆಗಿಲ್ಲ ಎಂದು ಅಧಿಕಾರಿ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಅಕ್ರಮ ಮರಳು ಸಾಗಣೆ: ಪ್ರಕರಣ

ಉಡುಪಿ: ಅಕ್ರಮವಾಗಿ ಮರಳು ಸಾಗಣೆ ನಡೆಸುತ್ತಿದ್ದ ಟಿಪ್ಪರನ್ನು ಪೊಲೀಸರು ತಡೆದು ಪ್ರಕರಣ ದಾಖಲಿಸಿಕೊಂಡ ಘಟನೆ ಎ. 21ರಂದು ಮುಂಡ್ಕೂರು ಗ್ರಾಮ ಜಾರಿಗೆಕಟ್ಟೆ ಎಂಬಲ್ಲಿ ನಡೆದಿದೆ. ಜಾರಿಗೆಕಟ್ಟೆಯ ಬಳಿಯ ಚೆಕ್‌ಪೋಸ್ಟ್‌ನಲ್ಲಿ ಮರಳು ಸಾಗಿಸುತ್ತಿದ್ದ ವೇಳೆ ಟಿಪ್ಪರ್ ನಿಲ್ಲಿಸುವಂತೆ ಸೂಚನೆ ನೀಡಿದರೂ, ಚಾಲಕನು ಟಿಪ್ಪರನ್ನು ನಿಲ್ಲಿಸದೆ ಹೋಗಿದ್ದಾನೆ. ತಕ್ಷಣವೇ ಪೊಲೀಸರು ಬೈಕ್‌ನಲ್ಲಿ ಟಿಪ್ಪರ್ ಹಿಂಬಾಲಿಸಿಕೊಂಡು ಹೋಗಿದ್ದು ಪಡಿತ್ತಾರ್ ಬಳಿ ಟಿಪ್ಪರ್ ಚಾಲಕನು ಟಿಪ್ಪರ್ ನಿಲ್ಲಿಸಿ ಅದರಿಂದ ಇಳಿದು ಪರಾರಿಯಾಗಿರುತ್ತಾನೆ. ಈ ವೇಳೆ ಟಿಪ್ಪರಿನಲ್ಲಿ 2 ಯುನಿಟ್ ಮರಳು ಕಂಡುಬಂದಿದೆ. ಕಾರ್ಕಳ ಗ್ರಾಮಾಂತರ ಠಾಣೆ ಪೊಲೀಸರಾದ ಸೋಮಪ್ಪ ಬಿಡಿ ಹಾಗೂ ವಿರೂಪಾಕ್ಷಿ ಕಾರ್ಯಾಚರಣೆ ನಡೆಸಿರುತ್ತಾರೆ. ಕುಕ್ಕುಂದೂರು ಸರ್ವಜ್ಞ ವೃತ್ತ ಬಳಿ ಅಕ್ರಮವಾಗಿ ಕೆಂಪು ಕಲ್ಲು ಸಾಗಾಟ ಮಾಡುತ್ತಿದ್ದ ಲಾರಿಯನ್ನು ತಡೆದು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಲಾರಿ ಚಾಲಕ ನಾಗರಾಜ್, ಮಾಲಕ ಪ್ರವೀಣ್ ಹಾಗೂ ಬೆಳುವಾಯಿ ಗುಡ್ಡೆಯಂಗಡಿ ಎಂಬಲ್ಲಿ ಬಶೀರ್ 300 ಕೆಂಪು ಕಲ್ಲುಗಳನ್ನು ಪರವಾನಿಗೆ ಇಲ್ಲದೇ ಅಕ್ರಮವಾಗಿ ಲಾರಿಯಲ್ಲಿ ಸಾಗಾಟ ಮಾಡಿರುತ್ತಾರೆ. ಈ ಬಗ್ಗೆ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜನಿವಾರದ ಹಿಂದೆ ಸರಕಾರದ ಕುಮ್ಮಕ್ಕಿದೆ

ಪುತ್ತೂರು: ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಯ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರತಿಭಟನೆ ಜೋರಾಗಿದೆ. ಈ ಪ್ರಕರಣ ಖಂಡಿಸಿ ಅಖಿಲ ಭಾರತ ಬ್ರಾಹ್ಮಣ ಮಹಾಸಭಾ ಪುತ್ತೂರಿನ ಅಮರ್ ಜವಾನ್ ಜ್ಯೋತಿ ಬಳಿ ಪ್ರತಿಭಟನೆ ನಡೆಸಿದೆ. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಬ್ರಾಹ್ಮಣ ಸಭಾದ ಮುಖಂಡ ಮಹೇಶ್ ಕಜೆ ಈ ಪ್ರಕರಣ ಮುಗಿದು ಹೋಗಿದೆ ಎಂದು ಸರಕಾರ ಹೇಳುತ್ತಿದೆ. ಆದರೆ ಇದು ಬ್ರಾಹ್ಮಣರ ಮೇಲಿನ ದೌರ್ಜನ್ಯದ ಆರಂಭ,ಎಲ್ಲೆಲ್ಲಿ ಬ್ರಾಹ್ಮಣ, ಗೋವುಗಳ ಮೇಲೆ ದೌರ್ಜನ್ಯ ನಡೆಯುತ್ತೋ ಅಲ್ಲಿ ಸರ್ವನಾಶ ಆಗಲಿದೆ ಎಂದರು. ಪ್ರತಿಭಟನೆಯನ್ನು ಉದ್ಧೇಶಿಸಿ ಮಾತನಾಡಿದ ಹಿಂದೂ ಮುಖಂಡ ಅರುಣ್ ಕುಮಾರ್ ಪುತ್ತಿಲ ಈ ಕೃತ್ಯದ ಹಿಂದೆ ಸರಕಾರದ ಕುಮ್ಮಕ್ಕಿದೆ, ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಹೆಚ್ಚಾಗುವ ಸಾಧ್ಯತೆಯಿದೆ, ಇದರಿಂದಾಗಿ ಬ್ರಾಹ್ಮಣರು ಮತ್ತೆ ಪರಶುರಾಮನಂತೆ ಕೊಡಲಿ ಕೈಗೆತ್ತಿಕೊಳ್ಳಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ಆತ್ಮಹತ್ಯೆಗೆ ಯತ್ನಿಸಿದ ವ್ಯಕ್ತಿ ಮೃತ್ಯು

ಸುಳ್ಯ: ಕಲ್ಲುಗುಂಡಿಯಲ್ಲಿ ಬಾಡಿಗೆ ಮನೆಯಲ್ಲಿದ್ದ ವಾಸಿಸುತಿದ್ದ ಧರ್ಮರಾಜ್ (45) ಮನೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಚಿಕಿತ್ಸೆಗೆ ಸ್ಪಂಧಿಸದೇ ಮಂಗಳೂರು ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಏ. 14 ರಂದು ಮನೆಯಲ್ಲಿ ಧರ್ಮರಾಜ್ ವಿಷ ಸೇವಿಸಿದ್ದರು. ವಿಷಯ ತಿಳಿದ ಕೂಡಲೇ ಕುಟುಂಬಸ್ಥರು ಚಿಕಿತ್ಸೆಗೆ ಮಂಗಳೂರು ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆ ಫಲಕಾರಿಯಗದೇ ಶನಿವಾರ ಮೃತಪಟ್ಟಿದ್ದಾರೆ. ಕಲ್ಲುಗುಂಡಿ ಭಾಗದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಕೌಟುಂಬಿಕ ಕಲಹದಲ್ಲಿ ಕಳೆದ 20 ವರ್ಷಗಳಿಂದ ಇವರ ಪತ್ನಿ, ಇಬ್ಬರು ಮಕ್ಕಳೊಂದಿಗೆ ಇರದೆ ಬೇರೆಡೆ ವಾಸವಿದ್ದರು. ಇದರಿಂದ ಮನನೊಂದು ಈ ಕೃತ್ಯವನ್ನು ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ. ಸುಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಹಕಾರ ಭಾರತಿ ಅಭ್ಯರ್ಥಿಗಳ ಬೆಂಬಲಿಸಿ

ಉಡುಪಿ: ದ.ಕ. ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ 8 ಸ್ಥಾನಗಳಿಗೆ ಎ. 26 ರಂದು ನಡೆಯುವ ಚುನಾವಣೆಯಲ್ಲಿ 8 ಕ್ಷೇತ್ರಗಳಿಗೂ ಸಹಕಾರ ಭಾರತಿಯ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಮತದಾರರು ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ದಿನೇಶ್ ಹೆಗ್ಡೆ ಆತ್ರಾಡಿ ವಿನಂತಿಸಿದ್ದಾರೆ. ಕುಂದಾಪುರ ಉಪವಿಭಾಗ ಕ್ಷೇತ್ರದಿಂದ ಮೋಹನ್‌ದಾಸ್ ಅಡ್ಯಂತಾಯ (ಕಾರ್ಕಳ), ಭೋಜ ಪೂಜಾರಿ (ಹೆಬ್ರಿ), ಅಶೋಕ್ ರಾವ್ (ಕಾಪು), ಹೆರ್ಗ ದಿನಕರ್ ಶೆಟ್ಟಿ (ಉಡುಪಿ), ಕಾಡೂರು ಸುರೇಶ್ ಶೆಟ್ಟಿ ಸ್ಪರ್ಧಿಸಿದ್ದಾರೆ.

ಅಗಲಿದ ಜೀವ

ಸುಗಂಧಿ ಪೆರುವಾಜೆ

ಸುಳ್ಯ: ಕಲಾವಿದ ಹಾಗೂ ವೈದ್ಯರಾದ ಪೆರುವಾಜೆಯ ಡಾ.ಗೋಪಿನಾಥ ಬೆಳ್ಳಾರೆಯವರ ಧರ್ಮಪತ್ನಿ ಸುಗಂಧಿ (87) ನಿಧನರಾದರು. ಅವರಿಗೆ ಪುತ್ರಿ ತಾಲೂಕು ಮಹಿಳಾ ಮಂಡಲಗಳ ಒಕ್ಕೂಟದ ಅಧ್ಯಕ್ಷೆ ಮಧುಮತಿ ಬೊಳ್ಳೂರು, ಅಳಿಯ ಕಾಂಗ್ರೆಸ್ ಮುಖಂಡ ರಾಧಾಕೃಷ್ಣ ಬೊಳ್ಳೂರು ಇದ್ದಾರೆ.

{ಬಿ.ವೈ.ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ 48ಕ್ಕೂ ಹೆಚ್ಚು ಅಗತ್ಯ ವಸ್ತುಗಳ ಬೆಲೆಯನ್ನು ನಿರಂತರವಾಗಿ ಏರಿಕೆ ಮಾಡಿಕೊಂಡು ಬರುತ್ತಿದೆ. ಬೆಲೆ ಏರಿಕೆ ಪರಿಣಾಮ ಇಡೀ ದೇಶದಲ್ಲಿ ಕರ್ನಾಟಕ ಬಹಳಷ್ಟು ದುಬಾರಿ ರಾಜ್ಯ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮ, ಮೂಡಾ ಸೇರಿ ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿಮೀರಿ ಹೋಗಿದೆ.

ಕೂಳೂರಿನಲ್ಲಿ ಮೇ 10ರಂದು ಸಿಎಂ ಸಿದ್ದರಾಮಯ್ಯ ಚಾಲನೆ

ಸ್ವಸಹಾಯ ಗುಂಪು ರಜತ ಸಂಭ್ರಮ

ಮಂಗಳೂರು: ನವೋದಯ ಗ್ರಾಮಾ ಚಾರಿಟೆಬಲ್ ಟ್ರಸ್ಟ್ (ರಿ) ನ ನವೋದಯ ಸ್ವ-ಸಹಾಯ ಗುಂಪುಗಳ ಸಂಭ್ರಮ ಮೇ 10ರಂದು ಪೂರ್ವಾಹ್ನ10ಕ್ಕೆ ಗೋಲ್ಡ್ ಫಿಂಚ್ ಸಿಟಿ ಬಂಗ್ರ ಕೂಳೂರಿನಲ್ಲಿ ನಡೆಯಲಿದೆ.

ಸಿಎಂ ಸಿದ್ದರಾಮಯ್ಯ ನವೋದಯ ಗ್ರಾಮ ವಿಕಾಸ ಚಾರಿಟೆಬಲ್ ಟ್ರಸ್ಟ್ (ರಿ)ನವೋದಯ ಸ್ವ-ಸಹಾಯ ಗುಂಪುಗಳ ರಜತ ಸಂಭ್ರಮ. ವನ್ನು ಉದ್ಘಾಟಿಸಲಿದ್ದಾರೆ ಎಂದು ಡಾ.ಎಂ. ಎನ್. ರಾಜೇಂದ್ರ ಕುಮಾರ್ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಡಾ.ಎಂ. ಎನ್. ರಾಜೇಂದ್ರ ಕುಮಾರ್ ಸುದ್ದಿ ಗೋಷ್ಠಿಯಲ್ಲಿ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡಿದರು.

ಮಹಾರಾಷ್ಟ್ರ ಸರಕಾರದ ಮುಖ್ಯ ಮಂತ್ರಿ ದೇವೇಂದ್ರ ಫಡ್ನವೀಸ್ ನವೋದಯ ಸ್ವ ಸಹಾಯ ಗುಂಪು ಗಳಿಗಳ ಸದಸ್ಯರಿಗೆ ಸವಲತ್ತುಗಳನ್ನು ವಿತರಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಸಂತೃಪ್ತಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ವಿಧಾನ ಸಭಾ ಅಧ್ಯಕ್ಷ ಯು.ಟಿ.ಖಾದರ್ ಸಹಕಾರಿ ಧ್ವಜಾರೋಹಣ ನಡೆಸಲಿದ್ದಾರೆ. ಇಂಧನ ಖಾತೆಯ ಸಚಿವ ಪ್ರಹ್ಲಾದ್ ವಿ ಜೋಶಿ,ಅತ್ಯುತ್ತಮ ನವೋದಯ ಗುಂಪುಗಳಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಸಹಕಾರ ಮಾರಾಟ ಮಹಾ ಮಂಡಳದ ಅಧ್ಯಕ್ಷ ನವೋದಯ ಚಾರಿಟೇಬಲ್ ಟ್ರಸ್ಟ್ ನ ಸಂಸ್ಥಾಪಕ ಡಾ. ಎಂ. ಎನ್. ರಾಜೇಂದ್ರ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ.ಡಿ.ವೀರೇಂದ್ರ ಹೆಗ್ಗಡೆ, ಉಡುಪಿ ಶ್ರೀಪೇಜಾವರ ಮಠದ ಶ್ರೀವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಹಕಾರ ಸಚಿವ ಕೆ.ಎನ್.ರಾಜಣ್ಣ, ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್, ಅಬಕಾರಿ ಸಚಿವ ಆರ್ .ಬಿ.ತಿಮ್ಮಾಪುರ ಪಾಲ್ಗೊಳ್ಳುವರು.

ನವೋದಯ ಸ್ವ ಸಹಾಯ ಗುಂಪುಗಳ ಮೂಲಕ ಮಹಿಳಾ ಸ್ವಾವಲಂಬನೆ ಸಾಧಿಸಿರುವ ಸಮಾರು 5ಲಕ್ಷ ಮಹಿಳೆಯರು ನವೋದಯ ಸ್ವ ಸಹಾಯ ಸಂಘಗಳಲ್ಲಿ ಇದ್ದಾರೆ. ರಾಜ್ಯದ 10 ಜಿಲ್ಲೆಯಲ್ಲಿ ನವೋದಯ ಸ್ವ ಸ್ವಹಾಯ ಸಂಘಗಳ ಸದಸ್ಯರಿದ್ದಾರೆ. ಈ ಬಾರಿ ದೇಶಕ್ಕೆ ಮಾದರಿಯಾಗಿ ಈ ಸಮಾವೇಶ ನಡೆಯಲಿದೆ.

ಸುದ್ದಿ ಗೋಷ್ಠಿಯಲ್ಲಿ ಉಪಾಧ್ಯಕ್ಷ ವಿನಯ ಕುಮಾರ್ ಸೂರಿಂಜೆ, ಬ್ಯಾಂಕ್ ನಿರ್ದೇಶಕ ಭಾಸ್ಕರ್, ಎಸ್. ಕೋಟ್ಯಾನ್, ಶಶಿಕುಮಾರ್ ರೈ ಬಿ, ದೇವಿ ಪ್ರಸಾದ್ ಶೆಟ್ಟಿ ಬೆಳಪು, ಕೆ. ಜೈರಾಜ್ ಬಿ. ರೈ, ಮೋನಪ್ಪ ಶೆಟ್ಟಿ ಎಕ್ಕಾರು, ಬ್ಯಾಂಕಿನ ಮುಖ್ಯ ಕಾರ್ಯನಿರ್ವಾ ಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ, ನವೋದಯ ಟ್ರಸ್ಟಿಗಳಾದ ಮೇಘರಾಜ್ ಆರ್. ಜೈನ್, ಸುನಿಲ್ ಕುಮಾರ್ ಬಜಗೋಳಿ, ಜಯಪ್ರಕಾಶ್ ತುಂಬೆ, ಟ್ರಸ್ಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೂರ್ಣಿಮಾ ಶೆಟ್ಟಿ ಉಪಸ್ಥಿತರಿದ್ದರು.

ಒಂದೂವರೆ ಲಕ್ಷ ಸದಸ್ಯರ ಸಮಾವೇಶ

ಸುಮಾರು ಒಂದೂವರೆ ಲಕ್ಷ ನವೋದಯ ಗುಂಪುಗಳ ಸದಸ್ಯರ ಮೂಲಕ ಒಂದೇ ಸಮವಸ್ತ್ರದಲ್ಲಿ ಸೇರಿ ಮಂಗಳೂರಿನಲ್ಲಿ ಸಮಾವೇಶ ನಡೆಸುವ ಗುರಿಯಿದೆ. ನವೋದಯ ಸ್ವ ಸಹಾಯ ಸಂಘಗಳು ಸಾಮೂಹಿಕ ಹೊಣೆಗಾರಿಕೆಯೊಂದಿಗೆ ತಮ್ಮೊಳಗೆ ಸಾಲ ವಿತರಿಸುತ್ತಿವೆ ಎಂದು ಡಾ.ಎಂ. ಎನ್.ರಾಜೇಂದ್ರ ಕುಮಾರ್ ತಿಳಿಸಿದ್ದಾರೆ.

ಯುವಜನರಿಗೆ ಬದುಕಿನ ದಾರಿ

ಸುಳ್ಯ ಹಳೆಗೇಟು ವಿದ್ಯಾನಗರದ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ವತಿಯಿಂದ ನಡೆದ 25ನೇ ವರ್ಷದ ಕೇಶವ ಕೃಪಾ ವೇದ-ಯೋಗ-ಕಲಾ ಶಿಬಿರವನ್ನು ಡಾ. ಪ್ರಭಾಕರ ಭಟ್ ಕಲ್ಲಡ್ಕ ಉದ್ಘಾಟಿಸಿದರು.

ಸುಳ್ಯ: ಸಂಸ್ಕೃತ ಸರ್ವ ಶ್ರೇಷ್ಠ ಭಾಷೆ, ಈ ಭಾಷೆಯ ವೇದ ಮಂತ್ರಗಳ ಜೊತೆಗೆ ಯುವ ಸಮುದಾಯಕ್ಕೆ ಬದುಕಿನ ದಾರಿಯನ್ನೂ ಕೇಶವ ಕೃಪಾ ವೇದ ಯೋಗ ಕಲಾ ಶಿಬಿರ ನೀಡಿದೆ ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಹೇಳಿದ್ದಾರೆ.

ಸುಳ್ಯ ಹಳೆಗೇಟು ವಿದ್ಯಾನಗರದ ಕೇಶವ ಕೃಪಾ ವೇದ ಮತ್ತು ಕಲಾ ಪ್ರತಿಷ್ಠಾನದ ವತಿಯಿಂದ ಭಾನುವಾರ ಸುಳ್ಯದ ಖಾಸಗೀ ಬಸ್ ನಿಲ್ದಾಣದ ಬಳಿಯ ಶಿವಕೃಪಾ ಕಲಾ ಮಂದಿರದಲ್ಲಿ ಆರಂಭಗೊಂಡ 25ನೇ ವರ್ಷದ ಕೇಶವ ಕೃಪಾ ವೇದ-ಯೋಗ-ಕಲಾ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಎಲ್ಲದರಲ್ಲೂ ಒಳ್ಳೆಯದನ್ನು ಒಪ್ಪಿಕೊಳ್ಳುವ ಮತ್ತು ಅಪ್ಪಿಕೊಳ್ಳುವ ಉದಾತ್ತ ಚಿಂತನೆಯನ್ನು ವೇದಗಳು ನೀಡಿದೆ. ಎಲ್ಲದರಲ್ಲೂ ಒಳಿತನ್ನು ಬಯಸುವುದು ಮತ್ತು ಆಶಿಸುವುದು ಹಿಂದೂ ಧರ್ಮದ ತತ್ವ ಎಂದು ಅವರು ಹೇಳಿದರು.

ಶಿಬಿರವನ್ನು ಉದ್ಘಾಟಿಸಿದ ವೇದ ವಿದ್ವಾಂಸರಾದ ವೇ.ಮೂ.ಕೇಶವ ಜೋಯಿಸ ವಳಲಂಬೆ ಮಾತನಾಡಿ' ಸನಾತನ ಧರ್ಮಗಳ ಮಹತ್ವ ವನ್ನು ಅರಿತು ಅದನ್ನು ಉಳಿಸಿ ಬೆಳೆಸಲು ವೇದಗಳ ಅರಿವು ಅಗತ್ಯ ಎಂದು ಅವರು ಹೇಳಿದರು. ಪುತ್ತೂರಿನ ವಕೀಲರಾದ ಮಹೇಶ ಕಜೆ ಸಭಾಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ಕೃಷಿಕ ರವಿಶಂಕರ ರಾವ್ ದೇವ ಮುಖ್ಯ ಅತಿಥಿಗ ಳಾಗಿದ್ದರು. ಕೇಶವಕೃಪ ವೇದ ಮತ್ತು ಕಲಾ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಗೋಪಾಲ ಕೃಷ್ಣ ಭಟ್, ಅಧ್ಯಕ್ಷ ಪುರೋಹಿತ ನಾಗರಾಜ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆಸ್ರಣ್ಣ ಸಂಸ್ಮರಣೆ ಆ.2ರಂದು

ಮಂಗಳೂರು: ಕೀರ್ತಿಶೇಷ ಕಟೀಲು ಗೋಪಾಲಕೃಷ್ಣ ಆಸ್ರಣ್ಣ ಸಂಸ್ಮರಣಾ ಸಮಿತಿ ದುಬೈ ವತಿಯಿಂದ 25ನೇ ವರುಷದ ಆಸ್ರಣ್ಣ ಸಂಸ್ಮರಣೆ ಆಗಸ್ಟ್ 2ರಂದು ಮುಂಬೈ ಕುರ್ಲಾ ಬಂಟರ ಭವನದಲ್ಲಿ ಜರುಗಲಿದೆ.

ಸಮಾರಂಭದ ಅಧ್ಯಕ್ಷತೆಯನ್ನು ಐಕಳ ಹರೀಶ್ ಶೆಟ್ಟಿ (ಜಾಗತಿಕ ಬಂಟರ ಸಂಘ ಒಕ್ಕೂಟದ ಅಧ್ಯಕ್ಷರು) ವಹಿಸಲಿದ್ದು ಮುಂಬೈ ಬಂಟರ ಸಂಘದ ಅಧ್ಯಕ್ಷರಾದ ಪ್ರವೀಣ ಭೋಜ ಶೆಟ್ಟಿ 25ನೇ ವರುಷದ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಪದ್ಮನಾಭ ಕಟೀಲು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ವರುಷದ ಆಸ್ರಣ್ಣ ಪ್ರಶಸ್ತಿ ಕಲಾಪೋಷಕರೂ, ಕಲಾರಾಧಕರೂ ಆಗಿರುವ ಡಾ. ಮೋಹನ ಆಳ್ವರಿಗೆ ನೀಡಲಾಗುತ್ತಿದ್ದು, ಕಳೆದ ವರ್ಷದಿಂದ ಕೊಡಮಾಡುವ ಅಗರಿ ಪ್ರಶಸ್ತಿ ಕಟೀಲು ಮೇಳದ ಹಿರಿಯ ಕಲಾವಿದರಾದ ಸುಣ್ಣಂಬಳ ವಿಶ್ವೇಶ್ವರ ಭಟ್ ಅವರಿಗೆ ಪ್ರದಾನಿಸಲಾಗುತ್ತಿದೆ.

ಗೋಪಾಲಕೃಷ್ಣ ಆಸ್ರಣ್ಣ ಸಂಸ್ಮರಣಾ ಸಮಿತಿ ಪದ್ಮನಾಭ ಕಟೀಲು ಅವರ ಸಂಯೋಜನೆಯಲ್ಲಿ ಊರ ಪರವೂರ ದಾನಿಗಳ ಅಭಿಮಾನಿಗಳ ಸಹಾಯದಿಂದ ಕಳೆದ 24 ವರುಷಗಳಿಂದ ಮುಂಬೈ, ದುಬೈ, ಕಟೀಲಿನಲ್ಲಿ ಆಸ್ರಣ್ಣ ಸಂಸ್ಮರಣೆ ನಡೆಸುತ್ತಿದ್ದು, ದೇವಿ ಮಹಾತ್ಮೆ ಯಕ್ಷಗಾನ ಪ್ರದರ್ಶನ ನೀಡುತ್ತಾ ಬಂದಿದೆ. 24 ವರುಷಗಳಲ್ಲಿ 400ಕ್ಕೂ ಹೆಚ್ಚು ಯಕ್ಷಗಾನ ಕಲಾವಿದರಿಗೆ ಸನ್ಮಾನ, ಅಶಕ್ತ ಕಲಾವಿದರಿಗೆ ಆರ್ಥಿಕ ಸಹಾಯ, ಸುಹೃತ ಸಂಮಾನ ಯಕ್ಷಗಾನ ಕಲಾವಿದರ ಮಕ್ಕಳಿಗೆ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ಸಹಾಯ ಮುಂತಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕಟೀಲಿನ ಆನುವಂಶಿಕ ಅರ್ಚಕರಾದ ಲಕ್ಷ್ಮೀನಾರಾಯಣ ಆಸ್ರಣ್ಣ ಡಾ.ಮೋಹನ ಆಳ್ವ, ಶ್ರೀಪತಿ ಭಟ್ ಮೂಡುಬಿದಿರೆ, ಐಕಳ ಗಣೇಶ ಶೆಟ್ಟಿ ಮುಂಬೈ, ವಾಸುಶೆಟ್ಟಿ ಪೇಜಾವರ ಪಡುಬಾಳಿಕೆಗುತ್ತು, ದುಬೈ ವಾದಿರಾಜ ಕಲ್ಲೂರಾಯ ಕಿನ್ನಿಕಂಬಳ, ಸದಾಶಿವ ನೆಲ್ಲಿಮಾರ್ ಉಪಸ್ಥಿತರಿದ್ದರು.

ಮಕ್ಕಳಲ್ಲಿ ಪ್ರತಿಭೆ ಬೆಳೆಯಲು ಬೇಸಿಗೆ ಶಿಬಿರ ಅಗತ್ಯ

ನಿನಾದ ಸಾಂಸ್ಕೃತಿಕ ಕೇಂದ್ರದಿಂದ ಪಂಜದಲ್ಲಿ ಶಿಬಿರದ ಸಮಾರೋಪ

ಸುಳ್ಯ: ಮಕ್ಕಳಿಗೆ ಆಸಕ್ತಿ ಇರುವುದನ್ನು ಗುರುತಿಸಿ ಆ ಕ್ಷೇತ್ರದಲ್ಲಿ ಬೆಳೆಸಬೇಕು. ಎಲ್ಲಾ ಮಕ್ಕಳಿಗೆ ಒಂದೇ ವಿಷಯದಲ್ಲಿ ಆಸಕ್ತಿ ಇರುವುದಿಲ್ಲ. ಶಿಬಿರದಲ್ಲಿ ಹಲವು ಬಗೆಯ ಕಲಾ ಪ್ರಕಾರವನ್ನು ಕಲಿಸುವುದರಿಂದ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಲು ಸಾಧ್ಯವಾಗಿದೆ ಎಂದು ಕುಕ್ಕೆ ಶ್ರೀಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ನಿತ್ಯಾನಂದ ಮುಂಡೋಡಿ ಹೇಳಿದರು.

ಅವರು ಪಂಜದ ಉತ್ಕರ್ಷ ಸಹಕಾರಿ ಸೌಧದಲ್ಲಿ ಕ್ರಿಯೇಟಿವ್ ಚಿತ್ರಕಲಾ ಶಾಲೆ, ಲಯನ್ಸ್ ಕ್ಲಬ್, ನಿನಾದ ಸಾಂಸ್ಕೃತಿಕ ಕೇಂದ್ರ, ತಂಟೆಪ್ಪಾಡಿ ಮತ್ತು ಕಲಾ ಮಂದಿರ್ ಡ್ಯಾನ್ಸ್ ಕ್ರೀವ್ ಇವುಗಳ ಸಹಯೋಗದಲ್ಲಿ ನಡೆದ ನಲಿ-ಕಲಿ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ತಂಟೆಪ್ಪಾಡಿ ನಿನಾದ ಕೇಂದ್ರದ ಸಂಚಾಲಕ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡಿ, ಇಂದಿನ ಕಾಲದಲ್ಲಿ ಶಿಬಿರಗಳ ಅವಶ್ಯಕತೆಗಳು ಜಾಸ್ತಿಯಾಗುತ್ತಿದೆ.ಮಕ್ಕಳು ಪಾಠದ ಜೊತೆಗೆ ಇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಶಿಬಿರಗಳು ಸಹಕಾರಿಯಾಗಿದೆ ಎಂದು ಹೇಳಿದರು.

ಕ್ರಿಯೇಡಿವ್ ಚಿತ್ರಕಲಾ ಶಾಲೆ ಪಂಜ ಇದರ ಚಿತ್ರಕಲಾ ಶಿಕ್ಷಕ ಸತೀಶ್ ಪಂಜ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಲಯನ್ಸ್ ಜಿಲ್ಲೆ ಪೂರ್ವ ವಲಯ ಅಧ್ಯಕ್ಷ ಸಂತೋಷ್ ಜಾಕೆ, ಪಂಜ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸಿಇಒ ನೇಮಿರಾಜ ಪಲ್ಲೋಡಿ, ಪಂಜ ಲಯನ್ಸ್ ಕ್ಲಬ್ ಅಧ್ಯಕ್ಷ ಶಶಿಧರ ಪಳಂಗಾಯ , ಕಲಾ ಮಂದಿರ ಬೆಳ್ಳಾರೆ ಇದರ ನಿರ್ದೇಶಕ ಪ್ರಮೋದ್ ರೈ ಬೆಳ್ಳಾರೆ ಉಪಸ್ಥಿತರಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಚಲನಚಿತ್ರ ನಟಿ ಕರಿಷ್ಮಾ ಅಮೀನ್‌ರವರನ್ನು ಸನ್ಮಾನಿಸಲಾಯಿತು.

ಜನಿವಾರ ಪ್ರಕರಣ: ಬ್ರಾಹ್ಮಣ ಸಮಾಜದಿಂದ ಪ್ರತಿಭಟನೆ

ಮಂಗಳೂರು: ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ ಕಿತ್ತೆಸದ ಪ್ರಕರಣ ಖಂಡಿಸಿ ಮಂಗಳೂರಿನಲ್ಲಿ ಅಖಿಲ ಬ್ರಾಹ್ಮಣ ಸಭಾ ನೇತೃತ್ವದಲ್ಲಿ ವಿಪ್ರಸಂಘಟನೆಗಳು ಮತ್ತು ಬ್ರಾಹ್ಮಣರು ನಗರದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಶರವು ದೇವಸ್ಥಾನದಲ್ಲಿ ಪ್ರಾರ್ಥನೆ ನಡೆಸಿ ಬಳಿಕ ಅಲ್ಲಿಂದ ಮಿನಿ ವಿಧಾನಸೌಧದ ವರೆಗೆ ಮೌನ ಮೆರವಣಿಗೆಯಲ್ಲಿ ಸಾಗಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಆರೋಪಿಗಳಿಗೆ ತಕ್ಕ ಶಿಕ್ಷೆಯಾಗಬೇಕು ಇನ್ನು ಇಂತಹ ಕೃತ್ಯಗಳು ಮರುಕಳಿಸಬಾರದು ಎಂದು ಮುಖ್ಯಮಂತ್ರಿಗಳಿಗೆ ಜಿಲ್ಲಾಧಿಕಾರಿ ಮೂಲಕ ಮನವಿ ಸಲ್ಲಿಸಿದರು.

ಶ್ರೀಕ್ಷೇತ್ರ ಕಟೀಲಿನ ಲಕ್ಷ್ಮೀನಾರಾಯಣ ಆಸ್ರಣ್ಣ, ಶಾಸಕರಾದ ವೇದವ್ಯಾಸ ಕಾಮತ್, ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ ಕಮಲಾದೇವಿ ಪ್ರಸಾದ್ ಆಸ್ರಣ್ಣ, ಧರ್ಮದರ್ಶಿ ಹರಿಕೃಷ್ಣ ಪುನರೂರು, ಶರವು ರಾಘವೇಂದ್ರ ಶಾಸ್ತ್ರಿ, ಪ್ರದೀಪ್ ಕುಮಾರ್ ಕಲ್ಕೂರ, ಎಂ ಬಿ ಪುರಾಣಿಕ್, ಕರ್ನಾಟಕ ಬ್ಯಾಂಕಿನ ನಿವೃತ್ತ ಅಧ್ಯಕ್ಷ ಎಂಎಸ್ ಮಹಾಬಲೇಶ್ವರ ಭಟ್, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಿ ಎಸ್ ಪ್ರಕಾಶ್, ಶ್ರೀಕರ ದಾಮ್ಲೆ, ಬಜರಂಗದಳದ ಭುಜಂಗ ಕುಲಾಲ್ ನಮ್ಮವರು ಸಂಘಟನೆಯ ಎಂಎಸ್ ಗುರುರಾಜ್, ಸಂಸ್ಕಾರ ಭಾರತೀಯ ನಾಗರಾಜ್ ಶೆಟ್ಟಿ, ಆಚಾರ್ಯ ಮಠದ ನರಸಿಂಹಾಚಾರ್ಯ, ವಿಶ್ವ ಹಿಂದೂ ಪರಿಷತ್ತು ಅರ್ಚಕ ಪುರೋಹಿತರ ಪರಿಷತ್ತಿನ ಗಿರಿ ಪ್ರಕಾಶ್ ತಂತ್ರಿ, ಎಂಟಿ ಭಟ್, ನೆಟ್ಲೆ ರಾಮ ಭಟ್ ರಾಜಾರಾಮ್ ಭಟ್ ಟಿ ಜಿ, ಬ್ರಾಹ್ಮಣ ಸಮಾಜ ಹೊಸಬೆಟ್ಟು ವಲಯದ ವಿಶ್ವೇಶ್ವರ ಬದೆವಿದೆ, ಕರಾಡ ಸಮಾಜದ ಪುರುಷೋತ್ತಮ ಭಟ್ ವಕೀಲರ ಸಂಘದ ಅಧ್ಯಕ್ಷ ಹೆಚ್ ವಿ ರಾಘವೇಂದ್ರ, ಯುಗಪುರುಷ ಕಿನಿಗೋಳಿಯ ಭುವನಾಭಿರಾಮ ಉಡುಪ ಶಶಿಪ್ರಭಾ ಐತಾಳ್, ಪ್ರಭಾ ರಾವ್ ಲಲಿತ ಉಪಾಧ್ಯಾಯ ಕಾತ್ಯಾಯಿನಿ ಸೀತಾರಾಮ್, ಚೇತನ ದತ್ತಾತ್ರೇಯ ವಂದನಾ ಸುರೇಶ್ ಸಮತಾ ಬಳಗದ ಕಾತ್ಯಾಯಿನಿ ಬಿಡೆ ಭರತಾಂಜಲಿ ನೃತ್ಯ ಸಂಸ್ಥೆಯ ಗುರು ಪ್ರತಿಮಾ ಶ್ರೀಧರ್, ಹವ್ಯಕ ಮಂಡಲ ಮಂಗಳೂರು ಸಂಘಟನೆಯ ಉದಯ ಶಂಕರ್ ನಿರ್ಪಾಜೆ ಕೃಷ್ಣಮೂರ್ತಿ ಕಮ್ಮಜೆ ರಮೇಶ್ ಭಟ್ ಸರವು ಮಂಗಳೂರು ಹವ್ಯಕ ಸಭಾ ಇದರ ಅಧ್ಯಕ್ಷ ಗೀತಾದೇವಿ ಸಿ ದ.ಕ ಕಾಸರಗೋಡು ಹವ್ಯಕ ಮಹಾಸಭಾದ ಅಧ್ಯಕ್ಷ ಗಿರೀಶ್ಚಂದ್ರ ಶ್ರೀರಾಮಚಂದ್ರಪುರ ಮಠದ ಸಾರ್ವಜನಿಕ ಸಂಪರ್ಕ ಅಧಿಕಾರಿ ಹರಿಪ್ರಸಾದ್ ಪೆರಿಯಾಪು ಹವ್ಯಕ ಮಹಾಮಂಡಲ ಕಾರ್ಯದರ್ಶಿ ಉದಯ ಶಂಕರ ಮಿತ್ತೂರು ವಿಷ್ಣು ಗುಪ್ತ ವಿಶ್ವವಿದ್ಯಾಲಯ ಕೇಂದ್ರ ಸಮಿತಿಯ ಉಪಾಧ್ಯಕ್ಷ ಗಣೇಶ್ ಮೋಹನ ಕಾಶಿಮಠ ಪ್ರಧಾನ ಕಾರ್ಯದರ್ಶಿ ನಾಗರಾಜ ಭಟ್ ಪಿದೆಮಲೆ ಸಿ ಎ ಆರ್. ಡಿ ಶಾಸ್ತ್ರಿ, ಸಿ ಎ ಚಂದ್ರಮೋಹನ್ ಸಿ ಎ ಅನಂತ ಪದ್ಮನಾಭ ಸಿ ಎ ಭಾರ್ಗವ ತಂತ್ರಿ, ಸಿಎ ಕಮಲೇಶ ರಾವ್, ಸಿ ಎ ಶಿವಕುಮಾರ್ ವಕೀಲರಾದ ಪ್ರಶಾಂತ್ ರಾವ್, ಶಿವಳ್ಳಿ ಸಭಾ ಮಂಗಳೂರು ವಲಯದ ಪದಾಧಿಕಾರಿಗಳು ಕೂಟ ಮಹಾ ಜಗತ್ತು ಮಂಗಳೂರಿನ ಪದಾಧಿಕಾರಿಗಳು ಶಿವಳ್ಳಿ ಸ್ಪಂದನದ ಕೃಷ್ಣ ಭಟ್ ಮತ್ತು ಪದಾಧಿಕಾರಿಗಳು ನಮ್ಮವರು ಸಂಘಟನೆಯ ಪದಾಧಿಕಾರಿಗಳು ಕರಾಡ ಸಮಾಜದ ಪ್ರತಿನಿಧಿಗಳು ದೇಶಸ್ಥ ಸಮಾಜದ ಪ್ರತಿನಿಧಿಗಳು ಸ್ಥಾನಿಕ ಸಮಾಜದ ಪ್ರತಿನಿಧಿಗಳು ಚಿತ್ಪಾವನ್ ಸಮಾಜದ ಪ್ರತಿನಿಧಿಗಳು ಕೋಟೇಶ್ವರ ಸಮಾಜದ ಪ್ರತಿನಿಧಿಗಳು ಹವ್ಯಕ ಸಮಾಜದ ಪ್ರತಿನಿಧಿಗಳು ಗುರುಪ್ರಸಾದ್, ವಿಪ್ರಸಮಾಗಮ, ವಿಪ್ರ ವೇದಿಕೆಯ. ವಿಪ್ರಸಮಾಗಮ ವೇದಿಕೆಯ ಶೇಷಾದ್ರಿ, ಭಟ್, ಭಾಗವಹಿಸಿದ್ದರು.

ಮಂಗಳೂರಿನಲ್ಲಿ ಅಖಿಲ ಬ್ರಾಹ್ಮಣ ಸಭಾ ನೇತೃತ್ವದಲ್ಲಿ ವಿಪ್ರ ಸಂಘಟನೆಗಳು ಮತ್ತು ಬ್ರಾಹ್ಮಣರು ಮೌನ ಪ್ರತಿಭಟನೆ ನಡೆಸಿದರು

ಜನಿವಾರ ಘಟನೆ: ಧಾರ್ಮಿಕ ಭಾವನೆಗಳಿಗೆ ಧಕ್ಕೆ

ಮಂಗಳೂರು: ರಾಜ್ಯದಲ್ಲಿ ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳಿಂದ ಬಲವಂತವಾಗಿ ಜನಿವಾರ ತೆಗೆಸಿ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದು ಮಾತ್ರವಲ್ಲದೇ ಜನಿವಾರ ತೆಗೆಯಲೊಪ್ಪದ ವಿದ್ಯಾರ್ಥಿಯನ್ನು ಪರೀಕ್ಷೆಗೆ ಹಾಜರಾಗಲು ಬಿಡದಿರುವುದು ಕಾಂಗ್ರೆಸ್ ಸರಕಾರ ಹಿಂದೂ ವಿರೋಧಿ ಮಾನಸಿಕತೆಯಾಗಿದೆ ಎಂದು ಶಾಸಕ ವೇದವ್ಯಾಸ ಕಾಮತ್ ಆಕ್ರೋಶ ವ್ಯಕ್ತಪಡಿಸಿದರು.

ಜನಿವಾರ ತೊಡುವುದು ಭಾರತೀಯ ಸಮುದಾಯದ ಆಚಾರ ವಿಚಾರಕ್ಕೆ ಸಂಬಂಧಿಸಿದ್ದು. ಯಾವುದೇ ಒಬ್ಬ ವ್ಯಕ್ತಿ ಬಾಲ್ಯಾವಸ್ಥೆಯನ್ನು ಕಳೆದು ಪ್ರೌಢಾವಸ್ಥೆಗೆ ಕಾಲಿಡುವ ಸಂದರ್ಭದಲ್ಲಿ ಮುಂದೆ ಹೇಗೆ ಸಂಸ್ಕಾರಯುತವಾಗಿ ಬದುಕಬೇಕು ಎಂಬುದನ್ನು ತಿಳಿದುಕೊಂಡು, ಪವಿತ್ರ ಮಂತ್ರವನ್ನು ಉಚ್ಚರಿಸಿ ಪಡೆಯುವ ದೀಕ್ಷೆಯ ರೂಪವೇ ಜನಿವಾರ. ಅಂತಹ ಪವಿತ್ರ ಜನಿವಾರವನ್ನು ಕಟ್ ಮಾಡಿ ಕಸದ ಬುಟ್ಟಿಗೆ ಎಸೆಯುವುದು, ಇದರಲ್ಲಿ ನೀನು ನೇಣು ಹಾಕಿಕೊಳ್ಳಬಹುದು ಎಂದು ಅಪಹಾಸ್ಯ ಮಾಡುವುದನ್ನೆಲ್ಲಾ ಹೇಗೆ ತಾನೇ ಸಹಿಸಲು ಸಾಧ್ಯ?. ಸ್ವತಃ ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಜನಿವಾರ ತೆಗೆಯಬೇಕೆಂಬ ನಿಯಮ ಎಲ್ಲೂ ಇಲ್ಲ ಎಂದು ಸ್ಪಷ್ಟಪಡಿಸಿದೆ. ಜನಿವಾರ ಹಾಕಲಿಕ್ಕೂ, ತೆಗಿಯಲಿಕ್ಕೂ ಅದರದ್ದೇ ಆದ ನಿಯಮವಿದೆ ಎಂಬುದು ಈ ಮತಿಹೀನ ಸರಕಾರಕ್ಕೆ ಅರಿವಿಲ್ಲವೇ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಈ ದೇಶದ ಸಂಸ್ಕೃತಿ, ಸನಾತನ ಹಿಂದೂ ಧರ್ಮದ ಆಚಾರ ವಿಚಾರವನ್ನು ಅರಿಯದೇ ಇರುವವರು ಆಡಳಿತ ವ್ಯವಸ್ಥೆಯಲ್ಲಿದ್ದರೆ ಏನಾಗಲಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಬ್ರಾಹ್ಮಣರು ಮಾತ್ರ ಯಜ್ಞೋಪವೀತ ಜನಿವಾರ ಹಾಕುವುದಲ್ಲ. ಸಾರಸ್ವತ ಸಮುದಾಯದವರು, ರಾಮಕ್ಷತ್ರಿಯರು, ವಿಶ್ವಕರ್ಮ ಸಮಾಜದವರು, ಅಷ್ಟೇ ಅಲ್ಲ, ಪೂಜಾ ಕ್ರಮಗಳಲ್ಲಿ ತೊಡಗಿಸಿಕೊಂಡಿರುವ ಬಿಲ್ಲವರು ಕೂಡ ಜನಿವಾರವನ್ನು ಧರಿಸುತ್ತಾರೆ. ಇದೀಗ ಈ ಅನ್ಯಾಯದ ವಿರುದ್ಧ ರಾಜ್ಯಾದ್ಯಂತ ತೀವ್ರ ಪ್ರತಿಭಟನೆ ನಡೆದ ಮೇಲೆ ಸರಕಾರ ಹೆದರಿದೆ. ಇನ್ನು ಮುಂದೆ ಹೀಗಾಗದಂತೆ ಎಚ್ಚರ ವಹಿಸಬೇಕೆಂದು ಶಾಸಕ ಕಾಮತ್ ಆಗ್ರಹಿಸಿದರು.

ಕಾಂಗ್ರೆಸ್ ಸರಕಾರ ಹಿಂದೂ ವಿರೋಧಿ

ಮಂಗಳೂರು: ಕರ್ನಾಟಕದ ಸರ್ವ ಜನಾಂಗದ ಶಾಂತಿ ತೋಟವನ್ನು ಸರ್ವನಾಶ ಮಾಡುತ್ತಿರುವ ಕಾಂಗ್ರೆಸ್ ಸರಕಾರ ಹಿಂದೂಗಳನ್ನು ದ್ವೇಷಿಸುತ್ತಿದ್ದು, ವಿದ್ಯಾರ್ಥಿಯ ಭವಿಷ್ಯದ ಹಿತಾಸಕ್ತಿಯನ್ನು ಕಡೆಗಣಿಸಿ ಅಪಚಾರವೆಸಗಿರುವುದು ಖಂಡನೀಯ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದ್ದಾರೆ.

ಸಿಇಟಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಯ ಜನಿ ವಾರ ತೆಗೆಸಿ ಅವಮಾನಿಸಿರುವ ಘಟನೆಯನ್ನು ತೀವ್ರವಾಗಿ ಖಂಡಿಸಿರುವ ಸಂಸದರು, ವರ್ಷಪೂರ್ತಿ ಕಷ್ಟಪಟ್ಟು ಅಧ್ಯಯನ ಮಾಡಿ ಒಳ್ಳೆಯ ಭವಿಷ್ಯಕ್ಕಾಗಿ ಸಿಇಟಿ ಸಿದ್ಧತೆ ಮಾಡಿಕೊಂಡು ಬಂದಿದ್ದ ವಿದ್ಯಾರ್ಥಿಗಳ ಯಜ್ಞೋಪವೀತ ತುಂಡರಿಸಿರುವುದು ಹಿಂದೂಗಳ ಶ್ರದ್ದೆಯ ಮೇಲೆ ನಡೆದ ಆಕ್ರಮಣವಾಗಿದೆ. ಕೈಯಲ್ಲಿ ಕಟ್ಟಿಕೊಂಡಿದ್ದ ಕಾಶಿದಾರ ಮತ್ತು ಗಾಯತ್ರಿ ದೀಕ್ಷೆ ಪಡೆದ ಜನಿವಾರವನ್ನು ಬಲವಂತವಾಗಿ ತೆಗೆಸಿರುವುದು ಸನಾತನ ಹಿಂದು ಧರ್ಮದ ಭಾಗವಾದ ಬ್ರಾಹ್ಮಣ ಸಮಾಜಕ್ಕೆ ಮಾಡಿದ ಅವಮಾನ. ಉದ್ದೇಶ ಪೂರ್ವಕವಾಗಿ ಮಾಡಲಾದ ಈ ಕೃತ್ಯ ಕಾಂಗ್ರೆಸ್‌ನ ಹೀನ ಮನಸ್ಥಿತಿಯ ಮುಖವಾಡವನ್ನು ಬಯಲು ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಜ್ಞೋಪವೀತವು ಕೇವಲ ಒಂದು ದಾರವಲ್ಲ; ಅದು ಜ್ಞಾನದ ಸಂಕೇತ, ಸಂಯಮದ ಪ್ರತೀಕ. ಇದು ವಟುವಿನ ಬದುಕಿಗೆ ಒಂದು ಮಹತ್ವದ ತಿರುವು ನೀಡುವ ಸಂಸ್ಕಾರ. ಇಂತಹ ಪವಿತ್ರ ಸಂಸ್ಕಾರವನ್ನು ಕಡೆಗಣಿಸಿ, ಅದನ್ನು ತೆಗೆದುಹಾಕುವ ಮೂಲಕ ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಯ ಭಾವನೆಯನ್ನು ಘಾಸಿಗೊಳಿಸುವುದರ ಜತೆಗೆ ಸಮಸ್ತ ಹಿಂದೂಗಳ ಧಾರ್ಮಿಕ ಭಾವನೆಗಳಿಗೂ ತೀವ್ರ ನೋವುಂಟು ಮಾಡಿದ್ದಾರೆ. ಗುತ್ತಿಗೆ ಕಾಮಗಾರಿಗಳಲ್ಲಿ ಶೇ.4 ರಷ್ಟು ಮುಸ್ಲಿಮರಿಗೆ ಮೀಸಲಾತಿ, ಜಾತಿ ಗಣತಿಯಲ್ಲಿಯೂ ತಾರತಮ್ಯ, ಜನಿವಾರದಂತಹ ಕೃತ್ಯಗಳಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಒಂದು ವರ್ಗದ ಜನರನ್ನು ಓಲೈಸುತ್ತಿರುವುದು ಕೋಮು ವಾದದ ಅತಿರೇಕದ ನಡೆಗಳಾಗಿವೆ. ಅನ್ಯಾಯಕ್ಕೊಳಗಾದ ವಿದ್ಯಾರ್ಥಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಮಕ್ಕಳ ಪ್ರತಿಭೆಗೆ ಬೇಸಿಗೆ ಶಿಬಿರ ಪೂರಕ

ಪಡುಬಿದ್ರಿ: ಪಡುಬಿದ್ರೆ, ಓಂಕಾರ್ ಕಲಾ ಸಂಗಮದ ವತಿಯಿಂದ 15 ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ನಾಲ್ಕನೇ ವರ್ಷದ ರಜಾ ಮಜಾ ಮಕ್ಕಳ ಬೇಸಿಗೆ ಶಿಬಿರವನ್ನು ಮುಖ್ಯಮಂತ್ರಿ ಪದಕ ಪುರಸ್ಕೃತ ಪಡುಬಿದ್ರಿ ಪೊಲೀಸ್ ಉಪನಿರೀಕ್ಷಕ ಪ್ರಸನ್ನ ಪಿ.ಎಸ್. ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಬಾಲ್ಯದಲ್ಲಿಯೇ ಮಕ್ಕಳ ಪ್ರತಿಭೆಯನ್ನು ಗುರುತಿಸಲು ಬೇಸಿಗೆ ಶಿಬಿರಗಳು ಪೂರಕವಾಗಿವೆ. ಮಕ್ಕಳನ್ನು ಸಮಾಧಾನ ಪಡಿಸಲು ಭಯ ಮೂಡಿಸುವ ಕಾರ್ಯ ಮಾಡಿದರೆ ಮಕ್ಕಳ ಮನಸ್ಸಿಗೆ ನೋವು ಉಂಟಾಗಿ, ಕ್ರಮೇಣ ಜೀವನದಲ್ಲಿ ಭಯ ಎದುರಿಸಲು ಅಶಕ್ತರಾಗುವ ಸಾಧ್ಯತೆ ಇದೆ. ಆದುದರಿಂದ ಮಕ್ಕಳನ್ನು ಸದಾ ಕ್ರಿಯಶೀಲರಾಗುವಂತೆ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಬೇಕು ಎಂದರು.

ರಂಗಭೂಮಿ ಕಲಾವಿದ ರಾಮಾಂಜಿ ಉಡುಪಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಬೇಸಿಗೆ ಶಿಬಿರ ನಡೆಯುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಶಾಲೆಯಲ್ಲಿ ಕೇವಲ ಪಠ್ಯ ಪುಸ್ತಕಗಳ ವಿಚಾರ ತಿಳಿಯುವ ಮಕ್ಕಳಿಗೆ ಇಂತಹ ಶಿಬಿರಗಳು ಸೃಜನಾತ್ಮಕವಾಗಿ ಯೋಚಿಸಲು ಸಹಕಾರಿಯಾಗುತ್ತದೆ. ರಂಗ ಚಟುವಟಿಕೆಗಳು ಮಕ್ಕಳಲ್ಲಿ ಏಕಾಗ್ರತೆ, ಶಿಸ್ತು, ಸಮಾಜಮುಖಿ ಚಿಂತನೆ, ಭಾಷಾ ಪ್ರೇಮವನ್ನು ಬೆಳೆಸುತ್ತದೆ. ತರಬೇತಿಯ ಸಂದರ್ಭದಲ್ಲಿ ತರಬೇತುದಾರರು ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತು, ಕಲಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಈ ಸಂದರ್ಭದಲ್ಲಿ ಅವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷತೆಯನ್ನು ರಜಾಮಜಾ ಶಿಬಿರದ ನಿರ್ದೇಶಕಿ ಗೀತಾ ಅರುಣ್ ವಹಿಸಿದ್ದರು. ಪಡುಬಿದ್ರಿ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ರಾಜಶ್ರೀ ಕಿಣಿ, ಪಡುಬಿದ್ರಿ ಗ್ರಾಪಂ ಮಾಜಿ ಉಪಾಧ್ಯಕ್ಷೆ ಯಶೋಧಾ ಪಡುಬಿದ್ರೆ, ಸರ್ವ ಕಾಲೇಜು ವಿದ್ಯಾರ್ಥಿ ಶಕ್ತಿ ಇದರ ರಾಜ್ಯಾಧ್ಯಕ್ಷ ರಚನ್ ಸಾಲ್ಯಾನ್, ಸಂಗೀತ ಬಾಲಕಲಾವಿದೆ ಬೇಬಿ ಸಾಂಚಿ ಮುಖ್ಯ ಅತಿಥಿಗಳಾಗಿದ್ದರು.

ಸಂಸ್ಥೆಯ ಪಾಲುದಾರ ಉದಯ ಕುಮಾರ್ ಭಟ್, ಅರುಣ್ ಕುಮಾರ್, ಅದ್ವಿತ್ ಕುಮಾರ್ ಉಪಸ್ಥಿತರಿದ್ದರು. ಕಾರ್ತಿಕ್ ಎನ್. ಮುಲ್ಕಿ ಸ್ವಾಗತಿಸಿದರು. ಸಂತೋಷ್ ಪಡುಬಿದ್ರಿ ವಂದಿಸಿದರು. ದೀಪಾಶ್ರೀ ಕರ್ಕೇರ ಕಾರ್ಯಕ್ರಮ ನಿರೂಪಿಸಿದರು. ಬಳಿಕ ರಂಗಭೂಮಿ ಕಲಾವಿದರಾದ ರಾಮಾಂಜಿ ಇವರು ರಂಗ ಚಟುವಟಿಕೆಗಳೊಂದಿಗೆ ಶಿಬಿರದಲ್ಲಿ ಪಾಲ್ಗೊಂಡ 60 ವಿದ್ಯಾರ್ಥಿಗಳನ್ನು ರಂಜಿಸಿದರು.

ಮಜಾ ಮಕ್ಕಳ ಬೇಸಿಗೆ ಶಿಬಿರವನ್ನು ಮುಖ್ಯಮಂತ್ರಿ ಪದಕ ಪುರಸ್ಕೃತ ಪಡುಬಿದ್ರಿ ಪೊಲೀಸ್ ಉಪನಿರೀಕ್ಷಕ ಪ್ರಸನ್ನ ಪಿ.ಎಸ್. ಉದ್ಘಾಟಿಸಿದರು.

ಪರ್ಪಲೆ ಭಕ್ತಿಯ ಕ್ಷೇತ್ರವಾಗಿ ಬೆಳಗಲಿ: ಶ್ರೀ

ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಅತ್ತೂರು ಪರ್ಪಲೆ ಕಲ್ಕುಡ, ಕಲ್ಲುರ್ಟಿ, ತೂಕತ್ತೇರಿ ದೈವಸ್ಥಾನದ ಪುನರ್ ಪ್ರತಿಷ್ಠೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಕಾರ್ಕಳ: ಪರ್ಪಲೆ ಕ್ಷೇತ್ರ ಭಕ್ತ ಜನರ ಭಕ್ತಿಯ ಕ್ಷೇತ್ರವಾಗಿ ಬೆಳಗಲಿ ಎಂದು ಸುಬ್ರಹ್ಮಣ್ಯ ಸಂಪುಟ ನರಸಿಂಹ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ನುಡಿದರು. ಅತ್ತೂರು ಪರ್ಪಲೆ ಕಲ್ಕುಡ, ಕಲ್ಲುರ್ಟಿ, ತೂಕತ್ತೇರಿ ದೈವಸ್ಥಾನದ ಪುನರ್ ಪ್ರತಿಷ್ಠೆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿ ಬಳಿಕ ಆಶೀರ್ವಚನ ನೀಡಿದರು.

ಒಂದು ಕಡೆ ಗೌರಿ ಶಂಕರ ದೇವಸ್ಥಾನ ಹಾಗೂ ಇನ್ನೊಂದೆಡೆ ದೈವಸ್ಥಾನ ನಿರ್ಮಾಣ ಮಾಡುವ ಮಹತ್ತರವಾದ ಉದ್ದೇಶ ಇಟ್ಟುಕೊಂಡು ಇಲ್ಲಿನ ಸಮಿತಿ ಬಹಳಷ್ಟು ಶ್ರಮಿಸುತ್ತಿದೆ. ಅದ್ಭುತ ಶಿಲ್ಪ ಕಲೆ, ವಾಸ್ತು ವಿನ್ಯಾಸದ ಮೂಲಕ ಇಲ್ಲಿನ ದೈವಸ್ಥಾನ ಸುಂದರವಾಗಿ ರೂಪುಗೊಳ್ಳುತ್ತಿದೆ ಎಂದರು.

ಪರ್ಪಲೆ ಗಿರಿ ಪುನರುತ್ಥಾನ ಸಮಿತಿ ಅಧ್ಯಕ್ಷ ಡಾ. ರವೀಂದ್ರ ಶೆಟ್ಟಿ ಮಾತನಾಡಿ, ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ನಿರಂತರವಾಗಿ ಆಗಬೇಕಿದೆ. ಮೇ 19ರಂದು ಇಲ್ಲಿ ಜರುಗುವ ದೈವಸ್ಥಾನದ ಪುನರ್ ಪ್ರತಿಷ್ಠೆ ಕಾರ್ಯದಲ್ಲಿ ಸರ್ವರೂ ಭಾಗಿಗಳಾಗಬೇಕೆಂದರು. ಅತ್ತೂರು ಪರ್ಪಲೆಗಿರಿ ಅಭಿವೃದ್ಧಿ ಟ್ರಸ್ಟ್ ನ ಅಧ್ಯಕ್ಷ ಸುಭಾಸ್ ಚಂದ್ರ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ವಾಸ್ತು ತಜ್ಞ ಪ್ರಮಲ್ ಕುಮಾರ್, ಟ್ರಸ್ಟ್ ನ ಕಾರ್ಯದರ್ಶಿ ಸತ್ಯೇಂದ್ರ ಭಟ್, ದಿನೇಶ್ ಭಟ್, ರಾಜಾಪುರ ಸಾರಸ್ವತ ಸೊಸೈಟಿ ಅಧ್ಯಕ್ಷ ರವೀಂದ್ರ ಪ್ರಭು, ಮುನಿಯಾಲು ಉದಯ ಕುಮಾರ್ ಶೆಟ್ಟಿ, ಬೋಳ ಪ್ರಶಾಂತ್ ಕಾಮತ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮಂಡಗದ್ದೆ: ವಿದ್ಯುತ್ ಪ್ರಸರಣ ಮಾರ್ಗ ಚಾಲನೆ

ಶಿವಮೊಗ್ಗ: ತೀರ್ಥಹಳ್ಳಿ ತಾಲೂಕಿನ ಮಂಡಗದ್ದೆ ಗ್ರಾಮದಲ್ಲಿ ಹೊಸದಾಗಿ ನಿರ್ಮಿಸುತ್ತಿರುವ, 1ಥ10 ಎಂವಿಎ ಶಕ್ತಿ ಪರಿವರ್ತಕ ಹಾಗೂ ಉದ್ದೇಶಿತ 110 ಕೆವಿ ಲಿಲೋ ಮಾರ್ಗವನ್ನು ಈಗಿರುವ ಶಿವಮೊಗ್ಗ- ಸೌತ್ ಕೆನರಾ ಲೈನ್ ವಿದ್ಯುತ್ ಮಾರ್ಗದಿಂದ ಮಂಡಗದ್ದೆ ವಿದ್ಯುತ್ ಉಪಕೇಂದ್ರದವರೆಗೆ ಸುಮಾರು 20 ಮೀಟರ್ ಪ್ರಸರಣ ಮಾರ್ಗವನ್ನು ನಿರ್ಮಿಸುವ ಕಾಮಗಾರಿಯು ಪೂರ್ಣಗೊಂಡಿದ್ದು, ಏ.30 ರಂದು ಅಥವಾ ನಂತರದ ದಿನಗಳಲ್ಲಿ ಯಾವುದೇ ಕ್ಷಣದಲ್ಲಿಯಾದರೂ ಈ ಮಾರ್ಗವನ್ನು ಚಾಲನೆಗೊಳಿಸಲಾಗುವುದು. ಸಾರ್ವಜನಿಕರು ಈ ಮಾರ್ಗದಲ್ಲಿ ಬರುವ ಗೋಪುರಗಳನ್ನು ಹತ್ತುವುದಾಗಲಿ, ದನಕರುಗಳನ್ನು ಕಟ್ಟುವುದಾಗಲಿ ವಾಹಕಗಳಿಗೆ ತಗುಲುವಂತೆ ವಸ್ತುಗಳನ್ನು ಎಸೆಯುವುದಾಗಲಿ ನಿಷೇಧಿಸಲಾಗಿದೆ. ಹಾಗೂ ಈ ಕೃತ್ಯದಿಂದ ಉಂಟಾಗುವ ಪರಿಣಾಮಗಳಿಗೆ ಅವರೇ ನೇರ ಹೊಣೆಗಾರರಾಗಿದ್ದು, ಕವಿಪ್ರನಿನಿಯು ಯಾವುದೇ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಪರಿಹಾರವನ್ನು ನೀಡುವುದಿಲ್ಲವೆಂದು ಶಿವಮೊಗ್ಗ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಯೋಜನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ: ಅವಧಿ ವಿಸ್ತರಣೆ

ಶಿವಮೊಗ್ಗ: ಜಿಲ್ಲಾ ಮೀನುಗಾರಿಕೆ ಇಲಾಖೆಯು 2022-23 ರಿಂದ 2024-25 ಸಾಲಿನವರೆಗೆ ಮರು ಹಂಚಿಕೆಯಾಗಿರುವ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಮತ್ತು ನೀಲಿಕ್ರಾಂತಿ ಯೋಜನೆಯಡಿ ವಿವಿಧ ಘಟಕಗಳಿಗೆ ಸಹಾಯಧನಕ್ಕಾಗಿ ಆಸಕ್ತರಿಂದ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ. ಮೀನುಕೃಷಿ ಕೊಳ ನಿರ್ಮಾಣ ಮಾಡಿ ಮೀನುಕೃಷಿ ಕೈಗೊಂಡವರಿಗೆ ಹೂಡಿಕೆಗಳ ವೆಚ್ಚದ ಮೇಲೆ ಸಹಾಯ, ಯಾಂತ್ರೀಕೃತ ದೋಣಿ ಖರೀದಿಗೆ ಸಹಾಯ, ಮೀನುಮರಿ ಪಾಲನಾ ಘಟಕ ನಿರ್ಮಾಣದ ಬಗ್ಗೆ ಸಹಾಯ, ಸೈಕಲ್ ವಿತ್ ಐಸ್‌ಬಾಕ್ಸ್, ಮಧ್ಯಮ ವರ್ಗದ ಅಲಂಕಾರಿಕ ಸಾಕಾಣಿಕೆ ಘಟಕ (ಪ.ಜಾ) ಮತ್ತು ಹೊಸತಾದ ಮೀನುಮಾರಾಟದ ಕಿಯೋಸ್ಕ್ ನಿರ್ಮಾಣಕ್ಕಾಗಿ ಸಹಾಯ ಧನ ನೀಡಲಾಗುತ್ತಿದ್ದು, ಘಟಕಗಳ ಉಪಯೋಜನೆಗಳನ್ನು ಪಡೆಯಲು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ. 40 ರಷ್ಟು ಹಾಗೂ ಪ.ಜಾ/ಪ.ಪಂ. ಮತ್ತು ಮಹಿಳಾ ಫಲಾನುಭವಿಗಳಿಗೆ ಶೇ. 60 ರಷ್ಟು ಸಹಾಯಧನ ನೀಡಲಾಗುವುದು. ಆಸಕ್ತರು ನಿಗದಿತ ನಮೂನೆ ಅರ್ಜಿಯನ್ನು ಆಯಾ ತಾಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಪೂರ್ಣ ದಾಖಲೆಗಳೊಂದಿಗೆ ಮೇ 13 ರೊಳಗಾಗಿ ಸಲ್ಲಿಸುವಂತೆ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಉಚಿತ ಯೋಗ, ಪ್ರಾಣಾಯಾಮ ಶಿಬಿರ

ಶಿವಮೊಗ್ಗ: ಜೆಸಿಐ ಶಿವಮೊಗ್ಗ ವಿವೇಕ್ ಶ್ರೀ ಶಿವಗಂಗಾ ಯೋಗ ಕೇಂದ್ರ, ಸಹಯೋಗದಶ್ರ, ಶಿವಶಕ್ತಿ ಯೋಗ ಮಂದಿರ ಸ್ವಾಮಿ ವಿವೇಕಾನಂದ ಪಾರ್ಕ್ ಅಶ್ವಥ್ ನಗರ 8ನೇ ತಿರುವು. ಇಲ್ಲಿ ಏ.24 ರಿಂದ ಮೇ 4ವರೆಗೆ ಹತ್ತು ದಿನಗಳ ಕಾಲ ಉಚಿತ ಯೋಗ ಪ್ರಾಣಾಯಾಮ ಹಾಗೂ ಧ್ಯಾನ ಶಿಬಿರವನ್ನು ಆಯೋಜಿಸಲಾಗಿದೆ ಈ ಶಿಬಿರದಲ್ಲಿ ಮಧುಮೇಹ ರಕ್ತದೊತ್ತಡ ಥೈರಾಡ್ ಮೈಗ್ರೇನ್ ತಲೆನೋವು ಮಂಡಿ ನೋವು ಸೊಂಟ ನೋವು ಬೆನ್ನು ನೋವು ರಾತ್ರಿ ನಿದ್ದೆ ಬಾರದಿರುವುದು ಮಾನಸಿಕ ಒತ್ತಡ ಹಾಗೂ ಇನ್ನೂ ಅನೇಕ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ಅವುಗಳು ಬಾರದಂತೆ ತಡೆಗಟ್ಟಲು ಈ ಯೋಗ ಶಿಬಿರದಲ್ಲಿ ಎಲ್ಲರೂ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಸಾರ್ವಜನಿಕ ಸಂಪರ್ಕ ಅಧಿಕಾರಿ ಜಿ ವಿಜಯಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶುಭಲಕ್ಷಣ ಸಾಮಾಜಿಕ ಯಕ್ಷಗಾನ ಪ್ರಸಂಗ ನಾಳೆ

ಶಿವಮೊಗ್ಗ: ಬಂಟರ ಯಾನೆ ನಾಡವರ ಸಂಘ, ಯಕ್ಷಾಭಿಮಾನಿ ಬಳಗದ ಸಂಯುಕ್ತಾಶ್ರಯದಲ್ಲಿ ಏ.24ರಂದು ಶ್ರೀ ಸಾಲಿಗ್ರಾಮ ಮೇಳದವರಿಂದ ಶುಭ ಲಕ್ಷಣ ಎಂಬ ಸಾಮಾಜಿಕ ಯಕ್ಷಗಾನ ಪ್ರಸಂಗವನ್ನು ಗೋಪಾಳದ 100 ಅಡಿ ರಸ್ತೆಯಲ್ಲಿರುವ ಬಂಟರ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಸತೀಶ್ ಶೆಟ್ಟಿ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಶುಭಲಕ್ಷಣ ಎಂಬ ಯಕ್ಷಗಾನವು ಸಾಮಾಜಿಕವಾಗಿದ್ದು, ತೆಳು ಹಾಸ್ಯ, ಪ್ರೇಮ ಮತ್ತು ಸಾಮಾಜಿಕ ಅಂಶಗಳಿಂದ ಕೂಡಿದೆ. ಕಾಲ ಮಿತಿ ಯಕ್ಷಗಾನವಿದು ಸಂಜೆ 6ರಿಂದ ಪ್ರಾರಂಭವಾದರೆ ರಾತ್ರಿ 12.30ರವರೆಗೆ ನಡೆಯಬಹುದು. ಯಕ್ಷಗಾನ ಪ್ರಿಯರು ಇಂತಹ ಒಂದು ಸದಾವಕಾಶವನ್ನು ಕಳೆದುಕೊಳ್ಳಬಾರದು. ಪ್ರವೇಶ ಉಚಿತವಾಗಿರುತ್ತದೆ. ಅಷ್ಟೇ ಅಲ್ಲ ಯಕ್ಷಗಾನ ನೋಡಲು ಬಂದವರಿಗೆ ಲಘು ಉಪಹಾರ ವ್ಯವಸ್ಥೆ ಇರುತ್ತದೆ ಎಂದರು. ಯಕ್ಷಗಾನ ಪ್ರಿಯರು, ಸಾರ್ವಜನಿಕರು, ಯಕ್ಷಗಾನಕ್ಕೆ ಆಗಮಿಸಬೇಕು ಎಂದು ಸಂಘದ ರಾಜು ಶೆಟ್ಟರು ಮನವಿ ಮಾಡಿದರು.

{ಬಸನಗೌಡ ಪಾಟೀಲ ಯತ್ನಾಳ} ಶಾಸಕ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆಯುತ್ತಿರುವ ಜನಾಕ್ರೋಶ ಯಾತ್ರೆ ಸಂಪೂರ್ಣ ವಿಫಲವಾಗಿದೆ. ವಿಜಯಪುರ, ಹಾವೇರಿ, ದಾವಣಗೆರೆ ಎಲ್ಲ ಕಡೆ ಸಂಪೂರ್ಣ ವೈಫಲ್ಯವಾಗಿದ್ದು ಸಾವಿರ ಜನರು ಸೇರಿಲ್ಲ. ಬಿಬಿಎಂಪಿ ಚುನಾವಣೆ ಸಮೀಪಿಸುತ್ತಿರುವುದರಿಂದ ಟಿಕೆಟ್‌ಗಾಗಿ ವಿಜಯೇಂದ್ರ ವಾರ್ನಿಂಗ್ ಮಾಡಿರುವುದರಿಂದ ಆಕಾಂಕ್ಷಿಗಳು ಬರುತ್ತಿದ್ದಾರೆ.



ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಮಧು ಬಂಗಾರಪ್ಪ ಸೂಚನೆ

ಕಾಮಗಾರಿ ತ್ವರಿತ ಪೂರ್ಣಗೊಳಿಸಿ

ಶಿವಮೊಗ್ಗ: ತಾಲೂಕಿನಲ್ಲಿ ವಿವಿಧ ಇಲಾಖೆಗಳ ಮೂಲಕ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳನ್ನು ಸಚಿವರ ಉದ್ಘಾಟನೆಗಾಗಿ ತಡಮಾಡದೆ ತ್ವರಿತವಾಗಿ ಆರಂಭಿಸಿ, ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆಗೆ ಸಜ್ಜುಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಮಧು ಬಂಗಾರಪ್ಪ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸೊರಬದ ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ಅನುಕೂಲವಾಗುವಂತೆ ಶಿಕ್ಷಣ ಇಲಾಖೆ ಶೀಘ್ರದಲ್ಲಿ ಅನೇಕ ಮಹತ್ವದ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಮುಂದಾಗಿದೆ. ಪ್ರಸಕ್ತ ಶೈಕ್ಷಣಿಕ ಸಾಲಿನಿಂದ ರಾಜ್ಯದ ಎಲ್ಲಾ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಎಲ್.ಕೆ.ಜಿ. ಮತ್ತು ಯು.ಕೆ.ಜಿ ತರಗತಿಗಳನ್ನು ಆರಂಭಿಸಲು ಸೂಚಿಸಲಾಗಿದೆ. ಈ ಶಾಲೆಗಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಉಚಿತವಾಗಿ ನಡೆಸಲಾಗುವುದು. ವಿಶೇಷವಾಗಿ ಮೂಲಭೂತ ಸೌಕರ್ಯ ಹೊಂದಿರುವ ಶಾಲೆಗಳಲ್ಲಿ ತರಗತಿಗಳ ಆರಂಭಕ್ಕೆ ಆದ್ಯತೆ ನೀಡಲಾಗುವುದು ಎಂದರು.

ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರು ಶಾಲಾ ಫಲಿತಾಂಶ ಸುಧಾರಣೆಗೆ ವಿಶೇಷ ಕಾಳಜಿ ವಹಿಸಬೇಕು. ಯಾವುದೇ ಮಗು ಶಾಲಾ ದಾಖಲಾತಿಯಿಂದ ಹೊರಗುಳಿಯದಂತೆ ಗಮನಿಸಬೇಕು ಅಲ್ಲದೆ ದಾಖಲಾತಿಯಲ್ಲಿ ಗಣನೀಯ ಪ್ರಮಾಣದ ಏರಿಕೆ ಕಂಡುಬರಬೇಕು ಎಂದವರು ಸೂಚಿಸಿದರು.

ಪ್ರಸ್ತುತ ಪ್ರಕಟಿಸಲಾಗಿರುವ ದ್ವಿತೀಯ ಪಿ.ಯು.ಸಿ.ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಲ್ಲಿ ಶೇ.94ರಷ್ಟು ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಹಾಜರಾಗಲು ನೋಂದಾಯಿಸಿಕೊಂಡಿದ್ದಾರೆ. ಅಲ್ಲದೇ ರಾಜ್ಯದಲ್ಲಿ ಉತ್ತೀರ್ಣರಾದ ಸುಮಾರು 70,000ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳಿಕೆಯ ಕಾರಣದಿಂದ ಪರೀಕ್ಷೆ ಬರೆಯುತ್ತಿರುವುದು ವಿಶೇಷವಾಗಿದೆ. ವಿದ್ಯಾರ್ಥಿಗಳು ಬರೆಯುವ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆದಿರುವುದನ್ನು ನಮೂದಿಸಿ, ಪ್ರಮಾಣಪತ್ರ ವಿತರಿಸಲು ಕ್ರಮವಹಿಸಲಾಗುವುದು ಎಂದರು.

ತಾಲೂಕಿನಲ್ಲಿ ಮಂಗನ ಕಾಯಿಲೆ ನಿಯಂತ್ರಣಕ್ಕಾಗಿ ಆರೋಗ್ಯ ಇಲಾಖೆಯು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದು, ಅಗತ್ಯ ಔಷಧಗಳನ್ನು ದಾಸ್ತಾನು ಮಾಡಿಕೊಳ್ಳಲು ಸೂಚಿಸಲಾಗಿದೆ. ದಿನೇದಿನೇ ವಿದ್ಯುತ್‌ಗೆ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಸಾರ್ವಜನಿಕರು ಸೋಲಾರ್ ವಿದ್ಯುತ್ ಉತ್ಪಾದಿಸಿ ಬಳಸಲು ಪ್ರೇರೇಪಿಸಲಾಗುತ್ತಿದೆ. ಒಂದು ಬಾರಿಯ ಹೂಡಿಕೆಯಿಂದ ವಿದ್ಯುತ್ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದರು.

ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳು ಗರಿಗೆದರಿದ್ದು, ರೈತರ ಅಗತ್ಯಗಳಿಗಾಗಿ ರಸಗೊಬ್ಬರ, ಬಿತ್ತನೆಬೀಜ ಹಾಗೂ ರಸಾಯನಿಕಗಳನ್ನು ದಾಸ್ತಾನು ಮಾಡಿಟ್ಟುಕೊಂಡು ಅಗತ್ಯಕ್ಕೆ ತಕ್ಕಂತೆ ರೈತರಿಗೆ ಒದಗಿಸಲು ಕೃಷಿ ಇಲಾಖಾಧಿಕಾರಿಗಳಿಗೆ ಸೂಚಿಸಲಾಗಿದೆ. ಜಲಜೀವನ ಮಿಷನ್ ಯೋಜನೆಯಡಿ ಹೆಚ್ಚುವರಿ ಕಾಮಗಾರಿಗಾಗಿ ಅಗತ್ಯವಿರುವ 2.00ಕೋಟಿ ರು.ಗಳನ್ನು ಬಿಡುಗಡೆಗೊಳಿಸಲು ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ಜನಪ್ರಿಯವಾಗಿರುವ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನದ ಕುರಿತು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ, ಮಾಧ್ಯಮಗಳಿಗೆ ವಿವರಿಸುವಂತೆ ತಹಸೀಲ್ದಾರರಿಗೆ ಸೂಚಿಸಿದ ಅವರು, ಗ್ಯಾರಂಟಿ ಯೋಜನೆಗಳ ಕುರಿತು ಜನರಲ್ಲಿ ವಾಸ್ತವ ಸಂಗತಿಗಳ ಕುರಿತು ಮನವರಿಕೆ ಮಾಡಿಕೊಡಬೇಕು. ಅಲ್ಲದೇ ತಮ್ಮ ತೆರಿಗೆ ಹಣ ಸದ್ಬಳಕೆಯಾಗುತ್ತಿರುವ ಬಗ್ಗೆ ಜನರಿಗೆ ತಿಳಿಸಬೇಕು ಎಂದವರು ನುಡಿದರು.

ತಾಲೂಕಿನ ವಸತಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವ ಬಗ್ಗೆ ವಿದ್ಯಾರ್ಥಿಗಳಿಂದ ಆಗಾಗ್ಗೆ ದೂರುಗಳು ಬರುತ್ತಿವೆ. ಸಂಬಂಧಿಸಿದ ಇಲಾಖಾ ಅಧಿಕಾರಿಗಳು ವಸತಿ ನಿಲಯಗಳಿಗೆ ಅಗತ್ಯ ಸೌಕರ್ಯ ಕಲ್ಪಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪೂರಕ ವಾತಾವರಣ ನಿರ್ಮಿಸುವ ಅಗತ್ಯವಿದೆ ಎಂದರು.

ಸರಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಗುತ್ತಿಗೆದಾರರು ಸಕಾಲದಲ್ಲಿ ವೇತನ ಪಾವತಿಸಬೇಕು. ತಪ್ಪಿದಲ್ಲಿ ಅಂತಹ ಸಂಸ್ಥೆಗಳನ್ನು ಕಪ್ಪುಪಟ್ಟಿಗೆ ಸೇರ್ಪಡೆಗೊಳಿಸಬೇಕು. ನೇಮಕಾತಿಯಲ್ಲಿಯೂ ಸ್ಥಳೀಯರಿಗೆ ಪ್ರಾಧಾನ್ಯತೆ ನೀಡುವಂತೆ ಅವರು ಸೂಚಿಸಿದರು.

ನರೇಗಾ ಯೋಜನೆಯಡಿ ಮಾನವದಿನಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಗ್ರಾಮೀಣ ಸರಕಾರಿ ಶಾಲಾ ಕಾಂಪೌಂಡ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳು ಪ್ರಸ್ತಾವನೆ ಸಿದ್ದಪಡಿಸಿ, ಅನುಮೋದನೆ ಪಡೆದು ಕಾಮಗಾರಿಗಳನ್ನು ನಡೆಸಬೇಕು. ಇದರಿಂದಾಗಿ ಹೆಚ್ಚಿನ ಜನರಿಗೆ ಕೂಲಿ ಕೆಲಸ ದೊರೆಯಲಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳಿಗೆ ಕೊಳವೆಬಾವಿ ಕೊರೆಸಿಕೊಡುವ ಕಾರ್ಯ ಪೂರ್ಣಗೊಂಡಿಲ್ಲ. ಈ ಬಗ್ಗೆ ಸಂಬಂಧಿಸಿದ ನಿಗಮದ ಆಯುಕ್ತರೊಂದಿಗೆ ಚರ್ಚಿಸಲಾಗುವುದು ಎಂದರು.

ಸಭೆಯಲ್ಲಿ ತಹಸೀಲ್ದಾರ್ ಮಂಜುಳಾ ಹೆಗಡಾಳ, ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಜಿ.ಶಶಿಧರ್, ಸೇರಿದಂತೆ ಕೆ.ಡಿ.ಪಿ.ಸಲಹಾ ಸಮಿತಿಯ ಸದಸ್ಯರು ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿ-ಸಿಬ್ಬಂಧಿಗಳು ಉಪಸ್ಥಿತರಿದ್ದರು.

ಸೊರಬದ ರಂಗಮಂದಿರದಲ್ಲಿ ಏರ್ಪಡಿಸಲಾಗಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಮಧು ಬಂಗಾರಪ್ಪ ಮಾತನಾಡಿದರು.

ಬಿಸಿಯೂಟಕ್ಕೆ ಅಲ್ಯುಮಿನಿಯಂ ಪಾತ್ರೆ ಬಳಕೆ ಸರಿಯಲ್ಲ

ಬಿಸಿಯೂಟ ತಯಾರಿಕೆಯಲ್ಲಿ ಅಲ್ಯುಮಿನಿಯಮ್ ಪಾತ್ರೆಗಳ ಬಳಕೆ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಅಲ್ಯುಮಿನಿಯಂ ಪಾತ್ರೆಗಳ ಬಳಕೆ ಆರೋಗ್ಯದ ದೃಷ್ಟಿಯಿಂದ ಉತ್ತಮವಲ್ಲ ಎಂಬ ಕಾರಣಕ್ಕೆ ಅಲ್ಯುಮಿನಿಯಮ್‌ಗೆ ಪರ್ಯಾಯವಾಗಿ ರಾಜ್ಯದ ಸುಮಾರು 65,000 ಸರಕಾರಿ ಶಾಲೆಗಳಿಗೆ ಗುಣಮಟ್ಟದ ಪಾತ್ರೆಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ನೆಲದ ಮೇಲೆ ಕುಳಿತುಕೊಳ್ಳುವ ಶಾಲೆಗಳಿಗೆ ಬೆಂಚ್‌ಗಳನ್ನು ಪೂರೈಸಲು ಉದ್ದೇಶಿಸಲಾಗಿದ್ದು, ಅಂತಹ ಶಾಲೆಗಳ ಯಾದಿಯನ್ನು ಸಲ್ಲಿಸುವಂತೆ ಸೂಚಿಸಿದ ಅವರು, ಶಿಥಿಲಗೊಂಡಿರುವ ಅಡುಗೆ ಕೋಣೆಗಳ ದುರಸ್ತಿ ಹಾಗೂ ನೂತನ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಸೊರಬ ಪುರಸಭೆ ಅಧ್ಯಕ್ಷರಾಗಿ ಬಿಜೆಪಿಯ ಪ್ರಭು ಮೇಸ್ತ್ರಿ, ಉಪಾಧ್ಯಕ್ಷರಾಗಿ ಕಾಂಗ್ರೆಸ್‌ನ ಶ್ರೀರಂಜನಿ ಆಯ್ಕೆ

ಚಾಣಾಕ್ಷತೆ ಮೆರೆದ ಕಾಂಗ್ರೆಸ್

ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಿತು.

ಮಹೇಶ ಗೋಖಲೆ

ಸೊರಬ: ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿಜೆಪಿಯ ಅಭ್ಯರ್ಥಿ ಪ್ರಭು ಮೇಸ್ತ್ರಿ ಹಾಗೂ ಕಾಂಗ್ರೆಸ್‌ನ್ ಶ್ರೀರಂಜನಿ ಪ್ರವೀಣಕುಮಾರ್ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಒಟ್ಟು 12 ಸದಸ್ಯರ ಬಲದಲ್ಲಿ, ಬಿಜೆಪಿ 6, ಕಾಂಗ್ರೆಸ್ 4 ಹಾಗು ಜನತಾದಳ 1 ಮತ್ತು ಪಕ್ಷೇತರ 1 ಸ್ಥಾನ ಹೊಂದಿದ್ದ ಪುರಸಭೆಯಲ್ಲಿ ಈ ಹಿಂದೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಬಿಜೆಪಿ ತನ್ನದಾಗಿಸಿಕೊಂಡಿತ್ತು.

ವಿಧಾನ ಸಭೆ ಚುನಾವಣೆಯ ನಂತರ ಶಾಸಕರಾಗಿ ಕಾಂಗ್ರೆಸ್‌ನ ಮಧುಬಂಗಾರಪ್ಪ ಆಯ್ಕೆಯಾದ ನಂತರ ನಡೆದ ಪುರಸಭೆ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪರಿಶಿಷ್ಟ ಪಂಗಡಕ್ಕೆ ಮೀಸಲಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿ ಬಿಜೆಪಿಯಲ್ಲಿ ಮಾತ್ರ ಇರುವುದರಿಂದ ಅದೃಷ್ಟ ಬಿಜೆಪಿ ಪಾಲಾಯಿತು. ಆದರೆ ಉಪಾಧ್ಯಕ್ಷಸ್ಥಾನ ಬಿಜೆಪಿ ತನ್ನದಾಗಿಸಿಕೊಳ್ಳುವಲ್ಲಿ ವಿಫಲವಾಗಿದ್ದು, ಬಿಜೆಪಿಯ ಪುರಸಭಾ ಸದಸ್ಯರೇ ಕಾಂಗ್ರೆಸ್ ಬಿಂಬಲಿಸುವ ಮೂಲಕ ಉಅಪಾಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಮಡಿಲಿಗೆ ಹಾಕಿದ್ದು, ಚಾಣಕ್ಷತೆಯಲ್ಲಿ ಕಾಂಗ್ರೆಸ್ ಯಶಸ್ವಿಯಾದರೆ ಹಿಂದಿನ ಪುರಸಭೆ ಚನಾವಣೆಯಂತೆಯೇ ಈಗಲೂ ಬಿಜೆಪಿ ತನ್ನ ಸದಸ್ಯರನ್ನು ಹಿಡಿದಿಟ್ಟುಕೊಳ್ಳುವಲ್ಲಿ ವಿಪಲವಾಗಿದೆ. ಆ ಮೂಲಕ ಬಿಜೆಪಿ ಸೋತಿದ್ದು ಓಟ್ಟಾರೆ ಕಾಂಗ್ರೆಸ್ ಗೆಲುವಿನ ನಗೆ ಚೆಲ್ಲಿದೆ.

ಜಿಲ್ಲಾ ವಸ್ತುವಾರಿ ಸಚಿವ ಮಧು ಬಂಗಾರಪ್ಪ, ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಸದಸ್ಯರಾದ ಎಂ.ಡಿ.ಉಮೇಶ್, ಪ್ರಸನ್ನಕುಮಾರ್ ದೊಡ್ಡಮನೆ, ಅನ್ಸರ್ ಅಹಮದ್, ಆಫ್ರಿನಾ ಬಾನು, ಸುಲ್ತಾನಾ ಬೇಗಂ, ಈರೇಶಪ್ಪ, ಪ್ರೇಮಾ ಟೋಕಪ್ಪ, ಮಧುರಾಯ್ ಶೇಟ್, ನಟರಾಜ್, ಜಯಲಕ್ಷ್ಮಿ, ಪುರಸಭೆ ಮುಖ್ಯಾಧಿಕಾರಿ ಚಂದನ್ ಸೇರಿದಂತೆ ಸಿಬ್ಬಂದಿ ಹಾಜರಿದ್ದರು.

ಬಿಜೆಪಿಗೆ ಒಲಿಯದ ಜಯಲಕ್ಷ್ಮಿ

ಬಿಜೆಪಿಯಿಂದ ಪ್ರಭು ಮೇಸ್ತ್ರಿ ಒಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಗಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಕಾಂಗ್ರೆಸ್ ನಿಂದ ಶ್ರೀರಂಜನಿ ಹಾಗೂ ಬಿಜೆಪಿಯಿಂದ ಜಯಲಕ್ಷ್ಮಿ ನಾಮಪತ್ರ ಸಲ್ಲಿಸಿದ್ದರು. ಜಯಲಕ್ಷ್ಮಿ 5 ಮತಗಳನ್ನು ಪಡೆದರೆ, ಶ್ರೀರಂಜಿನಿ 8 ಮತಗಳನ್ನು ಪಡೆದು 3 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಸರಕಾರದ ನಡೆ ಕಾರ್ಯಕರ್ತರ ಕಡೆ ಕಾರ್ಯಕ್ರಮದಲ್ಲಿ ಸಚಿವ ಡಿ.ಸುಧಾಕರ್

ಕಾರ್ಯಕರ್ತರ ಪರಿಶ್ರಮದಿಂದ ಪಕ್ಷ ಅಧಿಕಾರಕ್ಕೆ

ಹೊಸದುರ್ಗ: 2023ರ ವಿಧಾನಸಭೆ ಚುನಾವಣೆಯಲ್ಲಿ ಶತಾಯಗತಾಯ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕೆಂದು ನಮ್ಮ ಪಕ್ಷದ ಹೈಕಮಾಂಡ್, ರಾಜ್ಯ ನಾಯಕರು, ಕಾರ್ಯಕರ್ತರು ಕಾಲಿಗೆ ಚಕ್ರ ಕಟ್ಟಿಕೊಂಡು ತಿರುಗಿದರು. 2013ರಲ್ಲಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರದ ಸಾಧನೆ, ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರದ ಲೋಪಗಳ ಬಗ್ಗೆ ಜನರ ಮನೆಬಾಗಿಲಿಗೆ ಮುಟ್ಟಿಸಲಾಯಿತು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿ ಎಲ್ಲಾ ನಾಯಕರು, ಕಾರ್ಯಕರ್ತರ ಪರಿಶ್ರಮದಿಂದ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಅಧಿಕಾರದ ಗದ್ದುಗೆ ಹಿಡಿದಿದೆ ಎಂದು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ತಿಳಿಸಿದರು.

ನಗರದ ಸಿದ್ದರಾಮೇಶ್ವರ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಸರಕಾರದ ನಡೆ ಕಾರ್ಯಕರ್ತರ ಕಡೆ ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಂಬರುವ ಜಿಲ್ಲಾ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗೆ ಸಿದ್ದತೆ ಮಾಡಿಕೊಳ್ಳಿ ಎಂದು ವರಿಷ್ಠರು ಆದೇಶಿಸಿದ್ದು, ಅವರ ಆದೇಶದ ಮೇರೆಗೆ ಸರಕಾರದ ನಡೆ ಕಾರ್ಯಕರ್ತರ ಕಡೆ ಎಂಬ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸರಕಾರದ ಕಾರ್ಯಕ್ರಮ ಮತ್ತು ಯೋಜನೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಿ. ಮುಂಬರುವ ಚುನಾವಣೆ ಎದುರಿಸಲು ಸಿದ್ಧರಾಗಿ ಎಂದು ತಿಳಿಸಿದ್ದಾರೆ. 2018ರಲ್ಲಿ ನಮ್ಮ ಸರಕಾರ ಬಾರದೆ ಇರುವ ಕಾರಣ, ಭದ್ರಾ ಮೇಲ್ದಂಡೆ ಯೋಜನೆಯ ಪ್ರಗತಿ ಕಾರ್ಯಕ್ಕೆ ಹಿನ್ನಡೆಯಾಗಿದೆ. ಈಗ ಮತ್ತೆ ಅಧಿಕಾರಕ್ಕೆ ಬಂದಿದ್ದು ಜಿಲ್ಲೆಯ ಎಲ್ಲಾ ಶಾಸಕರು, ಸಂಸದರು, ಮಾಜಿ ಶಾಸಕರು ಒಗ್ಗಟ್ಟಿನಿಂದ ಅಪ್ಪರ್ ಭದ್ರ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಶ್ರಮಿಸುತ್ತಿದ್ದೇವೆ ಎಂದರು.

ಶಾಸಕ ಬಿ.ಜಿ.ಗೋವಿಂದಪ್ಪ ಮಾತನಾಡಿ, ಪಕ್ಷದ ಆದೇಶದಂತೆ ಎಲ್ಲರೂ ಮುಂಬರುವ ಚುನಾವಣೆಗೆ ಸಿದ್ಧಗೊಳ್ಳಬೇಕಿದೆ. 1986ರಿಂದಲೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ಮಾಡಿಕೊಂಡು ಬಂದಿದ್ದೇನೆ. ಈ ಬಾರಿ ಚಿತ್ರದುರ್ಗ ಜಿ.ಪಂ ಮತ್ತು ಹೊಸದುರ್ಗ ತಾಲೂಕು ಪಂಚಾಯಿತಿಯನ್ನು ಕಾಂಗ್ರೆಸ್ ತೆಕ್ಕೆಗೆ ತೆಗೆದುಕೊಳ್ಳಬೇಕು. ಇದಕ್ಕಾಗಿ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು, ಮಾಜಿ ಶಾಸಕರು, ಮಾಜಿ ಸಂಸದರು, ಜಿ.ಪಂ, ತಾ.ಪಂ ಮಾಜಿ ಸದಸ್ಯರು ಹಾಗೂ ಪಕ್ಷದ ಎಲ್ಲಾ ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಬೇಕಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಕೆಪಿಸಿಸಿ ಸದಸ್ಯ ಎಂ.ಪಿ.ಶಂಕರ್, ಅಲ್ತಾಫ್ ಪಾಷಾ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾಜ್ ಪೀರ್, ಕಾರ್ಯದರ್ಶಿ ಹಾಲೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪದ್ಮನಾಭ, ಶ್ರೀರಾಂಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲೋಕೇಶ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಮಂಜುನಾಥ್, ನಿರ್ದೇಶಕ ಕೆ. ಅನಂತ್, ಕೆಡಿಪಿ ಸದಸ್ಯೆ ದೀಪಿಕಾ ಸತೀಶ್, ಮುಖಂಡರಾದ ಗೋ.ತಿಪ್ಪೇಶ್, ಆಗ್ರೋಶಿವಣ್ಣ, ಕಾರೆಹಳ್ಳಿ ಬಸವರಾಜ್ ಸೇರಿ ನೂರಾರು ಕಾರ್ಯಕರ್ತರ ಹಾಜರಿದ್ದರು.



ನಗರದ ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಸರಕಾರದ ನಡೆ ಕಾರ್ಯಕರ್ತರ ಕಡೆ ಕಾರ್ಯಕ್ರಮವನ್ನು ಸಚಿವ ಡಿ.ಸುಧಾಕರ್ ಉದ್ಘಾಟಿಸಿದರು.

ಜನರ ಮೂಗಿಗೆ ತುಪ್ಪ ಸವರಿದ ಬಿಜೆಪಿ

ನಮ್ಮ ಸರಕಾರದ ಯೋಜನೆಗಳನ್ನು ಜನರ ಮನೆ, ಮನೆಗೆ ತಲುಪಿಸುವ ಕೆಲಸ ಮಾಡಬೇಕು. ನಮ್ಮೆಲ್ಲರ ಮುಖ್ಯ ಉದ್ದೇಶ ಚಿತ್ರದುರ್ಗ ಜಿಲ್ಲೆಗೆ ಭದ್ರಾ ನೀರನ್ನು ಹರಿಸುವುದೇ ಆಗಿದೆ. ಕಳೆದ ಬಿಜೆಪಿ ಸರಕಾರದಲ್ಲಿ 5,300 ಕೋಟಿ ನೀಡುತ್ತೇವೆ ಎಂದು ಜನರ ಮೂಗಿಗೆ ತುಪ್ಪ ಸವರಿದರು. ಇಡೀ ದೇಶದಲ್ಲಿ ಅತಿ ಹೆಚ್ಚು ತೆರಿಗೆಯನ್ನು ನೀಡುವ 3ನೇ ರಾಜ್ಯ ಕರ್ನಾಟಕ, ಮೋದಿ ಸರಕಾರ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಲೇ ಬರುತ್ತಿದೆ. 53 ಸಾವಿರ ಕೋಟಿ ಹಣವನ್ನು ಗ್ಯಾರಂಟಿಗಳಿಗೆ ಮೀಸಲಿಟ್ಟು ಇನ್ನುಳಿದ ಹಣವನ್ನು ಅಭಿವೃದ್ಧಿಗೆ ಬಳಸಿಕೊಳ್ಳಲಾಗುತ್ತಿದ್ದು, ಒಟ್ಟು 2 ಲಕ್ಷ ಕೋಟಿ ಹಣವನ್ನು ಜನಸಾಮಾನ್ಯರಿಗೆ ತಲುಪಿಸಲಾಗುತ್ತಿದೆ ಎಂದು ಶಾಸಕ ಬಿ.ಜಿ.ಗೋವಿಂದಪ್ಪ ತಿಳಿಸಿದರು.

ಪೊಲೀಸರು, ರೈತರ ಮಧ್ಯೆ ಹೈಡ್ರಾಮ

ಮಲೇಬೆನ್ನೂರು: ದೇವರಬೆಳಕೆರೆ ಪಿಕಪ್ ಡ್ಯಾಂನ ಬಲದಂಡೆ ನಾಲೆಯ ಕೊನೆ ಭಾಗದ ಅಚ್ಚುಕಟ್ಟಿಗೆ ನೀರು ತಲುಪಿಸುವಂತೆ ಒತ್ತಾಯಿಸಿ, ಮಂಗಳವಾರ ಮಲೇಬೆನ್ನೂರಿನ ನೀರಾವರಿ ನಿಗಮ ಕಚೇರಿ ಎದುರು ರೈತ ಸಂಘದ ಸದಸ್ಯರು ನಡೆಸುತ್ತಿದ್ದ ಪ್ರತಿಭಟನೆ ತೀವ್ರ ಸ್ವರೂಪಕ್ಕೆ ತಿರುಗಿದ ಪರಿಣಾಮ, ಹರಿಹರ-ಶಿವಮೊಗ್ಗ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದ ರೈತರು ಅಧಿಕಾರಿಗಳು ಹಾಗೂ ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ರೈತರು ಎರಡನೇ ಬಾರಿಗೆ ರಸ್ತೆ ತಡೆ ನಡೆಸಲು ಯತ್ನಿಸುತ್ತಿದ್ದಂತೆ, ಪೊಲೀಸರು ಪ್ರತಿಭಟನಾಕಾರರನ್ನು ಬಂಧಿಸಿ ಡಿಆರ್ ವ್ಯಾನ್‌ನೊಳಗೆ ಹತ್ತಿಸುತ್ತಿದ್ದಂತೆ, ರೈತ ಸಂಘದ ದಾವಣಗೆರೆ ತಾಲ್ಲೂಕು ಅಧ್ಯಕ್ಷ ಮಂಡಲೂರು ವಿಶ್ವನಾಥ್ ಹಾಗೂ ಮತ್ತಿತರರು ಡಿಆರ್ ವ್ಯಾನ್ ಮುಂದೆ ಹೋಗದಂತೆ, ವ್ಯಾನ್ ಮುಂದೆಯೇ ಕುಳಿತು ಪ್ರತಿಭಟನೆ ತೀವ್ರಗೊಳಿಸಿದ್ದರಿಂದ ಹಾಗೂ ಮತ್ತೊಮ್ಮೆ ರಸ್ತೆ ತಡೆ ನಡೆಸುವುದಿಲ್ಲವೆಂದು ರೈತ ಮುಖಂಡರು ಭರವಸೆ ನೀಡಿದ ಪರಿಣಾಮ, ಪೊಲೀಸರು ರೈತರ ಬಂಧನವನ್ನು ಕೈಬಿಟ್ಟ ಹೈಡ್ರಾಮ ನಡೆಯಿತು. ಪ್ರತಭಟನೆಯಲ್ಲಿ ಕೋಡಿಹಳ್ಳಿ ರಾಜಪ್ಪ. ವಿರೂಪಾಕ್ಷಪ್ಪ, ಮಂಜಣ್ಣ, ಬಸಣ್ಣ, ಕರಿಬಸಣ್ಣ, ಕೆಂಚಪ್ಪ, ಮಹದೇವಪ್ಪ, ವಿರೂಪಾಕ್ಷಪ್ಪ, ಲೋಕೇಶಪ್ಪ, ಗೌಡ್ರಸಣ್ಣಬಸಪ್ಪ, ಗುತ್ತೂರು ಮಂಜುನಾಥ್, ವೀರಮ್ಮ, ಯಲ್ಲಮ್ಮ, ಮಂಜಮ್ಮ,ಬಂದಮ್ಮ, ರಾಮಮ್ಮ ಪಾಲ್ಗೊಂಡಿದ್ದರು.

ರೈತ ಸಂಘದ ಕಾರ್ಯಕರ್ತರು ಮಲೇಬೆನ್ನೂರಿನಲ್ಲಿ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಹಾಸ್ಪಿಟಲ್ ಮುಂಭಾಗ ಚೆಕ್ ಪೋಸ್ಟ್ ನಿರ್ಮಿಸಿ

ಶಿವಮೊಗ್ಗ: ಅಪಘಾತಗಳಾಗುತ್ತಿರುವ ಶಿವಮೊಗ್ಗ ಸುಬ್ಬಯ್ಯ ಮೆಡಿಕಲ್ ಹಾಸ್ಪಿಟಲ್ ಮುಂಭಾಗ ಚೆಕ್ ಪೋಸ್ಟ್ ಅನ್ನು ಹಾಕುವಂತೆ ಹಾಗೂ ನಗರದ ನಗರದವಿವಿಧಡೆ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸಿಂಹ ಸೇನೆ ಶಿವಮೊಗ್ಗ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ನಗರದ ಸುಬ್ಬಯ್ಯ ಮೆಡಿಕಲ್ ಕಾಲೇಜ್ ಮುಂಭಾಗ, ತಿಂಗಳುಗಳಿಂದ ದೊಡ್ಡ ರಸ್ತೆ ಅಪಘಾತಗಳು ಸಂಭವಿಸಿದೆ. ವಾಹನಗಳಿಗೆ ವೇಗ ತಗ್ಗಿಸುವಂತಹ ಕೆಲಸ ಮಾಡುವುದಕ್ಕಾಗಿ ಆಸ್ಪತ್ರೆ ಮುಂಭಾಗದಲ್ಲಿ ಬ್ಯಾರಿಕೆಡ್ ಅಳವಡಿಸಿ ವೇಗ ನಿಯಂತ್ರಿಸಬೇಕು. ನಗರದ ಹಲವಾರು ಸಿಗ್ನಲ್‌ಗಳಲ್ಲಿ ಡಿಜಿಟಲ್ ಸಂಖ್ಯೆಗಳು ಬರುವುದು ನಿಂತು ಹೋಗಿದ್ದು, ಅದನ್ನು ಸಹ ದುರಸ್ತಿ ಮಾಡಬೇಕು. ವಾಹನ ಸವಾರರು ಸಿಗ್ನಲ್ ಜಂಪ್ ಮಾಡಿದರೆ ಕಠಿಣ ಕ್ರಮ ಕೈಗೊಳ್ಳಬೇಕು ಅತಿ ವೇಗದ ಸವಾರಿಯಿಂದ ಅನಾಹುತ ಗಳಾಗುತ್ತಿದ್ದು ಹೂವಿನ ಮಾರ್ಕೆಟ್ ಬಳಿ ಇರುವ ಬಹು ಮಹಡಿ ಪಾರ್ಕಿಂಗ್ ಕಟ್ಟಡವನ್ನು ಪಾರ್ಕಿಂಗಿಗೆ ವ್ಯವಸ್ಥೆ ಮಾಡಿ ಕೊಡಬೇಕು. ಸಂಚಾರಕ್ಕೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ ನೀಡಲಾಯಿತು. ಈ ಸಂದರ್ಭದಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಮಧುಸೂಧನ್ ಎಸ್ ಎಂ. ನಯಾಜ್ ಎಂ ಗೋಪಿ.ಕಿರಣ್ ವೆಂಕಟೇಶ್ ಜಯಕೀರ್ತಿ ಗೋಗಿ ಶರತ್ ಕೌಶಿಕ್ ಲಿಂಗರಾಜು ನೂರುಲ್ಲ.ಮಂಜುನಾಥ್ ಶಶಿಧರ್ ಲೋಕೇಶ್ ರಾಹುಲ್ ಅಭಿಷೇಕ್ ಕಾರ್ತಿಕ್ ಇದ್ದರು.

ರಿಕ್ಕಿ ರೈ ಮೇಲೆ ಗುಂಡಿನ ದಾಳಿ ಪ್ರಕರಣ ಖಂಡಿಸಿ ಜಯ ಕರ್ನಾಟಕ ಸಂಘ ಮನವಿ

ಕಾನೂನು ಕ್ರಮ ಕೈಗೊಳ್ಳಲು ಆಗ್ರಹ

ಶಿವಮೊಗ್ಗ: ಜಯ ಕರ್ನಾಟಕ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಎನ್. ಮುತ್ತಪ್ಪ ರೈ ರವರ ಕಿರಿಯ ಪುತ್ರ ರಿಕ್ಕಿ ರೈ ರವರ ಮೇಲೆ, ಗುಂಡಿನ ದಾಳಿ ನಡೆಸಿದ ದುಷ್ಕರ್ಮಿಗಳನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಜರುಗಿಸಲು ಆಗ್ರಹಿಸಿ ಜಯ ಕರ್ನಾಟಕ ಸಂಘಟನೆಯ ಮಹಿಳಾ ಘಟಕದ ವತಿಯಿಂದ ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿಗಳ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಜಯ ಕರ್ನಾಟಕ ಸಂಘಟನೆಯು ಕನ್ನಡ ನಾಡಿನ ನುಡಿ, ನೆಲ, ಜಲ ಸೇರಿದಂತೆ ಹಲವಾರು ಕನ್ನಡಪರ ಹೋರಾಟಗಳು, ಜನಪರ ಹೋರಾಟಗಳನ್ನು ಮಾಡುತ್ತಾ ರಾಜ್ಯದಲ್ಲಿ ಸಕ್ರಿಯವಾಗಿದೆ. ಇಂತಹ ಸಂಘಟನೆಯ ಸಂಸ್ಥಾಪಕ ಅಧ್ಯಕ್ಷ ಮುತ್ತಪ್ಪ ರೈ ರವರ ಸುಪುತ್ರ ರಿಕ್ಕಿ ರೈ ರವರ ಮೇಲೆ ಶೂಟ್ ಔಟ್ ಮಾಡಿ ಕೊಲೆ ಯತ್ನ ಮಾಡಿರುವುದು ಖಂಡನೀಯ ಎಂದು ಮನವಿದಾರರು ತಿಳಿಸಿದರು.

ಸರಕಾರದ ವತಿಯಿಂದ ರಿಕ್ಕಿ ರೈ ರವರಿಗೆ ಸೂಕ್ತ ಭದ್ರತೆ ನೀಡಬೇಕೆಂದು ಮನವಿಯಲ್ಲಿ ಅಗ್ರಹಿಸಲಾಗಿದೆ. ಒಂದು ವೇಳೆ ಸೂಕ್ತ ಕ್ರಮ ಕೈ ಗೊಳ್ಳದೇ ಹೋದರೆ ಜಯ ಕರ್ನಾಟಕ ಸಂಘಟನೆ ವತಿಯಿಂದ ರಾಜ್ಯಾದ್ಯಂತ ಉಗ್ರವಾದ ಹೋರಾಟ ಹಮ್ಮಿ ಕೊಳ್ಳಲಾಗುವುದು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮನವಿ ನೀಡುವ ಸಂದರ್ಭದಲ್ಲಿ ಜಯ ಕರ್ನಾಟಕ ಸಂಘಟನೆಯ ಜಿಲ್ಲಾ ಘಟಕದ ಮಹಿಳಾ ಅಧ್ಯಕ್ಷೆ ನಾಜೀಮ, ಪ್ರಧಾನ ಕಾರ್ಯದರ್ಶಿ ಪ್ರೇಮಾ ಎ ಎನ್ ಶೆಟ್ಟಿ ,ಸಾಗರ ತಾ.ಘಟಕದ ಅಧ್ಯಕ್ಷೆ ರೇಖಾ ಕೃಷ್ಣಮೂರ್ತಿ, ಪ್ರಮುಖರಾದ ಮೋಹನ್ ದೇವರಾಜ್, ಜಯಂತಿ, ನಿರ್ಮಲ, ಪುಷ್ಪ , ಸುಜಾತ, ಭಾಗ್ಯಮ್ಮ, ಲಕ್ಷ್ಮಮ್ಮ, ರೇಖಾಮ್ಮ, ಸೇರಿದಂತೆ ಹಲವರಿದ್ದರು.

ಜಯ ಕರ್ನಾಟಕ ಸಂಘಟನೆಯ ಮಹಿಳಾ ಘಟಕದ ವತಿಯಿಂದ ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿಗಳ ಮೂಲಕ ಗೃಹ ಸಚಿವರಿಗೆ ಮನವಿ ಸಲ್ಲಿಸಿದರು.

ಮಾದುಮೂಲೆ ಪ್ರಶಸ್ತಿಗೆ ರವಿಕುಮಾರ್ ಆಯ್ಕೆ

ಶಿವಮೊಗ್ಗ: ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘದ ಪ್ರಸಕ್ತ ಸಾಲಿನ ರಾಜ್ಯಮಟ್ಟದ '' ಹವ್ವಾ ಹಸನ್ ಫೌಂಡೇಶನ್ ಅಬ್ದುಲ್ಲ ಮಾದುಮೂಲೆ ದತ್ತಿ ಪ್ರಶಸ್ತಿಗೆ ಶಿವಮೊಗ್ಗದ ಹಿರಿಯ ಪತ್ರಕರ್ತ, ಶಿವಮೊಗ್ಗ ಟೆಲೆಕ್ಸ್ ಕನ್ನಡ ದಿನಪತ್ರಿಕೆ ಸಂಪಾದಕರಾದ ಎನ್. ರವಿಕುಮಾರ್ ಆಯ್ಕೆಯಾಗಿದ್ದಾರೆ. ಕರ್ನಾಟಕದ ಪತ್ರಿಕೋದ್ಯಮದಲ್ಲಿ ಎನ್ . ರವಿಕುಮಾರ್ ಅವರ ವೃತ್ತಿಪರತೆ, ಸಾಮಾಜಿಕ ಸೌಹಾರ್ದತೆ ಮತ್ತು ವೈಚಾರಿಕತೆಯ ಪ್ರತಿಪಾದನೆಯನ್ನು ಗುರುತಿಸಿ ಕಾಸರಗೋಡು ಜಿಲ್ಲಾ ಕನ್ನಡ ಪತ್ರಕರ್ತರ ಕ್ಷೇಮಾಭಿವೃದ್ಧಿ ಸಂಘವು ಎನ್. ರವಿಕುಮಾರ್ ಅವರನ್ನು ಆಯ್ಕೆ ಮಾಡಿದೆ. ಪ್ರಶಸ್ತಿಯು ನಗದು, ಮತ್ತು ಪ್ರಶಸ್ತಿ ಫಲಕ , ಸ್ಮರಣಿಕೆಯನ್ನು ಒಳಗೊಂಡಿದ್ದು ಮೇ.3 ರಂದು ಸ್ವಾಗತ ಸಮಿತಿ ಅಧ್ಯಕ್ಷ ಕೆ.ಕೆ ಶೆಟ್ಟಿಕುತ್ತಿಕಾರ್ ಅವರ ಅಧ್ಯಕ್ಷತೆಯಲ್ಲಿ, ಕಾಸರಗೋಡಿನ ಸೀತಾಂಗೋಳಿ ಎಲೈನ್ಸ್ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಗಡಿನಾಡು ಪ್ರದೇಶಾಭಿವೃದ್ದಿ ಪ್ರಾಧಿಕಾರ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಪ್ರಶಸ್ತಿಪ್ರದಾನ ಮಾಡಲಾಗುವುದು. ಕರ್ನಾಟಕ ವಿಧಾನಪರಿಷತ್ತಿನ ಸಭಾಪತಿ ಬಸವರಾಜಹೊರಟ್ಟಿ, ಕೃಷಿ ಸಚಿವ ಚೆಲುವರಾಯಸ್ವಾಮಿ, ಸೋಮಣ್ಣ ಬೇವಿನಮರದ, ಕೆ.ವಿ ಪ್ರಭಾಕರ್ , ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರುಗಳು ಭಾಗವಹಿಸಲಿದ್ದಾರೆ.

ವಿಶ್ವವಾಣಿ
@vishwavaninews
23-04-2025
ಬುಧವಾರ

ಆರಾಮ

ಮರದಿಂದ ಚಿಮ್ಮುವ ನೀರು!

● ಡಾ.ಕಾರ್ತಿಕ ಜೆ.ಎಸ್.

ಭಾರತದ ಪಶ್ಚಿಮ ಕರಾವಳಿಯುದ್ದಕ್ಕೂ ಹರಡಿಕೊಂಡಿರುವ ಪಶ್ಚಿಮ ಘಟ್ಟಗಳು ನೋಡಲು ಎಷ್ಟು ಸುಂದರವೋ ಅಷ್ಟೇ ನಿಗೂಢಮಯವೂ ಹೌದು. ಅದು ತನ್ನೊಳಗೆ ಅನೇಕ ರಹಸ್ಯಗಳನ್ನು ಹುದುಗಿಸಿಟ್ಟುಕೊಂಡಿದೆ. ಇಲ್ಲಿರುವ ದಟ್ಟಾರಣ್ಯಗಳಲ್ಲಿ ಒಂದು ವಿಶಿಷ್ಟ ಮರವಿದೆ. ಈ ಮರವನ್ನು ಕೊರೆದರೆ ಸಾಕು, ನೀರು ಕಾರಂಜಿಯಂತೆ ಹೊರಚಿಮ್ಮುತ್ತದೆ! 'ಜೀವಂತ ಬಾವಿ' ಎಂದೇ ಗುರುತಿಸಲ್ಪಟ್ಟ ಈ ವಿಶಿಷ್ಟ ಮರವೇ 'ಮತ್ತಿ ಮರ'. ಈ ಮರ ಬಿರು ಬೇಸಿಗೆಯಲ್ಲಿ ಅರಣ್ಯವಾಸಿಗಳ ದಾಹ ತಣಿಸುವುದು ವಿಶೇಷ. ಮತ್ತಿ ಮರವು ಕೊಡಗಿನ ಸ್ಥಳೀಯ ಮರಗಳಲ್ಲಿ ಒಂದಾಗಿದೆ. ಈ ಮರದ ದಪ್ಪನೆಯ ತೊಗಟೆ ಮೊಸಳೆ ಚರ್ಮದಂತೆ ಬಿರುಕು ಬಿಟ್ಟಿದೆ. ಆದ್ದರಿಂದ ಈ ಮರವನ್ನು ಮೊಸಳೆ ತೊಗಟೆ ಮರ (ಕ್ರೊಕಡೈಲ್ ಬಾರ್ಕ್ ಟ್ರೀ) ಎಂದೂ ಕರೆಯುತ್ತಾರೆ. ವೈಜ್ಞಾನಿಕವಾಗಿ 'ಟರ್ಮಿನೇಲಿಯ ಟೊಮೆಂಟೋಸ' ಎಂದು ಕರೆಯ ಲ್ಪಡುವ ಮತ್ತಿ ಮರವು 'ಕೊಂಬ್ರೆಟೇಸಿಯೆ' ಕುಟುಂಬ ಕ್ಕೆ ಸೇರಿದೆ.

ಮರದ ಕಾಂಡದಲ್ಲಿ ಅಥವಾ ಬಳ್ಳಿಯ ಕಾಂಡದಲ್ಲಿ, ಉತ್ತಮ ಗುಣಮಟ್ಟದ ನೀರು ಸಂಗ್ರಹವಾಗುವ ವಿದ್ಯಮಾನ ವಿಸ್ಮಯಕಾರಿ.

ಮತ್ತಿ ಮರಕ್ಕೆ ತನ್ನ ಕಾಂಡದೊಳಗೆ, ವಿಶೇಷವಾಗಿ ಮಳೆಗಾಲದಲ್ಲಿ ನೀರನ್ನು ಶೇಖರಿಸಿಡುವ ಅಪರೂಪದ ಸಾಮರ್ಥ್ಯವಿದೆ. ಈ ಮರವು 4–6 ಲೀಟರ್‌ನಷ್ಟು ನೀರನ್ನು ಶೇಖರಿಸಿಡಬಲ್ಲದು. ಕುಡಿಯಲು ಯೋಗ್ಯವಾದ ಗುಣಮಟ್ಟವಿರುವ ಈ ನೀರಿಗೆ ಔಷಧೀಯ ಗುಣಗಳಿವೆ ಎಂದು ಗುರುತಿಸಲಾಗಿದೆ. ಶತಶತಮಾನಗಳಿಂದ, ಮಧ್ಯಭಾರತ ಮತ್ತು ಕರ್ನಾಟಕದ ಕೆಲವು ಬುಡಕಟ್ಟು ಜನಾಂಗದವರು ಬೇಸಿಗೆ ಕಾಲದಲ್ಲಿ ನೈಸರ್ಗಿಕ ನೀರಿನ ಮೂಲವಾಗಿ ಮತ್ತಿ ಮರವನ್ನು ಅವಲಂಬಿಸಿದ್ದಾರೆ. ಮುಖ್ಯವಾಗಿ, ಕಾಡಿನಲ್ಲಿ ಬಹುಹೊತ್ತು ಕೆಲಸ ಮಾಡುವಾಗ ಅಥವಾ ನಡೆದು ಹೋಗುವಾಗ, ದಾಹವಾದರೆ, ಇದರ ಕಾಂಡದಿಂದ ಸಂಗ್ರಹಿ ಸಿದ ನೀರನ್ನು ಕುಡಿಯುವುದುಂಟು. ಮತ್ತಿ ಮರದ ನೀರು ಸಂಗ್ರಹಣಾ ವ್ಯವಸ್ಥೆ ಕುತೂಹಲಕಾರಿ. ಮರದಲ್ಲಿರುವ ವಿಶೇಷ ಅಂಗಾಂಶಗಳು (ಕ್ಸೈಲೆಮ್) ನೀರನ್ನು ಶೇಖರಿಸಿಡಲು ನೆರವಾಗುತ್ತದೆ. ಈ ಅಂಗಾಂಶ ಗಳು ನೀರಿರುವ ಸಂದರ್ಭ ಉಬ್ಬಿಕೊಳ್ಳುತ್ತವೆ ಮತ್ತು ನೀರಿನ ಕೊರತೆ ಇದ್ದಾಗ ಸಂಕುಚಿತಗೊಳ್ಳುತ್ತದೆ. ಇದರಿಂದಾಗಿ ಮರದಲ್ಲಿ ತೇವಾಂಶ ಉಳಿಯುತ್ತದೆ. ಈ ಮರದ ದಪ್ಪ ತೊಗಟೆ ಬೇಸಿಗೆ ಸಂದರ್ಭದಲ್ಲಿ ನೀರು ಆವಿಯಾಗುವುದನ್ನು ತಡೆಯುತ್ತದೆ. ಮತ್ತಿ ಮರವು ಆಳವಾದ ಮತ್ತು ವಿಸ್ತಾರವಾದ ಬೇರುಗಳನ್ನು ಹೊಂದಿದೆ. ಈ ಬೇರುಗಳು ಬೇಸಿಗೆ ಸಮಯದಲ್ಲಿ ಆಳವಾದ ಮಣ್ಣಿನ ಪದರದಲ್ಲಿರುವ ತೇವಾಂಶವನ್ನು ಹೀರಲು ನೆರವಾಗುತ್ತದೆ. ಈ ಮರದ ಎಲೆಗಳ ಮೇಲ್ಮೈ ಮೇಲೆ ಮೇಣದ ಲೇಪನವಿದೆ. ಇದರಿಂದಾಗಿ ಬಾಷ್ಪೀಕರಣ ಪ್ರಕ್ರಿಯೆ ಕುಂಠಿತಗೊಳ್ಳುತ್ತದೆ ಎಂಬುದು ಸಸ್ಯಶಾಸ್ತ್ರಜ್ಞರ ಅಭಿಮತ. ಆದಾಗ್ಯೂ ಈ ವಿಶಿಷ್ಟ ಮರದ ನೀರಿನ ಸಂಗ್ರಹಣಾ ವ್ಯವಸ್ಥೆಯ ಕುರಿತು ಇನ್ನಷ್ಟು ಅಧ್ಯಯನದ ಅವಶ್ಯಕತೆ ಇದೆ. ಇದೇ ರೀತಿ, ಕುಡಿಯಲು ಯೋಗ್ಯವಾದ ನೀರನ್ನು ನೀಡುವ ಬಳ್ಳಿಗಳೂ ನಮ್ಮ ರಾಜ್ಯದ ಕಾಡಿನಲ್ಲಿವೆ. ಮತ್ತಿ ಮರ ಬಹುಪಯೋಗಿ. ತನ್ನ ದೃಢತೆಯಿಂದಾಗಿ ಗೃಹ ನಿರ್ಮಾಣ ಕಾರ್ಯದಲ್ಲಿ ಹೆಚ್ಚಾಗಿ ಬಳಕೆಯಾಗುತ್ತದೆ. ಪ್ರಸ್ತುತ ಅರಣ್ಯನಾಶ ಮತ್ತು ಹವಾಮಾನ ವೈಪರೀತ್ಯದಿಂದಾಗಿ ಈ ಮರಗಳ ಸಂಖ್ಯೆ ಕುಸಿಯುತ್ತಿದೆ.

(ಚಿತ್ರ : ಆಂಧ್ರಪ್ರದೇಶದ ಕಾಡಿನಲ್ಲಿ, ಮತ್ತಿ ಮರದಿಂದ ನೀರು ಬರುವುದನ್ನು ಗಮನಿಸುತ್ತಿರುವ ಅರಣ್ಯ ಇಲಾಖೆಯ ಸಿಬ್ಬಂದಿ)

ಈ ಪುಟ್ಟ ದೇಶ ಪ್ರವಾಸಿಗರಿಗೆ ಅಚ್ಚು ಮೆಚ್ಚು!

ಅತಿ ಕಡಿಮೆ ಜನಸಂಖ್ಯೆ ಇರುವ ದೇಶಗಳಲ್ಲಿ ಇದೂ ಒಂದು. ಇಲ್ಲಿ ಸಾಕಷ್ಟು ಪ್ರವಾಸಿ ತಾಣಗಳಿವೆ; ಪ್ರವಾಸಿಗರಿಗೆ ಇದು ಸುರಕ್ಷಿತ ಪ್ರದೇಶ.

● ಮೋಹನ ಭಟ್ಟ, ಅಗಸೂರು

ಉತ್ತರ ಐರ್ಲೆಂಡ್ ದ್ವೀಪ ರಾಷ್ಟ್ರಬಹು ವೈವಿಧ್ಯತೆಗಳಿಂದ ಕೂಡಿದೆ. ಇಲ್ಲಿಗೆ ಹೋಗಲು ಯು.ಕೆ.ಗೆ ಹೋಗುವ ವಿಸಾ ಇದ್ದರೆ ಅನುಕೂಲ, ಪ್ರತ್ಯೇಕ ವಿಸಾ ಬೇಕಾಗಿಲ್ಲ. ಎರಡೇ ದಿನಗಳಲ್ಲಿ ಪೂರ್ತಿ ನೋಡಿ ಇಂಗ್ಲೆಂಡ್‌ಗೆ ವಾಪಸಾಗಬಹುದು. ಇದರಿಂದಾಗಿಯೇ ವಾರಾಂತ್ಯದಲ್ಲಿ ಹೆಚ್ಚುವರಿ ರಜೆ ಬಂದರೆ, ಈ ಪ್ರದೇಶದಲ್ಲಿ ಪ್ರವಾಸಿಗರ ಪ್ರವಾಹ ಸಾಮಾನ್ಯ.

ಎಲ್ಲ ಯುರೋಪಿಯನ್ ರಾಷ್ಟ್ರಗಳಂತೆಯೇ ಇಲ್ಲಿಯೂ ಸಾಕಷ್ಟು ಚರ್ಚ್, ಕ್ಯಾಸಲ್ ಗಳು ಇವೆ. ಇಲ್ಲಿ ಪ್ರವಾಸಿ ಆಕರ್ಷಣೆಗಳೆಂದರೆ, ಹಳೆಯ ಕೋಟೆಗಳು. ಶತಮಾನಗಳ ಹಿಂದೆ ನಿರ್ಮಾಣಗೊಂಡ ಇಲ್ಲಿಯ ಕೋಟೆ ಕೊತ್ತಳಗಳು ಇಂದಿಗೂ ಕತೆ ಹೇಳುತ್ತಿವೆ ಮತ್ತು ಕುತೂಹಲದಿಂದ ಬಂದ ಪ್ರವಾಸಿಗರ ಕುತೂಹಲವನ್ನು ತಣಿಸುತ್ತವೆ. ಅಂದಿನಇವಕ್ಕೆಲ್ಲ ಇಟ್ಟರುವ ಹೆಸರುಗಳು ವಿಚಿತ್ರವಾಗಿವೆ. ಫೋರ್ಕ್ಸ್ ಕ್ಯಾಸಲ್, ಗೋಸ್ಟ್ ಫೋರ್ಟ್ ಇತ್ಯಾದಿ. ಕೆಲವು ಕೋಟೆಗಳು ಚೆನ್ನಾಗಿದ್ದರೂ, ಇನ್ನು ಕೆಲವು ಕೋಟೆಗಳ ಕಲ್ಲುಗಳು ಬಿದ್ದು ಸುರಕ್ಷತೆಗೆ ತೊಂದರೆಯಾಗಿವೆ. ಈ ಕೋಟೆಗಳಿಗೆ ಸಂಬಂಧಿಸಿದಂತೆ, ಅಂದು ನಿರ್ಮಾಣಗೊಂಡ ಪುರಾತನ ಬಂದರುಗಳು ಕಡಲ ಕೊರೆತಕ್ಕೆ ಒಳಗಾಗಿ ಕತ್ತರಿಸಿದಂತೆ ತುಂಡು ತುಂಡಾಗಿ ಶೇಖರಣೆಯಾಗಿವೆ. ಇಲ್ಲಿನ ಪುರಾತನ ವಾಸ್ತುವನ್ನು ನೋಡುತ್ತ ಹೋದಂತೆ ಇತಿಹಾಸದ ಪುಟಗಳು ತೆರೆದು ಕೊಳ್ಳುತ್ತವೆ. ಈ ದ್ವೀಪ ಐರಿಶ್ ಕಡಲು ಕಾಲುವೆಗೆ ಹೊಂದಿಕೊಂಡಿದೆ. ಆ ನಂತರ ಕಡಲ ಕಾಲುವೆ ಅಟ್ಲಾಂಟಿಕ್ ಮಹಾಸಾಗರಕ್ಕೆ ಕೂಡುವದು. ಬೆಲ್‌ಫಾಸ್ಟ್ ರಾಜಧಾನಿಯಾಗಿರುವ ಈ ದೇಶದಲ್ಲಿ ಅನೇಕ ವರ್ಷಗಳ ಹಿಂದೆ ಕ್ಯಾಥೊಲಿಕ್ ಹಾಗೂ ಪ್ರೊಟೆಸ್ಟಂಟ್‌ರ ನಡುವೆ ಉಂಟಾದ ದೊಡ್ಡ ಮಟ್ಟದ ವಿವಾದವು ತುಸು ಗಂಭೀರ ಸ್ವರೂಪದ್ದು. ಇದರಿಂದಾಗಿ, ಐರ್ಲೆಂಡ್ ದೇಶವು 1921ರಲ್ಲಿ ಇಬ್ಭಾಗವಾ ಯಿತು! ಸಾಮಾನ್ಯವಾಗಿ ಬ್ರಿಟಿಷ್ ಕಾನೂನುಗಳೇ ಇಲ್ಲಿವೆ. ಇಂಗ್ಲೆಂಡ್ ಅಧಿಪತಿಗಳಲ್ಲಿಯೇ ಉತ್ತರ ಐರ್ಲೆಂಡ್‌ನ ಚಾವಿ ಇದೆ. ಅಧಿಕಾರ ವ್ಯವಸ್ಥೆಯ ನಿಯಂತ್ರಣವೂ ಅಲ್ಲಿಂದಲೇ!

ವಿಶಿಷ್ಟ ವಿನ್ಯಾಸದ ಕಲ್ಲು

ಇಲ್ಲಿನ ಸಮುದ್ರ ತೀರದಲ್ಲಿ ಒಂದೆಡೆ ಕಲ್ಲುಗಳ ವಿನ್ಯಾಸ ಬಹು ಮೋಹಕ; ಕಲ್ಲಿನ ಕಂಬಗಳನ್ನು ಜೋಡಿಸಿಟ್ಟಂತಹ ನೂರಾರು ರಚನೆಗಳು ಸ್ವಾಭಾವಿಕವಾಗಿ ನೆಲದಾಳದಿಂದ ಮೂಡಿಬಂದಿವೆ; ಬಹು ಹಿಂದೆ ಜ್ವಾಲಾಮುಖಿಯು ಸಿಡಿದಾಗ ಉಂಟಾದ ಆಕರ್ಷಕ ವಿನ್ಯಾಸ ಇದು. ಇದರ ಒಂದು ಬದಿಯಲ್ಲಿ ಕಡಲು. ಇಂತಹದೇ ಕಲ್ಲಿನ ಅಪರೂಪದ ವಿನ್ಯಾಸವು ನಮ್ಮ ರಾಜ್ಯದ ಉಡುಪಿ ಜಿಲ್ಲೆಯ ಮಲ್ಪೆಯ ಬಳಿ ಸೈಂಟ್ ಮೇರಿ ದ್ವೀಪಗಳಲ್ಲಿ ಇದೆ.

ನಾಲ್ಕು ಚಿನ್ನದ ಪದಕ!

ಇದರಿಂದಾಗಿಯೇ ಈಗಲೂ ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಗಬೇಕೆಂಬ ಒಲವೂ ಜನರಲ್ಲಿ ಇದೆ. ಇಲ್ಲಿಯ ಫುಟ್‌ಬಾಲ್ ತಂಡ ಬಲಿಷ್ಠವಾಗಿದೆ. ವಿವಿಧ ಕ್ರೀಡೆಗಳ ನಲವತ್ತು ಟೀಮ್‌ಗಳು ಈ ದೇಶದಲ್ಲಿದೆ. ಕಳೆದ ಓಲಂಪಿಕ್ ಕ್ರೀಡಾ ಕೂಟದಲ್ಲಿ ಪ್ರತ್ಯೇಕ ವಾಗಿ ಸ್ಪರ್ಧಿಸಿದ್ದ ಉತ್ತರ ಐರ್ಲೆಂಡ್ ನಾಲ್ಕು ಸ್ವರ್ಣ ಪದಕ ಪಡೆದು ವಿಶ್ವಗಮನ ಸೆಳೆದಿದೆ. ಆದರೆ ಇಲ್ಲಿನ ಜನಸಂಖ್ಯೆ ತೀರಾ ಎಂದರೆ ತೀರಾ ಕಡಿಮೆ; ಬೆಂಗಳೂರಿನಷ್ಟೂ ಜನಸಂಖ್ಯೆ ಇಲ್ಲಿ ಇಲ್ಲ! ಇಪ್ಪತ್ತು ಲಕ್ಷ ಒಳಗೆ ಜನಸಂಖ್ಯೆ ಇರುವ ಉತ್ತರ ಐರ್ಲೆಂಡ್‌ನಲ್ಲಿ ಏಶಿಯಾ, ವರ್ಣೀಯ ರಾಷ್ಟ, ಮುಸ್ಲಿಮ್ ಹಾಗೂ ಇತರ ರಾಷ್ಟ್ರಗಳ ಜನರು ಉದ್ಯೋಗಕ್ಕೆ ಬಂದವರು ನೆಲೆಯೂರಿದ್ದಾರೆ. ಇಲ್ಲಿರುವ ಭಾರತೀಯರು ಸುಮಾರು ಹತ್ತು ಸಾವಿರ. ಇದು ಚಳಿ ಪ್ರದೇಶ; ಆದ್ದರಿಂದ ಪ್ರವಾಸ ಹೋಗುವವರು ಸದಾ ಚಳಿಯನ್ನು ತಡೆಯುವ ಬಟ್ಟೆಗಳನ್ನು ದಿರಸನ್ನು ಧರಿಸಿರಬೇಕು. ಹೆಚ್ಚಿನ ವಾಯು ಮಾಲಿನ್ಯ ಇಲ್ಲದ ಸುಂದರ ದೇಶವಿದು.

ಹಸಿವು ಮಮತೆ ಈ ಸೃಷ್ಟಿಯ ರಹಸ್ಯಗಳು

ಹೊಟ್ಟೆಯಲಿ ಹಸಿವು, ಮನದಲಿ ಮಮತೆ – ಈ ಎರಡು
ಗುಟ್ಟು ಕೀಲುಗಳಿಹವು ಸೃಷ್ಟಿಯಂತ್ರದಲಿ
ಕಟ್ಟಿಪುವು ಕೋಟೆಗಳ, ಕೀಳಿಪುವು ತಾರೆಗಳ
ಸೊಟ್ಟಾಗಿಪುವು ನಿನ್ನ – ಮಂಕುತಿಮ್ಮ||

ಮನುಷ್ಯನ ಉದರದ ಹಸಿವು ಹಾಗೂ ಮನದಲ್ಲಿನ ಮಮತೆಗಳೇ ಈ ಜಗತ್ತಿನ ಸೃಷ್ಟಿಯಂತ್ರದ ಹಾಗೂ ನಮ್ಮಯ ಬದುಕಿನ ಕೀಲುಗಳು. ಈ ಹಸಿವು ಹಾಗೂ ಮಮತೆಗಳು ಮನುಷ್ಯನಿಂದ ಅಸಾಧ್ಯವಾದುದನ್ನೂ ಸಹ ಸಾಧ್ಯವಾಗಿಸಿವೆ. ಹಸಿವು ಹಾಗೂ ಮಮತೆಗಳು ಯಾವ ರೀತಿ ಎಂದರೆ, ನಮ್ಮಗಳಿಂದ ಕೋಟೆಗಳನ್ನು ಕಟ್ಟಿಸುತ್ತವೆ ಹಾಗೆಯೇ ನಭದಲ್ಲಿಯ ತಾರೆಗಳನ್ನೂ ಸಹ ಕೀಳಿಸುವಂತೆ ಪ್ರೇರೇಪಿಸುತ್ತವೆ. ಅಂತೆಯೇ ಫಲ ಕೈಗೂಡದೇ ಇದ್ದಾಗ ಅವುಗಳು ನಮ್ಮ ಜೀವನವನ್ನೂ ಸಹ ಸೊಟ್ಟಾಗಿಸುತ್ತವೆ ಎಂದು ಮನುಷ್ಯನ ನೈಜ ಬದುಕಿನ ಸ್ವರೂಪವನ್ನು ಈ ಪದ್ಯದಲ್ಲಿ ತಿಳಿಸಿದ್ದಾರೆ.

ಮನುಷ್ಯನ ಮನದಲ್ಲಿ ಎಲ್ಲಾ ಆಕಾಂಕ್ಷೆಗಳು, ಮಹತ್ವಾಕಾಂಕ್ಷೆಗಳೆಲ್ಲವೂ ಸಹ ಮೂಡುವುದು ಈ ಹಸಿವು ಹಾಗೂ ಮಮತೆಗಳಿಂದಲೇ ಹೌದು. ಅಂತೆಯೇ ಮನುಷ್ಯನಿಗಿರುವ ಹಸಿವು ಹಾಗೂ ಮನದಲ್ಲಿಮೂಡುವ ಮಮತೆಗಳು ಆತನಿಂದ ಎಂಥಹ ಕೆಲಸಕ್ಕೂ ಕೈ ಹಾಕಿಸಿಬಿಡುತ್ತವೆ. ಹಸಿವೆಂಬುದು ಮೊದಲಿಗೆ ವಸ್ತುಗಳ ಅವಿಷ್ಕಾರಕ್ಕೋ, ಪಡೆಯಲೋ ಪ್ರೇರೇಪಿಸಿದರೆ, ನಂತರ ಪಡೆದ ವಸ್ತುಗಳ ಮೇಲೆ ಮನದಲ್ಲಿ ಮಮಕಾರ ಉಂಟಾಗುತ್ತದೆ. ಈ ಹಿಂದಿನ ಇತಿಹಾಸವನ್ನೇ ನಾವು ನೋಡಿದರೂ ಸಹ ಎಲ್ಲಾ ವ್ಯವಸ್ಥೆಗಳೂ ಸಹ ನಿಂತಿರುವುದು ಈ ಹಸಿವು ಹಾಗೂ ಮನದ ಮಮತೆಗಳಿಂದಲೇ ಹೌದು. ಜಠರಾಗ್ನಿಯು ಭುಗಿಲೆದ್ದರೆ ಆ ಜ್ವಾಲೆಗೆ ಕಂದದವರು ಯಾರೂ ಇಲ್ಲ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಹಾಗೆಯೇ ಈ ಮನದಲ್ಲಿಯ ಮಮತೆಗಳೂ ಸಹ ಯಾವುದೋ ರೀತಿಯಲ್ಲಿ ಎಲ್ಲವೂ ನನ್ನದಾಗಬೇಕು ಎಂಬ ಇಚ್ಚೆಯನ್ನು ವ್ಯಕ್ತಪಡಿಸಿ ಆಪೋಷನ ಮಾಡುತ್ತಲಿರುತ್ತದೆ. ಇವನು ಕಟ್ಟಿದ ರಾಜ್ಯಗಳು, ಗೆದ್ದ ಪ್ರದೇಶಗಳು, ಸಮುದ್ರಗಳು, ಆಕಾಶ , ಕಲಿತ ಕಲೆ, ಶಾಸ್ತ್ರ, ಅರಿತ ಜ್ಞಾನ – ವಿಜ್ಞಾನಗಳು ಎಲ್ಲವೂ ತನ್ನನ್ನು ಮತ್ತು ತಾನು ಕಟ್ಟಿಕೊಂಡ ಸಮಾಜವನ್ನು ಬದಲಾಯಿಸುವ, ಸುಧಾರಿಸುವ ಮತ್ತು ಔನ್ನತ್ಯಕ್ಕೆ ಕೊಂಡು ಹೋಗುವ ಇವನ ಪ್ರಯತ್ನಕ್ಕೆ ಇವನ ಮಹತ್ವಾಕಾಂಕ್ಷೆ ಮತ್ತು ಮಮತೆಗಳೇ ಕಾರಣವೆಂದರೆ ಸೂಕ್ತವಾಗುತ್ತದೆ. ಆದುದರಿಂದ ಮನುಷ್ಯನ ಹೊಟ್ಟೆಯ ಹಸಿವು, ಮಾನಸಿಕವಾದ ಜ್ಞಾನ ವಿಜ್ಞಾನದ ಹಸಿವುಗಳು ಹಾಗೂ ಆತನು ಮನದಲ್ಲಡಗಿಸಿಕೊಂಡ ಮಮತೆಗಳು ಆತನನ್ನು ಮೇರು ಮಟ್ಟಕ್ಕೂ ತರುತ್ತವೆ; ಅಂತೆಯೇ ಪ್ರಪಾತಕ್ಕೂ ಕೊಂಡೊಯ್ಯುತ್ತವೆ. ಇವೆರಡೂ ಕೋಟೆಗಳನ್ನು ಕಟ್ಟಿಸುತ್ತವೆ ಅಂದರೆ ಸಮಾಜಕ್ಕೆ ಕೋಟೆಯಾಗಿ ರಕ್ಷಿಸುವಂಥಹ ಕೆಲಸವನ್ನೂ ಮಾಡಿಸುತ್ತವೆ. ಕೆಲವೊಮ್ಮೆ ಈ ಹಸಿವು ಹಾಗೂ ಮಮತೆಗಳು ಅಸಾಧ್ಯವಾದುದನ್ನು ಸಾಧಿಸಲೆತ್ನಿಸಿ ಆತನನ್ನು ಚೊಟ್ಟವಾಗಿಸಿಯೂ ಬಿಡುತ್ತವೆ. ಒಟ್ಟಿನಲ್ಲಿ ಮನುಷ್ಯನಲ್ಲಿ ಉದ್ಭವಿಸುವ ಆಸೆಗಳ ಮೂಲ ಆತನ ಹಸಿವು ಹಾಗು ಆತನಲ್ಲಿಯ ಮಮತೆಗಳು, ಇವೆರಡೂ ಈತನನ್ನು ಔನ್ನತ್ಯಕ್ಕೂ ಕೊಂಡೊಯ್ಯುತ್ತವೆ ಹಾಗೆಯೇ ಕೆಲವೊಮ್ಮೆ ಆತನನ್ನು ಚೊಟ್ಟವಾಗಿಸಿಬಿಡುತ್ತವೆ ಎಂಬ ನಗ್ನ ಸತ್ಯವನ್ನ ಈ ಪದ್ಯವು ಹೇಳಿದೆ. ಡೈನಾಮೆಟ್ ಕಂಡು ಹಿಡಿದವನು ನೊಬೆಲ್. ಆತನು ರಾಸಾಯನಿಕ ವಸ್ತುಗಳ ಮೇಲೆ ಇಟ್ಟಿದ್ದ ಮಮತೆ ಹಾಗೂ ಹೆಸರಾಗಬೇಕೆಂಬ ಹಂಬಲದ ಮಮತೆಯಲಿ ಈ ಅವಿಷ್ಕಾರ ಮಾಡಿ ಹೇರಳವಾಗಿ ಹಣ ಸಂಪಾದನೆ ಮಾಡಿದನು. ಕೊನೆಗೊಮ್ಮೆ ನಾನು ಕಂಡು ಹಿಡಿದ ಅವಿಷ್ಕಾರವೇ ಈ ಮಾನವ ಕುಲಕ್ಕೆ ಘೋರ ದುರಂತ ಎಸಗುತ್ತದೆ ಎಂದರಿತ ಆತನು ತನ್ನಲ್ಲಿಯ ಎಲ್ಲಾ ಸಂಪತ್ತನ್ನು ದಾನಮಾಡಿದನು. ಈಗಲೂ ಆತನ ಹೆಸರಲ್ಲಿ ನೊಬೆಲ್ ಬಹುಮಾನ ಇರುವುದನ್ನು ಕಂಡಿದ್ದೇವೆ. ಈತನಲ್ಲಿಯ ಹಸಿವು, ಜ್ಞಾನ ವಿಜ್ಞಾನದ ಹಸಿವು, ರಾಸಾಯನಿಕ ವಸ್ತುಗಳ ಮೇಲಿನ ಮಮತೆಗಳು ಆತನಿಂದ ಡೈನಾಮೆಟ್‌ಗಳನ್ನು ಕಂಡು ಹಿಡಿಸಿದವು. ಆದರೆ ಆತನಿಗೆ ನಾನು ಅವಿಷ್ಕಾರ ಮಾಡಿರುವುದು ಸೊಟ್ಟಾಗಿದೆ ಎಂಬ ಅರಿವು ಆಗಿ ಆತನು ತನ್ನ ತಪ್ಪನ್ನು ತಿದ್ದಿಕೊಂಡನು. ಹೀಗೆ ಹಸಿವು ಹಾಗೂ ಮಮತೆಗಳು ಎಂತಹ ಕೆಲಸಕ್ಕೂ ಈ ಮಾನವರಿಂದ ಕೈ ಹಾಕಿಸುತ್ತವೆ ಎಂಬ ಸೂಕ್ತಿಯು ಸತ್ಯವಾದುದೇ ಆಗಿದೆ.

ಊರು ಉಲ್ಲಾಸ

ಧರ್ಮಶ್ರದ್ಧಾಕೇಂದ್ರ ಸುತ್ತೂರು
ಸಂಸ್ಕೃತ ಗ್ರಾಮ ಮತ್ತೂರು
ಐತಿಹಾಸಿಕ ಸ್ಥಳ ಕಿತ್ತೂರು
ಮಹಾಲಿಂಗೇಶ್ವರ ಸನ್ನಿಧಿ ಪುತ್ತೂರು
ಸುತ್ತಿ ಕಾಣಲು ಸೊಗಸು ಹತ್ತೂರು
ಅತ್ಯಂತ ಪ್ರೀತಿಪಾತ್ರ ಹೆತ್ತೂರು!

● ಎಚ್. ಆನಂದರಾಮ ಶಾಸ್ತ್ರೀ ಬೆಂಗಳೂರು

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1				■	2	■	3	4
	■	■	■	5			■	
6	7			■		■	8	
■		■	■	9		10	■	
11		12	■		■	13	14	
	■	15	16		■	■		■
17		■		■	18			19
	■	20			■	■	■	
21		■		■	22			

ಎಡದಿಂದ ಬಲಕ್ಕೆ

1. ಮಧ್ಯಮ ಪಾಂಡವ ಅರ್ಜುನನಿಗೆ ಹೀಗೊಂದು ಹೆಸರು (4)
3. ಹಿಂದು ಮುಂದು ನೋಡದೆ ಮಾತನಾಡುವವ (2)
5. ತಮ್ಮನಿಗೆ ಮತ್ತೊಂದು ಹೆಸರಿದು (3)
6. ಸುಂದರವಾದ ಎಂದರ್ಥ (4)
8. ಸಂಪತ್ತು ಎರಡೇ ಅಕ್ಷರಗಳಲ್ಲಿ (2)
9. ಸರದ ನಡುವೆ ಬಂದಿರುವ ಕಾಳಗ (3)
11. ಅನೇಕರು ಮಾಡುವ ಅಪಹಾಸ್ಯ (3)
13. ವರಿ ಬೇಡ, ಇದು ಗೊಂಚಲು (3)
15. ನಯವಾಗಿಯೇ ತೋರಿದ ನಮ್ರತೆ (3)
17. ಫಲಸಮೂಹವಿದು (2)
18. ಉದ್ಯಾನವನಕ್ಕೆ ಮತ್ತೊಂದು ಹೆಸರು (4)
20. ತಂತ್ರ ಅಥವಾ ಸುಲಭ ಸಾಧನ (3)
21. ಎರಡಕ್ಷರದ ದೇವತೆ (2)
22. ಕಾಯಿಪಲ್ಯೆಗೆ ಮತ್ತೊಂದು ಹೆಸರು (4)

ಮೇಲಿಂದ ಕೆಳಕ್ಕೆ

1. ತಾತ್ಕಾಲಿಕವಾಗಿ ಹಾಕಿದ ಡೇರೆ (3)
2. ಸರಿಸಾಟಿಯಿಲ್ಲದ (4)
4. ಹತ್ತಿರವಲ್ಲದ ಹಾದಿ (5)
7. ಕೊನೆಗೆ ಎಲ್ಲರೂ ಸೇರಬೇಕಾದ ತಾಣ (3)
9. ಇದು ಬಹಳ ಅಮೂಲ್ಯ (3)
10. ಧ್ವನಿ ಅಥವಾ ಕೂಗು (2)
11. ಸಿದ್ದಗೊಳಿಸು ಎಂದರ್ಥ (5)
12. ಕಾವ್ಯ ರಚಿಸುವವನು (2)
14. ಅಸ್ತವ್ಯಸ್ತವಾಗಿ ಬಂದಿರುವ ಚಿಗುರು (3)
16. ದಮಯಂತಿಯ ಪತಿ ಮಾಡಿದ ಅಡುಗೆ (4)
19. ನರಿಯ ನಡುವೆ ಬಂದಿರುವ ಚರ್ಮವಾದ್ಯ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ಗುಡಾಕೇಶ 3. ಹುಂಬ 5. ಅನುಜ 6. ರಮಣೀಯ 8. ವಸು 9. ಸಮರ 11. ಅಣಕ 13. ವಲ್ಲರಿ 15. ವಿನಯ 17. ಗೊನೆ 18. ಉಪವನ 20. ಉಪಾಯ 21. ಸುರ 22. ತರಕಾರಿ

ಮೇಲಿಂದ ಕೆಳಕ್ಕೆ
1. ಗುಡಾರ 2. ಅನುಪಮ 4. ಬಳಸುದಾರಿ 7. ಮಸಣ 9. ಸಮಯ 10. ರವ 11. ಅಣಿಗೊಳಿಸು 12. ಕವಿ 14. ಲ್ಲಪವ 16. ನಳಪಾಕ 19. ನಗಾರಿ

ಕೆಡುಕು ಮಾಡಿದವರ ಕರ್ಮ ಮನೆಯವರನ್ನೂ ಸುತ್ತಿಕೊಳ್ಳುತ್ತದೆ

ಅಶೋಕ ವನದ ಮರದ ಕೆಳಗೆ ರಾವಣನಿಂದ ಅಪಹರಿಸಲ್ಪಟ್ಟ ಸೀತೆ ಬಹಳ ದುಃಖಿತಳಾಗಿ ಕುಳಿತಿದ್ದಳು. ಆಗ ಅಲ್ಲಿಗೆ ವಿಭೀಷಣನ ಹೆಂಡತಿ ಸರಮಾದೇವಿ ಬಂದು ಸೀತೆಯನ್ನು ಸಮಾಧಾನ ಪಡಿಸತೊಡಗಿದಳು. ಸೀತೆಗೆ ಯಾರ ಸಮಾಧಾನದ ಮಾತೂ ಬೇಡವಾಗಿತ್ತು. ಸೀತೆ ನಾನು ನತದೃಷ್ಟಳು, ದುಃಖಿ, ಶ್ರೀ ರಾಮನಂತಹ ಪೂಜ್ಯ ಪತಿಯನ್ನಗಲಿರುವವಳು. ನನ್ನೊಡನೆ ಮಾತನಾಡಲು ಏನಿದೆ? ದಯವಿಟ್ಟು ನನ್ನನ್ನು ನನ್ನ ಪಾಡಿಗೆ ಬಿಟ್ಟುಬಿಡಿ ಎಂದಳು. ಆಗ ಸರಮಾದೇವಿ, ನೀನು ದುಃಖಿತಳು ನಿಜ ಸೀತೆ, ಆದರೆ ನಿನಗಿಂತಲೂ ಹೆಚ್ಚು ದುಃಖಿತಳು ನಾನು ಎಂದಳು.

ಈಗ ಸೀತೆಗೆ ಆಶ್ಚರ್ಯವಾಯಿತು, ರಾವಣನ ತಮ್ಮನ ಹೆಂಡತಿಯಾದ ಇವಳು ನನಗಿಂತಲೂ ಹೆಚ್ಚು ದುಃಖಿಯೇ! ಅದು ಹೇಗೆ?ಎಂದು ಅವಳ ಮುಖವನ್ನು ಆಶ್ಚರ್ಯದಿಂದ ನೋಡಿದಳು.

ಆಗ ಸರಮಾದೇವಿ ಹೌದು ಸೀತೆ, ನೀನು ನನ್ನ ಭಾವನಾದ ರಾವಣನಿಂದ ಅಪಹರಿಸಲ್ಪಟ್ಟವಳಾಗಿ, ನಮ್ಮ ರಾಕ್ಷಸರ ಹಿಂಸೆಯನ್ನು ಅನುಭವಿಸುತ್ತಾ ದುಃಖಿತಳಾಗಿದ್ದೀಯ ನಿಜ. ಆದರೆ ನಿನ್ನ ಮೇಲೆ ಎಲ್ಲರ ಅನುಕಂಪ ಬಹಳವಾಗಿದೆ. ನಿನ್ನ ಪರಿಸ್ಥಿತಿಯನ್ನು ನೋಡಿದವರು, ಕೇಳಿದವರು ನಿನಗಾಗಿ ಮರುಗುತ್ತಾರೆ. ರಾವಣ ಹೀಗೆ ಮಾಡಬಾರದಿತ್ತೆಂದು, ಎಲ್ಲರೂ ಒಳಗೊಳಗೇ ಮರುಗುತ್ತಾರೆ. ಆದರೆ ನಮ್ಮ ಪರಿಸ್ಥಿತಿ ನೋಡು! ನಾವು ಲೋಕನಿಂದಿತರು. ನಮ್ಮ ಭಾವ ರಾವಣ, ಅವನ ವಯಸ್ಸಿಗೆ, ವಿದ್ಯೆ ಘನತೆಗೆ, ಪೌರುಷಕ್ಕೆ ಸರಿಯಲ್ಲದಂತಹ ನೀಚ ಕೆಲಸವನ್ನು ಮಾಡಿದ್ದಾನೆ. ಅದು ನಮ್ಮ ಕುಟುಂಬಕ್ಕೊಂದು ಕಳಂಕ, ಅವಮಾನ. ಲಂಕೆಯ ಜನರೆಲ್ಲರೂ ಒಳಗೊಳಗೇ ನಮ್ಮನ್ನು ಥೂ, ಛೀ, ಎನ್ನುತ್ತಿದ್ದಾರೆ. ನಾವು ದುಃಖದಲ್ಲಿದ್ದಾಗ, ಲೋಕದ ಜನರ ಅನುಕಂಪ ನಮ್ಮ ಮೇಲೆ ಇದ್ದರೆ ಅದೊಂದು ಸಮಾಧಾನ. ಆದರೆ ಎಷ್ಟೇ ಸಿರಿ ಸಂಪತ್ತು ಅಧಿಕಾರವಿದ್ದರೂ, ಲೋಕದ ಜನ ನಮ್ಮನ್ನು ನೋಡಿ ಅಸಹ್ಯಪಡುತ್ತಾ,

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಪಹಾಸ್ಯಮಾಡುತ್ತಿದ್ದರೆ, ಅಂತವರ ಮನೆಯವರು ತುಂಬಾ ಅವಮಾನ, ದುಃಖ ಪಡಬೇಕಾಗುತ್ತದೆ. ರಾವಣನ ಮನೆಯ ರಾಣಿವಾಸದವರೆಲ್ಲಾ ಇಂತಹ ಅವಮಾನದಲ್ಲಿ ಬೆಂದು ಒದ್ದಾಡುತ್ತಿದ್ದೇವೆ ಎಂದು ಹೇಳುತ್ತಾ ಆಕೆ ಜೋರಾಗಿ ಅತ್ತು ಬಿಟ್ಟಳು.

ಆಗ ಸರಮಾದೇವಿ ಇನ್ನೊಂದು ವಿಷಯವನ್ನು ಸೀತೆಗೆ ಹೇಳುತ್ತಾಳೆ. ನನಗೊಬ್ಬಳು ಒಂಬತ್ತು ವರ್ಷದ ಮಗಳಿದ್ದಾಳೆ, ಅವಳನ್ನು ಕಂಡರೆ ನನ್ನ ಭಾವ ರಾವಣನಿಗೆ ಬಹಳ ಪ್ರೀತಿ. ದೊಡ್ಡಪ್ಪನನ್ನು ಕಂಡರೆ ಅವಳಿಗೂ ಬಹಳ ಆದರ, ವಿಶ್ವಾಸ. ಆದರೆ ನಿನ್ನನ್ನು ಕದ್ದು ತಂದ ಮೇಲೆ ಅವಳು ಹೇಳುತ್ತಾಳೆ, ಅಮ್ಮಾ, ದೊಡ್ಡಪ್ಪ ಸೀತೆಯನ್ನು ಕದ್ದು ತಂದ ಮೇಲೆ, ನನಗೆ ಅವರನ್ನು ಕಂಡರೆ ಇಷ್ಟವಾಗುತ್ತಿಲ್ಲ, ಅಷ್ಟೇ ಅಲ್ಲ ಅಮ್ಮಾ, ಇಚೀಚೆಗೆ ಅವರು ಒಬ್ಬರೇ ಇದ್ದಾಗ ಅವರ ಬಳಿಗೆ ಹೋಗಲು ನನಗೆ ಭಯವಾಗುತ್ತದೆ ಎನ್ನುತ್ತಾಳೆ.

ನೋಡು ಸೀತೆ, ನಾವು ಯಾರ್ಯಾರಿಂದ ಎಂಥಾ ಮಾತುಗಳನ್ನು ಕೇಳಬೇಕಾಯಿತಲ್ಲಾ, ಈಗ ನೀನೇ ಹೇಳು ಸೀತೆ, ನಿನಗಿಂತ ದುಃಖಿಗಳು ನಾವೇ ಅಲ್ಲವೇ? ಎಂದಳು. ಸೀತೆಗೆ, ಅವಳು ಹೇಳಿದ ಮಾತು ನಿಜವೆನಿಸಿತು. ಎಲ್ಲದಕ್ಕೂ ಕಾಲವೇ ಉತ್ತರಿಸುತ್ತದೆ, ಎಂದು ಸಮಾಧಾನ ಪಡಿಸಿದಳು.

ಮೇಲಿನ ಕಥೆ ನಿಜವಿರಬಹುದು ಅಥವಾ ಕಾಲ್ಪನಿಕ ವಿರಬಹುದು, ಆದರೆ ತಪ್ಪು ಮಾಡಿದವರ ಮನೆಯವರ ಪರಿಸ್ಥಿತಿಯಂತೂ ಇದಕ್ಕಿಂತ ವಿಭಿನ್ನವಾಗಿ ಇರಲು ಸಾಧ್ಯವೇ ಇರದು. ಇಂದಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಮಾಡಿದವರನ್ನು ಹಿಗ್ಗಮುಗ್ಗ ಬಯ್ಯುತ್ತಾ, ಅವರ ಮಾನ ಹರಾಜು ಹಾಕುವ ಯಾವ ಅವಕಾಶವನ್ನು ನಾವು ತಪ್ಪಿಸಿಕೊಳ್ಳುವುದಿಲ್ಲ. ಒಂದು ಕಡೆ ಟಿವಿ ಚಾನಲ್‌ಗಳು ಬೆಳಗಿನಿಂದ ರಾತ್ರಿಯವರೆಗೂ ಅವರ ಬಗ್ಗೆ ಹಾಕಿದ ಸುದ್ದಿಯನ್ನೇ ಹಾಕಿ, ಇಲಿ ಹೋದದ್ದನ್ನು ಹುಲಿ ಹೋಯಿತು ಎನ್ನುವಷ್ಟರ ಮಟ್ಟಿಗೆ ಗಲಾಟೆ ಎಬ್ಬಿಸಿದರೆ, ಮತ್ತೊಂದು ಕಡೆ ಸಾಮಾನ್ಯರಾದ ನಾವು ಕೂಡ ಅವರನ್ನು ತೆಗಳುವುದರಲ್ಲಿ ಹಿಂದೆ ಬೀಳುವುದಿಲ್ಲ. ಆದರೆ ಅವರ ಮನೆಯವರ ಕಥೆ ದೇವರಿಗೇ ಪ್ರೀತಿ. ಮತ್ತೊಬ್ಬರ ಬಗ್ಗೆ ಕೆಟ್ಟದಾಗಿ ಮಾತನಾಡುವಾಗ ಅಥವಾ ಬರೆಯುವಾಗ ಒಮ್ಮೆ ಅವರ ಮನೆಯವರ ಬಗ್ಗೆ ಮಕ್ಕಳ ಬಗ್ಗೆ ಯೋಚಿಸಿ.

ನಮಸ್ಕಾರದ ಶಕ್ತಿ

ನಿತ್ಯಜೀವನದಲ್ಲಿ ಭಗವದ್ಗೀತೆ

ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಭಾರತೀಯ ಸಂಸ್ಕೃತಿಯಲ್ಲಿ 'ನಮಸ್ತೆ' ಅಥವಾ 'ನಮಸ್ಕಾರ' ಶಬ್ದವು ಒಬ್ಬರನ್ನೊಬ್ಬರು ಸ್ವಾಗತಿಸುವ ಪದವಾಗಿದೆ. ನಿನ್ನೊಳಗಿರುವ ದೈವತ್ವಕ್ಕೆ ನಮನ ಎಂದು ಇದರ ಅರ್ಥ. ಬೇರೆ ಬೇರೆ ಸಂಸ್ಕೃತಿಗಳಲ್ಲಿ ಉಪಯೋಗಿಸುವ ಅಭಿನಂದನಾ ಶಬ್ದಗಳು ಒಂದೇ ಸಂದೇಶವನ್ನು ನೀಡುತ್ತವೆ. ಅದೇನಂದರೆ ಎಲ್ಲ ಜೀವಿಗಳಲ್ಲಿ ಆತ್ಮವನ್ನು ನೋಡುವುದು ಹಾಗೂ ಎಲ್ಲ ಜೀವಿಗಳನ್ನು ಆತ್ಮದಲ್ಲಿ ಕಾಣುವುದು ಹಾಗೂ ಎಲ್ಲೆಡೆಯಲ್ಲಿಯೂ ಅದನ್ನೇ ನೋಡುವುದು. (6.29) ತಿಳುವಳಿಕೆಯಿಂದ ಅಂತಹ ಅಭಿನಂದನಾ ಶಬ್ದಗಳನ್ನು ವಿನಿಮಯ ಮಾಡಿಕೊಂಡಾಗ ತನ್ನಲ್ಲಿ ಹಾಗೂ ಇತರರಲ್ಲಿ ಇರುವ ದೈವತ್ವವನ್ನು ಗುರುತಿಸಿದಂತಾಗುತ್ತದೆ.

'ಅದನ್ನೇ ಎಲ್ಲೆಡೆ' ನೋಡುವುದು ನಿರಾಕಾರದ ಮಾರ್ಗ ಹಾಗೂ ಇದು ತುಂಬಾ ಕಠಿಣ ಮಾರ್ಗ. ಕೃಷ್ಣ ತಕ್ಷಣ ಇದನ್ನು ಸುಲಭವಾಗಿಸಿ ಹೇಳುತ್ತಾನೆ ಎಲ್ಲೆಡೆ ನನ್ನನ್ನು (ಪರಮಾತ್ಮ) ನೋಡಿ ಹಾಗೂ ಎಲ್ಲವನ್ನೂ ನನ್ನಲ್ಲಿ ನೋಡಿ (6.30) ಇದು ಸಾಕಾರದ ಮಾರ್ಗ. ಪರಮಾತ್ಮನನ್ನು ಸಾಕಾರ ಹಾಗೂ ನಿರಾಕಾರ ರೂಪದಲ್ಲಿ ನೋಡುವ ಮಾರ್ಗಗಳನ್ನು ಈ ಶ್ಲೋಕಗಳು ಹೇಳುತ್ತವೆ ಮತ್ತು ಎಲ್ಲ ಆಧ್ಯಾತ್ಮಿಕ ಮಾರ್ಗಗಳು ಒಂದಲ್ಲ ಒಂದರಲ್ಲಿ ಆಧಾರವನ್ನು ಹೊಂದಿವೆ.

ಅವ್ಯಕ್ತವಾದದ್ದು ಅಪರಿಮಿತವಾಗಿದೆ ಆದರೆ ವ್ಯಕ್ತವಾದದ್ದು ಭೇದವೆನಿಸುತ್ತದೆ ಮತ್ತು ಅದಕ್ಕೆ ಮಿತಿಗಳಿವೆ. ಆತ್ಮದಲ್ಲಿ ಎಲ್ಲವನ್ನು ಹಾಗೂ ಎಲ್ಲದರಲ್ಲಿ ಆತ್ಮವನ್ನು ನೋಡುವುದು ಅವ್ಯಕ್ತವಾದದ್ದರೊಂದಿಗೆ ಏಕತೆಯಾಗಿದೆ ಹಾಗೂ ಆಧುನಿಕ ಸಂದರ್ಭದಲ್ಲಿ ಇದನ್ನು ಉದಾರ ಮನೋವೃತ್ತಿ ಅಥವಾ ಜಯದ ಮನಸ್ಥಿತಿ ಎಂದು ಕರೆಯಲಾಗುತ್ತದೆ. ಇದರ ಕೊರತೆಯು ಹಾನಿಯಲ್ಲಿ ಕೊನೆಗೊಳ್ಳುವ ಸಂಕುಚಿತ ಮನೋಸ್ಥಿತಿಯಾಗಿದೆ.

ಅವ್ಯಕ್ತವಾದದ್ದನ್ನು ತಿಳಿದುಕೊಂಡಾದ ಮೇಲೂ ವ್ಯಕ್ತವಾದದ್ದರ ಮೂಲ ಬದಲಾಗುವುದಿಲ್ಲ ಎಂಬ ಅಂಶವನ್ನು ಗಮನಿಸತಕ್ಕದ್ದು. ಇನ್ನೂ ನಮಗೆ ಹಸಿವಾಗುತ್ತದೆ ಹಾಗಾಗಿ ಬದುಕಲು ನಾವು ಕರ್ಮ ಮಾಡುತ್ತಲೇ ಇರಬೇಕಾಗುತ್ತದೆ.(3.8) ಇದನ್ನು ಮೊದಲು ಅನಿವಾರ್ಯ ಕರ್ತವ್ಯ ಎಂದು ಹೇಳಲಾಗಿದೆ. (6.1) ಕೃಷ್ಣ ಇದನ್ನು ನಿಗದಿತ ಕಾರ್ಯ ಎಂದು ತಿಳಿಸಿರುತ್ತಾನೆ. ಇದು ನಮಗೆ ಕೊಟ್ಟ ಕಾರ್ಯವನ್ನು ನಮ್ಮ ಶಕ್ತಿಗನುಗುಣವಾಗಿ ಆ ಕ್ಷಣದಲ್ಲಿ ಮಾಡಿ ಮುಗಿಸುವುದಲ್ಲದೇ ಮತ್ತೇನೂ ಅಲ್ಲ. ಇದು ನಾವು ನಾಟಕದಲ್ಲಿ ನಮ್ಮ ಪಾತ್ರ ಮಾಡಿದ ಹಾಗೆ. ಅಲ್ಲಿ ಇತರ ಪಾತ್ರಧಾರಿಗಳ ಹೊಗಳಿಕೆ ಹಾಗೂ ತೆಗಳಿಕೆಗಳು ನಮ್ಮ ಮೇಲೆ ಯಾವ ಪರಿಣಾಮವನ್ನೂ ಮಾಡುವುದಿಲ್ಲ ಯಾಕೆಂದರೆ ನಾವು ಅವುಗಳಿಗೆ ಅಂಟಿಕೊಂಡಿರುವುದಿಲ್ಲ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಗುಜರಾತ್	08	06	02	12
ಡೆಲ್ಲಿ	07	05	02	10
ಬೆಂಗಳೂರು	08	05	03	10
ಪಂಜಾಬ್	08	05	03	10
ಲಖನೌ	08	05	03	10
ಮುಂಬೈ	08	04	04	08
ಕೋಲ್ಕತ್ತಾ	08	03	05	06
ರಾಜಸ್ಥಾನ್	08	02	06	04
ಹೈದರಾಬಾದ್	07	02	05	04
ಚೆನ್ನೈ	08	02	06	04

ಇಂದಿನ ಪಂದ್ಯ

7.30 PM

ಸನ್‌ರೈಸರ್ಸ್ ಹೈದರಾಬಾದ್ VS ಮುಂಬೈ ಇಂಡಿಯನ್ಸ್

ರಾಜೀವ್ ಗಾಂಧಿ ಸ್ಟೇಡಿಯಂ ಹೈದರಾಬಾದ್



'ನಮ್ಮ ಕೋಲ್ಕತ್ತಾ ತಂಡವು ಉತ್ತಮ ಆರಂಭಿಕ ಜತೆಯಾಟವನ್ನು ನಿರೀಕ್ಷಿಸುತ್ತಿದೆ. ಆದರೆ ಅದು ಈಗ ನಮ್ಮ ಪಾಲಿಗೆ ದೊಡ್ಡ ಸವಾಲಾಗಿ ಮಾರ್ಪಟ್ಟಿದೆ. ಇನ್ನು ಈ ಟೂರ್ನಿಯಲ್ಲಿ ಕೆಲವೇ ಕೆಲವು ಪಂದ್ಯಗಳು ಬಾಕಿ ಉಳಿದಿರುವುದರಿಂದ ನಾವು ಸಾಧ್ಯವಾದಷ್ಟು ಬೇಗ ಹಿನ್ನಡೆಯ ಕಾರಣವನ್ನು ಕಲಿಯುವುದು ಅನಿವಾರ್ಯ. ನಮ್ಮ ಬೌಲರ್‌ಗಳು ಇದುವರೆಗೂ ಉತ್ತಮ ಪ್ರದರ್ಶನವನ್ನು ನೀಡಿದ್ದರು, ಹಾಗಾಗಿ ಅವರ ಬಗ್ಗೆ ಯಾವುದೇ ದೂರುಗಳಿಲ್ಲ. ಆದರೆ ನಾವು ಉತ್ತಮವಾಗಿ ಬ್ಯಾಟಿಂಗ್ ಮಾಡಬೇಕಾಗಿದೆ. ಮಧ್ಯಮ ಓವರ್‌ಗಳಲ್ಲಿ ಇದುವರೆಗೂ ನಮಗೆ ಉತ್ತಮ ಆರಂಭಿಕ ಜತೆಯಾಟ ಬರಬೇಕು. ಫೀಲ್ಡರ್‌ಗಳು ಕೂಡಾ ಮನಸ್ಸು ಮಾಡಿ 15-20 ರನ್‌ಗಳನ್ನು ಉಳಿಸಲು ಸಾಧ್ಯವಾದರೆ ಅದು ತಂಡದ ಪಾಲಿಗೆ ಯಾವಾಗಲೂ ಉತ್ತಮ, ಇಂತಹ ಬದಲಾವಣೆಗಳ ಮೂಲಕ ಇನ್ನಾದರೂ ಸತತವಾಗಿ ನಾವು ಗೆಲ್ಲಲು ಪ್ರಯತ್ನಿಸಬೇಕಿದೆ'

-ಅಜಿಂಕ್ಯ ರಹಾನೆ ಕೆಕೆಆರ್ ನಾಯಕ

ಮುಕೇಶ್ ಕುಮಾರ್ ದಾಳಿಗೆ ಕುಸಿದ ಲಖನೌ | ಮರ್ಕ್ರಮ್ ಅರ್ಧಶತಕ

ಲಖನೌಗೆ 160 ರನ್ ಸುಲಭ ಗೆಲುವಿನ ಗುರಿ

ಲಖನೌ: ಇಲ್ಲಿನ ಅಟಲ್ ಬಿಹಾರಿ ವಾಜಪೇಯಿ ಸ್ಟೇಡಿಯಂನಲ್ಲಿ ಮಂಗಳವಾರ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ತಂಡವು ನಿಗದಿತ ಓವರ್‌ಗಳಲ್ಲಿ 159 ರನ್ ಗಳಿಸಿ, ಡೆಲ್ಲಿಗೆ 160 ರನ್‌ಗಳ ಸಾಧಾರಣ ಗುರಿಯನ್ನು ನಿಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಆಹ್ವಾನಿಸಲ್ಪಟ್ಟ ಲಖನೌ ತಂಡಕ್ಕೆ ಓಪನರ್‌ಗಳಾದ ಏಡೆನ್ ಮಾರ್ಕ್ರಮ್ ಹಾಗೂ ಮಿಚೆಲ್ ಮಾರ್ಷ್ ಬಿರುಸಿನ ಆರಂಭವೊದಗಿಸಿದರು. ಅವರಿಬ್ಬರೂ ಮೊದಲ ವಿಕೆಟ್‌ಗೆ 10 ಓವರ್‌ಗಳಲ್ಲಿ 87 ರನ್‌ಗಳ ಜತೆಯಾಟ ಪ್ರದರ್ಶಿಸಿದರು. 33 ಬಾಲ್‌ಗಳಲ್ಲಿ 52 ರನ್ ಗಳಿಸಿದ್ದ ಮರ್ಕ್ರಮ್ ಅವರು ದುಶ್ಯಂತ್ ಚಮೇರ ಬೌಲಿಂಗ್‌ನಲ್ಲಿ ಸ್ಟಬ್ಸ್‌ಗೆ ಕ್ಯಾಚ್ ನೀಡಿ ಪೆವಿಲಿಯನ್‌ಗೆ ನಿರ್ಗಮಿಸಿದರು.

ಆ ಬಳಿಕ ಮಾರ್ಷ್-ಪೂರನ್ ನಡುವೆ 2ನೇ ವಿಕೆಟ್ ಜತೆಯಾಟ ನಡೆಯಿತು. 45 ಬಾಲ್‌ಗಳಲ್ಲಿ 36 ರನ್ ಗಳಿಸಿದ ಮಾರ್ಷ್ ಮುಖೇಶ್ ಕುಮಾರ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಆಗ ಲಖನೌ ತಂಡದ ಸ್ಕೋರ್ 99 ಆಗಿತ್ತು. ಆದರೆ ಆ ಬಳಿಕ ಲಖನೌ ತಂಡಕ್ಕೆ ಕೊನೆಯ ವರೆಗೂ ಉತ್ತಮ ಜತೆಯಾಟ ಸಿಗಲೇ ಇಲ್ಲ. ನಾಲ್ಕು ಪಂದ್ಯಗಳಲ್ಲಿ ಮಿಂಚಿದ್ದ ನಿಕೋಲಸ್ ಪೂರನ್ ಕೇವಲ 5 ಬಾಲ್‌ಗಳಲ್ಲಿ 9 ರನ್ ಗಳಿಸಿದ್ದ ವೇಳೆ ಮೈಕಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಕಳೆದುಕೊಂಡರು.

ಆ ಬಳಿಕ ಕ್ರೀಸ್‌ಗೆ ಬಂದ ಲಖನೌ ಆಟಗಾರ ಅಬ್ದುಲ್ ಸಮದ್ ಕೂಡಾ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. 8 ಬಾಲ್‌ಗಳನ್ನು ಎದುರಿಸಿದ್ದ ಅವರು, ಕೇವಲ 2 ರನ್ ಗಳಿಸಿ ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಒಪ್ಪಿಸಿದರು. ಆಗ ಲಖನೌ ತಂಡದ ಸ್ಕೋರ್ 107 ರನ್‌ಗಳಾಗಿತ್ತು. ಸ್ವಲ್ಪ ಹೊತ್ತಲ್ಲೇ ಆರಂಭಿಕ ಬ್ಯಾಟ್ಸ್‌ಮ್ಯಾನ್ ಆಗಿ ಬಂದ ಮಾರ್ಷ್ 36 ಬಾಲ್‌ಗಳಲ್ಲಿ 45 ರನ್ ಗಳಿಸಿ ಮುಕೇಶ್ ಕುಮಾರ್ ಬೌಲಿಂಗ್‌ನಲ್ಲೇ ತಮ್ಮ ವಿಕೆಟ್ ಒಪ್ಪಿಸಿದರು.

ಬಧೋನಿ 21 ಬಾಲ್‌ಗಳನ್ನು ಎದುರಿಸಿ ಮುಕೇಶ್ ಕುಮಾರ್ ಬೌಲಿಂಗ್‌ನಲ್ಲಿ ಬೌಲ್ಡ್ ಆಗಿ ತಮ್ಮ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಹೋದರು. ರಿಷಬ್ ಪಂತ್ 2 ಬಾಲ್‌ಗಳನ್ನು ಎದುರಿಸಿ ಯಾವುದೇ ರನ್ ಗಳಿಸದೆ ಮುಕೇಶ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಲಖನೌ ಪರ ಮಿಲ್ಲರ್ 15 ಬಾಲ್‌ಗಳನ್ನು ಎದುರಿಸಿ 14 ರನ್‌ಗಳನ್ನಷ್ಟೇ ಗಳಿಸಿ ಅಜೇಯರಾಗಿ ಉಳಿದರು.ಲಖನೌ ನಿಗದಿತ 20 ಓವರ್‌ಗಳಲ್ಲಿ 159 ರನ್ ಗಳಿಸಲಷ್ಟೇ ಶಕ್ತವಾಯಿತು.

ಡೆಲ್ಲಿ ಪರ ಮುಕೇಶ್ ಕುಮಾರ್ 33 ರನ್ ನೀಡಿ, ನಾಲ್ಕು ವಿಕೆಟ್ ಕಬಳಿಸಿದರು.

ಡೆಲ್ಲಿ-ಲಖನೌ ಅಂಕಪಟ್ಟಿ ಸ್ಥಾನ

ಈ ಐಪಿಎಲ್‌ನಲ್ಲಿ ಏಳು ಪಂದ್ಯಗಳಲ್ಲಿ ಐದರಲ್ಲಿ ಗೆದ್ದಿರುವ ಡೆಲ್ಲಿ 10 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ ರನ್ ರೇಟ್ ಕಡಿಮೆ ಇರುವ ಕಾರಣ ಮತ್ತೊಂದೆಡೆ ಲಖನೌ ತಂಡವು ಎಂಟು ಪಂದ್ಯಗಳಲ್ಲಿ ಐದು ಪಂದ್ಯಗಳಲ್ಲಿ ಗೆದ್ದಿದ್ದರೂ, 10 ಅಂಕ ಸಂಪಾದಿಸಿ ಐದನೇ ಸ್ಥಾನದಲ್ಲಿದೆ.

ತವರಿಗೆ ವಾಪಸಾದ ಡಿವೋನ್ ಕಾನ್ವೆ

ಚೆನ್ನೈ: ಸಿಎಸ್‌ಕೆ ತಂಡದ ಬ್ಯಾಟ್ಸ್‌ಮ್ಯಾನ್ ಡಿವೋನ್ ಕಾನ್ವೆ ಅವರು ತಮ್ಮ ತವರಿಗೆ ಮರಳಿದ್ದಾರೆ. ಅವರ ತಂದೆ ಡೆಂಟನ್ ನಿಧನರಾಗಿದ್ದಾರೆ, ಆ ಹಿನ್ನೆಲೆಯಲ್ಲಿ ಸ್ವದೇಶಕ್ಕೆ ವಾಪಸ್ ಆಗಿದ್ದಾರೆ ಎಂದು ಚೆನ್ನೈ ಸೂಪರ್ ಕಿಂಗ್ಸ್ ಸಾಮಾಜಿಕ ಮಾಧ್ಯಮ ಖಾತೆಗಳ ಮೂಲಕ ಮಾಹಿತಿ ನೀಡಿದೆ. ಸಿಎಸ್‌ಕೆ ತನ್ನ ಸಾಮಾಜಿಕ ಮಾಧ್ಯಮದಲ್ಲಿ ಕಾನ್ವೆ ಮತ್ತು ಅವರ ತಂದೆಯ ಫೋಟೋವನ್ನು ಹಂಚಿಕೊಳ್ಳುವ ಮೂಲಕ ಗೌರವ ಸಲ್ಲಿಸಿದೆ. ನ್ಯೂಜಿಲೆಂಡ್ ಪರ ಆಡುವ ಡೆವೊನ್ ಕಾನ್ವೇ ಮೂಲತಃ ದಕ್ಷಿಣ ಆಫ್ರಿಕಾದವರು. ಉತ್ತಮ ಕ್ರಿಕೆಟ್ ಆಡಲು ಅವಕಾಶ ಪಡೆಯಲು ಅವರು ತಮ್ಮ ಕುಟುಂಬದೊಂದಿಗೆ ನ್ಯೂಜಿಲೆಂಡ್‌ಗೆ ಬಂದು ನೆಲೆಸಿದರು. ಕಾನ್ವೆಯವರ ತಂದೆ ನಿಧನರಾದ ಹಿನ್ನೆಲೆಯಲ್ಲಿ ಏಪ್ರಿಲ್ 20ರಂದು ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದಲ್ಲಿ ಚೆನ್ನೈ ಆಟಗಾರರು ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಮೈದಾನಕ್ಕೆ ಇಳಿದಿದ್ದರು.

ಮುಂಬೈಗೆ ಅತಿಥೇಯರನ್ನು ಸೋಲಿಸುವಾಸೆ ಹೈದರಾಬಾದ್‌ಗೆ ತವರಲ್ಲಿ ಪ್ರತಿಷ್ಠೆಯ ಪಂದ್ಯ

ಹೈದರಾಬಾದ್-ಮುಂಬೈ ಇಂದು ಮತ್ತೊಮ್ಮೆ ಕದನ

ಹೈದರಾಬಾದ್
ಪ್ಯಾಟ್ ಕಮಿನ್ಸ್ (ನಾಯಕ)
ಅಭಿಷೇಕ್ ಶರ್ಮಾ
ನಿತೀಶ್ ರೆಡ್ಡಿ
ಹೆನ್ರಿಚ್ ಕ್ಲಾಸೆನ್
ಟ್ರಾವಿಸ್ ಹೆಡ್
ಮೊಹಮ್ಮದ್ ಶಮಿ
ಹರ್ಷಲ್ ಪಟೇಲ್
ಇಶಾನ್ ಕಿಶನ್
ರಾಹುಲ್ ಚಹರ್
ಆ್ಯಡಂ ಝಂಪ
ಅಭಿನವ್ ಮನೋಹರ್
ಸಿಮ್ರಾನ್‌ಜಿತ್ ಸಿಂಗ್
ಜಯದೇವ್ ಉನದ್ಕಟ್
ಕಮಿಂದು ಮೆಂಡಿಸ್

ಮುಂಬೈ ತಂಡ
ಹಾರ್ದಿಕ್ ಪಾಂಡ್ಯ (ನಾಯಕ)
ರೋಹಿತ್ ಶರ್ಮಾ
ವಿಲ್ ಜ್ಯಾಕ್ಸ್
ಸೂರ್ಯಕುಮಾರ್ ಯಾದವ್
ತಿಲಕ್ ವರ್ಮಾ
ನಮನ್ ಧಿರ್
ಮಿಚೆಲ್ ಸ್ಯಾಂಟ್ನರ್
ದೀಪಕ್ ಚಹರ್
ಟ್ರೆಂಟ್ ಬೌಲ್ಟ್
ಅಶ್ವನಿ ಕುಮಾರ್
ವಿಘ್ನೇಶ್ ಪುತ್ತೂರು
ರಿಯಾನ್ ರಿಕೆಲ್ಟನ್
ಸತ್ಯನಾರಾಯಣ ರಾಜು
ಅರ್ಜುನ್ ತೆಂಡೂಲ್ಕರ್

ಹೈದರಾಬಾದ್: ಇಲ್ಲಿನ ರಾಜೀವ್ ಗಾಂಧಿ ಸ್ಟೇಡಿಯಂನಲ್ಲಿ ಬುಧವಾರ ನಡೆಯುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಅತಿಥೇಯ ಹೈದರಾಬಾದ್ ತಂಡವು ಮುಂಬೈ ತಂಡವನ್ನು ಎದುರಿಸಲಿದೆ. ಈ ಆವೃತ್ತಿಯಲ್ಲಿ ಕೇವಲ 2 ಪಂದ್ಯಗಳನ್ನು ಗೆದ್ದಿರುವ ಹೈದರಾಬಾದ್ 4 ಅಂಕಗಳನ್ನು ಸಂಪಾದಿಸಿದ್ದರೆ, ಮುಂಬೈ ಇಂಡಿಯನ್ಸ್ ತಂಡವು 8 ಅಂಕಗಳನ್ನು ಸಂಪಾದಿಸಿದೆ.

ಮಾರ್ಚ್-23ರಂದು ನಡೆದಿದ್ದ ಪಂದ್ಯದಲ್ಲಿ ಹೈದರಾಬಾದ್ ತಂಡವು ರಾಜಸ್ಥಾನ್ ರಾಯಲ್ಸ್ ತಂಡದ ವಿರುದ್ಧ 44 ರನ್‌ಗಳಿಂದ ಗೆದ್ದು ಈ ಸಲದ ಟೂರ್ನಿಯಲ್ಲಿ ಶುಭಾರಂಭ ಮಾಡಿತ್ತು. ಆದರೆ ಆ ನಂತರ ನಾಲ್ಕು ಪಂದ್ಯಗಳಲ್ಲಿ ಹೈದರಾಬಾದ್ ಸೋಲುಂಡು ದೌರ್ಬಲ್ಯವನ್ನು ಜಗಜ್ಜಾಹೀರು ಮಾಡಿತು. ಮಾರ್ಚ್-27ರಂದು ಲಖನೌ ತಂಡದ ವಿರುದ್ಧ, ಮಾರ್ಚ್- 30ರಂದು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ, ಏಪ್ರಿಲ್-3ರಂದು ಕೋಲ್ಕತ್ತಾ ತಂಡದ ವಿರುದ್ಧ, ಏಪ್ರಿಲ್-6ರಂದು ಗುಜರಾತ್ ತಂಡದ ವಿರುದ್ಧ ಹೈದರಾಬಾದ್ ಸೋಲುವ ಮೂಲಕ ಅನಿರೀಕ್ಷಿತ ಹಿನ್ನಡೆ ಅನುಭವಿಸಿತು.

ಏಪ್ರಿಲ್-12ರಂದು ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡವು ಪಂಜಾಬ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿ ಸೋಲಿನ ಪೊರೆಯನ್ನು ಕಳಚಿಕೊಂಡಿತು. ಆದರೆ ಮತ್ತೊಮ್ಮೆ ಏಪ್ರಿಲ್-17ರಂದು ನಡೆದ ಪಂದ್ಯದಲ್ಲಿ ಮುಂಬೈ ವಿರುದ್ಧ 4 ವಿಕೆಟ್ ಅಂತರದಲ್ಲಿ ಹೈದರಾಬಾದ್ ತಂಡವು ಸೋತು ತನ್ನ ದೌರ್ಬಲ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿತು.

ಹೈದರಾಬಾದ್ ವಿರುದ್ಧ ಸೆಣಸಲಿರುವ ಮುಂಬೈ ತಂಡವು ಈ ಆವೃತ್ತಿಯ ಆರಂಭದಲ್ಲಿ ಮುಗ್ಗರಿಸಿದರೂ, ಇತ್ತೀಚೆಗಿನ ಭರ್ಜರಿ ಪ್ರದರ್ಶನ ಮತ್ತು ಹ್ಯಾಟ್ರಿಕ್ ಗೆಲುವು ಪ್ಲೇಆಫ್‌ನತ್ತ ಗುರಿ ಇರಿಸಿ ಮುನ್ನುಗ್ಗುವಂತಿದೆ. ಮಾರ್ಚ್-23ರಂದು ನಡೆದ ಪಂದ್ಯದಲ್ಲಿ ಮುಂಬೈ ತಂಡವು ಚೆನ್ನೈ ವಿರುದ್ಧ ಸೋತಿತ್ತು. ಮಾರ್ಚ್-29ರಂದು ನಡೆದಿದ್ದ ಪಂದ್ಯದಲ್ಲಿ ಗುಜರಾತ್ ವಿರುದ್ಧವೂ ಮುಂಬೈ ಸೋಲನ್ನು ಕಂಡಿತ್ತು.

ತನ್ನ ಮೂರನೇ ಪಂದ್ಯದಲ್ಲಿ ಕೋಲ್ಕತ್ತಾ ತಂಡವನ್ನು ಮಣಿಸಿದ್ದ ಮುಂಬೈ 8 ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದಿತ್ತು, ಆದರೆ ಏಪ್ರಿಲ್-4ರಂದು ಮುಂಬೈ ತಂಡವು ಲಖನೌ ವಿರುದ್ಧ ಸೋತಿತ್ತು.

ಮತ್ತೆ ಪುಟಿದೆದ್ದ ಮುಂಬೈ ಏಪ್ರಿಲ್-13ರಂದು ನಡೆದ ಪಂದ್ಯದಲ್ಲಿ ಡೆಲ್ಲಿ ವಿರುದ್ಧ 12 ರನ್‌ಗಳ ಜಯ ಗಳಿಸಿತು. ಏಪ್ರಿಲ್-17ರಂದು ಆಯೋಜಿಸಲಾಗಿದ್ದ ಪಂದ್ಯದಲ್ಲಿ ಹೈದರಾಬಾದ್ ಅನ್ನು 4 ವಿಕೆಟ್‌ಗಳಿಂದ ಮಣಿಸಿ ತನ್ನ ಪ್ರಾಬಲ್ಯ ಮೆರೆದಿತ್ತು. ಏಪ್ರಿಲ್-20ರಂದು ನಡೆದ ಪಂದ್ಯದಲ್ಲಿ ಚೆನ್ನೈ ವಿರುದ್ಧ 9 ವಿಕೆಟ್‌ಗಳ ಗೆಲುವನ್ನು ದಾಖಲಿಸುವ ಮೂಲಕ ಹ್ಯಾಟ್ರಿಕ್ ವಿಜಯವನ್ನು ಕಂಡುಕೊಂಡಿತ್ತು.

ಬುಧವಾರದ ಪಂದ್ಯದಲ್ಲಿ ಹೈದರಾಬಾದ್ ತಂಡಕ್ಕೆ ತನ್ನ ತವರಿನ ಪ್ರೇಕ್ಷಕರ ಬೆಂಬಲ ಸಿಗುವುದು ಸಹಜ, ಆದರೆ ಈಗಾಗಲೇ ಪ್ಲೇಆಫ್‌ನತ್ತ ದೃಷ್ಟಿ ನೆಟ್ಟಿರುವ ಮುಂಬೈ ತಂಡವು ಹೈದರಾಬಾದ್ ತಂಡದ ಪಾಲಿಗೆ ಕಠಿಣ ಎದುರಾಳಿ ಆಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಮುಂಬೈ ಆಟಗಾರರಿಗೆ ಶಿಕ್ಷೆ

ಮುಂಬೈ: ಐಪಿಎಲ್ ಪಂದ್ಯಾವಳಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದಲ್ಲಿ ತಡವಾಗಿ ಬಂದ ಆಟಗಾರರಿಗೆ ಶಿಕ್ಷೆ ನೀಡುವ ಸಂಪ್ರದಾಯ ಆರಂಭವಾಗಿದೆ. ನಿಗದಿತ ಸಮಯದ ವೇಳೆ ಬಸ್ ಬಳಿ ಬರದಿದ್ದರೆ ಅಥವಾ ಅಭ್ಯಾಸದ ವೇಳೆ ತಡವಾಗಿ ಆಗಮಿಸಿದರೆ ಅಂತಹ ಆಟಗಾರರಿಗೆ ಸೂಪರ್‌ಹೀರೋ ಥೀಮ್‌ನ ಡ್ರೆಸ್ ಹಾಕಿಸಲಾಗುತ್ತದೆ. ಈ ಬಾರಿಯ ಐಪಿಎಲ್ ವೇಳೆ ಮೂವರು ಆಟಗಾರರು ತಡವಾಗಿ ಬಂದು ಸೂಪರ್ ಹೀರೋ ಡ್ರೆಸ್ ಶಿಕ್ಷೆಗೆ ಒಳಗಾಗಿದ್ದಾರೆ. ಅದರಂತೆ ಸ್ಟಾರ್ ಆಟಗಾರರಾದ ತಿಲಕ್ ವರ್ಮಾ, ವಿಲ್ ಜ್ಯಾಕ್ಸ್ ಮತ್ತು ರಾಜ್ ಅಂಗದ್ ಬಾವಾ ಸೂಪರ್‌ಹೀರೋ ಥೀಮ್‌ನ ಡ್ರೆಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಇದೀಗ ತಡವಾಗಿ ಬಂದ ಮೂವರು ಸೂಪರ್‌ಹೀರೋಗಳ ವಿಡಿಯೋವನ್ನು ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ತನ್ನ ಸೋಷಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ. ಕಳೆದ ಭಾನುವಾರ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಗೆದ್ದು ಬೀಗಿರುವ ಮುಂಬೈ ಇಂಡಿಯನ್ಸ್ ತಂಡವು, ತನ್ನ ಮುಂದಿನ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ, ಆ ಪಂದ್ಯವು ಬುಧವಾರದಂದು ಹೈದರಾಬಾದ್‌ನ ರಾಜೀವ್ ಗಾಂಧಿ ಇಂಟರ್ ನ್ಯಾನಷಲ್ ಸ್ಟೇಡಿಯಂನಲ್ಲಿ ನಡೆಯಲಿದೆ

ಯುವರಾಜ್‌ರಿಂದ ಟಿ10

ದೆಹಲಿ: ಕ್ರಿಕೆಟ್ ಅಂಗಳಕ್ಕೆ ಹೊಸ ಲೀಗ್ ಪರಿಚಯಿಸಲು ಟೀಮ್ ಇಂಡಿಯಾದ ಮಾಜಿ ಆಟಗಾರ ಯುವರಾಜ್ ಸಿಂಗ್ ಮುಂದಾಗಿದ್ದಾರೆ.

ಯುವರಾಜ್ ಸಿಂಗ್ ಹಾಗೂ 333 ಸ್ಪೋರ್ಟ್ಸ್, ಕೆನಡಾ ಕ್ರಿಕೆಟ್ ಅಸೋಸಿಯೇಷನ್ ಸಹಯೋಗದಲ್ಲಿ ಸೂಪರ್-60 ಹೆಸರಿನಲ್ಲಿ ಟಿ10 ಶುರು ಮಾಡಲು ಸಜ್ಜಾಗಿದ್ದಾರೆ. ಇದಕ್ಕಾಗಿ ಈಗಾಗಲೇ ಆಟಗಾರರ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಕೆನಾಡದಲ್ಲಿ ನಡೆಯಲಿರುವ ಈ ಟಿ10 ಲೀಗ್‌ಗಾಗಿ ಈಗಾಗಲೇ 1300ಕ್ಕೂ ಅಧಿಕ ಆಟಗಾರರು ಹೆಸರು ನೋಂದಾಯಿಸಿಕೊಂಡಿದ್ದಾರೆ. ಸ್ಲ್ಯಾಮ್-ಬ್ಯಾಂಗ್ ಟಿ10 ಸ್ವರೂಪದಲ್ಲಿ ನಡೆಯಲಿರುವ ಲೀಗ್‌ಗಾಗಿ 1135 ಪುರುಷ ಮತ್ತು 235 ಮಹಿಳಾ ಆಟಗಾರ್ತಿಯರು ಹೆಸರು ನೋಂದಣಿ ಮಾಡಿಕೊಂಡಿದ್ದು, ಶೀಘ್ರದಲ್ಲೇ ಅದರ ಪ್ರಕ್ರಿಯೆ ನಡೆಯಲಿದೆ ಎಂದು ಆಯೋಜಕರು ತಿಳಿಸಿದ್ದಾರೆ.

ಕೋಲ್ಕತ್ತಾ ಬ್ಯಾಟರ್‌ಗಳಲ್ಲಿ ಆತ್ಮವಿಶ್ವಾಸವಿಲ್ಲ: ಬ್ರಾವೊ

ಕೋಲ್ಕತ: ಪ್ರಸುತ ಕೋಲ್ಕತಾ ನೈಟ್ ರೈಡರ್ಸ್ ತಂಡದ ಬ್ಯಾಟರ್‌ಗಳ ಆತ್ಮವಿಶ್ವಾಸದ ಮಟ್ಟ ಕುಸಿದಿದೆ ಎಂದು ತಂಡದ ಮೆಂಟರ್ ಸ್ವೇನ್ ಬ್ರಾವೊ ಒಪ್ಪಿಕೊಂಡರು. ಆದರೆ ತಂಡದ ಕಳಪೆ ಪ್ರದರ್ಶನಕ್ಕೆ ಈಡನ್ ಗಾರ್ಡನ್ ಪಿಚ್ ಅನ್ನು ಹೊಣೆ ಮಾಡಲು ನಿರಾಕರಿಸಿದರು.

ಕೋಲ್ಕತ್ತಾ ತಂಡ ಸೋಮವಾರ ಐದನೇ ಸೋಲನ್ನು ಕಂಡ ನಂತರ ಅವರು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದರು. 'ಐಪಿಎಲ್ ಕಠಿಣ ಟೂರ್ನಿ, ಇಲ್ಲಿ ಉತ್ತಮ ಆರಂಭ ಪಡೆಯದೇ ಹೋದಲ್ಲಿ ಬ್ಯಾಟರ್‌ಗಳ ಆತ್ಮವಿಶ್ವಾಸದ ಮಟ್ಟ ಕುಗ್ಗುತ್ತದೆ. ನಾವು ಆಟಗಾರರಿಗೆ ಬೆಂಬಲವಾಗಿ ನಿಲ್ಲುತ್ತೇವೆ. ಮುಂದೆ ಚೆನ್ನಾಗಿ ಆಡುವರೆಂಬ ಭರವಸೆಯಿದೆ' ಎಂದರು. 'ಈಡನ್ ಗಾರ್ಡನ್ಸ್ ಕ್ರೀಡಾಂಗಣದ ಪಿಚ್ ಬಯಸಿದ ರೀತಿಯಲ್ಲಿಲ್ಲ ಎಂದು ಫ್ರಾಂಚೈಸಿಯ ಕಳವಳ ವ್ಯಕ್ತಪಡಿಸಿದ್ದು ಚರ್ಚೆಗೆ ಕಾರಣವಾಗಿತ್ತು. ಆದರೆ ಇದನ್ನು ಬ್ರಾವೊ ಒಪ್ಪಲಿಲ್ಲ. 'ಪಿಚ್‌ನಲ್ಲೇನೂ ಸಮಸ್ಯೆಯಿಲ್ಲ, ಅದರ ಬಗ್ಗೆ ಮಾತನಾಡಲು ನಾನು ಬಯಸುವುದಿಲ್ಲ, ಎರಡೂ ತಂಡಗಳು ಒಂದೇ ವಿಕೆಟ್‌ನಲ್ಲಿ ಆಡುತ್ತವೆ, ನಾವು ಉತ್ತಮವಾಗಿ ಆಡಿಲ್ಲ, ಅವರು ನಮಗಿಂತ ಚೆನ್ನಾಗಿ ಆಡಿದರು' ಎಂದೂ ಬ್ರಾವೊ ಹೇಳಿದರು.

ಶೂಟಿಂಗ್: ಭಾರತಕ್ಕೆ 3ನೇ ಸ್ಥಾನ



ಓಮಾ (ಪೆರು): ಭಾರತದ ಶೂಟಿಂಗ್ ಸ್ಪರ್ಧಿಗಳು ಐಎಸ್‌ಎಸ್‌ಎಫ್ ವಿಶ್ವ ಕಪ್‌ನ ಅಂತಿಮ ದಿನ ಟ್ರ್ಯಾಪ್ ಮಿಶ್ರ ವಿಭಾಗದಲ್ಲಿ ಪದಕದ ಸುತ್ತಿಗೇರಲು ವಿಫಲರಾದರು, ಆದರೆ ಒಟ್ಟಾರೆ ಪದಕಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆಯಿತು. ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಮಹಿಳೆಯರ 25 ಕಿ.ಮೀ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದು ಭಾರತಕ್ಕೆ ಕೊನೆಯ ಪದಕ ಗಳಿಸಿಕೊಟ್ಟಿದ್ದರು. ಭಾರತ ಒಟ್ಟಾರೆ ಈ ವಿಶ್ವಕಪ್‌ನಲ್ಲಿ ಏಳು ಪದಕಗಳನ್ನು ಗೆದ್ದುಕೊಂಡಿದೆ. ಇದರಲ್ಲಿ ಎರಡು ಚಿನ್ನ, ನಾಲ್ಕು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಒಳಗೊಂಡಿದೆ. ಅಮೆರಿಕ ಸಹ ಏಳು ಪದಕಗಳನ್ನು ಗೆದ್ದರೂ, ಭಾರತಕ್ಕಿಂತ ಒಂದು ಚಿನ್ನ ಹೆಚ್ಚು ಗೆದ್ದ ಕಾರಣ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯಿತು. ಚೀನಾ ನಾಲ್ಕು ಚಿನ್ನ, ಮೂರು ಬೆಳ್ಳಿ ಮತ್ತು ಆರು ಕಂಚಿನ ಪದಕಗಳೊಡನೆ ಅಗ್ರಸ್ಥಾನ ಪಡೆಯಿತು.

ಮಿಂಚಿದ ಸುರುಚಿ: ಈ ಕೂಟದಲ್ಲಿ 18 ವರ್ಷ ವಯಸ್ಸಿನ ಸುರುಚಿ ಇಂದರ್ ಸಿಂಗ್ ಅವರು ಎರಡು ಚಿನ್ನ ಗೆದ್ದು ಭಾರತದ ಪರ ಅಮೋಘ ಸಾಧನೆ ತೋರಿದರು. ಅವರು 10 ಮೀ. ಏರ್ ಪಿಸ್ತೂಲ್‌ನಲ್ಲಿ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್ ಅವರನ್ನು ಹಿಂದೆ ಹಾಕಿದ್ದರು, ನಂತರ ಮಿಶ್ರ ವಿಭಾಗದಲ್ಲಿ ಸೌರಬ್ ಚೌಧರಿ ಅವರೊಂದಿಗೆ ದೇಶಕ್ಕೆ ಎರಡನೇ ಚಿನ್ನ ಗೆದ್ದುಕೊಟ್ಟಿದ್ದರು. ಮಿಶ್ರ ಟ್ರ್ಯಾಪ್ ಸ್ಪರ್ಧೆಯಲ್ಲಿ ಭಾರತದ ಪೃಥ್ವಿರಾಜ್ ತೊಂಡೈಮನ್ ಮತ್ತು ಪ್ರಗತಿ ದುಬೆ 134ರ ಸ್ಕೋರ್ ನೊಂದಿಗೆ ಎಂಟನೇ ಸ್ಥಾನ ಗಳಿಸಿದರು. ಲಕ್ಷಯ್ ಮತ್ತು ನೀರೂ ಅವರಿದ್ದ ತಂಡ (128) 13ನೇ ಸ್ಥಾನ ಪಡೆಯಿತು.

ಲಖನೌ ವಿರುದ್ಧ ಕೇವಲ 2 ರನ್ ಸೋಲು | ಫಿಕ್ಸಿಂಗ್ ಆರೋಪ ಅಲ್ಲಗೆಳೆದ ರಾಜಸ್ಥಾನ್ ರಾಯಲ್ಸ್

ಮ್ಯಾಚ್ ಫಿಕ್ಸಿಂಗ್ ಆರೋಪ: ಸ್ಪಷ್ಟನೆ ನೀಡಿದ ಫ್ರಾಂಚೈಸಿ

ಜೈಪುರ: ಇಲ್ಲಿನ ಸವಾಲ್ ಮಾನ್‌ಸಿಂಗ್ ಸ್ಟೇಡಿಯಂನಲ್ಲಿ ಏಪ್ರಿಲ್-19ರಂದು ನಡೆದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ಎರಡು ರನ್‌ಗಳ ರೋಚಕ ಸೋಲು ಕಂಡಿದ್ದು, ಆ ಕುರಿತಾಗಿ ಮ್ಯಾಚ್ ಫಿಕ್ಸಿಂಗ್ ಆರೋಪ ಕೇಳಿಬಂದಿದೆ. ರಾಜಸ್ಥಾನ ಕ್ರಿಕೆಟ್ ಅಸೋಸಿಯೇಶನ್‌ನ ತಾತ್ಕಾಲಿಕ ಸಮಿತಿಯ ಸಂಚಾಲಕ ಜಯದೀಪ್ ಬಿಹಾನಿ, ರಾಜಸ್ಥಾನ್ ರಾಯಲ್ ತಂಡ 2 ರನ್‌ಗಳ ಸೋಲು ಕಂಡ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಿದ್ದು, ರಾಜಸ್ಥಾನ್ ರಾಯಲ್ಸ್ ಮತ್ತು ರಾಜಸ್ಥಾನ್ ಕ್ರಿಕೆಟ್ ಅಸೋಸಿಯೇಷನ್ ನಡುವೆ ಭಿನ್ನಾಭಿಪ್ರಾಯ ಹೆಚ್ಚಾಗಿದೆ. ಐಪಿಎಲ್ ಫ್ರಾಂಚೈಸಿ ರಾಜಸ್ಥಾನ್ ರಾಯಲ್ಸ್‌ನ ಆಡಳಿತ ಮಂಡಳಿಯು ಮುಖ್ಯಮಂತ್ರಿ, ಕ್ರೀಡಾ ಸಚಿವರು ಮತ್ತು ಕ್ರೀಡಾ ಕಾರ್ಯದರ್ಶಿಗೆ ಔಪಚಾರಿಕವಾಗಿ ದೂರು ನೀಡಿದ್ದು, ಬಿಹಾನಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ.

ತಂಡದ ಹಿರಿಯ ಅಧಿಕಾರಿ ದೀಪ್ ರಾಯ್, ಬಿಹಾನಿ ಅವರ ಹೇಳಿಕೆಗಳನ್ನು 'ಸುಳ್ಳು,

ಆಧಾರರಹಿತ ಮತ್ತು ಯಾವುದೇ ಪುರಾವೆಗಳಿಲ್ಲ' ಎಂದು ಕರೆದಿದ್ದು, ಆರೋಪಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದ್ದಾರೆ. ತಂಡದ ಪ್ರದರ್ಶನದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಲ್ಲದೆ, ರಾಜಸ್ಥಾನ ರಾಯಲ್ಸ್, ರಾಜಸ್ಥಾನ ಕ್ರೀಡಾ ಮಂಡಳಿ ಮತ್ತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆರ್‌ಸಿಎಯ ತಾತ್ಕಾಲಿಕ ಸಮಿತಿಯನ್ನು ಐಪಿಎಲ್ ಸಂಬಂಧಿತ ಚಟುವಟಿಕೆಗಳಿಂದ ದೂರವಿಡಲು ಪಿತೂರಿ ನಡೆಸುತ್ತಿದೆ ಎಂದು ಬಿಹಾನಿ ಹೇಳಿದ್ದರು.

'ತಾತ್ಕಾಲಿಕ ಸಮಿತಿಯ ಸಂಚಾಲಕರು ಮಾಡಿರುವ ಎಲ್ಲ ಆರೋಪಗಳನ್ನು ನಾವು ತಿರಸ್ಕರಿಸುತ್ತೇವೆ. ಇಂತಹ ಹೇಳಿಕೆಗಳು ಸಾರ್ವಜನಿಕರ ದಾರಿ ತಪ್ಪಿಸುವುದಲ್ಲದೆ, ರಾಜಸ್ಥಾನ ರಾಯಲ್ಸ್, ರಾಯಲ್ ಮಲ್ಟಿ ಸ್ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ರಾಜಸ್ಥಾನ ಕ್ರೀಡಾ ಮಂಡಳಿ ಮತ್ತು ಬಿಸಿಸಿಐಯ ಖ್ಯಾತಿ ಮತ್ತು ವಿಶ್ವಾಸಾರ್ಹತೆಗೆ ಗಂಭೀರ ಹಾನಿಯನ್ನುಂಟು ಮಾಡಿವೆ. ಅವು ಕ್ರಿಕೆಟ್‌ನ ಸಮಗ್ರತೆಯನ್ನೂ ಸಹ ಹಾಳುಮಾಡುತ್ತವೆ' ಎಂದು ರಾಜಸ್ಥಾನ್ ರಾಯಲ್ಸ್ ಆಡಳಿತ ಮಂಡಳಿ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದೆ.

ರಾಜಸ್ಥಾನ್ ಕ್ರಿಕೆಟ್ ಅಸೋಸಿಯೇಷನ್ ಮತ್ತು ಸರಕಾರದೊಂದಿಗಿನ ತನ್ನ 18 ವರ್ಷಗಳ ಒಡನಾಟ ಮತ್ತು ಬಿಸಿಸಿಐ ಮಾರ್ಗಸೂಚಿಗಳಿಗೆ ಸಂಪೂರ್ಣ ಅನುಗುಣವಾಗಿ ನಿರಂತರವಾಗಿ ಕೆಲಸ ಮಾಡಿಕೊಂಡು ಬಂದಿರುವ ಬಗ್ಗೆ ಫ್ರಾಂಚೈಸಿ ಒತ್ತಿಹೇಳಿದೆ. ಬಿಸಿಸಿಐನ ಸದ್ಯದ ವ್ಯವಸ್ಥೆಗಳ ಪ್ರಕಾರ, ರಾಜಸ್ಥಾನ ಕ್ರೀಡಾ ಮಂಡಳಿಯು ಈ ಆವೃತ್ತಿಯಲ್ಲಿ ಜೈಪುರದಲ್ಲಿ ಐಪಿಎಲ್ ಪಂದ್ಯಗಳನ್ನು ಆಯೋಜಿಸುವ ಅಧಿಕೃತ ಹಕ್ಕುಗಳನ್ನು ಹೊಂದಿದೆ. ಪಂದ್ಯಾವಳಿಯು ಯಶಸ್ವಿಯಾಗಿ ನಡೆಯಲು ರಾಜ್ಯ ಸರಕಾರದ ಮಾರ್ಗದರ್ಶನದಲ್ಲಿ ಕೌನ್ಸಿಲ್ ಮತ್ತು ಬಿಸಿಸಿಐನೊಂದಿಗೂ ಸಮನ್ವಯದಿಂದ ಕೆಲಸ ಮಾಡುತ್ತಿದ್ದೇವೆ ಎಂದು ರಾಜಸ್ಥಾನ್ ರಾಯಲ್ಸ್ ಫ್ರಾಂಚೈಸಿ ಸ್ಪಷ್ಟಪಡಿಸಿದೆ.

ಇದಕ್ಕೂ ಮೊದಲು ಮಾತನಾಡಿದ ಬಿಹಾನಿ, ಆರ್‌ಸಿಎ ರಾಜ್ಯದಲ್ಲಿ ಐಸಿಸಿ-ಬಿಸಿಸಿಐ ಅಂತರ ರಾಷ್ಟ್ರೀಯ ಪಂದ್ಯಗಳು ಮತ್ತು ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಆದರೆ ಕ್ರೀಡಾ ಮಂಡಳಿಯು ಜೈಪುರದಲ್ಲಿ ನಡೆಯುತ್ತಿರುವ ಐಪಿಎಲ್ ಪಂದ್ಯದಿಂದ ಸರಕಾರ ರಚಿಸಿದ ತಾತ್ಕಾಲಿಕ ಸಮಿತಿಯನ್ನು ದೂರವಿಡುವ ಮೂಲಕ ಕ್ರೀಡಾ ಹಿತಾಸಕ್ತಿಗಳ ವಿರುದ್ಧ ಪಿತೂರಿ ನಡೆಸುತ್ತಿದೆ. ರಾಜ್ಯ ಕ್ರೀಡಾ ಮಂಡಳಿಯು ಆರ್‌ಸಿಎ ತಾತ್ಕಾಲಿಕ ಸಮಿತಿಯನ್ನು ಐಪಿಎಲ್ ಆಯೋಜಿಸುವುದ ರಿಂದ ದೂರವಿಟ್ಟಿದೆ, ಅವರು ಕಾರ್ಯಕ್ರಮಕ್ಕೆ ಸಂಬಂಧಿಸಿದ ಸದಸ್ಯರಿಗೆ ಮಾನ್ಯತೆ ಕಾರ್ಡ್‌ಗಳನ್ನು ಸಹ ಮಾಡಿಲ್ಲ ಎಂದು ಅವರು ಆರೋಪಿಸಿದರು.

ಕ್ರೀಡಾಪಟುಗಳಿಗೆ ದುಬೆ ನೆರವು

ಚೆನ್ನೈ: ಪ್ರಸ್ತುತ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಆಡುತ್ತಿರುವ ಆಲ್‌ರೌಂಡರ್ ಶಿವಂ ದುಬೆ ಇತರೆ ಕ್ರೀಡೆಯನ್ನು ಬೆಂಬಲಿಸುವ ಹೃದಯವಂತಿಕೆಯ

ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ತಮಿಳುನಾಡಿನ 10 ಮಂದಿ ಉದಯೋನ್ಮುಖ ಕ್ರೀಡಾಪಟುಗಳಿಗೆ ತಲಾ 70,000 ರು. ಸಹಾಯಧನವನ್ನು ಶಿವಂ ದುಬೆ ಪ್ರಕಟಿಸಿದ್ದಾರೆ. ಚೆನ್ನೈನಲ್ಲಿ ನಡೆದಿದ್ದ ತಮಿಳುನಾಡು ಕ್ರೀಡಾ ಪತ್ರಕರ್ತರ ಅಸೋಸಿಯೇಷನ್ ವಾರ್ಷಿಕ ಪ್ರಶಸ್ತಿ ಹಾಗೂ ವಿದ್ಯಾರ್ಥಿ ವೇತನ ಕಾರ್ಯದಲ್ಲಿ ಶಿವಂ ದುಬೆ ಈ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಈ ವೇಳೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸಿಇಓ ಕಾಶಿ ವಿಶ್ವನಾಥ್ ಕೂಡ ಉಪಸ್ಥಿತರಿದ್ದರು.

2024ರ ಐಸಿಸಿ ಟಿ20 ವಿಶ್ವಕಪ್ ಗೆದ್ದಿದ್ದ ಭಾರತ ತಂಡದಲ್ಲಿದ್ದ ಶಿವಂ ದುಬೆ, ಇದೀಗ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ. ಈಗಾಗಲೇ ತಮಿಳುನಾಡು ಕ್ರೀಡಾ ಪತ್ರಕರ್ತರು ಅಲ್ಲಿನ ಉದಯೋನ್ಮುಖ ಕ್ರೀಡಾಪಟುಗಳಿಗೆ 30,000 ರು. ಸಹಾಯಧನವನ್ನು ನೀಡಲಾಗುತ್ತಿದೆ, ಅದರ ಜೊತೆಗೆ ಶಿವಂ ದುಬೆ ಕೂಡ 10 ಮಂದಿ ಕ್ರೀಡಾಪಟುಗಳಿಗೆ ತಲಾ ರು. 70,000 ಸಹಾಯ ಧನವನ್ನು ಘೋಷಿಸಿದ್ದಾರೆ. ತಂಡದ ಹೋಟೆಲ್‌ನಿಂದ ಕ್ರೀಡಾಂಗಣಕ್ಕೆ ಪ್ರಯಾಣ ಮಾಡುತ್ತಿದ್ದ ವೇಳೆ ತಮಿಳುನಾಡು ಕ್ರಿಕೆಟ್ ಅಸೋಸಿಯೇಷನ್ ಕಾರ್ಯದರ್ಶಿ ಡಾ. ಬಾಬಾ ಅವರು, ಇಲ್ಲಿನ ಯುವ ಕ್ರೀಡಾಪಟುಗಳಿಗೆ ಏನಾದರೂ ಸಹಾಯ ಮಾಡಬೇಕೆಂದು ನನಗೆ ತಿಳಿಸಿದ್ದರು, ಹಾಗಾಗಿ ಇದು ಎಲ್ಲಾ ಕ್ರೀಡಾಪಟುಗಳಿಗೆ ಉತ್ತೇಜನಕಾರಿಯಾಗಿದೆ ಎಂದು ಶಿವಂ ದುಬೆ ತಿಳಿಸಿದ್ದಾರೆ.

ರೋಹಿತ್ ಶರ್ಮಾ ಕ್ಯಾಪ್ಟನ್?

ದೆಹಲಿ: ನ್ಯೂಜಿಲೆಂಡ್ ಹಾಗೂ ಆಸ್ಟ್ರೇಲಿಯಾ ಟೆಸ್ಟ್ ಸರಣಿಗಳಲ್ಲಿ ಬ್ಯಾಟಿಂಗ್ ಹಾಗೂ ನಾಯಕತ್ವದಲ್ಲಿ ವಿಫಲವಾಗಿದ್ದರ ಹೊರತಾಗಿಯೂ ಮುಂಬರುವ ಇಂಗ್ಲೆಂಡ್ ಪ್ರವಾಸದ ಟೆಸ್ಟ್ ಸರಣಿಯಲ್ಲಿ ರೋಹಿತ್ ಶರ್ಮಾ ಅವರೇ ಭಾರತ ತಂಡವನ್ನು ಮುನ್ನಡೆಸಲಿದ್ದಾರೆಂದು ವರದಿಯಾಗಿದೆ. ಜೂನ್ ತಿಂಗಳಲ್ಲಿ ಆರಂಭವಾಗುವ ಇಂಗ್ಲೆಂಡ್ ಪ್ರವಾಸದಲ್ಲಿ ಭಾರತ ತಂಡ ಐದು ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಲಿದೆ. ಇಂಗ್ಲೆಂಡ್ ಟೆಸ್ಟ್ ಸರಣಿಯ ಭಾರತ ತಂಡವನ್ನು ಮೇ ಎರಡನೇ ವಾರದಲ್ಲಿ ಬಿಸಿಸಿಐ ಪ್ರಕಟಿಸುವ ಸಾಧ್ಯತೆ ಇದೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ದೇಶಿ ಆವೃತ್ತಿಯಲ್ಲಿ ರಣಜಿ ಹಾಗೂ ವೈಟ್‌ಬಾಲ್ ಎರಡೂ ಟೂರ್ನಿಗಳಲ್ಲಿ ಶ್ರೇಷ್ಠ ಪ್ರದರ್ಶನ ತೋರಿದ್ದ ವಿದರ್ಭ ಪರ ಆಡಿ, ಉತ್ತಮ ಪ್ರದರ್ಶನ ನೀಡಿರುವ ಕನ್ನಡಿಗ ಕರುಣ್ ನಾಯರ್ ಅವರಿಗೆ ಭಾರತ-ಎ ತಂಡದಲ್ಲಿ ಅವಕಾಶ ನೀಡುವ ಸಾಧ್ಯತೆ ಇದೆಯಲ್ಲದೆ, ಭಾರತ ಟೆಸ್ಟ್ ತಂಡಕ್ಕೂ ಅವರನ್ನು ಆಯ್ಕೆ ಮಾಡುವ ಸಾಧ್ಯತೆ ಹೆಚ್ಚಿದೆ.

ಪ್ಲೇಆಫ್ಸ್ ಸಾಧ್ಯತೆಯ ತಂಡಗಳು

ದೆಹಲಿ: ಇದೀಗ ನಡೆಯುತ್ತಿರುವ ಐಪಿಎಲ್ ಟೂರ್ನಿಯ ಎರಡನೇ ಅವಧಿಯ ಪಂದ್ಯಗಳು

ನಡೆಯುತ್ತಿದ್ದು, ಪ್ಲೇಆಫ್ಸ್‌ಗೆ ಅರ್ಹತೆ ಪಡೆಯುವ ನಿಟ್ಟಿನಲ್ಲಿ ಎಲ್ಲಾ ತಂಡಗಳು ಕೂಡ ಪ್ರಯತ್ನದಲ್ಲಿವೆ. ಈ ಹಿನ್ನೆಲೆಯಲ್ಲಿ ಮುಂದಿನ ಪಂದ್ಯಗಳು ಅತ್ಯಂತ ತೀವ್ರ ಕುತೂಹಲ ಕೆರಳಿಸಿವೆ. ಅಂದ ಹಾಗೆ ಪ್ರಮುಖ ತಂಡಗಳ ಪ್ಲೇಆಫ್ಸ್ ಲೆಕ್ಕಚಾರ ಇಲ್ಲಿದೆ.

ಗುಜರಾತ್ ಟೈಟನ್ಸ್: ಕಳೆದ ಆವೃತ್ತಿಯಲ್ಲಿ ನೀರಸ ಪ್ರದರ್ಶನ ತೋರಿದ್ದ ಗುಜರಾತ್ ಟೈಟನ್ಸ್ ತಂಡ, ಪ್ರಸಕ್ತ ಐಪಿಎಲ್ ಋತುವಿನಲ್ಲಿ ಅತ್ಯುತ್ತಮವಾಗಿ ಕಮ್‌ಬ್ಯಾಕ್ ಮಾಡಿದೆ. ಶುಭ್‌ಮನ್ ಗಿಲ್ ಪಡೆ ಇಲ್ಲಿಯವರೆಗೂ ಆಡಿದ 8 ಪಂದ್ಯಗಳ ಪೈಕಿ 6ರಲ್ಲಿ ಗೆಲುವು ಪಡೆದು ಒಟ್ಟು 12 ಅಂಕಗಳನ್ನು ಹೊಂದಿದ್ದು, ಟೂರ್ನಿಯ ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿದೆ. +1.104ರ ಅತ್ಯುತ್ತಮ ರನ್ ರೇಟ್ ಹೊಂದಿರುವ ಗುಜರಾತ್ ಟೈಟನ್ಸ್ ಇನ್ನುಳಿದ 6 ಪಂದ್ಯಗಳ ಪೈಕಿ ಎರಡರಲ್ಲಿ ಗೆಲುವು ಪಡೆದರೆ ಪ್ಲೇಆಫ್ಸ್‌ಗೆ ಅಧಿಕೃತವಾಗಿ ಅರ್ಹತೆ ಪಡೆಯಲಿದೆ.

ಡೆಲ್ಲಿ ಕ್ಯಾಪಿಟಲ್ಸ್: ಅಕ್ಷರ್ ಪಟೇಲ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಕೂಡ ಈ ಸಲದ ಐಪಿಎಲ್ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ತೋರಿದೆ. ಇಲ್ಲಿಯ ತನಕ ಆಡಿದ 7 ಪಂದ್ಯಗಳ ಪೈಕಿ 5ರಲ್ಲಿ ಗೆದ್ದು, ಪಾಯಿಂಟ್ಸ್ ಟೇಬಲ್‌ನಲ್ಲಿ ಎರಡನೇ ಸ್ಥಾನವನ್ನು ಅಲಂಕರಿಸಿದೆ. ಇನ್ನುಳಿದ 7 ಪಂದ್ಯಗಳ ಪೈಕಿ ಡೆಲ್ಲಿ ತಂಡವು ಮೂರರಲ್ಲಿ ಗೆಲುವು ಪಡೆದರೆ, ಟೂರ್ನಿಯ ಪ್ಲೇಆಫ್ಸ್‌ಗೆ ಲಗ್ಗೆ ಇಡಲಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು: ರಜತ್ ಪಾಟೀದಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಕೂಡ ಈ ಸೀಸನ್‌ನಲ್ಲಿ ಗಮನಾರ್ಹ ಪ್ರದರ್ಶನವನ್ನು ತೋರಿಸಿದೆ. ಇಲ್ಲಿಯವರೆಗೂ ಆಡಿದ 8 ಪಂದ್ಯಗಳಲ್ಲಿ ಆರ್‌ಸಿಬಿ 5ರಲ್ಲಿ ಗೆಲುವು ಪಡೆದಿದೆ ಹಾಗೂ +1.104ರ ರನ್‌ರೇಟ್ ಆಧಾರದ ಮೇಲೆ ಪಾಯಿಂಟ್ಸ್ ಟೇಬಲ್‌ನಲ್ಲಿ ಮೂರನೇ ಸ್ಥಾನವನ್ನು ಅಲಂಕರಿಸಿದೆ, ಇನ್ನುಳಿದ 6 ಪಂದ್ಯಗಳ ಪೈಕಿ 3 ಪಂದ್ಯಗಳನ್ನು ಗೆದ್ದರೆ ಆರ್‌ಸಿಬಿ ಪ್ಲೇಆಫ್ಸ್‌ಗೆ ಅಧಿಕೃತವಾಗಿ ಪ್ರವೇಶ ಮಾಡಲಿದೆ.

ಪಂಜಾಬ್ ಕಿಂಗ್ಸ್ (+0.177) ಹಾಗೂ ಲಖನೌ ಸೂಪರ್ ಜಯಂಟ್ಸ್ (+0.088) ತಂಡಗಳು ಕೂಡ ಆರ್‌ಸಿಬಿ (+1.104) ತಂಡದಂತೆ 10 ಅಂಕಗಳನ್ನು ಕಲೆ ಹಾಕಿವೆ. ಆದರೆ ರನ್‌ರೇಟ್ ಕಡಿಮೆ ಇರುವ ಕಾರಣ ಪಾಯಿಂಟ್ಸ್ ಟೇಬಲ್‌ನಲ್ಲಿ ಕ್ರಮವಾಗಿ 4 ಮತ್ತು 5ನೇ ಸ್ಥಾನಗಳನ್ನು ಅಲಂಕರಿಸಿವೆ. ಈ ಎರಡೂ ತಂಡಗಳು ಕೂಡ ತಮ್ಮ-ತಮ್ಮ ಕೊನೆಯ 6 ಪಂದ್ಯಗಳಲ್ಲಿ ಮೂರರಲ್ಲಿ ಗೆಲುವು ಪಡೆದರೆ, ಪ್ಲೇಆಫ್ಸ್‌ಗೆ ಲಗ್ಗೆ ಇಡಲಿವೆ.

ಡೂಲ್, ಹರ್ಷ ಭೋಗ್ಲೆಯನ್ನು ಬ್ಯಾನ್ ಮಾಡಿ: ಸಿಎಬಿ ಮನವಿ

ಕೋಲ್ಕತಾ: ಈಡನ್ ಗಾರ್ಡನ್ಸ್ ಪಿಚ್ ಬಗ್ಗೆ ಟೀಕೆ ಮಾಡಿದ್ದಕ್ಕೆ ಕ್ರಿಕೆಟ್ ವೀಕ್ಷಕ ವಿವರಣೆಗಾರರಾಗಿರುವ ಸೈಮನ್ ಡೂಲ್ ಹಾಗೂ ಹರ್ಷ ಭೋಗ್ಲೆಗೆ ಈಡನ್ ಗಾರ್ಡನ್ಸ್ ಪ್ರವೇಶ ನಿರಾಕರಿಸುವ ಬಗ್ಗೆ ಬಂಗಾಳ ಕ್ರಿಕೆಟ್ ಸಂಸ್ಥೆಯು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಪತ್ರ ಬರೆದಿದೆ ಎನ್ನುವ ಸುದ್ದಿ ಇದೀಗ ಕ್ರಿಕೆಟ್ ವಲಯದಲ್ಲಿ ಭಾರೀ ಸಂಚಲನ ಮೂಡಿಸಿದೆ.

ಕೋಲ್ಕತಾದ ಈಡನ್ ಗಾರ್ಡನ್ ಮೈದಾನದ ಪಿಚ್ ಕ್ಯುರೇಟರ್ ತವರು ತಂಡಕ್ಕೆ ಬೇಕಿರುವ ರೀತಿ ಪಿಚ್ ಸಿದ್ಧಪಡಿಸಿಕೊಡುತ್ತಿಲ್ಲ ಎಂದು ಕೋಲ್ಕತ್ತಾ ನಾಯಕ ಅಜಿಂಕ್ಯ ರಹಾನೆ ದೂರಿದ್ದರು. ಆ ಹೇಳಿಕೆಯನ್ನು ಮುಂದಿಟ್ಟುಕೊಂಡು ಕ್ರಿಕೆಟ್ ವೆಬ್‌ಸೈಟ್‌ವೊಂದರ ಕ್ರಿಕೆಟ್ ವಿಶ್ಲೇಷಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನ್ಯೂಜಿಲ್ಯಾಂಡ್‌ನ ವೀಕ್ಷಕ ವಿವರಣೆಗಾರ ಸೈಮನ್ ಡೂಲ್ ಮತ್ತು ಭಾರತದ ಖ್ಯಾತ ಕಾಮೆಂಟೇಟರ್ ಹರ್ಷಾ ಭೋಗ್ಲೆ ಅವರು ತವರು ತಂಡಕ್ಕೆ ಅನುಕೂಲವಾಗುಂತಹ ಪಿಚ್ ನೀಡಲು ಕೋಲ್ಕತ್ತಾ ಕ್ರಿಕೆಟ್ ಸಂಸ್ಥೆ (ಸಿಎಬಿ) ನಿರಾಕರಿಸುತ್ತಿದ್ದರೆ, ಕೋಲ್ಕತ್ತಾ ತಂಡ ತನ್ನ ತವರು ಮೈದಾನವನ್ನು ಬದಲಿಸಬೇಕು ಎಂದಿದ್ದರು.

ಈ ಹೇಳಿಕೆಯಿಂದ ಸಿಟ್ಟಾಗಿರುವ ಸಿಎಬಿ, ಡೂಲ್ ಹಾಗೂ ಭೋಗ್ಲೆ ವೀಕ್ಷಕ ವಿವರಣೆ

ನೀಡಲು ಈಡನ್ ಗಾರ್ಡನ್ಸ್ ಮೈದಾನಕ್ಕೆ ಬರಬಾರದು, ಅವರ ವಿರುದ್ಧ ನಿಷೇಧ ಹೇರಲು ನಾವು ಬಯಸುತ್ತೇವೆ ಎಂದು ಬಿಸಿಸಿಐಗೆ ಪತ್ರ ಬರೆದಿದೆ ಎಂದು ತಿಳಿದುಬಂದಿದೆ.

ಸೋಮವಾರ ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದಿದ್ದ ಕೋಲ್ಕತಾ ನೈಟ್ ರೈಡರ್ಸ್ ವಿರುದ್ಧದ ಪಂದ್ಯದಲ್ಲಿ ಗುಜರಾತ್ 39 ರನ್‌ಗಳ ಗೆಲುವು ಸಾಧಿಸಿತ್ತು. ಪಂದ್ಯ ಮುಗಿದ ಬೆನ್ನಲ್ಲೇ ರಹಾನೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದರು.